UNIVERSAL
LIBRARY
OU_200223
UNIVERSAL
LIBRARY

**OSMANIA UNIVERSITY LIBRARY**

Call No. Accession No.

Author

Title

This book should be returned on or before the date last marked below.

ಕಾವ್ಯಾರಾಮ ಕುಸುಮ — ೧೬

# ಕರ್ತವ್ಯ

(ಐತಿಹಾಸಿಕ ಕಾದಂಬರಿ)

ಗ್ರಂಥಕರ್ತ :

[illegible]. ಆರ್. ರಾಮಯ್ಯ, ಬಿ.ಎ.

ಪ್ರಕಾಶಕರು :
ಕಾವ್ಯಾರಾಮ ಮಂದಿರ
೭೨, ಜೈನದೇವಾಲಯ ಬೀದಿ,
ಶ್ವೇಶ್ವರಪುರ, ಬೆಂಗಳೂರು ನಗರ

ಬೆಲೆ : ಎರಡು ರೂಪಾಯಿ

ಪ್ರಥಮ ಮುದ್ರಣ — ೧೯೪೭

ಎಲ್ಲ ಹಕ್ಕುಗಳೂ ಗ್ರಂಥಕರ್ತನಿಗೆ ಸೇರಿವೆ.

ಮುದ್ರಣಕಾರರು :
ದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

# ಗ್ರಂಥ ಪರಿಚಯ

ಕರ್ತವ್ಯದ ಪರಿಚಯ ಯಾರಿಗಿಲ್ಲ ? ಆದರೆ, ಕರ್ತವ್ಯವನ್ನು ಪರಿಪಾಲಿಸುವವರು ಎಷ್ಟು ಮಂದಿ ? ಈ ಕಾದಂಬರಿಯಲ್ಲಿ ಈ ಪ್ರಶ್ನೆಗಳಿಗೆ ಉತ್ತರವಿದೆ. ಪೂರ್ವ ಮತ್ತು ಪಶ್ಚಿಮ ಚಾಳುಕ್ಯರ ಒಳತೋಟಿಯ ಹಿನ್ನೆಲೆಯಲ್ಲಿ ಈ ಕರ್ತವ್ಯ ಮಿಸುನಿ ಹಾಸುಹೊಕ್ಕಾಗಳಾಗಿ ಸೇರಿಕೊಂಡಿದೆ.

ದಿವಂಗತ ಶ್ರೀಮಾನ್ ದ್ವಾರಕನಾಥ ಮಾಧವ ಪಿಥಳೆ ಅವರು ರಚಿಸಿರುವ "ವೀರಧವಲ್" ಎಂಬ ಕಾದಂಬರಿ ಮರಾಠಿ ಜನಾಂಗಕ್ಕೆ ಅತ್ಯಾದರಣೀಯವಾದ ಗ್ರಂಥ. ಅದು ದೊಡ್ಡ ಗ್ರಂಥ. ಈಚೆಗೆ ಶ್ರೀಮಾನ್ ರಘುನಾಥ ದಿಪ್ಪಾಜಿ ದೇಶಾಯಿಯವರು ಶ್ರೀಮಾನ್ ಬಿಕ್ಕಾಜಿ ಅರ್ಜುನ್ ಪರಬ್ ಬಿ.ಎ., ಎಸ್.ಟಿ.ಸಿ. ಅವರ ಸಹಾಯದಿಂದ ಆ ಗ್ರಂಥವನ್ನು ಸಂಗ್ರಹರೂಪದಲ್ಲಿ ಪ್ರಕಟಿಸಿದ್ದಾರೆ. ಆ ಸಂಗ್ರಹ ಗ್ರಂಥವೇ ಈ "ಕರ್ತವ್ಯ" ಕಾದಂಬರಿಗೆ ಆಧಾರ.

"ಕರ್ತವ್ಯ" ಕಾದಂಬರಿ "ವೀರಧವಲ್" ಕಾದಂಬರಿಯ ಭಾಷಾಂತರವಲ್ಲ ; ಅನುವಾದವೂ ಅಲ್ಲ ; ಅದರ ಒಂದು ರೂಪಾಂತರ. ಎಂದರೆ, ಕಥೆಯ ಆರಂಭದಲ್ಲಿ ಮತ್ತು ಮುಕ್ತಾಯದಲ್ಲಿ ಮಾತ್ರ ಮೂಲಗ್ರಂಥದ ಛಾಯೆ ಇದೆಯೇ ವಿನಾ, ಕಥೆ ಬೆಳೆದಿರುವ ರೀತಿನೀತಿಗಳಲ್ಲಿ ಹಲವು ಬಗೆಯ ಮಾರ್ಪಾಟುಗಳನ್ನು ಮಾಡಿದ್ದೇನೆ. ಹೊಸ ಜೀವನ ಸನ್ನಿವೇಶಗಳಿಗೆ ಒಪ್ಪುವಂತೆ ರೂಪಾಂತರಗೊಳಿಸಿದ್ದೇನೆ. ಭಾಷೆ ಮತ್ತು ಶೈಲಿ ಆದಷ್ಟು ಸುಲಭವಾಗಿಯೂ ಸರ್ವಜನಗ್ರಾಹ್ಯವಾಗಿಯೂ ಇವೆ.

ಈ ಕಾದಂಬರಿಯನ್ನು ಸಿದ್ಧಪಡಿಸುವುದರಲ್ಲಿ ಅತ್ಯುತ್ಸಾಹದಿಂದ ಸಹಕರಿಸಿದ ಶ್ರೀಮತಿ ಆರ್. ಕಾಮಾಕ್ಷಮ್ಮನವರಿಗೂ, ಶ್ರೀಮತಿ ಗಂಗೂಬಾಯಿ ಗೋಖಲೆಯವರಿಗೂ ನಾನು ಚಿರಋಣಿ.

ಕರ್ತವ್ಯ ಕಾದಂಬರಿಯನ್ನು ಕನ್ನಡಿಗರು ಸ್ವಾಗತಿಸುವರೆಂದು ನಂಬಿದ್ದೇನೆ.

ಶ್ರೀರಾಮನವಮಿ<br>೩೦ನೆಯ ಮಾರ್ಚಿ ೧೯೪೭

ಡಿ. ಆರ್. ರಾಮಯ್ಯ<br>ಗ್ರಂಥಕರ್ತ.

# ಕಥಾಸರಣಿ


| | ವಿಷಯ | ಪುಟ |
|---|---|---|
| ೧ | ಉದಯ | 1 |
| ೨ | ಅಸ್ತಿವಾರ | 4 |
| ೩ | ಸ್ವಾರ್ಥಸಾಧನೆ | 7 |
| ೪ | ದುರ್ಗಾಧಿಪತಿ | 13 |
| ೫ | ಕನಸು | 16 |
| ೬ | ಸಿದ್ಧಾಂತ | 19 |
| ೭ | ಕೊಲೆ | 28 |
| ೮ | ಆಗ್ರಹ | 38 |
| ೯ | ಪ್ರಾಯಶ್ಚಿತ್ತ | 47 |
| ೧೦ | ಒಡಕು | 52 |
| ೧೧ | ಸಿಂಹಗುಹೆ | 57 |
| ೧೨ | ಯುಗಾದಿ | 70 |
| ೧೩ | ತಿರಸ್ಕಾರ | 75 |
| ೧೪ | ಬಿರುಗಾಳಿ | 88 |
| ೧೫ | ಭೇದೋಪಾಯ | 95 |
| ೧೬ | ಪ್ರತಿಸ್ಪರ್ಧಿ | 107 |
| ೧೭ | ಮತ್ತೆ ಬಂಧಿ | 120 |
| ೧೮ | ವಿಚಾರಣೆ | 129 |
| ೧೯ | ಆಳು - ಅರಸು | 136 |
| ೨೦ | ಸತ್ಯಪ್ರಕಾಶ | 146 |
| ೨೧ | ಸಾವುನೋವು | 156 |
| ೨೨ | ರಾಜಪ್ರತಿನಿಧಿ | 161 |
| ೨೩ | ಗುಪ್ತ ಚಳವಳಿ | 170 |
| ೨೪ | ಸತ್ಯಾಶ್ರಯನ ಸ್ಮರಣೆ | 178 |
| ೨೫ | ರಣಭೇರಿ | 185 |
| ೨೬ | ಜಯಭೇರಿ | 191 |
| ೨೭ | ರಾಜಮಹೇಂದ್ರ - ಅಜಿಂಕ್ಯದುರ್ಗ | 196 |

" ಕರ್ತವ್ಯ "



ಶೀಲವತಿಯ ಸಂಕಲ್ಪ

॥ ಓಂ ॥

# ೧. ಉದಯ

## ಇದು ಯಾರ ಮಗು !

ಸೂರ್ಯದೇವ ಪಡುವ ಕಡಲ ತೆರೆಯ ಮರೆಗೆ ಸರಿದನು—
ಸಂಜೆಹೆಣ್ಣು ಮುಸುಕಿನೊಡನೆ ಹಿಂದೆಹಿಂದೆ ನಡೆದಳು—
ಬಾನ್‌ದೇವಿಯ ನೀಲಾಂಬರ ಚುಕ್ಕಿಯಂತೆ ಮಿನುಗುತಿತ್ತು—
ಭೂಶಾಂತಿಯ ಸಮ್ಮೇಳನ ಸೊಬಗಿನಿಂದ ಮೆರೆಯುತಿತ್ತು !

ಗೋದಾವರಿಯ ಶುಭ್ರಸಲಿಲದಲ್ಲಿ ರಜನೀನಾಥನ ಧವಳಧಾರೆ ! ಎಲ್ಲೆಲ್ಲಿಯೂ ಭುವನೇಶ್ವರಿಯು ಶಾಂತವದನವನ್ನು ಬೆಳಗುತ್ತಿದ್ದ ಬೆಳ್ಳಿಯಂತಹ ಬೆಳದಿಂಗಳು ! ರಾತ್ರಿ ಸುಮಾರು ೯ ಗಂಟೆ. ಪೂರ್ವದಿಕ್ಕಿನ ನಿಬಿಡ ಅರಣ್ಯದಿಂದ ಎರಡು ತಿಂಗಳ ಕೂಸನ್ನು ಎತ್ತಿಕೊಂಡು ಸ್ತ್ರೀಯೊಬ್ಬಳು ಹೊರಟಳು. ಆಕೆಯ ವಯಸ್ಸು ಇಪ್ಪತ್ತೈದು ವರ್ಷವಿರಬಹುದು. ಮಗು ನಿದ್ರಿಸುತ್ತಿತ್ತು. ಆಕೆ ಬಹಳ ದೂರ ಪ್ರಯಾಣ ಮಾಡಿ ಬಂದಿರಬೇಕು. ಏಕೆಂದರೆ, ಹೆಜ್ಜೆ ಇಡುವುದಕ್ಕೂ ಶಕ್ತಿಯಿರಲಿಲ್ಲ ಆಕೆಗೆ. ಮುಖ ಮ್ಲಾನವಾಗಿದ್ದರೂ, ಅದು ಮನೋಹರ ಮೂರ್ತಿಯ ನೆಲೆವೀಡಾಗಿತ್ತು ! ಮಗುವನ್ನು ಎದೆಗೆ ಅಪ್ಪಿಕೊಂಡು ಆಕೆ ನದಿ ತೀರದಲ್ಲಿದ್ದ ಒಂದು ಬಂಡೆಯ ಮೇಲೆ ಕುಳಿತಳು.

ಪಾಪ ! ಮಗು ಎದ್ದು ಚೀರಿಡಲಾರಂಭಿಸಿತು ಕಲ್ಲು ಕರಗುವಂತೆ ! ಉಕ್ಕಿಬರುತ್ತಿದ್ದ ಆಕೆಯ ವೇದನೆಯಾದರೋ ಅಪಾರವಾಗಿತ್ತು. ಒಮ್ಮೆ ಬಾಲಕನನ್ನು ನೋಡಿ ಪ್ರಲಾಪಿಸುತ್ತ “ಕಂದಾ ! ನಿನಗೇಕೆ ಈ ದುರ್ಗತಿ ! ಆ ದುರಾತ್ಮನಿಂದ ನಿನಗೆ ಈ ಗತಿ ಬಂದಿತೇ ! ಇರಲಿ. ಇದಕ್ಕೆ ತಕ್ಕ ಪ್ರತೀಕಾರ ಮಾಡದೆ ಬಿಡೆನು. ಹೇ, ದೇವಾ, ಈ ಕಂದನಿಗೆ ದೀರ್ಘಾಯುವನ್ನು ನೀಡು !” ಎಂದು ಸ್ಮರಿಸಿದಳು ಆ ನಿರ್ಭಾಗ್ಯ ವನಿತೆ.

# 2

ಸ್ವಲ್ಪ ಹೊತ್ತು ಕಳೆಯಿತು. ಗೋದಾವರಿಯ ತರಂಗ ಮಾಲೆಗಳ ಮೇಲೆ ತಾರಾನಾಥನ ಶೀತಲ ಕಿರಣ ಪ್ರತಿಬಿಂಬಿಸಿರುವುದನ್ನು ನೋಡಿ ಕ್ಷಣ ಕಾಲ ಚಿಂತೆಯನ್ನು ಮರೆತಳು. ಮಾನವನ ದುಃಖಮಯ ಜೀವನದ ನಡುವೆ ಸೃಷ್ಟಿಸೌಂದರ್ಯದ ಸೊಬಗು ! ಪ್ರಕೃತಿಸೌಂದರ್ಯದ ಸವಿನೋಟದಲ್ಲಿ ಕುಳಿತಿರಲು ಸಾಧ್ಯವಾಗಲಿಲ್ಲ ಆಕೆಗೆ. ಸುತ್ತಲೂ ನೋಡಿದಳು. ಎತ್ತರವಾದ ಮರದ ತುದಿಯಲ್ಲಿ ಬೆಳಕು ಕಾಣಿಸಿತು. ಬೆಳಕು ಬರುತ್ತಿದ್ದ ಕಡೆ ದಿಟ್ಟಿಸಿ ನೋಡಿದಳು. ದೂರದ ಬೆಳಕಿನ ಛಾಯೆಯಲ್ಲಿ ಗೋಪುರ ಪ್ರಾಕಾರಗಳು ನಸುಕುಮಸುಕಾಗಿ ಕಾಣಿಸಿದುವು. ಗೋದಾವರಿ ತೀರದಲ್ಲಿ ರಾಜಧಾನಿಯಾದ ರಾಜಮಹೇಂದ್ರ ನಗರವಿದೆಯೆಂಬುದು ಅಂದು ನೆನಪಿಗೆ ಬಂದಿತು ಆಕೆಗೆ. ತಕ್ಷಣ ಮಗುವನ್ನು ಸರಿಯಾಗಿ ಎತ್ತಿಕೊಂಡು ಬೆಳಕು ಬರುತ್ತಿದ್ದ ಕಡೆ ಹೊರಟಳು.

ಒಂದು ಗಂಟೆಯ ಕಾಲ ಸಿಕ್ಕಿದ ದಾರಿ ಹಿಡಿದು ನಡೆದಳು ಆ ವೀರ ನಾರಿ ! ಕೊನೆಗೆ ಅರಮನೆಯ ಪ್ರದೇಶವನ್ನು ಸೇರಿದಳು. ದೊಡ್ಡ ಅರಮನೆ! ವಿಶಾಲವಾದ ಸಭಾ ಮಂಟಪಗಳು ! ಮನೋಹರವಾದ ದೀಪಕಾಂತಿ ! ರಾಜಧಾನಿಯಾದ ರಾಜಮಹೇಂದ್ರದ ಸೊಬಗು ಆಕೆಯ ಕಣ್ಮನಗಳನ್ನು ತುಂಬಿತು. ಅರಮನೆಯ ಶ್ವೇತಶಿಲಾಮಂಟಪಗಳು ; ಉನ್ನತ ರಜತ ಗೋಪುರಗಳು ; ಮಿಸುನಿಯ ಕಲಶಗಳು ; ದೇವ ಮಂದಿರಗಳು ; ರಾಜ ದ್ವಾರದ ಮೇಲೆ ಸ್ಫಟಿಕ ಪುತ್ಥಳಿಗಳು ; ಚಿತ್ತಾರಗಳು ; ರಾಜಮಾರ್ಗದಲ್ಲಿ ಜನರ ಕೋಲಾಹಲ ! ಇಂತು ಸಕಲ ಸಮೃದ್ಧಿಯಿಂದ ಆನಂದ ದೇವತೆಯ ಕ್ರೀಡಾರಂಗ ಎಂಬಂತೆ ತೋರುತ್ತಿತ್ತು ರಾಜಮಹೇಂದ್ರ ನಗರ !

ಅಂದು ಅರಮನೆಯಲ್ಲಿ ದೊಡ್ಡ ಸಮಾರಂಭ. ನವವಿವಾಹಿತ ದಂಪತಿಗಳು ಅಲಂಕೃತರಾಗಿ ಮಂಡಿಸಿದ್ದರು ಮಂಗಳ ಪೀಠದ ಮೇಲೆ! ಒಂದು ಕಡೆ ಸ್ತ್ರೀಯರ ನೆರವಿ ; ಇನ್ನೊಂದು ಕಡೆ ಸಂಗೀತ ಕಛೇರಿ ; ಮತ್ತೊಂದು ಕಡೆ ನರ್ತನ ; ಬೇರೊಂದು ಕಡೆ ಸರದಾರರ ಸಮೂಹ. ಅರಮನೆಯ ಸಮಾರಂಭವನ್ನು ದೂರದಿಂದಲೇ ಆಕೆ ಅರಿತಳು ಮೆಲ್ಲನೆ ಸಭಾಮಂದಿರವನ್ನು ಹೊಕ್ಕಳು. ಒಂದು ಕ್ಷಣ ಕಾಲ ಮಾತ್ರ ಇದ್ದು ಬಂದ ದಾರಿಹಿಡಿದು ಹೊರಟಳು.

# 3

ಸಭಾಮಂಟಪದ ಸಂಭ್ರಮವಂತೂ ಮುಂದುವರಿಯಿತು ಸ್ವಲ್ಪಕಾಲ. ಆರತಿ ಆಯಿತು. ದಂಪತಿಗಳು ಎದ್ದು ಸಭಾಸದರಿಗೆ ನಮಸ್ಕರಿಸಿ ಶಯನ ಗೃಹದ ಬಾಗಿಲಿಗೆ ಬಂದರು. ಏನಿದು ಕೌತುಕ ಬಾಗಿಲಿನಲ್ಲಿ! ಎರಡು ತಿಂಗಳ ಗಂಡು ಕೂಸು! ಪಕ್ಕದಲ್ಲಿ ಬಿಲ್ಲು ಬಾಣ! ಇದನ್ನು ಕಂಡು ನಿಬ್ಬೆರಗಾದರು ನೂತನ ವಧೂವರರು. ಆದರೆ, ಗದ್ದಲ ಮಾಡಲು ಸಮಯವಲ್ಲ. "ಇದು ಯಾರ ಮಗು! ಎಷ್ಟು ಸುಂದರವಾಗಿದೆ!" ಎಂದು ಹೇಳುತ್ತ ಆ ತಬ್ಬಲಿ ಮಗುವನ್ನು ಎತ್ತಿಕೊಂಡು ನಡೆದರು ಶಯನಗೃಹಕ್ಕೆ!

# ೨. ಅಸ್ತಿವಾರ

## ಇಪ್ಪತ್ತುನಾಲ್ಕು ವರ್ಷಗಳ ಅಂಧಕಾರ !

ಲಲಿತದುರ್ಗದ ಸತ್ಯಮಹಲಿನಲ್ಲಿ ಸರದಾರ ಸತ್ಯಾಶ್ರಯನು ಚಂಡ ವರ್ಮನೆಂಬ ಇನ್ನೊಬ್ಬ ಸರದಾರನೊಡನೆ ಬಹು ಮುಖ್ಯ ಪ್ರಸಂಗವನ್ನು ಕುರಿತು ಚರ್ಚೆ ನಡೆಸುತ್ತಿದ್ದನು. ಆಗ ಸಮರಾತ್ರಿ! ಬೀದಿಯಲ್ಲಿ ಕುದುರೆಯ ಗೊರಸಿನ ಸಪ್ಪಳ ಕೇಳಿಸಿತು. ಇದೇನಿರಬಹುದೆಂದು ಯೋಚಿಸುವಷ್ಟರಲ್ಲಿ ದ್ವಾರಪಾಲಕನಾದ ವಿಜ್ಜಲನು ಮುದ್ರೆ ಮಾಡಿದ ಒಂದು ಲಕೋಟೆಯನ್ನು ತಂದುಕೊಟ್ಟು, "ಪ್ರಭು, ಹೊರಗಡೆ ಕುದುರೆ ಸವಾರರು ಬಂದಿದ್ದಾರೆ. ಸರದಾರ ವೀರರಾಜರ ಕಡೆಯವರಂತೆ," ಎಂದು ತಿಳಿಸಿದನು. ಸತ್ಯಾಶ್ರಯನು ಲಕೋಟೆಯನ್ನು ಒಡೆದು ಓದಿದನು. ಓದುತ್ತಿದ್ದ ಹಾಗೆಯೇ ಕ್ರೋಧಾಗ್ನಿ ಮುಖದ ಮೇಲೆ ಉಕ್ಕಿತು. ಒಮ್ಮೆ ನೆಲದ ಮೇಲೆ ಕಾಲನ್ನು ಝಾಡಿಸಿ, ಆ ಪತ್ರವನ್ನು ಚಂಡವರ್ಮನಿಗೆ ತೋರಿಸಿದನು. ಅಷ್ಟರಲ್ಲಿ ವಿಜ್ಜಲನು ಮತ್ತೊಂದು ಲಕೋಟೆಯನ್ನು ತಂದು ಕೊಟ್ಟನು. ಸತ್ಯಾಶ್ರಯನು ಬೇಗನೆ ಅದನ್ನು ಓದಿಕೊಂಡು "ಚಂಡವರ್ಮ, ಇಲ್ಲಿ ನೋಡು ಎರಡನೆಯ ಸಮಾಚಾರ" ಎಂದು ನುಡಿದು ಆ ಪತ್ರವನ್ನೂ ಆತನ ಮುಂದಿರಿಸಿದನು.

ಬಹಳ ಹಿಂದಿನ ಕಾಲ. ನರ್ಮದಾ ಕೃಷ್ಣಾ ನದಿಗಳ ನಡುವಣ ವೀರ ಭೂಮಿಯಲ್ಲಿ ಬಲಾಢ್ಯರಾದ ಕ್ಷತ್ರಿಯ ಜನಪರು ಆಳಿ ಬಾಳಿದರು. ಅವರಲ್ಲಿ ಚಾಳುಕ್ಯರು ಹೆಸರಾದವರು. ಚಾಳುಕ್ಯರಲ್ಲಿ ಪೂರ್ವ ಚಾಳುಕ್ಯರೆಂದೂ, ಪಶ್ಚಿಮ ಚಾಳುಕ್ಯರೆಂದೂ ಎರಡು ಶಾಖೆಗಳಿದ್ದುವು. ಪೂರ್ವ ಚಾಳುಕ್ಯರ ರಾಜಧಾನಿ ರಾಜಮಹೇಂದ್ರ. ಪಶ್ಚಿಮ ಚಾಳುಕ್ಯರ ರಾಜಧಾನಿ ಕಲ್ಯಾಣಿ. ಇವೆರಡು ಶಾಖೆಗಳ ಅಂತಃಕಲಹದಲ್ಲಿ ಇಪ್ಪತ್ತುನಾಲ್ಕು ವರ್ಷಗಳು ಸಾಗಿದ್ದುವು.

ಚಂದ್ರಕೇತು ಪೂರ್ವ ಚಾಳುಕ್ಯರಲ್ಲಿ ಪ್ರಸಿದ್ಧನಾದ ದೊರೆ. ಈತನ ಆಳ್ವಿಕೆಯಲ್ಲಿ ಹಿಂದೂಧರ್ಮ ಹೊಸಮತಗಳ ಪ್ರಾಬಲ್ಯವನ್ನು ಜಗ್ಗಿಸಿ ಮತ್ತೆ

ತಲೆಯೆತ್ತುತ್ತಿತ್ತು. ರಾಜ್ಯದಲ್ಲಿ ಶಾಂತಿಯೂ ಪ್ರಜೆಗಳಲ್ಲಿ ಸಂಪೂರ್ಣ ಸುಖವೂ ನೆಲಸಿದ್ದುವು. ಆದರೆ ವ್ಯತ್ಯವಿಗೆ ಎದುರುಂಟೆ! ಗರ್ಭಿಣಿಯಾದ ರಾಣಿಯನ್ನು ಬಿಟ್ಟು ದಿವಂಗತನಾದನು ಚಂದ್ರಕೇತು!

ಚಂದ್ರಕೇತುವಿನ ನಿಧನದಿಂದ ಪೂರ್ವ ಚಾಳುಕ್ಯ ರಾಜ್ಯಕ್ಕೆ ವೈಧವ್ಯ ಪ್ರಾಪ್ತಿಯಾದಂತಿತ್ತು. ದೇಶದಲ್ಲಿ ಭಯಂಕರ ಕೋಲಾಹಲ. ಎಲ್ಲೆಲ್ಲಿಯೂ ಕ್ರಾಂತಿಯ ಸೂಚನೆಗಳು. ಪಶ್ಚಿಮ ಚಾಳುಕ್ಯರು ಚಂದ್ರಕೇತುವಿನ ರಾಜ್ಯವನ್ನು ದುರಾಕ್ರಮಣ ಮಾಡಲು ಒಳಸಂಚು ನಡೆಸುತ್ತಿದ್ದರು ಚಂದ್ರಕೇತುವಿನ ಆಪ್ತ ಮಂತ್ರಿಗಳೂ ಸಹ ಪಶ್ಚಿಮ ಚಾಳುಕ್ಯರ ಕಡೆ ಸೇರಿಕೊಂಡರು. ಇಂಥ ಕಠಿಣ ಪ್ರಸಂಗದಲ್ಲಿ ಸ್ವಾಮಿನಿಷ್ಠರಾದ ಕೆಲವರು ಸರದಾರರು ರಾಣಿಯ ಪಕ್ಷವನ್ನು ವಹಿಸಿ, ರಾಣಿಯೇ ರಾಜ್ಯಭಾರ ನಡೆಸುವಂತೆ ಶ್ರಮದಿಂದ ಕ್ರಮಗೊಳಿಸಿದರು. ಪಶ್ಚಿಮ ಚಾಳುಕ್ಯರ ಒಳಸಂಚನ್ನು ಮುರಿಯಲು ಪ್ರತಿಜ್ಞೆಯನ್ನು ಮಾಡಿಕೊಂಡರು. ಇಂಥ ಸ್ವಾಮಿನಿಷ್ಠರಾದ ಸರದಾರರಲ್ಲಿ ಅಗ್ರಗಣ್ಯ ಸತ್ಯಾಶ್ರಯ.

ಸತ್ಯಾಶ್ರಯನಿಗೆ ವಯಸ್ಸು ಐವತ್ತೆರಡು ವರ್ಷ. ವಿಶಾಲವಾದ ಹಣೆ. ಉದ್ದವಾದ ಮೂಗು. ಕೈಗಳು ಮೊಣಕಾಲನ್ನು ತಾಗುವಷ್ಟು ನೀಳ. ವಿಸ್ತಾರವಾದ ಎದೆ. ರಾಜಮಹೇಂದ್ರಾಧಿಪನಾದ ಚಂದ್ರಕೇತುವಿಗೆ ಸತ್ಯಾಶ್ರಯನಲ್ಲಿ ಗಾಢವಾದ ನಂಬಿಕೆ. ಚಂದ್ರಕೇತುವಿನ ಮರಣಾನಂತರ ಈತನು ತನ್ನ ಹೆಸರಿಗೆ ತಕ್ಕಂತೆ ಸತ್ಯಕ್ಕೆ ಆಶ್ರಯದಾತನಾಗಿ ರಾಣಿಯ ಗೌರವವನ್ನು ರಕ್ಷಿಸಿದ್ದನು.

ಚಂಡವರ್ಮನಿಗೆ ಐವತ್ತು ವರ್ಷ ವಯಸ್ಸು. ಈತನು ರಾಜಮಹೇಂದ್ರಕ್ಕೆ ನೂರ ಇಪ್ಪತ್ತೈದು ಮೈಲಿಯಲ್ಲಿದ್ದ ಅಜಿಂಕ್ಯ ದುರ್ಗದ ದೊರೆ. ಸತ್ಯಾಶ್ರಯನ ಕಾರ್ಯಭಾರದಲ್ಲಿ ಸಹಾನುಭೂತಿಯಿತ್ತು ಈತನಿಗೆ. ಯದುಕುಲದ ರಾಜಾಕೃಷ್ಣನ ಸಂತತಿಯಲ್ಲಿ ಹುಟ್ಟಿದವನಿವನು. ಈ ಸಂತತಿಯವರಿಗೆ ಚಾಳುಕ್ಯ ವಂಶದ ಮಯಾರ್ನೆಯಿತ್ತು. ಆದರೆ, ಉಗ್ರಸ್ವರೂಪದ ಕಪ್ಪುಬಣ್ಣದ ಚಂಡವರ್ಮ ಅಜಿಂಕ್ಯ ದುರ್ಗದಲ್ಲಿ ವಾಸಿಸುವುದಕ್ಕೆ ಬದಲಾಗಿ ರಾಜಮಹೇಂದ್ರದಲ್ಲಿಯೇ ಇರುತ್ತಿದ್ದನು. ಅಜಿಂಕ್ಯ ದುರ್ಗದ ವರ್ತಮಾನಗಳಂತೂ ಮಂಗಳಕರವಾಗಿರಲಿಲ್ಲ.

ಚಂಡವರ್ಮನು ಪತ್ರಗಳನ್ನು ಓದಿಕೊಂಡು "ಓಹೋ, ಸರದಾರ ವೀರರಾಜರು ನಿಮ್ಮನ್ನು ರಾಜದ್ರೋಹಿಗಳೆಂದು ಪರಿಗಣಿಸಿದ್ದಾರೆ. ನೀವು ಮೂರು ದಿನಗಳಲ್ಲಿ ರಾಜಧಾನಿಯನ್ನು ಬಿಟ್ಟು ನೂರು ಮೈಲಿಗಳಷ್ಟು ಆಚೆ ಹೋಗಬೇಕೆಂದು ಆಜ್ಞೆಯಾಗಿದೆ ಪ್ರಸಂಗ ಬಹಳ ಕಠಿಣವಾಗಿಯೇ ಇದೆ." ಎಂದು ಹೇಳಿ ಸತ್ಯಾಶ್ರಯನನ್ನು ನೋಡಿದನು.

"ಪ್ರಸಂಗವೇನೋ ಕಠಿಣವೇ ಹೌದು. ನಾನು ರಾಜಧಾನಿಯನ್ನು ಬಿಟ್ಟು ನೂರು ಮೈಲಿ ಆಚೆ ಹೋಗುವಂತೆ ಆಜ್ಞೆಯಾಗಿರುವುದು ಒಂದು ರೀತಿಯಲ್ಲಿ ಒಳ್ಳೆಯದೆ. ನನ್ನ ಉದ್ದೇಶ ಸಫಲವಾಗಬೇಕಾದರೆ ನಾನು ಕೆಲವು ಕಾಲ ತಾಳ್ಮೆಯಿಂದ ದೂರವಿರುವುದು ಲೇಸು. ಆದರೆ, ನಾನು ಈಗ ದೇಶಭ್ರಷ್ಟನಾಗಿದ್ದರೂ ಸತ್ಯಭ್ರಷ್ಟನಲ್ಲ. ರಾಣಿಯವರು ಗರ್ಭಿಣಿಯಾಗಿರುವುದು ನಿಜವೇ ಆಗಿದ್ದರೆ, ಈ ಸತ್ಯಾಶ್ರಯನು ಶತ್ರುಗಳ ಎದೆಮೆಟ್ಟಿ ರಾಜಕುಮಾರನ ಹೆಸರಿನಲ್ಲಿ ತಳಿರು ತೋರಣಗಳನ್ನು ಕಟ್ಟಿ ಮರಳಿ ರಾಜಧಾನಿಯನ್ನು ಪ್ರವೇಶ ಮಾಡುವನು. ಪೂರ್ವ ಚಾಳುಕ್ಯ ವಂಶದ ಕುಡಿಯನ್ನು ರಕ್ಷಿಸುವನು." ಎಂದು ಶಪಥ ಮಾಡಿದನು ಸತ್ಯಾಶ್ರಯ !

# ೩. ಸ್ವಾರ್ಥಸಾಧನೆ

## ದುರ್ಗಕ್ಕೆ ಹೋದಮೇಲೆ ಆ ವಿಚಾರ !

ಮಾರನೆಯ ಪ್ರಾತಃಕಾಲ ಚಂಡವರ್ಮನು ಸತ್ಯಾಶ್ರಯನನ್ನು ಕಂಡು "ಮುಂದೆ ಎಲ್ಲಿಗೆ ಹೋಗಬೇಕೆಂದಿರುವಿರಿ" ಎಂದು ಮೊದಲು ವಿಚಾರಿಸಿದನು. ಸ್ನೇಹಿತನ ಪ್ರೀತಿಗೆ ಸತ್ಯಾಶ್ರಯನು ಸಂತೋಷಪಟ್ಟನು. ಸತ್ಯಾಶ್ರಯನ ಕುಟುಂಬ ವರ್ಗದವರು ಬಹಳ ಮಂದಿ ಇರಲಿಲ್ಲ. ಚಂದ್ರಸೇನ, ಲಲಿತ ಪ್ರಭೆ, ವೀರಧವಳ ಇವರು ಮೂವರೂ, ವಿಜ್ಜಲನೆಂಬ ಆಪ್ತ ಸೇವಕನೂ ಹಂಸಿಕೆ ಎಂಬ ದಾಸಿಯೂ ಸೇರಿ ಆರು ಮಂದಿ. ಪತ್ನಿ ಲಲಿತಗೌರಿಯು ತೀರಿ ಹೋದ ಮೇಲೆ ಸತ್ಯಾಶ್ರಯನು ಪುನರ್ವಿವಾಹ ಮಾಡಿಕೊಳ್ಳಲಿಲ್ಲ. ಮಕ್ಕಳ ಪೋಷಣೆ, ರಾಜ್ಯ ರಕ್ಷಣೆ ಇವುಗಳಲ್ಲಿ ಮಗ್ನನಾಗಿ ತ್ರಿಕರಣ ಶುದ್ಧಿಯಿಂದ ಬಾಳನ್ನು ನೂಕುತ್ತಿದ್ದನು.

ಚಂಡವರ್ಮನು ತಾನು ಎಲ್ಲಿಗೆ ಹೋಗಬೇಕೆಂದಿರುವೆನೆಂಬ ವಿಚಾರ ವನ್ನು ಆ ದಿನ ಮೊಟ್ಟಮೊದಲೇ ಕೇಳಿದುದಕ್ಕೆ ಕಾರಣ ಸತ್ಯಾಶ್ರಯನಿಗೆ ಗೊತ್ತಾಗಲಿಲ್ಲ. ಅದು ಸ್ವಾರ್ಥಸಾಧನೆಯ ಒಳಸಂಚು ಎಂಬುದು ಮುಂದೆ ಅರಿವಾಯಿತು. ಅಷ್ಟರಲ್ಲಿಯೇ ಚಂದ್ರಸೇನನು ಒಳಗೆ ಬಂದನು. ಚಂದ್ರ ಸೇನನು ಸತ್ಯಾಶ್ರಯನ ಆದರ್ಶಪುತ್ರ. ಶೌರ್ಯದಲ್ಲಾಗಲಿ ಕುಲಾಭಿಮಾನ ದಲ್ಲಾಗಲಿ ಈತನು ತಂದೆಯ ಪ್ರತಿಬಿಂಬ. ವಯಸ್ಸು ಇಪ್ಪತ್ತೊಂದು ವರ್ಷ. ಸತ್ಯಾಶ್ರಯನು ಚಂದ್ರಸೇನನನ್ನು ನೋಡಿ "ಮಗು ಚಂದ್ರಸೇನಾ, ಬಾ ಹತ್ತಿರ ಕುಳಿತುಕೊ. ವೀರಧವಳನು ಎಲ್ಲಿ ? ಲಲಿತಪ್ರಭೆ ಎಲ್ಲಿ ?" ಎಂದು ಕಿರುದನಿಯಲ್ಲಿ ನುಡಿದನು. ತನ್ನ ತಂದೆ ಹೀಗೆ ಕುಗ್ಗಿದ ಕಂಠದಿಂದ ಮಾತನಾಡಿದುದನ್ನು ತಿಳಿದು ಚಂದ್ರಸೇನನಿಗೆ ಆಶ್ಚರ್ಯವಾಯಿತು. ತಂದೆಯ ಹೃದಯವನ್ನು ಕಲಕಿರುವ ದುಃಖ ರಾಜಕೀಯವೇ ಅಥವಾ ಸಾಮಾಜಿಕವೇ ಎಂಬುದು ಗೊತ್ತಾಗಲಿಲ್ಲ. ವೀರಧವಳನೂ ಬಂದನು. ಸತ್ಯಾಶ್ರಯನ ಕುಟುಂಬ ವರ್ಗದಲ್ಲಿ ವೀರಧವಳನು ಔದಾರ್ಯದ ಮತ್ತು ಶೌರ್ಯದ ಮೂರ್ತಿ. ಆತನ ವಯಸ್ಸು ಇಪ್ಪತ್ತನಾಲ್ಕು ವರ್ಷ. ದೀರ್ಘವಾದ

ಶರೀರ, ತೇಜಸ್ಸಿನಿಂದ ಕೂಡಿದ ಕಣ್ಣು, ನೀಳವಾದ ಕಣ್ಣು ಹುಬ್ಬು. ಸತ್ಯಾಶ್ರಯನು ಈತನನ್ನು ಅತಿಶಯವಾದ ಪ್ರೇಮದಿಂದ ಸಾಕಿ ಸಲಹಿದ್ದನು. ಸಾಕಿದ ತಂದೆಗಾಗಿ ಸಕಲ ರೀತಿಯಲ್ಲಿಯೂ ಶುಭವನ್ನು ಕೋರುವುದು ಈತನ ದಿನಚರಿಯಾಗಿತ್ತು. ಸತ್ಯಾಶ್ರಯನು ವೀರಧವಳನನ್ನು ಚಂದ್ರಸೇನನ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಸೂಚಿಸಿ "ನಿಮ್ಮಿಬ್ಬರ ಜೊತೆ ಇನ್ನು ಮುಂದೆ ಅತ್ಯವಶ್ಯಕ" ಎಂದು ನುಡಿದು ಚಂಡವರ್ಮನ ಕಡೆ ನೋಡಿದನು. ಚಂಡವರ್ಮನು "ಮುಂದಿನ ಯೋಚನೆ ನಡೆಯಲಿ." ಎಂದು ಮತ್ತೆ ಹಿಂದಿನ ಮಾತನ್ನೇ ಮುಂದುವರಿಸಿದನು. ಚಂದ್ರಸೇನನೂ ವೀರಧವಳನೂ ಒಬ್ಬರನ್ನೊಬ್ಬರು ನೋಡುತ್ತ ಅಂದಿನ ವಿಶೇಷ ಘಟನೆ ಏನಿರಬಹುದೆಂದು ವಿಸ್ಮಯದಿಂದ ಕುಳಿತರು.

ಸತ್ಯಾಶ್ರಯನು ಚಂದ್ರಸೇನನನ್ನೂ, ವೀರಧವಳನನ್ನೂ ಗಂಭೀರ ನೋಟದಿಂದ ಗಮನಿಸಿ "ಮಕ್ಕಳಿರಾ, ಮಂತ್ರಿಮಂಡಲದಿಂದ ಪತ್ರ ಬಂದಿದೆ. ಇನ್ನು ಮೂರು ದಿನಗಳೊಳಗಾಗಿ ನಾವು ದುರ್ಗವನ್ನು ಬಿಟ್ಟು ತೆರಳಬೇಕೆಂದು ಸರದಾರ ವೀರರಾಜರ ಆಜ್ಞೆಯಾಗಿದೆ. ನಾವು ಈಗ ಎದೆಗೆಡಬಾರದು. ನಮ್ಮ ಉದ್ದೇಶವನ್ನು ಸಾಧಿಸುವ ತನಕ ಎಲ್ಲ ಎಡರುಗಳನ್ನೂ ದಾಟಬೇಕು. ಈಗ ಆಜ್ಞೆ ಆಗಿರುವ ಪ್ರಕಾರ ರಾಜಧಾನಿಯನ್ನು ಬಿಟ್ಟು ಹೊರಡೋಣ."

ಚಂಡವರ್ಮ—ನಿಮಗೆ ಸಂಕೋಚವಿಲ್ಲದಿದ್ದರೆ ನನ್ನ ಅಜಿಂಕ್ಯದುರ್ಗಕ್ಕೆ ತಾವು ಬರಬೇಕು. ನನ್ನ ಆಹ್ವಾನವನ್ನು ಮನ್ನಿಸಬೇಕು.

ಅಪ್ರಾರ್ಥಿತವಾಗಿ ಚಂಡವರ್ಮನು ತನ್ನ ದುರ್ಗದಲ್ಲಿ ಆಶ್ರಯ ಕೊಡುವೆನೆಂದುದಕ್ಕಾಗಿ ಸತ್ಯಾಶ್ರಯನಿಗೆ ಆಶ್ಚರ್ಯ ಉಂಟಾಯಿತು. ತಕ್ಷಣ ಆಹ್ವಾನವನ್ನು ಅಂಗೀಕರಿಸುವುದಾದರೂ ಹೇಗೆ ?

ಅಜಿಂಕ್ಯ ದುರ್ಗಕ್ಕೂ ರಾಜಮಹೇಂದ್ರಕ್ಕೂ ನೂರಿಪ್ಪತ್ತು ಮೈಲಿ. ಪೂರ್ವಪರ್ವತ ಸಾಲಿನಲ್ಲಿತ್ತು ಈ ದುರ್ಗ. ಹೆಸರಿಗೆ ತಕ್ಕಹಾಗೆ ಅಜೇಯವಾಗಿತ್ತು. ದುರ್ಗದ ಸುತ್ತಲೂ ಬಲವಾದ ಕೋಟೆ. ಆ ಕೋಟೆಗೆ ನಾಲ್ಕು

ದಿಕ್ಕುಗಳಲ್ಲಿಯೂ ಮಹಾದ್ವಾರಗಳು. ಚಂಡವರ್ಮನ ಅಣ್ಣಂದಿರು ಸರದಾರ ಕೀರ್ತಿವರ್ಮರವರು ಅಕಾಲಮರಣಕ್ಕೆ ತುತ್ತಾದಮೇಲೆ ಪೂರ್ವ ಮಹಾದ್ವಾರ ಒಂದು ಮಾತ್ರ ತೆರೆದಿತ್ತು. ಪೂರ್ವ ಮಹಾದ್ವಾರವನ್ನು ದಾಟಿದರೆ ಅಲ್ಲಿ ಒಂದು ಚೌಕ. ಸೈನಿಕರು ಒರೆಗಳಚಿದ ಕತ್ತಿಯನ್ನು ಹಿಡಿದು ಪಹರೆ ಇದ್ದರು ಅಲ್ಲಿ ಅಹೋರಾತ್ರಿ. ಚೌಕದ ಒಂದು ಮೂಲೆಯಲ್ಲಿ ದೊಡ್ಡ ಗಂಟೆ. ಈ ಗಂಟೆಗೆ ಒಂದು ಸರಪಣಿಯನ್ನು ಕಟ್ಟಿ ಆಚೆಗೆ ನೇತುಹಾಕಿದ್ದರು. ಸರಪಣಿಯನ್ನು ಎಳೆದು ಗಂಟೆ ಬಾರಿಸಿದ ಕೂಡಲೇ ಕೋಟೆಯ ಬಾಗಿಲು ತೆರೆಯುತ್ತಿತ್ತು.

ದುರ್ಗದ ಉತ್ತರದಲ್ಲಿ ಮಲ್ಲರಂಗ. ಅದರ ಪಕ್ಕದಲ್ಲಿ ವಿವಿಧ ವಸ್ತು ಸಂಗ್ರಹಶಾಲೆ. ಅದರ ಪಕ್ಕದಲ್ಲಿ ಗಜ ಮತ್ತು ಅಶ್ವಶಾಲೆಗಳು.

ಉತ್ತರದಿಗ್ಭಾಗದಲ್ಲಿದ್ದ ಆಶ್ಚರ್ಯಸ್ಥಳವೆಂದರೆ ಅದು ಪ್ರತಿಮಾಗೃಹ. ಈ ಗೃಹದ ಒಂದೊಂದು ಕೋಣೆಯಲ್ಲಿಯೂ ಯುದ್ಧದಲ್ಲಿ ಪ್ರಸಿದ್ಧಿಪಡೆದ ಯೋಧರ ವಿಗ್ರಹಗಳನ್ನು ಪೀಠಗಳ ಮೇಲೆ ಅಳವಡಿಸಿದ್ದರು. ಮರ, ದಂತ, ಕಲ್ಲು ಇವುಗಳಿಂದ ಕೆತ್ತಿದ ಅಮೂಲ್ಯ ವಸ್ತುಗಳೂ, ಕಲ್ಲಿನ, ತಾಮ್ರದ ಮತ್ತು ತಾಳೆಗರಿಯ ಅಪೂರ್ವ ಶಾಸನಗಳೂ, ಕತ್ತಿ, ಈಟಿ, ಗುರಾಣಿ, ಕವಚ, ಶಿರಸ್ತ್ರ, ಬಿಲ್ಲು, ಬಾಣ ಮುಂತಾದ ಯುದ್ಧಸಾಮಗ್ರಿಗಳೂ ಮನುಷ್ಯ ಸೃಷ್ಟಿಯ ವೈಭವವನ್ನು ಸಾರುತ್ತಿದ್ದುವು ಇಲ್ಲಿ.

ದುರ್ಗದ ದಕ್ಷಿಣ ಭಾಗದಲ್ಲಿ ದುರ್ಗದ ರಕ್ಷಕರಿಗೆ ವಾಸಸ್ಥಳ. ಅದರ ಮುಂಭಾಗದಲ್ಲಿಯೇ ಮಧುವನ. ಮಧುವನದ ಪಕ್ಕಕ್ಕೆ ಶ್ರೀಮನ್ನಾರಾಯಣ ದೇವಾಲಯ. ದೇವಾಲಯದ ಹಿಂಭಾಗದಲ್ಲಿ ಸ್ಫಟಿಕ ಶಿಲೆಗಳಿಂದ ಕಟ್ಟಿದ ಸರದಾರರ ಸಮಾಧಿಗಳು.

ದುರ್ಗದ ಎರಡನೆಯ ಅಂತಸ್ತಿನಲ್ಲಿ ದೊಡ್ಡ ಮಹಲುಗಳು, ಸರ್ವೋತ್ಕೃಷ್ಟವಾದ ಪುಸ್ತಕಭಂಡಾರ, ಖಜಾನೆ ಇವುಗಳಲ್ಲಿದ್ದುವು. ದುರ್ಗದ ನಡುವೆ ಖಜಾನೆಗೂ ಇತರ ಸ್ಥಳಗಳಿಗೂ ಹೋಗಿ ಬರಲು ಗುಪ್ತ ದ್ವಾರಗಳಿದ್ದುವು.

ಸತ್ಯಾಶ್ರಯನು ಮಿತ್ರವರ್ಯನಾದ ಚಂಡವರ್ಮನನ್ನು ನೋಡಿ "ತಮ್ಮ ಆಹ್ವಾನಕ್ಕಾಗಿ ಬಹಳ ಸಂತೋಷ. ನಿಮ್ಮ ಸಹೋದರರಾದ ಕೀರ್ತಿವರ್ಮರವರು ನಿಧನರಾಗುವುದಕ್ಕೆ ಮುಂಚೆ ಅನೇಕ ವೇಳೆ ಕರೆದಿದ್ದರು. ರಾಜಕೀಯ ಕಾರಣಗಳಿಗಾಗಿ ಹೋಗಲು ಅವಕಾಶವಾಗಲಿಲ್ಲ. ಆದರೆ—" ಎಂದು ಮಾತು ನಿಲ್ಲಿಸಿದನು.

ಚಂಡವರ್ಮ—ಇದೇಕೆ ನಿಮಗೆ ಸಂಕೋಚವೇ!

ಸತ್ಯಾಶ್ರಯ—ಸಂಕೋಚವೇನೂ ಇಲ್ಲ. ಅಜಿಂಕ್ಯ ದುರ್ಗದ ವಿಚಾರ ದಲ್ಲಿ ಅನೇಕ ಕೆಟ್ಟಮಾತು ರಾಜಧಾನಿಯಲ್ಲಿ ಹರಡಿವೆಯಲ್ಲಾ ನಿಜವೊ?

ಚಂಡ—ನನ್ನ ಮಾತನ್ನು ನಂಬುವುದಾದರೆ ಈ ವದಂತಿಗಳಲ್ಲಿ ನನಗೆ ನಂಬಿಕೆ ಇಲ್ಲ.

ಸತ್ಯಾ—ಹಾಗಾದರೆ ನೀವು ಆ ದುರ್ಗದಲ್ಲಿ ವಾಸಮಾಡದಿರುವುದೇಕೆ?

ಚಂಡ—ನಾನು ಒಬ್ಬೊಂಟಿಗ. ಅದೀಗ ನಿಜವಾದ ಕಾರಣ. ಅಲ್ಲದೆ, ರಾಜಮಹೇಂದ್ರದಲ್ಲಿ ನನ್ನ ಅರಮನೆಯನ್ನು ಕಟ್ಟಿಸಿಕೊಂಡಮೇಲಂತೂ ನನಗೆ ದುರ್ಗದಲ್ಲಿ ವಾಸಿಸಲು ಇಷ್ಟವೇ ಇಲ್ಲ.

ಅಷ್ಟರಲ್ಲಿ ಕಾಲಿನ ಕಿರುಗೆಜ್ಜೆಯ ಮಧುರಗತಿ ಕೇಳಿಸಿತು. ಲಲಿತ ಪ್ರಭೆಯು ಮೆಲುನಡೆಯಲ್ಲಿ ಒಳಗೆ ಬಂದಳು. ಲಲಿತಪ್ರಭೆ ಸತ್ಯಾಶ್ರಯನ ಮುದ್ದುಕುವರಿ. ಹದಿನಾರು ವರ್ಷದ ನವಯುವತಿ. ಸೌಂದರ್ಯದ ಗಣಿ ಯಾದ ಈಕೆ ಸಾಧಾರಣ ವಸ್ತ್ರಧಾರಣೆಯಲ್ಲಿಯೂ ಮನೋಹರವಾಗಿ ಒಪ್ಪು ತ್ತಿದ್ದಳು. ಕಡೆದ ಗೊಂಬೆಯಂತೆ ಲೋಪವಿಲ್ಲದ ಪರಿಪೂರ್ಣ ಅಂಗ ಸೌಷ್ಟವ. ಉಡುಗಣದ ನಡುವಣ ಇಂದುವನ್ನು ಜರೆಯುವ ಮುಖ. ತೊಂಡೆ ಹಣ್ಣಿದಂತೆ ಕೋಮಲವಾದ ತುಟಿ. ಅಮೃತವರ್ಷವನ್ನು ಸುರಿ ಯುವ ಚಂಚಲ ನೇತ್ರಗಳು. ಸೂಜಿಮಲ್ಲಿಗೆಯ ಮೊಗ್ಗಿನಂತೆ ನಿರ್ಮಲ ವಾದ ನಾಸಿಕ. ದಟ್ಟವೂ ನೀಳವೂ ಆದ ತಲೆಗೂದಲು. ಈಕೆಯ ಮುಖ ದಲ್ಲಿ ಗಾಂಭೀರ್ಯವೂ, ಮಾತಿನಲ್ಲಿ ವಿನಯವೂ ಹೊರಸೂಸುತ್ತಿದ್ದುವು.

ಆದರೆ, ಹುಟ್ಟಿದಾಗಲೇ ಮಾತೃವಿಯೋಗ ಲಲಿತಪ್ರಭೆಗೆ! ತನ್ನ ತಂದೆ ಕೈಗೊಂಡಿರುವ ರಾಜಕಾರ್ಯ ಮಹತ್ತರವಾದುದೆಂದು ತಿಳಿದಿದ್ದಳು ಈಕೆ. ಆದರೆ, ಸ್ತ್ರೀ ಸ್ವಭಾವಕ್ಕೆ ತಕ್ಕಂತೆ ಈ ರಾಜಕಾರ್ಯದ ಎಡರು ತೊಡರುಗಳನ್ನು ತಿಳಿದು ಆಕೆಗೆ ಭಯ.

ಸತ್ಯಾಶ್ರಯನು ಮಗಳು ಬಂದುದನ್ನು ನೋಡಿ " ಬಾ ತಾಯಿ, ನಿನಗೆ ಗೊತ್ತಿದೆಯೇ ಈ ಸಮಾಚಾರ ? ಈ ದುರ್ಗವನ್ನು ಬಿಟ್ಟು ಹೊರಡಬೇಕಾಗಿದೆಯಮ್ಮ ಇನ್ನು ಮೂರು ದಿನಗಳಲ್ಲಿ. ಇದು ವೀರರಾಜರ ಆಜ್ಞೆ. ಅವಧಿ ಮುಗಿಯುವ ತನಕ ನಾವು ದೇಶಭ್ರಷ್ಟರಾಗಿರಬೇಕಾಗಿದೆ." ಎಂದು ತಿಳಿಸಿ (ಚಂಡವರ್ಮನ ಕಡೆ ತೋರಿಸಿ) " ಅವಧಿ ಮುಗಿಯುವ ತನಕ ಇವರ ದುರ್ಗದಲ್ಲಿರಬೇಕೆಂದು ಇಷ್ಟವಿದೆ, ತಾಯಿ. " ಎಂದು ಸಂಕಟದಿಂದ ತಿಳಿಸಿದನು. ಅಬಲೆಯಾದ ಲಲಿತಪ್ರಭೆಗೆ ತಂದೆಯ ಮಾತನ್ನು ಕೇಳಿ ಸಿಡಿಲುಬಡಿದಂತಾಯಿತು. ಸತ್ಯವಂತನಾದ ತನ್ನ ತಂದೆಗೆ ಹೀಗೆ ಕಷ್ಟ ಒದಗಿದುದಕ್ಕಾಗಿ ಅವಳು ಬೆರಗಾದಳು.

ಚಂಡವರ್ಮನು ಚಂದ್ರಸೇನನ ಕಡೆ ತಿರುಗಿ " ತಮ್ಮ ವಿಚಾರವೇನು ? ತಮಗೆ ಬೇಟೆಯಲ್ಲಿ ಬಹಳ ಆಸೆಯೆಂದು ನನಗೆ ಗೊತ್ತು. ಅಜಿಂಕ್ಯ ದುರ್ಗದ ಅರಣ್ಯದಲ್ಲಿ ಮದಿಸಿದ ಆನೆಗಳಿವೆ." ಎಂದು ನಗುತ್ತ ನುಡಿದನು. ಚಂದ್ರಸೇನನು ಆ ಮಾತಿಗೆ ಉತ್ತರ ಕೊಡದೆ ವೀರಧವಳನ ಮುಖವನ್ನು ನೋಡಿದನು. " ಅಜಿಂಕ್ಯ ದುರ್ಗದಲ್ಲೆಲ್ಲ ಮದಿಸಿದ ಆನೆಗಳೆ! " ಎಂದನು ವೀರಧವಳ.

ಚಂಡವರ್ಮನಿಗೆ ವೀರಧವಳನೆಂದರೆ ಅಸಡ್ಡೆ. ಅಸಡ್ಡೆಯೇ ಅಲ್ಲ ಅಸೂಯೆಯೆಂದರೂ ಸರಿಯೆ. ಸತ್ಯಾಶ್ರಯನು ಆತನಿಗೆ ತನ್ನ ಮಗನ ಪಕ್ಕದಲ್ಲಿ ಸಮಾನ ಸ್ಥಾನ ಕೊಟ್ಟು ಕುಳ್ಳಿರಿಸಿದುದಂತೂ ಚಂಡವರ್ಮನಿಗೆ ಇಷ್ಟವಿರಲಿಲ್ಲ. ಕಾರ್ಯನಿಮಿತ್ತವಾಗಿ ಚಂಡವರ್ಮನು ವೀರಧವಳನೊಡನೆ ಒಂದೆರಡು ಮಾತು ಆಡುತ್ತಿದ್ದನೇ ವಿನಾ ಸಲಿಗೆಯಿಂದಲ್ಲ. ವೀರಧವಳನಿಗಂತೂ ಚಂಡವರ್ಮನ ಈ ಬಗೆಯ ದ್ವೇಷಾಸೂಯೆಗಳಿಗೆ ಕಾರಣವೇನೆಂಬುದು ಗೊತ್ತಿರಲಿಲ್ಲ. ಅಂತು ದೇಶಭ್ರಷ್ಟರಾಗಿ ತೆರಳಬೇಕಾದ ಆ ವಿಷಮ

ಸಮಯದಲ್ಲಿ ಚಂಡವರ್ಮನು ಬೇಟೆಯ ಚೂಟಿಯನ್ನು ತೋರಿಸಿದುದು ಯೋಗ್ಯವೆಂದು ತೋರಲಿಲ್ಲ ವೀರಧವಳನಿಗೆ.

ಪ್ರಯಾಣದ ವಿಚಾರ ಸ್ವಲ್ಪ ಕಾಲ ಮಾತನಾಡಿದ ಮೇಲೆ ಚಂದ್ರಸೇನ, ವೀರಧವಳ ಮತ್ತು ಲಲಿತಪ್ರಭೆ ಇವರುಗಳು ಹೊರಟುಹೋದರು. ಸರ ದಾರರಿಬ್ಬರು ಮುಂದಿನ ಮಾತು ನಡೆಸಿದರು.

ಸತ್ಯಾಶ್ರಯ—ಸರದಾರರೇ, ನಿಮ್ಮ ಉಪಕಾರಕ್ಕೆ ನಾನು ಬಹಳ ಕೃತಜ್ಞನಾಗಿದ್ದೇನೆ.

ಚಂಡವರ್ಮ—ಇದೇನು ಮಹಾಕಾರ್ಯ, ಇಂಥ ಸಮಯದಲ್ಲಿ ಪರ ಸ್ಪರ ಸಹಾಯವಲ್ಲದೆ ಮತ್ತೆ ಯಾವಾಗ? ಆದರೆ....ಆದರೆ....ನಾನು ಕೆಲವು ದಿನಗಳಿಗೆ ಹಿಂದೆ ತಮಗೆ ಒಂದು ಮಾತು ಹೇಳಿದ್ದೆನು. ಜ್ಞಾಪಕವಿದೆಯೋ ತಮಗೆ ?

ಸತ್ಯಾ—ಇದೆ. ಲಲಿತಪ್ರಭೆ ಈಗ ವಿವಾಹಕ್ಕೆ ಯೋಗ್ಯಳಾಗಿದ್ದಾಳೆ. ಆದರೆ, ಈಗಿನ ಪರಿಸ್ಥಿತಿಯಲ್ಲಿ ಅನುಕೂಲವಿಲ್ಲ. ಯಾದವ ವಂಶೋದ್ಭವರಾದ ತಮ್ಮ ಸಂಬಂಧ ಲಭಿಸುವುದಾದರೆ ನನಗೆ ಬಹಳ ಸಂತೋಷ. ಅಜಿಂಕ್ಯ ದುರ್ಗಕ್ಕೆ ಹೋದ ಮೇಲೆ ಆ ವಿಚಾರ ನಿಧಾನವಾಗಿ ಯೋಚಿಸೋಣ.

ಚಂಡವರ್ಮನ ಸಂಧಾನ ಫಲಿಸಿತು. ಸತ್ಯಾಶ್ರಯನಿಗೆ ಕಷ್ಟದಲ್ಲಿ ಸಹಾಯ ಮಾಡಿ ದಾಕ್ಷಿಣ್ಯದ ಕಟ್ಟಿನಲ್ಲಿ ಕಟ್ಟುವುದೇ ಅಜಿಂಕ್ಯ ದುರ್ಗದ ಆಹ್ವಾನದ ಗುರಿಯಾಗಿತ್ತು. ಲಲಿತಪ್ರಭೆಯ ಮೇಲಣ ಭ್ರಮೆಯನ್ನು ಸಾಧಿಸಲು ಬೇರೆ ಯಾವ ಮಾರ್ಗವೂ ಇರಲಿಲ್ಲ ಚಂಡವರ್ಮನಿಗೆ! ಆದರೆ ಇದರಿಂದ ವೀರಧವಳನ ಸಾಹಸಕ್ಕೆ ಸಾಣೆ ಹಿಡಿದಂತಾಯಿತು.

## ೪. ದುರ್ಗಾಧಿಪತಿ.

### ಪೊದೆಯಲ್ಲಿ ಮಾಯವಾದಳು !

ಸತ್ಯಾಶ್ರಯನು ಅಜಿಂಕ್ಯ ದುರ್ಗಕ್ಕೆ ತನ್ನ ಕುಟುಂಬವರ್ಗದವರೊಡನೆ ಹೊರಡಲು ಸಿದ್ಧನಾದ ತಕ್ಷಣ ಚಂಡವರ್ಮನು ಅವರ ಪ್ರವಾಸಕ್ಕೆ ತಕ್ಕ ವ್ಯವಸ್ಥೆ ನಡೆಸುವಂತೆ ದುರ್ಗದ ರಕ್ಷಕನಾದ ರಣರಾಗನಿಗೆ ಆಜ್ಞೆ ಮಾಡಿದನು. ರಣರಾಗನು ಚಂಡವರ್ಮನ ಅವಿಚ್ಛಿನ್ನ ಭಕ್ತ. ಚಂಡವರ್ಮನಿಗೆ ಈತನಲ್ಲಿ ತುಂಬ ವಿಶ್ವಾಸ. ರಣರಾಗನು ತನ್ನ ಅರವತ್ತುಮೂರು ವರ್ಷದ ಆಯುಸ್ಸನ್ನೆಲ್ಲ ದುರ್ಗದ ಸೇವೆಯಲ್ಲಿಯೇ ಕಳೆದಿದ್ದನು. ಆತನ ಮುಖವನ್ನು ನೋಡಿದರೆ ಶುದ್ಧ ಕಪಟಿಯಂತೆ ಭಾಸವಾಗುತ್ತಿತ್ತು. ಸತ್ಯಾಶ್ರಯನ ಆಗಮನ ತಿಳಿದ ಕೂಡಲೆ ಸಕಲ ಸಿದ್ಧತೆಗಳನ್ನೂ ಶ್ರದ್ಧೆಯಿಂದ ನಿರ್ವಹಿಸಿದ್ದನು ರಣರಾಗ.

ಒಂದು ರಾತ್ರಿ ಸರದಾರ ಸತ್ಯಾಶ್ರಯನು ಚಂದ್ರಸೇನ ಮತ್ತು ವೀರಧವಳ ಇವರೊಡನೆ ಅಜಿಂಕ್ಯ ದುರ್ಗದಲ್ಲಿ ತನಗೆ ಗೊತ್ತಾಗಿದ್ದ ಮಹಲಿನಲ್ಲಿ ಕುಳಿತು ಮಾತಾಡುತ್ತಿದ್ದನು. ಅಜಿಂಕ್ಯ ದುರ್ಗಕ್ಕೆ ಬಂದು ಒಂದು ವಾರವಾಗಿತ್ತು. ಚಂದ್ರಸೇನನೂ ವೀರಧವಳನೂ ಸಾಯಂಕಾಲ ಬೇಟೆಯಿಂದ ಹಿಂದಿರುಗಿದ್ದರು. ಎಂದಿನಂತೆ ಬೇಟೆಯ ವೃತ್ತಾಂತವನ್ನು ಸತ್ಯಾಶ್ರಯನಿಗೆ ತಿಳಿಸುವುದು ಅವರ ಪದ್ಧತಿ. "ಈ ದಿನ ಬೇಟೆ ಹೇಗಿತ್ತು ? ನಿಮ್ಮ ಬೇಟೆಯಿಂದ ದುರ್ಗದ ಕಾವಲುಗಾರರಿಗೆ ಬಲವಾದ ಊಟ ಸಿಕ್ಕಿರಬಹುದಲ್ಲವೇ !" ಎಂದು ಅವರಿಬ್ಬರನ್ನೂ ಸತ್ಯಾಶ್ರಯನು ಕೇಳಿದನು.

ವೀರಧವಳ—ಹಾಗೇನೂ ಇಲ್ಲ, ಮಹಾರಾಜ. ಚಂದ್ರಸೇನನು ಕೊಂದ ಬೇಟೆಯನ್ನು ದುರ್ಗಕ್ಕೆ ತಂದೆವು. ನಾನು ಹೊಡೆದ ಬೇಟೆ ವಿಲಕ್ಷಣ ರೀತಿಯಿಂದ ಕೈಗೆ ಸಿಕ್ಕದೆ ಹೋಯಿತು.

ಸತ್ಯಾಶ್ರಯ—ಏನು ! ವಿಲಕ್ಷಣ ರೀತಿಯಿಂದ !

ವೀರ—ಹೌದು ಮಹಾರಾಜ. ಬೇಟೆಯನ್ನು ಮುಗಿಸಿ ನಾವೆಲ್ಲರೂ ಒಂದು ಸ್ಫಟಿಕ ಶಿಲೆಯ ಮೇಲೆ ಕುಳಿತಿದ್ದೆವು. ಸಂಧ್ಯಾರಾಗವನ್ನು ನೋಡುವ ಸಂಭ್ರಮದಲ್ಲಿ ನಮ್ಮ ದೃಷ್ಟಿ ಒಂದು ಪೊದೆ ಕಡೆ ಹೋಯಿತು. ಆ ಪೊದೆಯಲ್ಲಿ ವಿಕಾರ ರೂಪಿನ ವೃದ್ಧ ವನಚರಿ ಕಾಣಿಸಿಕೊಂಡಳು.

ಚಂದ್ರಸೇನ—ತಂದೆ, ಆಕೆಯನ್ನು ವನಚರಿ ಎನ್ನುವುದಕ್ಕಿಂತ ರಾಕ್ಷಸಿ ಎಂದರೆ ಸಮ.

ವೀರ—ಹೌದು. ಅವಳನ್ನು ನೋಡಿದರೆ ಬಹಳ ಭಯವಾಗುವ ಹಾಗೆಯೇ ಇತ್ತು. ಆಕೆಯ ಹರಿದ ಬಟ್ಟೆಗಳು, ಜಡೆಕಟ್ಟಿದ ಕೂದಲು, ಕೆಂಪು ಕಣ್ಣು ಇವುಗಳು ಭೀಕರವಾಗಿದ್ದುವು. ಬಹಳ ಹೊತ್ತು ಆಕೆ ನನ್ನ ಕಡೆ ತೀವ್ರ ದೃಷ್ಟಿಯಿಂದ ನೋಡಿದಳು. ನಾನೂ ಆಕೆಯನ್ನು ನೋಡಿದೆನು. ಸ್ವಲ್ಪ ಹೊತ್ತಾದ ಮೇಲೆ ಆಕೆ ಅಜಿಂಕ್ಯ ದುರ್ಗದ ಕಡೆ ತನ್ನ ಕೃಶವಾದ ಕೈಯನ್ನು ತೋರಿಸಿ "ಗಡೀಪಾರಾಗಿ ಅಜಿಂಕ್ಯ ದುರ್ಗಕ್ಕೆ ಬಂದಿರುವವರು ನೀವೇ ಎಂದು ಕಾಣುತ್ತದೆ." ಎಂದು ಕರ್ಕಶಧ್ವನಿಯಿಂದ ಕೇಳಿದಳು. ನಾವು "ಹೌದು" ಎಂಬುದನ್ನು ತಲೆ ಸನ್ನೆಯಿಂದ ತೋರಿಸಿದೆವು. ನಮ್ಮ ಬಾಯಿ ಒಣಗಿತ್ತು!

ಆಗ ಅವಳು "ಹಾಗೋ! ಈ ದುರ್ಗದಲ್ಲಿ ಭಯಂಕರವಾದ ದೃಶ್ಯಗಳು ಕಾಣಬಹುದು! ಕರ್ಕಶ ಧ್ವನಿಗಳಾಗಬಹುದು! ತಿಳಿಯಿತೆ." ಎಂದು ನುಡಿದು ಗಟ್ಟಿಯಾಗಿ ಅರಚಿದಳು. ಆಕೆಯ ಕೂಗು ಕಾನನದಲ್ಲೆಲ್ಲ ಮೊಳಗಿತು. ಆಕೆ ಮತ್ತೆ ನಮ್ಮ ಕಡೆ ತೀವ್ರ ದೃಷ್ಟಿಯಿಂದ ನೋಡುತ್ತ "ಯುಗಾದಿಯ ಮೂರನೆಯ ದಿನ ಅಥವಾ ದೇವಿ ಪೂಜೆಯ ದಿನ ಮಹಿಷ ಬಲಿ ಉತ್ಸವದ ತರುವಾಯ ರಾತ್ರಿ ರಾಜಭೋಜನ ಸಮಯಕ್ಕೆ ಸರಿಯಾಗಿ ನಿಜವಾದ ದುರ್ಗಾಧಿಪತಿ ಈ ದುರ್ಗದ ಗುಪ್ತ ದ್ವಾರದಲ್ಲಿ ನಿಮಗೆ ಕಾಣುವನು." ಎಂದಳು.

ಸತ್ಯಾ—ಮುಂದೇನು ಧವಳ!

ವೀರ—ಮುಂದೇನು ಹೇಳಲಿ! ನಾವು ಆಕೆಯನ್ನು ಕುರಿತು, ದುರ್ಗಾಧಿಪತಿ ಯಾರು? ಮಹಿಷ ಬಲಿ ಉತ್ಸವವೇನು? ಇವೇ ಮೊದಲಾದ ವಿಷಯಗಳನ್ನು ಕೇಳಿದೆವು. ಆದರೆ ವೃದ್ಧ ವನಚರಿ ನಮ್ಮ ಪ್ರಶ್ನೆಗಳಿಗೊಂದಕ್ಕೂ ಉತ್ತರ ಕೊಡದೆ ಕೈಯನ್ನು ಅಲ್ಲಾಡಿಸುತ್ತ ಬಾಯಿಯಲ್ಲಿ ಏನನ್ನೋ ಹೇಳಿಕೊಳ್ಳುತ್ತಿದ್ದಳು. ಅದೊಂದೂ ನಮಗೆ ಅರ್ಥವಾಗಲಿಲ್ಲ. ಅಷ್ಟರಲ್ಲಿ ಆಕೆಯ ದೃಷ್ಟಿ ನಾನು ಕೊಂದಿದ್ದ ಮೃಗದ ಮೇಲೆ ಬಿತ್ತು. ತಕ್ಷಣ ಆಕೆ ಆ ಮೃಗವನ್ನು ಎತ್ತಿಕೊಂಡು "ಇದನ್ನು ನಾನು ತೆಗೆದುಕೊಂಡು ಹೋದರೆ ಅದರಿಂದ ನಿಮಗೆ ಯಾವುದೂ ತೊಂದರೆಯಾಗುವುದಿಲ್ಲವೆಂದು ನೆನಸುತ್ತೇನೆ." ಎಂದು ಹೇಳಿ ನಮ್ಮ ಕಡೆ ನೋಡಿ ಒಮ್ಮೆ ಸಂಕಟದ ನಗು ನಕ್ಕು ಮತ್ತೆ ಪೊದೆಯಲ್ಲಿ ಮಾಯವಾದಳು.

ಸತ್ಯಾ—ಈ ವಿಚಾರವನ್ನು ಮೊದಲೇ ನನಗೆ ಯಾಕೆ ಹೇಳಲಿಲ್ಲ?

ವೀರ—ನಾವು ಬೇಟೆಯಿಂದ ಹಿಂತಿರುಗಿದಾಗ ಮಹಾರಾಜರ ಹತ್ತಿರ ಲಲಿತಪ್ರಭೆ ಇದ್ದುದರಿಂದ, ಆಗ ಈ ವಿಚಾರ ಹೇಳುವುದು ಸರಿಯಲ್ಲವೆಂದು ಭಾವಿಸಿದೆವು. ಕ್ಷಮಿಸಬೇಕು.

ಸತ್ಯಾಶ್ರಯನು ಮಾತನ್ನು ನಿಲ್ಲಿಸಿ, ರಾತ್ರಿ ಹೊತ್ತಾದುದರಿಂದ ಅವರನ್ನು ಕಳುಹಿಸಿದನು. ವನಚರಿ ಹೇಳಿದ ದುರ್ಗಾಧಿಪತಿ ಯಾರೆಂಬುದನ್ನು ದುರ್ಗದ ರಕ್ಷಕನಾದ ರಣರಾಗನನ್ನು ವಿಚಾರಿಸಿ ತಿಳಿಯಬೇಕೆಂದು ಯೋಚಿಸಿದನು.

## ೫. ಕನಸು

### ದೀಪದ ಬೆಳಕಿನ ಲೀಲೆ !

ಎಂದಿನಂತೆ ಸತ್ಯಾಶ್ರಯನು ಶಯನಗೃಹಕ್ಕೆ ಬಂದು ಬಾಗಿಲು ಮುಚ್ಚಿ ಕೈಯ್ಯಲ್ಲಿದ್ದ ದೀಪವನ್ನು ಒಂದು ಗೂಡಿನಲ್ಲಿಟ್ಟನು. ವನಚರಿ ಹೇಳಿದ ದುರ್ಗಾಧಿಪತಿ ಯಾರಿರಬಹುದೆಂಬುದು ಆತನ ಮನದಲ್ಲಿ ಗೂಡು ಮಾಡಿ ಕೊಂಡಿತು. ಅಜಿಂಕ್ಯ ದುರ್ಗದಲ್ಲಿ ಹರಡಿದ್ದ ಅನಿಷ್ಟವಾರ್ತೆಗೂ ಈ ದುರ್ಗಾಧಿಪತಿಗೂ ಏನಾದರೂ ಸಂಬಂಧವುಂಟೇ ಎಂದು ತನ್ನಲ್ಲಿ ತಾನೇ ತರ್ಕ ಮಾಡುತ್ತ ಹಾಸಿಗೆಯ ಮೇಲೆ ಕುಳಿತನು. ಈ ಶಯನ ಮಂದಿರದಲ್ಲಿ ಸತ್ಯಾಶ್ರಯನಲ್ಲದೆ ಮತ್ತಾರೂ ಮಲಗುವ ರೂಢಿಯಿರಲಿಲ್ಲ. ಈ ಮಂದಿರ ವಾದರೂ ಬಲು ಭದ್ರವಾಗಿತ್ತು. ಎರಡು ಬಾಗಿಲು ; ನಾಲ್ಕು ಕಿಟಕಿ. ಒಂದು ಮೂಲೆಯಲ್ಲಿ ಗಂಧದ ಮರದ ಮಂಚ. ಅದರ ಮೇಲೆ ಉತ್ತಮ ವಾದ ಶಯ್ಯೆ. ಕಿಟಕಿಗಳಲ್ಲಿ ಗಾಳಿಯಾಡುವುದಕ್ಕೆ ಸಾಧ್ಯವಾಗಿದ್ದಿತೇ ವಿನಾ ಶತ್ರುಗಳು ಬಾಣ ಬಿಟ್ಟರೂ ಒಳಗಡೆ ಬರಲು ಆಸ್ಪದವಿರಲಿಲ್ಲ. ಸತ್ಯಾಶ್ರಯನು ಹಾಸಿಗೆ ಮೇಲೆ ಕುಳಿತು ಗೂಡಿನಲ್ಲಿ ಉರಿಯುತ್ತಿದ್ದ ದೀಪಶಿಖೆಯನ್ನೇ ನೋಡುತ್ತ ಭಾವನಾಪ್ರಪಂಚದಲ್ಲಿ ತೇಲುತ್ತಿದ್ದನು. ಗೂಡಿನಲ್ಲಿದ್ದ ದೀಪದ ಬೆಳಕು ದೊಡ್ಡ ಶಯ್ಯಾಗೃಹಕ್ಕೆ ತೀರ ಕಡಮೆಯೆಂದೇ ಹೇಳಬಹುದಾಗಿತ್ತು. ನೋಡುತ್ತಿದ್ದ ಹಾಗೆಯೇ ದೀಪದ ಉರಿ ಹೆಚ್ಚಿದಂತಾಯಿತು. ಮತ್ತೆ ತೀರ ಕಡಮೆಯಾಯಿತು. ನಿದ್ರಾದೇವಿ ನಯನಪೀಠದ ಮೇಲೆ ನಾಟ್ಯವಾಡು ತ್ತಿದ್ದಳು. ಸತ್ಯಾಶ್ರಯನು ಉರಿಯ ವಿಚಿತ್ರವನ್ನು ಕೇವಲ ಕಳವಳದ ಭ್ರಾಂತಿಯೆಂದು ಬಗೆದು ಶಯ್ಯೆಯ ಮೇಲೆ ಮಲಗಿದನು.

ಸತ್ಯಾಶ್ರಯನಿಗೆ ಭಯವಾಗಲಿಲ್ಲ. ಭಯವೆಂಬುದನ್ನೇ ಅರಿಯದ ವೀರನವನು. ಯುದ್ಧರಂಗದಲ್ಲಿ ಆತನಿಗೆ ಸಮಾನರಾದ ಧೀರರಿರಲಿಲ್ಲ. ಆದುದರಿಂದ ಆತನು ದೀಪದ ಬೆಳಕಿನ ಮಾಯೆಯನ್ನು ಗಮನಿಸಲಿಲ್ಲ. ಆದರೆ, ದುರ್ಗಾಧಿಪತಿಯ ಯೋಚನೆ ಬಿಟ್ಟಿರಲಿಲ್ಲ ಸ್ವಪ್ನದಲ್ಲೂ !

ಉರಿಯುತ್ತಿದ್ದ ದೀಪದಲ್ಲಿ ದೊಡ್ಡ ಬೆಂಕಿ! ಉತ್ತರಕ್ಷಣದಲ್ಲಿ ಗೂಡಿನ ಗೋಡೆಯ ಮೇಲೆ ದೊಡ್ಡ ಆಕೃತಿ! ಸತ್ಯಾಶ್ರಯನಿಗೆ ನಿದ್ರೆಯಲ್ಲಿಯೇ ರೋಮಾಂಚವಾಯಿತು. ಕಣ್ಣು ತೆರೆದು ನೋಡಿದನು. ದೀಪವು ಸರಿಯಾಗಿಯೇ ಉರಿಯುತ್ತಿತ್ತು. ವೀರಧವಳನು ಹೇಳಿದ ಭಯಂಕರ ಧ್ವನಿ, ಘೋರ ರೂಪ ಮತ್ತು ಮಾತು ಜ್ಞಾಪಕಕ್ಕೆ ಬಂತು. ಮತ್ತೆ ನಿದ್ರೆಯ ಜೊಂಪು! ಮಗ್ಗುಲು ಬದಲಾಯಿಸಿಕೊಂಡು ಮಲಗಿದನು. ದುಃಸ್ವಪ್ನಕ್ಕೆ ಯಾವ ಮಗ್ಗುಲಾದರೇನು! ಆದರೆ, ಸತ್ಯಾಶ್ರಯನು ನಿಜವಾಗಿಯೂ ಧೀರನಾದುದರಿಂದ ಈ ದುಃಸ್ವಪ್ನವನ್ನೂ ಧೀರನಂತೆಯೇ ಸಹಿಸಿದನು. ಮತ್ತೆ ಮಿಂಚಿನಂಥ ಬೆಳಕು! ಭಯಂಕರ ಶಬ್ದ! ಅವಸರದಿಂದ ಮಂಚವನ್ನು ಬಿಟ್ಟು ಇಳಿದು, ಒರೆಯಿಂದ ಕತ್ತಿಯನ್ನು ಈಚೆಗೆ ಸೆಳೆದು ಶಯನಗೃಹದ ನಡುವೆ ನಿಂತನು. ದೀಪವು ಮೊದಲಿನಂತೆಯೇ ಉರಿಯುತ್ತಿತ್ತು. ಇಷ್ಟರಲ್ಲಿ ಬಾಗಿಲು ತೆರೆದ ಶಬ್ದವಾಯಿತು. ಒಂದು ಶ್ವೇತವರ್ಣದ ಆಕೃತಿ ನಿಧಾನವಾಗಿ ತನ್ನ ಕಡೆಗೆ ಬರುತ್ತಿತ್ತು. ಆ ಆಕೃತಿಯನ್ನು ಒಂದೇ ದೃಷ್ಟಿಯಿಂದ ನೋಡುತ್ತ ನಿಂತನು. ದೀಪದ ಬಳಿಗೆ ಬಂದು ನಿಂತಿತು ಆ ಆಕೃತಿ! ಸತ್ಯಾಶ್ರಯನು ಕತ್ತಿಯನ್ನು ಚಾಚಿದನು. ಕೂಡಲೇ ಆಕೃತಿ ಮಾಯವಾಯಿತು. ಒರೆಗಳಚಿದ ಕತ್ತಿಯನ್ನು ಮಂಚಕ್ಕೆ ತೂಗುಹಾಕಿ ಮತ್ತೆ ಮಲಗಿದನು.

ಆಗ ಯಾರೋ ಬಂದು ಎಬ್ಬಿಸಿದ ಹಾಗೆ ಆಯಿತು. ಕಣ್ಣು ತೆರೆದು ನೋಡಿದನು. ಶಯನಗೃಹದ ಇನ್ನೊಂದು ಬಾಗಿಲಿನಿಂದ ಒಳಗೆ ಬಂತು ಆ ಆಕೃತಿ! ಸತ್ಯಾಶ್ರಯನ ಮೈ ನಡುಗಿತು. ಬೆವರು ಹರಿಯಲಾರಂಭಿಸಿತು. ಘರ್ಮಬಿಂದು ಹಣೆಯ ಮೇಲೆ ಕಾಣಿಸಿಕೊಂಡು, ಕೆನ್ನೆಯಲ್ಲಿ ಸುಳಿದು ವಕ್ಷಸ್ಥಳದಲ್ಲಿ ತೊಟ್ಟಿಕ್ಕಿತು. ಕಣ್ಣುಗಳು ಮಂಜಾದುವು. ಪ್ರಪಂಚದಲ್ಲಿ ಭಯವೆಂಬುದನ್ನೇ ಅರಿಯದಿದ್ದ ಸತ್ಯಾಶ್ರಯನಿಗೆ ಆ ರಾತ್ರಿ ಕನಸಿನಲ್ಲಿ ಭಯದ ಅರಿವುಂಟಾಯಿತು. ಆದರೆ, ಸತ್ಯಾಶ್ರಯನು ಧೈರ್ಯದಿಂದ ಎದ್ದು ನಿಂತನು. ಮಿಂಚಿನಂತೆ ಹೊಳೆಯುತ್ತಿದ್ದ ಕತ್ತಿಯನ್ನು ಕೈಗೆ ತೆಗೆದುಕೊಂಡನು. ಒಳಗೆ ಬಂದ ವ್ಯಕ್ತಿ ಸತ್ಯಾಶ್ರಯನನ್ನು ನೋಡಿ ಸಮಾಧಾನದಿಂದಿರುವಂತೆ ಸನ್ನೆ ಮಾಡಿತು. ಸ್ವಲ್ಪ ಹೊತ್ತಾದ ಮೇಲೆ ಆ ಆಕೃತಿ

ಸಿಧಾನವಾಗಿ ತನ್ನ ಕಡೆಗೆ ಬರುತ್ತಿರುವಂತೆ ಕಾಣಿಸಿತು. ಅದು ದೀಪದ ಬೆಳಕಿಗೆ ಬಂದ ತಕ್ಷಣ ಸತ್ಯಾಶ್ರಯನು ಅಚಲದೃಷ್ಟಿಯಿಂದ ನೋಡಿದನು. ಅದು ಪ್ರಾಣಿಯೋನಿಯಿಂದ ಆದ ಸಜೀವ ವ್ಯಕ್ತಿಯಲ್ಲವೆಂದೂ, ಪಿಶಾಚಿ ಮೂಲದಿಂದ ಆದ ಒಂದು ನಿರ್ಜೀವ ಛಾಯೆಯೆಂದೂ ಭಾಸವಾಯಿತು. ಸತ್ಯಾಶ್ರಯನಿಗೆ ಭಯವು ಹೆಚ್ಚಿ, ಬಾಯಿ ಒಣಗಿತು. ಮಾತು ನಿಂತು ಹೋಯಿತು. " ಛೆ, ಪಿಶಾಚಿಗೆ ಹೆದರುವುದೆ ! ಇದಾದರೂ ಅಲ್ಪ ವಿಚಾರ " ಎಂದು ಮತ್ತೆ ಧೈರ್ಯ ತಂದುಕೊಂಡು, ಇರಿದ ಕತ್ತಿಯನ್ನು ಆ ಆಕೃತಿಯ ಕಡೆ ಬೀಸಿದನು. ಆ ಆಕೃತಿ ನಿಂತಲ್ಲಿಯೇ ತನ್ನ ಕೈಯನ್ನು ನೀಳವಾಗಿ ಚಾಚಿ ಬಾಗಿಲ ಕಡೆ ತೋರಿಸಿತು. ಸತ್ಯಾಶ್ರಯನು ಒಂದು ಸಾರಿ ವ್ಯಕ್ತಿಯನ್ನೂ, ಮತ್ತೊಂದು ಸಾರಿ ಬಾಗಿಲನ್ನು ನೋಡುತ್ತ ಸ್ತಬ್ಧನಾಗಿ ನಿಂತು ಬಿಟ್ಟನು. ಆಗ ಆಕೃತಿಯು ಮಾಯವಾಯಿತು. ಬೆಳಗಿನ ಜಾವ ನಾಲ್ಕು ಗಂಟೆಯ ಸಮಯ. ಕುಕ್ಕುಟಗಳ ಇಂಚರವು ಅಜಿಂಕ್ಯ ದುರ್ಗದ ಜನರಿಗೆ ರಾತ್ರಿ ಕಳೆದುದನ್ನು ಸೂಚಿಸುತ್ತಿತ್ತು. ಸತ್ಯಾಶ್ರಯ ದಿಗ್ಗನೆ ಎದ್ದು ಹಾಸಿಗೆಯಲ್ಲಿ ಕುಳಿತನು. ಸುತ್ತಲೂ ನೋಡಿದನು. ಅರುಣಕಿರಣ ಕಿಟಕಿಯಿಂದ ಶಯನಗೃಹಕ್ಕೆ ಪ್ರವೇಶಿಸಿತ್ತು. ಕನಸೋ ಕಳವಳವೋ ಅಂತು ಸತ್ಯಾಶ್ರಯನ ಮನಸ್ಸಿನಲ್ಲಿ ಆ ರಾತ್ರಿ ಆದ ಅನುಭವದಿಂದ ಅಜಿಂಕ್ಯ ದುರ್ಗದ ಮಾಯೆಯನ್ನು ತಿಳಿಯಲು ಮತ್ತಷ್ಟು ಕುತೂಹಲವುಂಟಾಯಿತು.

---

## ೬. ಸಿದ್ಧಾಂತ

### ಆ ವೀರತರುಣನಿಗೂ ಈ ಭಗಿನಿಗೂ ಜೊತೆ !

ಪ್ರಾತಃಕಾಲದ ಯಥಾವಿಧಿಗಳನ್ನು ಮುಗಿಸಿಕೊಂಡು ಸತ್ಯಾಶ್ರಯನು ಸಭಾಮಂದಿರಕ್ಕೆ ಹೊರಟನು. ರಾತ್ರಿ ತನಗೆ ಆದ ಅನುಭವ ಚಂದ್ರಸೇನ ಮತ್ತು ವೀರಧವಳ ಇವರಿಗೆ ಆಗಿದ್ದರೆ ಅವರ ಗತಿ ಏನಾಗುತ್ತಿತ್ತೆಂಬುದು ಅವನ ಮನಸ್ಸಿನಲ್ಲಿ ಭೀತಿಯುಂಟುಮಾಡಿತ್ತು. ಆದರೆ, ತನಗೆ ಆದ ಸ್ವಪ್ನ ವನ್ನು ಆದಷ್ಟು ಗೋಪ್ಯವಾಗಿಟ್ಟುಕೊಂಡು ದುರ್ಗರಕ್ಷಕನಾದ ರಣರಾಗ ನೊಡನೆ ಆಲೋಚಿಸಿ ತಿಳಿಯಬೇಕೆಂದು ನಿರ್ಧರಿಸಿದನು. ಹಾಗೆ ಮಾಡ ಬೇಕೆಂದರೆ ಮಕ್ಕಳು ಮೂವರನ್ನೂ ಹೊರಗಡೆ ವಿಹಾರಕ್ಕೆ ಕಳುಹಿಸಿಕೊಡದ ಹೊರತು ಸಾಧ್ಯವಲ್ಲ. ಲಲಿತಪ್ರಭೆಯಂತೂ ಯಾವಾಗಲೂ ತಂದೆಯ ಸಮೀಪದಲ್ಲಿಯೇ ಇರುತ್ತಿದ್ದಳು.

ಸಭಾಮಂದಿರದಲ್ಲಿ ಚಂದ್ರಸೇನ, ವೀರಧವಳ ಮತ್ತು ಲಲಿತಪ್ರಭೆ ಇವರುಗಳು ಮುಂದಾಗಿಯೇ ಬಂದು ಕುಳಿತಿದ್ದರು. ಬಾಗಿಲು ತೆರೆದು ಸತ್ಯಾಶ್ರಯನು ಒಳಗೆ ಪ್ರವೇಶಿಸಿದನು. ಅನ್ನದಾತನನ್ನು ಕಂಡು ಎದ್ದು ನಿಂತು ನಮಸ್ಕರಿಸಿದನು ವೀರಧವಳ. ಸತ್ಯಾಶ್ರಯನು ವೀರಧವಳನನ್ನು ಕುಳಿತುಕೊಳ್ಳುವಂತೆ ಹೇಳಿದನು. ಲಲಿತಪ್ರಭೆ ತಂದೆಯ ಪಕ್ಕದಲ್ಲಿ ಕುಳಿತಳು.

ಸತ್ಯಾಶ್ರಯ—ಮಗು ಲಲಿತ, ಈ ದುರ್ಗದಲ್ಲಿ ನೀನು ಕಾಲವನ್ನು ಬಹಳ ಸಂತೋಷದಿಂದ ಕಳೆಯುತ್ತಿರುವೆಯಲ್ಲವೇ ? ನಿಮ್ಮಂಥ ಪ್ರಾಯಸಮರ್ಥರಿಗೆ ಹೀಗೆ ಸ್ಥಳ ಬದಲಾವಣೆ ಒಳ್ಳೆಯದೆ. ನಾನೂ ಸಹ ಲಲಿತ ದುರ್ಗದಿಂದ ಬಂದ ಮೇಲೆ ಬಹಳ ಸಂತೋಷದಿಂದಿದ್ದೇನೆ. ನಾವು ಈ ದುರ್ಗದ ವಿಷಯ ದಲ್ಲಿ ಕೇಳಿರುವ ವಿಚಾರಗಳಲ್ಲಿ ಸಹಜವೆಂದೇ ಹೇಳಬೇಕು. ಎಂಥ ವಸ್ತು ಸಂಗ್ರಹಶಾಲೆ ! ಏನು ಚಾತುರ್ಯ ! ಇದಕ್ಕಿಂತ ಬೇರೆ ಸಾಕ್ಷಿಯುಂಟೆ !

ಸತ್ಯಾಶ್ರಯನ ಮಾತಿನಲ್ಲಿ ದ್ವಂದ್ವಾರ್ಥವಿರುವುದೆಂದು ಅವರಿಗೆ ಹೇಗೆ ತಿಳಿದೀತು !

ವೀರಧವಳ—ಈ ದುರ್ಗಾಧಿಪತಿ ವಿದ್ವಾಂಸನಾಗಿದ್ದಿರಬೇಕು.

ಸತ್ಯಾಶ್ರಯ—ನಿಜ. ಸಂದೇಹವಿಲ್ಲ. ಆದರೆ (ಲಲಿತಪ್ರಭೆಯನ್ನು ಕುರಿತು) ಬಾಲೆ, ನೀನು ಇಲ್ಲಿಗೆ ಬಂದ ಮೇಲೆ ಈ ದುರ್ಗದ ಪೂರ್ವಭಾಗದಲ್ಲಿರುವ ಮನಮೋಹಕವಾದ ವನಸೌಂದರ್ಯವನ್ನು ನೋಡಿಲ್ಲವೆಂದು ತೋರುತ್ತದೆ.

ಚಂದ್ರಸೇನ—ಈ ದಿನ ನಾವೆಲ್ಲರೂ ಆ ಕಡೆ ಹೋಗಬೇಕೆಂದು ಯೋಚಿಸಿದ್ದೇವೆ. ತಂದೆ, ನೀವೂ ಸಹ ನಮ್ಮೊಡನೆ ಬರುತ್ತೀರಾ !

ಸತ್ಯಾ—ಇಲ್ಲ ಸಾಧ್ಯವಿಲ್ಲ. ರಾಜಧಾನಿಗೆ ಬರೆದಿದ್ದ ಕಾಗದಕ್ಕೆ ಈ ದಿನ ಉತ್ತರ ಬರುವುದೆಂಬ ನಿರೀಕ್ಷಣೆ ಇದೆ. ಅಲ್ಲದೆ, ಮಾಣಿಕ್ಯ ದುರ್ಗಾಧಿಪತಿಯಾದ ಸರದಾರ ವಿಶ್ವಜಿತ್ ಅವರು ಈ ದಿನವೇ ನನ್ನನ್ನು ನೋಡಲು ಬರುವರೆಂಬ ನಿರೀಕ್ಷಣೆಯೂ ಉಂಟು. ನನಗಾಗಿ ನಿಮ್ಮ ಕಾರ್ಯಕ್ರಮ ಬಿಡಬೇಕಾಗಿಲ್ಲ. ನೀವು ತಂಪುಹೊತ್ತಿನಲ್ಲಿ ಹೋಗಿಬನ್ನಿ. (ಲಲಿತಪ್ರಭೆಯನ್ನು ಕುರಿತು) ಮಗು, ನೀನೂ ಸಹ ಹೋಗು. ಸೃಷ್ಟಿಸೌಂದರ್ಯವನ್ನು ನೋಡಿ ಬಾ.

ಮಧ್ಯಾಹ್ನ ಕಳೆದ ಮೇಲೆ ಚಂದ್ರಸೇನ, ವೀರಧವಳ ಮತ್ತು ಲಲಿತಪ್ರಭೆ ಇವರುಗಳು ಪೂರ್ವ ಪ್ರದೇಶದ ಬೆಟ್ಟಗಳ ಕಡೆ ನಡೆದರು. ಶಸ್ತ್ರಸಜ್ಜಿತರಾದ ಇಬ್ಬರು ಅಂಗರಕ್ಷಕರು ಜೊತೆಯಲ್ಲಿದ್ದರು. ಸ್ವಲ್ಪ ಹೊತ್ತಿನಲ್ಲಿ ಅವರು ಬೆಟ್ಟಗುಟ್ಟಗಳನ್ನು ದಾಟಿ ನಿಬಿಡವಾದ ಅರಣ್ಯ ಪ್ರದೇಶವನ್ನು ಹೊಕ್ಕರು. ಅರಣ್ಯ ಮೃಗಗಳು ಇವರ ಮುಂದೆ ಸುಳಿದು ಓಡಾಡುತ್ತಿದ್ದವು. ವ್ಯಾಧಶಿಖಾಮಣಿಯಾದ ಚಂದ್ರಸೇನನಿಗೆ ಈ ಕಾಡುಪ್ರಾಣಿಗಳ ದರ್ಶನದಿಂದ ಆರಾಮವಿಹಾರ ಮರೆತುಹೋಯಿತು. ಮೃಗಯಾವಿಹಾರದ ಚಿಂತೆ ಮನವನ್ನು ಆವರಿಸಿತು. ಕೂಡಲೇ ವೀರಧವಳನನ್ನು ಕುರಿತು "ಧವಳ, ಈ ಪೊದೆಯಲ್ಲಿರುವ ಮೃಗಗಳನ್ನು ನೋಡಿ ಬರುತ್ತೇನೆ. ನೀನು ಲಲಿತಪ್ರಭೆಯ ಜತೆಯಲ್ಲಿ ಬರುತ್ತಿರು. ಅಲ್ಲಿ ಸೇರುವ ಮುಂದಿನ ರಸ್ತೆಯಲ್ಲಿ ನಿಮ್ಮನ್ನು ಸಂಧಿಸುತ್ತೇನೆ." ಎಂದು ಹೇಳುತ್ತ ಅಂಗರಕ್ಷಕರನ್ನೂ ಕರೆದುಕೊಂಡು ಬೇಟೆಯ ಅಮಲಿನಲ್ಲಿ ಹೊರಟೇಹೋದನು.

ಇನ್ನು ಲಲಿತಪ್ರಭೆ ಮತ್ತು ವೀರಧವಳ! ಚಿಕ್ಕಂದಿನಲ್ಲಿ ಜೊತೆಯಲ್ಲಿ ಆಡಿದವರು. ಆಗಿನ ಅರಳುಮರುಳು ಮಾತು, ಆಗಿನ ಅರಳುಮರುಳು ಆಟ ಇಂದು ಸಾಧ್ಯವಲ್ಲ. ಪ್ರಾಪ್ತವಯಸ್ಕರಲ್ಲವೇ ಅವರು! ಪ್ರಾಪ್ತ ವಯಸ್ಕರಾದ ಮೇಲೆ ಅವರು ಜೊತೆಗೂಡುವಂತಿರಲಿಲ್ಲ. ಈಗ ಅವರು ಆಕಸ್ಮಿಕ ಘಟನೆಯಿಂದ ಜೊತೆ ಸೇರಿದರು. ದೈವಲೀಲೆಯಿರಬಹುದು ಅಥವಾ ಮಾನವನ ಮರ್ಮವಿರಬಹುದು! ಅಂತು ಆ ದಿನದ ಬೇಟೆದಿಂದ ಉಭಯತ್ರರ ಜೀವನದಲ್ಲಿ ಪ್ರಬಲಪರಿಣಾಮ ಉಂಟಾಗಬೇಕು. ವೀರಧವಳನ ಕಣ್ಣಿಗೆ ಲಲಿತಪ್ರಭೆಯ ವಿಶಾಲ ನೇತ್ರಗಳಲ್ಲಿ ಏನೋ ವಿಶೇಷ ತೋರಿತು. ಲಲಿತಪ್ರಭೆಯ ಮನಸ್ಸಿಗೆ ವೀರಧವಳನ ವೀರವಚನಗಳಲ್ಲಿ ಏನೋ ವಿಶೇಷ ತಿಳಿಯಿತು.

ಲಲಿತಪ್ರಭೆ ತನ್ನ ಅಣ್ಣನ ಹಠ ಮತ್ತು ಬೇಟೆಯ ಹುಚ್ಚು ಇವುಗಳನ್ನು ಪ್ರಸ್ತಾವಿಸಿ, ವೀರಧವಳನು ಅಣ್ಣನ ಜೊತೆಯಲ್ಲಿ ಹೋಗದೆ ಹಿಂದೆ ನಿಂತುದೇ ಕೆಂದು ಕೇಳಿದಳು. ಆಗಿನ ಪರಿಸ್ಥಿತಿಯಲ್ಲಿ ಆಕೆಯೊಬ್ಬಳನ್ನೇ ಕಾಡಿನಲ್ಲಿ ಬಿಟ್ಟುಹೋಗಲು ಸಾಧ್ಯವಲ್ಲದಿದ್ದರೂ ಲಲಿತಪ್ರಭೆಯ ಆ ಮಾತಿನಲ್ಲಿ ಅರ್ಥ ವಿತ್ತು. ಅರ್ಥಗರ್ಭಿತವಾದ ಆಕೆಯ ಮಾತಿಗೆ ತಕ್ಕಂತೆ ವೀರಧವಳನೂ ಸಹ ತಾನು ಆಕೆಯ ಜೊತೆಯಲ್ಲಿರುವುದರಿಂದ ಆಕೆಗೆ ತೊಂದರೆಯೇನೆಂದು ಕೇಳಿ ದನು. ವೀರಧವಳನು ಹೀಗೆ ಇಲ್ಲದುದೊಂದು ತೊಂದರೆಯ ಮಾತನ್ನು ಎತ್ತಿ ದುದರಲ್ಲಿಯೂ ಒಂದು ಅರ್ಥವಿತ್ತು. ಅಲ್ಲಿಗೆ ಪ್ರಣಯದ ಮೊದಲನೆಯ ಪ್ರಕರಣ ಮುಗಿಯಿತು. ಪ್ರಶ್ನೆಗೊಂದು ಪ್ರಶ್ನೆ ಆಯಿತು. ಇನ್ನು ಎರಡ ನೆಯ ಪ್ರಕರಣ ಸಿಡುಕು!

ಲಲಿತಪ್ರಭೆ—ಏನಿದು ವೀರ, ಈ ವಿಚಿತ್ರವಾದ ಮಾತು! ನಾನು ಎಂದಾದರೂ ನಿನ್ನಿಂದ ತೊಂದರೆಯೆಂದು ಹೇಳಿರುವೆನೆ? ಈ ದಿನ ಏಕೆ ಈ ವಿಚಿತ್ರ!

ವೀರಧವಳ—ಹೌದು, ಇದುವರೆಗೂ ಇದ್ದ ಕಾಲಕ್ಕೂ ಮುಂದೆ ಬರುವ ಕಾಲಕ್ಕೂ ವ್ಯತ್ಯಾಸವಿದೆ. ಸದಾ ಕಾಲವೂ ಒಂದೇ ರೀತಿಯಲ್ಲಿರುವುದು ಹೇಗೆ?

ಲಲಿತ—ವೀರ, ಏನು ಮಾತನಾಡುತ್ತಿರುವೆ ? ನಿನ್ನ ಮಾತಿನ ಅರ್ಥವೇನು ?

ವೀರ—ಹೋಗಲಿ, ಬಿಡು. ಆ ವಿಷಯ ನಿನಗೆ ಗೊತ್ತಾಗದೆ ಇರುವುದು ಒಳ್ಳೆಯದು.

ಲಲಿತ—ವೀರ, ನನಗೆ ಗೊತ್ತಾಗಬಾರದ ವಿಷಯವಾದರೂ ಯಾವುದು ?

ಬಹಳ ಹೊತ್ತು ವೀರಧವಳ ಮಾತಾಡಲಿಲ್ಲ. ನೆಲವನ್ನು ನೋಡುತ್ತ ಹೆಜ್ಜೆಯಿಡುತ್ತಿದ್ದನು. ಸಿಡುಕಿಗೆ ಸಿಡುಕಿನ ಮುಯ್ಯಿ ತೀರಿತು. ಇನ್ನುಳಿದಿರುವುದು ಸಿಡುಕಿನಲ್ಲಿ ಒಡಕು. ಇದೀಗ ಪ್ರಣಯದ ಮೂರನೆಯ ಪ್ರಕರಣ. ಆ ಒಡಕಿನಿಂದ ಉದ್ಭವಿಸುವುದೇ ಮರುಕ. ಬಹಳ ಹೊತ್ತು ವೀರಧವಳ ಮಾತನಾಡಲಿಲ್ಲ. ನೆಲವನ್ನು ನೋಡುತ್ತ ಹೆಜ್ಜೆಯಿಡುತ್ತಿದ್ದನು. ಲಲಿತ ಪ್ರಭೆಯ ಸಿಡುಕು ಒಡೆಯಿತು. ಆಕೆ ಮರುಕದಿಂದ " ವೀರಧವಳ, ನನ್ನ ಮಾತಿನಿಂದ ನಿನಗೆ ಕೋಪ ಬಂತೆ ? " ಎಂದು ಹೇಳುತ್ತ ವೀರಧವಳನ ತೋಳನ್ನು ಹಿಡಿದುಕೊಂಡಳು. ಆಕೆಯ ಸ್ಪರ್ಶವಾದ ಕೂಡಲೆ ವೀರಧವಳನಿಗೆ ರೋಮಾಂಚವಾಯಿತು. ಆದರೆ, ಆಕೆಯ ಮರುಕಕ್ಕೆ ತನ್ನ ಮರುಕವನ್ನು ಸೇರಿಸಿ ಈ ರೀತಿ ನುಡಿದನು. " ಕೋಪ ಯಾತಕ್ಕೆ ಪ್ರಭೆ. ಛೀ, ಕೋಪಕ್ಕೆ ಅವಕಾಶವೇ ಇಲ್ಲ. ಏಕೆಂದರೆ, ನಾನೊಬ್ಬ ಅನಾಥ. ನಿನ್ನ ತಂದೆಯ ಔದಾರ್ಯದಿಂದ ಬೆಳೆದವನು. ನನಗೇಕೆ ಕೋಪ. ನಿನ್ನ ಮೇಲೆ ನನ್ನ ಅಧಿಕಾರವೇನಿದೆ ? "

ಲಲಿತ—ವೀರ, ಈ ದಿನ ಏನಿದು ಹೊಸ ಮಾತು ! ಸ್ವಲ್ಪ ಶಾಂತನಾಗು, ನಿನ್ನ ಮನಸ್ಸಿನಲ್ಲಿರುವ ಯೋಚನೆಯನ್ನು ಮರೆಮಾಚದೆ ಹೇಳು ನನಗೆ. ನೀನು ನನಗೆ ಬೇಕಾದ ಬಂಧುವಲ್ಲವೇ !

ವೀರ—ಅಲ್ಲ. ನಾನು ನಿನ್ನ ಸಮೀಪ ಬಂಧುವಲ್ಲ. ನಿಜವಾಗಿಯೂ ನಾನು ನಿನ್ನ ಅಣ್ಣನಾಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ನೀನು ಒಬ್ಬ

ಸರದಾರ ಕನ್ಯೆ, ನಾನು ಒಬ್ಬ ಪರದೇಶಿ. ಇನ್ನು ಕೆಲವು ದಿನಗಳಲ್ಲಿ ನಿನ್ನ ಈಗಿನ ಸ್ಥಿತಿ ಬದಲಾಯಿಸುವಂತಿದೆ. ನಿನ್ನ ತಂದೆ ನಿನ್ನನ್ನು ಯಾರಿಗಾದರೂ ವಿವಾಹ ಮಾಡಬೇಕಾದ ಕಾಲ ಬಂದಿದೆ ಲಲಿತಪ್ರಭೆ...........

ಮುಂದಿನ ಮಾತು ಉಚ್ಚರಿಸಲು ಸಾಧ್ಯವಾಗಲಿಲ್ಲ. ವೀರಧವಳನಿಗೆ ಬಾಯಿ ಒಣಗಿತು. ಆದರೆ, ಮರುಕಕ್ಕೆ ಮರುಕ ಸೇರಿತ್ತು. ಪ್ರಣಯದ ಮೂರನೆಯ ಪ್ರಕರಣ ಮುಗಿದಿತ್ತು. ಇನ್ನು ನಾಲ್ಕನೆಯ ಪ್ರಕರಣ ಪ್ರಾರಂಭ. ಮೋಹ! ಲಲಿತಪ್ರಭೆಯ ಮೋಹವಾದರೂ ತ್ಯಾಗದ ಮೋಹ ; ಸ್ವಾರ್ಥದ ಮೋಹವಲ್ಲ. ತ್ಯಾಗದ ಮೋಹದಲ್ಲಿ ದೈವತ್ವವಿದೆ. ಸ್ವಾರ್ಥದ ಮೋಹದಲ್ಲಿ ದಾಸತ್ವವಿದೆ! ಆತ್ಮಸಮರ್ಪಣೆ ತ್ಯಾಗದ ಮೋಹದ ಗುರಿ. ದೇಹ ಸಮರ್ಪಣೆ ಸ್ವಾರ್ಥದ ಮೋಹದ ಗುರಿ. ತ್ಯಾಗದ ಮೋಹಕ್ಕೆ ಗುಣ ಬೇಕು. ಸ್ವಾರ್ಥದ ಮೋಹಕ್ಕೆ ಹಣ ಬೇಕು. ವೀರಧವಳನ ಗುಣಕ್ಕೆ ಆತ್ಮಸಮರ್ಪಣೆ ಮಾಡಿದಳು ಲಲಿತಪ್ರಭೆ !

ಲಲಿತಪ್ರಭೆಗೆ ವೀರಧವಳನ ಮುಖವನ್ನು ನೋಡಲು ಧೈರ್ಯ ಬರಲಿಲ್ಲ. ಅವಳು ಭೂಮಿಯನ್ನು ನೋಡುತ್ತ ಸ್ತಬ್ಧಳಾಗಿ ನಿಂತಿದ್ದಳು. ಹೀಗೆ ಬಹಳ ಹೊತ್ತು ಸ್ಥಿರದೃಷ್ಟಿಯಿಂದ ತನ್ನ ಹತ್ತಿರ ನಿಂತಿದ್ದ ಪ್ರೇಮಮಯ ಮೂರ್ತಿಯಾದ ಲಲಿತಪ್ರಭೆಯನ್ನು ನೋಡಿ ವೀರಧವಳನು ಗಂಭೀರ ಭಾವದಿಂದ ಈ ರೀತಿ ನುಡಿದನು. “ಲಲಿತಪ್ರಭೆ, ದಿನಗಳು ಕಳೆದ ಹಾಗೆಲ್ಲ ನಾನು ನಿಮ್ಮ ಮನೆಯಲ್ಲಿರುವುದು ಬಹಳ ಕಠಿಣವಾಗಿದೆ. ಇಲ್ಲಿ ಇರುವುದಕ್ಕಿಂತ ಬೇರೆ ಎಲ್ಲಿಗಾದರೂ ಹೋಗಿಬಿಡಬೇಕೆಂದು ನೆನಸುತ್ತೇನೆ. ಆದರೆ, ನಿನ್ನ ತಂದೆಗೆ ಅಥವಾ ನನ್ನ ಅನ್ನದಾತನಿಗೆ ಒದಗಿರುವ ಕಷ್ಟ ದೊಡ್ಡದು. ಈ ಸಮಯದಲ್ಲಿ ಅವರನ್ನು ಬಿಟ್ಟು ಹೋಗುವುದಾದರೆ ನನ್ನನ್ನು ಕೃತಘ್ನನೆಂದು ಜನರು ನಿಂದಿಸುವರು. ಆದರೆ ;

ಲಲಿತ—ವೀರ, ನಿನ್ನನ್ನು ತಂದೆ ದತ್ತುಪುತ್ರನೆಂದು ತಿಳಿದಿದ್ದಾರೆ.

ವೀರ—ಅಲ್ಲ, ನಾನು ಮಹಾರಾಜರ ದತ್ತುಪುತ್ರನಲ್ಲ. ನಾನು ಸಿಕ್ಕಿದ ದಿನದಿಂದ ಅವರಿಗೆ ಸುಖ, ಸಂಪತ್ತು, ಸಂತತಿ ಮುಂತಾದ ಸಕಲ ಸೌಭಾಗ್ಯ

ಗಳೂ ಉಂಟಾದುದರಿಂದ ಅವರು ನನ್ನನ್ನು ಪುತ್ರನಂತೆ ಸಾಕಿ ಸಲಹಿದರು. ನಾನು ಸಿಕ್ಕಿದ ದೆಸೆಯಿಂದ ಚಂದ್ರಸೇನನು ಹುಟ್ಟಿದನೆಂದು ನಿಮ್ಮ ತಾಯಿಯೂ ತಿಳಿದಿದ್ದರು. ಅದಕ್ಕಾಗಿ ನನ್ನನ್ನು ಅವರ ಪ್ರಾಣದೋಪಾದಿಯಲ್ಲಿ ಪ್ರೀತಿ ಸುತ್ತಿದ್ದರು. ಇಷ್ಟೊಂದು ಉಪಕಾರ ಮಾಡಿದವರನ್ನು ನನ್ನ ಸ್ವಂತ ಸುಖ ಕ್ಕಾಗಿ ಮರೆಯುವುದು ತರವಲ್ಲ. ಇಲ್ಲಿ ಸುಖವಿಲ್ಲವೆಂದು - ಸುಖವಿಲ್ಲ ವೆಂದು - ನಿಮ್ಮ ತಂದೆಗೆ ತಿಳಿಸಿಬಿಡುತ್ತೇನೆ. ನನ್ನ ಶಕ್ತಿಸಾಹಸಗಳು ಇರುವ ವರೆಗೆ ಬೇರೆ ಎಲ್ಲಿಯಾದರೂ ಬಾಳನ್ನು ಕಳೆಯುತ್ತೇನೆ.

ವೀರಧವಳನ ಈ ಮಾತು ಲಲಿತಪ್ರಭೆಯ ಮರುಕವನ್ನು ಮತ್ತಷ್ಟು ಉಕ್ಕಿಸಿತು. " ವೀರ, ಇಂದೋ ನಾಳೆಯೋ, ಅಥವಾ ಇನ್ನೊಂದು ದಿನವೋ ನೀನು ನಿನ್ನ ಪ್ರೀತಿಯ ಜನರನ್ನು ಬಿಟ್ಟು ಹೋಗಲು ಸಿದ್ಧನಾ ಗಿರುವೆಯಲ್ಲವೇ ? ಕೊನೆಗೆ ನೀನು ನನ್ನನ್ನೂ ಬಿಟ್ಟು ಹೋಗುವೆಯಾ ? " ಎಂದು ಲಲಿತಪ್ರಭೆ ಕಂಬನಿಗರೆದಳು. ವೀರಧವಳನಿಗೆ ಆಕೆಯ ದುಃಖವನ್ನು ಕಂಡು ಆಶ್ಚರ್ಯವುಂಟಾಯಿತು. " ಲಲಿತ, ನಿನ್ನನ್ನು ಬಿಟ್ಟು ಹೋಗುವು ದಾದರೂ ಹೇಗೆ? ಅಳಬೇಡ. ನಾನು ಇರಬೇಕೆಂದು ನಿನಗೆ ನಿಜವಾಗಿಯೂ ಇಷ್ಟವಿದೆಯೇ ? " ಎಂದು ಕೇಳಿದನು. ಆ ಮಾತು ಲಲಿತಪ್ರಭೆಯ ಹೃದಯವನ್ನು ಹೊಕ್ಕಿತು. " ಹೌದು. " ಎಂದಳು ಲಲಿತಪ್ರಭೆ !

ವೀರಧವಳನು ವಿನಯದಿಂದ ತಲೆಬಾಗಿ ನಿಂತನು. ಆದರೆ, ಮತ್ತೊಂದು ಸಲ ಆಕೆಯ ಅಂತರಂಗವನ್ನು ಶೋಧಿಸಬೇಕೆಂದು ಬಗೆದು " ಪ್ರಭೆ, ನಿನ್ನ ಸಣ್ಣ ಇಚ್ಛೆ ಏನೇ ಇರಲಿ, ಅದನ್ನು ಪೂರ್ತಿ ಮಾಡುವುದು ನನಗೊಂದು ಸಂತೋಷ. ನಿನ್ನ ಮನಸ್ಸಿನಲ್ಲಿ ನಾನು ಇಲ್ಲಿಯೇ ಇರಬೇಕೆಂಬ ಆಸೆ ಇದೆ. ದಿಟ. ಆದರೆ, ಅದರಿಂದ ನನಗೆ ನಿಜವಾಗಿಯೂ ಸಂತೋಷವಾಗಲಾರದು. ಏಕೆಂದರೆ, ಇನ್ನು ಕೆಲವು ದಿನಗಳಲ್ಲಿ ಇನ್ನೊಬ್ಬರಿಗೆ ನಿನ್ನನ್ನು ಕೊಟ್ಟು ವಿವಾಹವಾದರೆ, ನನ್ನ ಗತಿ ಏನು ! " ಎಂದು ಸೂಚಿಸಿದನು. ಲಲಿತಪ್ರಭೆ ಗಂತೂ ಈ ಮಾತು ಬೇಕಾಗಿರಲಿಲ್ಲ. ಆಕೆಯ ಮನಸ್ಸು ವೀರಧವಳನ ಹೃದಯದಲ್ಲಿ ಶೃಂಗಾರದಿಂದ ಸೇರಿಹೋಗಿತ್ತು ! ಆದರೆ, ಸ್ತ್ರೀ ಸಹಜವಾದ ಲಜ್ಜೆ ಆಕೆಯ ಮನಸ್ಸಿಗೆ ಮರೆಯಾಗಿ ನಿಂತಿತ್ತು. ವೀರಧವಳನ ಸರಳ

ಸ್ವಭಾವವನ್ನು ತಿಳಿದು ಆಕೆ "ವೀರ, ನನ್ನ ಮಾತಿನ ಅರ್ಥ ಇದು ವರೆಗೂ ನಿನ್ನ ಸರಳ ಮನಸ್ಸಿಗೆ ತಿಳಿಯಲಿಲ್ಲ. ಇದೇನು ನನ್ನನ್ನು ಪರೀಕ್ಷೆ ಮಾಡುತ್ತಿರುವೆಯಾ!" ಎಂದು ಮಾತನ್ನು ಮುಗಿಸಿದಳು.

ವೀರಧವಳನಿಗೆ ಎದೆ ಬಡಿದುಕೊಳ್ಳಲಾರಂಭಿಸಿತು. "ಪ್ರಭೆ, ನಿನ್ನ ಅಂತಃಕರಣದಲ್ಲಿ ಈ ವೀರಧವಳನ ಮೇಲೆ ಪ್ರೇಮವಿದೆಯೇ" ಎಂದು ಉತ್ಸಾಹದಿಂದ ಕೇಳಿದನು. "ಪ್ರೇಮ, ಇನ್ನೂ ಸಂಶಯವೇ!" ಎಂದಳು ಲಲಿತಪ್ರಭೆ. ಈ ಮಾತು ವೀಣಾನಾದದಂತೆ ವೀರಧವಳನ ಕರ್ಣಗಳಲ್ಲಿ ಮಿಡಿಯಿತು. ವೀರಧವಳನು ಆನಂದದಿಂದ ಹಿಗ್ಗಿದನು.

ಪ್ರಶ್ನೆಯಿಂದ ಸಿಡುಕಿಗೆ, ಸಿಡುಕಿನಿಂದ ಮರುಕಕ್ಕೆ, ಮರುಕದಿಂದ ಮೋಹಕ್ಕೆ ಬಹಳ ದೂರ! ಆದರೆ ಮೋಹದಿಂದ ಶೋಕಕ್ಕೆ ಅಷ್ಟು ದೂರವಲ್ಲ. ಪ್ರಣಯದ ಐದನೆಯ ಕೊನೆಯ ಪ್ರಕರಣವೇ ಶೋಕ. ಚಂದ್ರಸೇನನು ಒಂದು ಮರದ ಹಿಂದೆ ನಿಂತು ಇವರಿಬ್ಬರ ಸಂಭಾಷಣೆಯನ್ನೂ ಬಹಳ ಹೊತ್ತಿನಿಂದ ಕೇಳುತ್ತಿದ್ದನು. ಅಳತೆ ಮೀರಿದ ಅವರ ಮಾತನ್ನು ಕೇಳಿ ಆತನ ಮನಸ್ಸಿನಲ್ಲಿ ಮೊಳೆಯಿತು ಮಾತ್ಸರ್ಯ! ಚಂದ್ರಸೇನನಿಗೆ ಮಾತ್ಸರ್ಯ ವಾದರೂ ಏಕೆ? ಆಕೆ ತನ್ನ ತಂಗಿಯಲ್ಲವೇ? ವೀರಧವಳನು ತನ್ನ ತಂಗಿಗೆ ಅನುಕೂಲನಾದ ವರನಲ್ಲವೇ? ಗುಣಕ್ಕೆ ಮಾತ್ಸರ್ಯವೆಲ್ಲಿಯದು! ಆದರೆ, ಮಾತ್ಸರ್ಯವೆಂಬುದು ಮಾನವನನ್ನು ಆಳುತ್ತಿರುವ ಹೀನ ಗುಣಗಳಲ್ಲೆಲ್ಲ ಅತ್ಯಂತ ಹೀನವಾದುದು. ಎಲ್ಲರ ಮಾಧುರ್ಯದಲ್ಲಿ ಮಾತ್ಸರ್ಯವನ್ನೂ ತನ್ನ ಮಾತ್ಸರ್ಯದಲ್ಲಿ ಮಾಧುರ್ಯವನ್ನೂ ಕಾಣುವ ಮಾನವನಿಗೆ ಸ್ವರ್ಗವೇ ನರಕ, ನರಕವೇ ಸ್ವರ್ಗ. ಅಂತು, ಚಂದ್ರಸೇನನು ಮಾತ್ಸರ್ಯದ ಮುದ್ದೆ ಯಾದನು.

ಗಿಡಗಳ ನಡುವೆ ಸದ್ದಾದುದನ್ನು ತಿಳಿದು ಪ್ರಣಯಿಗಳೀರ್ವರೂ ತಮ್ಮ ಪ್ರೇಮಬಂಧನವನ್ನು ಬಿಟ್ಟು ಅಗಲಿದರು. ಚಂದ್ರಸೇನನು ಸ್ವಲ್ಪ ಹೊತ್ತಿ ನಲ್ಲಿ ಅಲ್ಲಿಗೆ ಬಂದನು. "ಚಂದ್ರಸೇನ, ಬೇಟೆ ಸಿಕ್ಕಿತೆ?" ಎಂದು ವೀರ ಧವಳನು ಕೇಳಿದನು.

ಚಂದ್ರ—ಬೇಟೆಯೂ ಇಲ್ಲ. ಬೇಟವೂ ಇಲ್ಲ. ಎಲ್ಲ ಕೈತಪ್ಪಿ ಹೋದುವು. ಆದರೆ, ಮನಸ್ಸಿಗೆ ಉದ್ವೇಗವನ್ನುಂಟುಮಾಡುವ ಆ ಸ್ಫಟಿಕ ಸ್ತಂಭವನ್ನು ನೋಡಿದೆನು.

ವೀರ—ಏನು ? ವೀರ ಕೀರ್ತಿವರ್ಮನು ವಸುಮತಿ ದೇವಿಯ ಸಮೇತ ಅಮಾನುಷ ರೀತಿಯಲ್ಲಿ ಕೊಲೆಯಾದ ಸ್ಥಳದಲ್ಲಿ ಕಟ್ಟಿರುವ ಸ್ಫಟಿಕ ಸ್ತಂಭವೆ !

ಈ ಮಾತು ಮುಗಿಯುವುದರೊಳಗಾಗಿ ಒಂದು ಪೊದೆಯ ಮಧ್ಯ ದಿಂದ ದನಿ ಕೇಳಿಸಿತು. “ ಇದುವರೆಗೆ ಆ ಘೋರಕೊಲೆಗೆ ತಕ್ಕ ಪ್ರತೀ ಕಾರವನ್ನು ಯಾರೂ ಮಾಡಿಲ್ಲ ” ಎಂದಿತು ಆ ದನಿ. ಇದೇನಿರಬಹುದೆಂದು ಸುತ್ತಲೂ ನೋಡುತ್ತಿರುವ ಸಮಯಕ್ಕೆ ಸರಿಯಾಗಿ ಜೀರ್ಣವಸ್ತ್ರಗಳನ್ನುಟ್ಟ, ಕೆಧರಿಂದ ಕೂದಲಿನಿಂದ ಕೂಡಿದ ಒಬ್ಬ ವೃದ್ಧ ವನಚರಿಯು ಕೈಯಲ್ಲಿ ಒಂದು ರೆಂಬೆಯನ್ನು ಹಿಡಿದು ಆ ಪೊದೆಯಿಂದ ಹೊರಟಳು. ಲಲಿತಪ್ರಭೆಗೆ ಆಕೆಯ ವಿಕೃತರೂಪನ್ನು ನೋಡಿ ಭಯವಾಯಿತು. ವೀರಧವಳನ ಕಡೆ ನೋಡಿದಳು.

“ಲಲಿತಪ್ರಭೆ, ಭಯಪಡಬೇಡ. ಈಕೆಯು ತೊಂದರೆ ಕೊಡತಕ್ಕ ಸ್ತ್ರೀ ಯಲ್ಲ. ಚಂದ್ರಸೇನನೂ ನಾನೂ ನಿನ್ನೆ ಈಕೆಯನ್ನು ಈ ಕಾಡಿನಲ್ಲಿ ನೋಡಿದ್ದೆವು.” ಎಂದು ಕಿವಿಯಲ್ಲಿ ಹೇಳಿದನು ವೀರಧವಳ. ಚಂದ್ರಸೇನನಿಗೆ ಇದನ್ನು ಕಂಡು ತಂಗಿಯ ಮೇಲೆ ಆಕ್ರೋಶ ಹುಟ್ಟಿತು. ತಾನು ಹತ್ತಿರ ವಿದ್ದರೂ ಆಕೆ ವೀರಧವಳನ ಕಡೆ ನೋಡಿದುದು ಆತನಿಗೆ ಚುಚ್ಚಿದಂತಾ ಯಿತು. ತನ್ನ ಮನಸ್ಸಿನ ಭಾವವನ್ನು ಹಾಗೆಯೇ ಮುಚ್ಚಿಕೊಂಡು, ವೃದ್ಧ ವನಚರಿಯ ಕಡೆಗೆ ತಿರುಗಿ “ ಹೇ ಪೀಡೆ, ನಿನ್ನೆ ಆತನು ಕೊಂದ ಬೇಟೆಯ ಮೃಗವನ್ನು ತೆಗೆದುಕೊಂಡೆ. ಈ ದಿನ ನಾನು ತಂದ ಸತ್ತ ಹೆಣವನ್ನು ತೆಗೆದುಕೊ. ಹಿಡಿ. “ ಎಂದು ತಿರಸ್ಕಾರ ಭಾವದಿಂದ ಒಂದು ಸತ್ತ ಮೃಗ ವನ್ನು ಆಕೆಯ ಮುಂದಕ್ಕೆ ಎಸೆದನು. ಆ ವೃದ್ಧ ಸ್ತ್ರೀ ಚಂದ್ರಸೇನನ ತಿರಸ್ಕಾರ ಭಾವವನ್ನು ಗಮನಿಸದೆ, ತಾಯಿಯಂತೆ ಅಕ್ಕರೆಯಿಂದ ಆತನನ್ನು ನೋಡಿ, “ ಕುಮಾರ, ಈ ದಿನ ಮೃಗ ಬೇಕಿಲ್ಲ. ನಿನ್ನೆ ಕೊಟ್ಟ ಮೃಗ

ಈಗಲೂ ನನ್ನ ಗುಹೆಯಲ್ಲಿಯೇ ಇದೆ. (ಲಲಿತಪ್ರಭೆಯ ಕಡೆ ರೆಂಬೆಯನ್ನು ಚಾಚಿ) ಇವಳು ಯಾರು ? " ಎಂದಳು.

ಚಂದ್ರಸೇನ—ಈಕೆ ನನ್ನ ಸಹೋದರಿ.

ವೃದ್ಧಸ್ತ್ರೀ—(ವೀರಧವಳನ ಕಡೆ ನೋಡಿ) ನಿನಗೆ ಏನಾಗಬೇಕು ಇವಳು?

ವೀರಧವಳ—ಈಕೆ ನನ್ನ ಸಹೋದರಿಯಲ್ಲ ..........ನಾನು .... ....

ಚಂದ್ರಸೇನನು ವೀರಧವಳನ ಮಾತು ಮುಂದುವರಿಯಲು ಅವಕಾಶ ಕೊಡಲಿಲ್ಲ. ವೃದ್ಧ ವನಚರಿಯನ್ನು ಕ್ರೂರ ದೃಷ್ಟಿಯಿಂದ ನೋಡುತ್ತ "ಆಕೆಯ ವಿಚಾರ ನಿನಗೆ ಯಾಕೆ ಮುದುಕಿ ! ಏನಾದರೂ ಭವಿಷ್ಯ ಹೇಳ ಬೇಕೆಂದಿರುವೆಯೇನು ? " ಎಂದು ಗದರಿಚನು.

"ಭವಿಷ್ಯ ! ಹೌದು. ಭವಿಷ್ಯವನ್ನೂ ಹೇಳುತ್ತೇನೆ ಮಗು. ಈ ವೀರತರುಣನಿಗೂ ಆ ಭಗಿನಿಗೂ ಜೊತೆ. ಪರಮೇಶ್ವರನ ಕೃಪೆಯಿಂದ ಇವರಿಗೆ ಎಲ್ಲ ಸುಖಸಂಪತ್ತುಗಳೂ ಆಗಲಿ." ಎಂದು ಹರಿಸಿದಳು ವೃದ್ಧ ವನಚರಿ. ಆಕೆಯ ಸ್ಪಷ್ಟ ವಚನಗಳನ್ನು ಕೇಳಿ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು ಚಂದ್ರಸೇನನಿಗೆ. "ಹೇ ದುಷ್ಟೆ, ಹುಚ್ಚಿಯಂತೆ ಹರಟ ಬೇಡ." ಎನ್ನುತ್ತ ಚಂದ್ರಸೇನ ಆಕೆಯನ್ನು ಹೊಡೆಯಲು ಮುಂದೆ ಬಂದನು. ಆಕೆ ಪೊದೆಯಲ್ಲಿ ಕಣ್ಮರೆಯಾದಳು. ಚಂದ್ರಸೇನನ ಮಾತ್ಸರ್ಯ, ಆಕ್ರೋಶ ಮತ್ತು ಆರ್ಭಟ ಒಂದು ಕಡೆ. ವೀರಧವಳನ ಪ್ರೇಮ, ಶಾಂತಿ ಮತ್ತು ಶೌರ್ಯ ಒಂದು ಕಡೆ. ವೃದ್ಧ ವನಚರಿಯ ಭವಿಷ್ಯ, ಸಂಧಾನ, ಚಾತುರ್ಯ ಒಂದು ಕಡೆ. ಇವುಗಳಲ್ಲಿ ಯಾವುದು ಸತ್ಯ, ಯಾವುದು ಮಿಥ್ಯ ಎಂಬುದನ್ನು ಯಾರು ಬಲ್ಲರು ? ಅಂತು, ಇಂಥ ತ್ರಿಕೋಣ ಮಂಡಲದ ನಡುವೆ ನಿಂತಳು ಸತ್ಯಾಶ್ರಯನ ಮುದ್ದು ಮಗಳು ಲಲಿತಪ್ರಭೆ ಮುಂದಿನ ಹಾನಿ ವೃದ್ಧಿಗಳಿಗೆ ಜೀವಕಳೆಯಾಗಿ !

---

# ೭. ಕೊಲೆ

## ಅವರೇ ಕೀರ್ತಿವರ್ಮ ಮಹಾರಾಜರು !

ಚಂದ್ರಸೇನ, ವೀರಧವಳ ಮತ್ತು ಲಲಿತಪ್ರಭೆ ಇವರುಗಳನ್ನು ವನ ವಿಹಾರಕ್ಕೆ ಕಳುಹಿಸಿಕೊಟ್ಟ ಮೇಲೆ ದುರ್ಗದ ಮುಖ್ಯ ರಕ್ಷಕನಾದ ರಣರಾಗ ನನ್ನು ಬರಮಾಡಿಕೊಂಡನು ಸತ್ಯಾಶ್ರಯ. ರಾಜತಂತ್ರಕ್ಕೂ ಕುತಂ ತ್ರಕ್ಕೂ ಅಂದು ಸ್ಪರ್ಧೆ! ಧರ್ಮ ಸಂಸ್ಥಾಪಕನ ರಾಜತಂತ್ರವೆಲ್ಲಿ! ದುರ್ಗ ರಕ್ಷಕನ ಕುತಂತ್ರವೆಲ್ಲಿ! ಅಂದು ಇಬ್ಬರು ಜಾಣರು ಒಂದು ಕಡೆ ಸೇರಿದರು.

ರಣರಾಗನು ಅತಿ ವಿನಯದಿಂದ ನಮಸ್ಕರಿಸಿ ಅಂಜಲಿಬದ್ಧನಾಗಿ "ಮಹಾರಾಜರು ಅಪ್ಪಣೆ ಕೊಡಿಸಿದಿರಿ, ಬಂದೆ. ಅಪ್ಪಣೆಯಾಗಬೇಕು. ಕಂಕಣಬದ್ಧನಾಗಿ ಸೇವಕನು ನಿಂತಿದ್ದಾನೆ" ಎಂದು ಹೇಳಿ ದೂರದಲ್ಲಿ ನಿಂತನು. "ಅತಿ ವಿನಯಂ ಧೂರ್ತ ಲಕ್ಷಣಂ" ಎಂಬುದನ್ನು ಅರಿಯನೆ ಸತ್ಯಾಶ್ರಯ! ಕನಸಿನ ಮಾತನ್ನೇ ಎತ್ತದೆ ಕನಸಿನ ಮಾಯೆಯನ್ನು ತಿಳಿಯ ಬೇಕಾಗಿದೆಯಲ್ಲವೇ! ದೂರದಲ್ಲಿ ನಮಿಸಿ ನಿಂತಿರುವ ರಣರಾಗನನ್ನು ನೋಡಿ ಸತ್ಯಾಶ್ರಯನು ಎಂದಿನಂತೆ ಮಾತನಾಡಿಸಿ, "ರಣರಾಗ, ಅವಸರದ ಕೆಲಸ ಯಾವುದೂ ಇಲ್ಲ. ಮಕ್ಕಳೆಲ್ಲರೂ ವನವಿಹಾರಕ್ಕೆ ಹೊರಟರು. ರಾಜ ಕಾರ್ಯವಿದ್ದುದರಿಂದ ನಾನು ಹೋಗಲಿಲ್ಲ. ಇದ್ದ ಕೆಲಸ ಮುಗಿದು ನನಗೂ ಈಗ ಸ್ವಲ್ಪ ವಿರಾಮ. ಈ ಅಜಿಂಕ್ಯ ದುರ್ಗದ ಸುತ್ತಲೂ ಇರುವ ಇತರ ಸಣ್ಣಪುಟ್ಟ ದುರ್ಗಗಳ ನೆನಪಾಯಿತು. ನಾನಂತೂ ಈ ಪ್ರದೇಶಕ್ಕೆ ತೀರ ಹೊಸಬ. ನೀನು ಇಲ್ಲಿಯೇ ಹುಟ್ಟಿಬೆಳೆದವನೆಂದು ನನಗೆ ಗೊತ್ತಿದೆ. ಆದುದ ರಿಂದ, ಪ್ರದೇಶ ಪರಿಚಯಕ್ಕಾಗಿ ನಿನ್ನನ್ನು ಕರೆಯಿಸಿದೆ ವಿರಾಮವಾಗಿ, ಅಷ್ಟೆ. ಕುಳಿತುಕೊ." ಎಂದು ಸರಳ ಭಾವದಿಂದ ನುಡಿದನು. ಸತ್ಯಾಶ್ರಯನು ತನ್ನಲ್ಲಿ ಇಟ್ಟಿರುವ ನಂಬಿಕೆಗಾಗಿ ಹಿಗ್ಗಿದನು ರಣರಾಗ. ದುರ್ಗರಕ್ಷಕನಾದರೂ ಕೆಳದರ್ಜೆಯ ಬಡದಾಸನಲ್ಲವೇ ಅವನು! ಅಲ್ಪಮತಿಯ ಆನಂದಕ್ಕೆ ಯಾವು ದಾದರೂ ಚೆಂದ! ಹತ್ತಿರದಲ್ಲಿರುವ ಒಂದೊಂದು ದುರ್ಗವನ್ನೂ ವರ್ಣಿಸಲಾ ರಂಭಿಸಿದನು ರಣರಾಗ. ಪೂರ್ವಕ್ಕೆ ಐದು ಮೈಲಿ ದೂರದಲ್ಲಿರುವ ಮಾಣಿಕ್ಯ

ದುರ್ಗದ ಮಾತನ್ನೆತ್ತಿ ಆ ದುರ್ಗವು ಸರದಾರ್ಥ ವಿಶ್ವಜಿತ್ ಅವರ ವಶದಲ್ಲಿದೆ ಯೆಂದು ತಿಳಿಸಿದನು. ಅಲ್ಲಿಂದ ಎರಡು ಮೈಲಿ ದೂರದಲ್ಲಿ ಕರ್ಣದುರ್ಗ; ಅದರ ಅಧಿಪತಿ ಕಾಂತಿಮತಿ. ಉತ್ತರಕ್ಕೆ ಎಂಟು ಮೈಲಿ ದೂರದಲ್ಲಿ ಅಭೇದ ದುರ್ಗ; ಅದರ ಸರದಾರ ವೀರರಾಜ. ಎಲ್ಲರ ಕಥೆಯನ್ನೂ ಮುಗಿಸುತ್ತ ಹೊರಟ ರಣರಾಗ! ಸತ್ಯಾಶ್ರಯನು ರಣರಾಗನ ಮಾತನ್ನು ಕಿವಿಗೊಟ್ಟು ಕೇಳುತ್ತ ಮಧ್ಯೆ ಮಧ್ಯೆ ಆಯಾ ಸರದಾರರ ವಿಷಯದಲ್ಲಿ ತನಗಿರುವ ಅಭಿಪ್ರಾಯವನ್ನು ಸೂಚಿಸುತ್ತಿದ್ದನು. ರಣರಾಗನಿಗೆ ಇದರಿಂದ ಮತ್ತಷ್ಟು ಆನಂದವುಂಟಾಗಿ ಮುಚ್ಚು ಮರೆಯಿಲ್ಲದೆ ಎಲ್ಲ ವಿವರಗಳನ್ನೂ ತಿಳಿಸಬೇಕೆಂಬ ಧೈರ್ಯವುಂಟಾಯಿತು.

ಸತ್ಯಾಶ್ರಯ—ದಕ್ಷಿಣ ದಿಕ್ಕಿನಲ್ಲಿರುವ ಈ ಶೈಲಶಿಖರವು ಯಾವುದು?

ರಣರಾಗ—ಪ್ರಭು, ಅದು ಶೈಲಶಿಖರವಲ್ಲ, ಸಿಂಹಗುಹೆ.

ಸತ್ಯಾ—ಏನು, ಸಿಂಹಗುಹೆಯೆ!

ರಣ—ಸಿಂಹಗುಹೆಯೆಂದರೆ ಅರಣ್ಯದ ಸಿಂಹಗಳ ವಾಸಸ್ಥಳವಲ್ಲ, ಮಹಾರಾಜ. ಅಲ್ಲಿ ಉನ್ಮತ್ತಸಿಂಹ, ದುರ್ಜಾತಸಿಂಹ ಎಂಬ ಎರಡು ಸಿಂಹಗಳಿವೆ.

ಸತ್ಯಾ—ಏನು, ಅವರು ಸಿಂಹಗಳೆ!

ರಣ—ಹೌದು ಮಹಾರಾಜ, ಸಿಂಹಗಳು! ಅವರಿಬ್ಬರೂ ಸಹೋದರರು, ಸಾಹಸವಂತರು.

ಸತ್ಯಾ—ಈ ಸಹೋದರರ ವಿಚಾರವಾಗಿ ರಾಜಮಹೇಂದ್ರದಲ್ಲಿ ಒಳ್ಳೆಯ ಹೆಸರು ಇಲ್ಲವಲ್ಲಾ?

ರಣ—ಅವರ ವಿಚಾರವಾಗಿ ಜನರು ಹೇಳುವುದು ನಿಜ. ಆದರೆ, ನಾನು ಯಾವುದು ನಿಜ ಯಾವುದು ಸುಳ್ಳು ಎಂದು ಹೇಳಲಿ. ಜನರೇನೋ

ಅವರನ್ನು ತುಂಟರೆಂದು ಕರೆಯುತ್ತಾರೆ. ಅವರ ಆಶ್ರಿತಶಂತೂ ಅವರ ವಿಚಾರದಲ್ಲಿ ಕೆಟ್ಟ ಮಾತನ್ನು ಆಡುವುದನ್ನೇ ನಾನು ಕೇಳಲಿಲ್ಲ. ಅಂತು, ಅವರು ನೂರು ಮಂದಿ ಸವಾರರೊಡನೆ ಬೇಟೆಗೆ ಹೋಗುವುದುಂಟು.

ಸತ್ಯಾ—ಏನು, ನೂರು ಮಂದಿ ಸವಾರರೊಡನೆ ಬೇಟೆಯೆ! ರಾಜಧಾನಿಯಲ್ಲಿ ಅವರ ಮೇಲೆ ನ್ಯಾಯಾಧೀಶರ ಮುಂದೆ ಪದೇ ಪದೇ ದೂರು ಬರುತ್ತಲೇ ಇತ್ತು.

ರಣ—ಬೇಟೆಯೋ ದರೋಡೆಯೋ ನನಗೇನು ಗೊತ್ತು ಪ್ರಭು !

ಸತ್ಯಾ—ಅದು ಹೋಗಲಿ. ಈ ಅಜಿಂಕ್ಯ ದುರ್ಗದಲ್ಲಿ ಕೆಲವು ಅದ್ಭುತಗಳು ನಡೆಯುವುದಾಗಿ ಚಂಡವರ್ಮರು ಹೇಳಿದ್ದರು. ಈ ದುರ್ಗದಲ್ಲಿ ರಾತ್ರಿಯ ವೇಳೆ ವಿಲಕ್ಷಣ ಧ್ವನಿ, ಭಯಂಕರ ದೃಶ್ಯ ಕಾಣುವುವಂತೆ! ಅದು ನಿಜವೋ !

ರಣರಾಗನಿಗೆ ಈ ಪ್ರಶ್ನೆಯನ್ನು ಕೇಳಿ ಸ್ವಲ್ಪ ಹೆದರಿಕೆ ಹುಟ್ಟಿತು. ಸತ್ಯಾಶ್ರಯನ ರಾಜತಂತ್ರದ ಸವಿನುಡಿಯಲ್ಲಿ ಸಿಕ್ಕಿರುವಾಗ ಹೆದರಿಕೆಯಿಂದ ಸುಮ್ಮನಿರಲು ಸಾಧ್ಯವಲ್ಲ. ಆದರೆ, ಚಂಡವರ್ಮ ಮಹಾರಾಜರೇ ಹೇಳಿರುವುದರಿಂದ ನನಗೇಕೆ ಹೆದರಿಕೆಯೆಂದು ತನ್ನಲ್ಲಿ ತಾನೇ ಯೋಚಿಸಿ "ಮಹಾರಾಜ, ತಮಗೆ ಹಾಗೇನಾದರೂ ರಾತ್ರಿ ಕನಸಿನ ಅನುಭವವಾಯಿತೇ ?" ಎಂದು ಕೇಳಿದನು.

ಸತ್ಯಾ—ಇಲ್ಲ. ನನಗೆಲ್ಲಿಯ ಕನಸು ! ಈಗತಾನೇ ಇಲ್ಲಿಗೆ ಬಂದಿರುವುದರಿಂದ ಇಲ್ಲಿಯ ಸಮಾಚಾರವನ್ನು ತಿಳಿಯಬೇಕೆಂಬ ಕುತೂಹಲ. ಅಷ್ಟೆ." ಎಂದು ಸಂಶಯಕ್ಕೆ ಅವಕಾಶವಿಲ್ಲದಂತೆ ನುಡಿದನು.

ರಣ—ಛೇ, ನಾನು ಅಂಥ ಚಿಕ್ಕ ವಿಚಾರಗಳಿಗೆಲ್ಲ ಗಮನ ಕೊಡುವವನಲ್ಲ ಮಹಾರಾಜ.

ಸತ್ಯಾ—ಏನು! ಇಲ್ಲಿ ಭಯಂಕರ ಪ್ರಸಂಗಗಳು ನಡೆದಿಲ್ಲವೇ?

ರಣ—ಇಲ್ಲ, ಪ್ರಭು. ಇಲ್ಲ.

ಸತ್ಯಾ—ವರ್ಷದ ಮೊದಲನೆಯ ದಿನ ಮಹಿಷ ಬಲಿ ಪೂಜೆ ನಡೆಯುವುದುಂಟೆ, ರಣರಾಗ?

ರಣ—ಉಂಟು, ಮಹಾರಾಜ?

ಸತ್ಯಾ—ಆ ಪೂಜೆಯ ಸಮಯಕ್ಕೆ ಈ ದುರ್ಗಾಧಿಪತಿಯ ದರ್ಶನವಾಗುವುದೇನು?

ರಣರಾಗನಿಗೆ ಏನು ಹೇಳಬೇಕೆಂಬುದು ತಿಳಿಯಲಿಲ್ಲ. ಪೂಜೆ ನಡೆಯುವುದು ಗೊತ್ತಿದ್ದ ಮೇಲೆ ಆಗ ನಡೆಯತಕ್ಕ ಹಲವು ಪ್ರಸಂಗಗಳೂ ಗೊತ್ತಿರಬೇಕಲ್ಲವೇ? ಗೊತ್ತಿಲ್ಲವೆಂದು ಹೇಳಿದ ಪಕ್ಷಕ್ಕೆ ಮುಂದೆ ಎಂದಿಗೂ ಸತ್ಯಾಶ್ರಯನು ತನ್ನನ್ನು ನಂಬುವುದಿಲ್ಲವೆಂದು ಯೋಚಿಸಿ "ಹೌದು, ಮಹಾರಾಜ" ಎಂದನು ರಣರಾಗ. ದುರ್ಗರಕ್ಷಕನ ಕುತಂತ್ರವನ್ನು ಸೀಳಿತು ಸತ್ಯಾಶ್ರಯನ ರಾಜತಂತ್ರ!

ಸತ್ಯಾ—ಈ ದುರ್ಗಾಧಿಪತಿ ಯಾರು?

ಈ ಪ್ರಶ್ನೆಯನ್ನು ಕೇಳಿದ ಮೇಲಂತೂ ರಣರಾಗನ ಮೈ ನಡುಗಿತು. ಮುಖ ಸಪ್ಪೆಯಾಯಿತು. ರಣರಾಗನ ಈ ದುರವಸ್ಥೆಯನ್ನು ನೋಡಿ ಸತ್ಯಾಶ್ರಯನು "ರಣರಾಗ, ನಿನಗೇಕೆ ಇಷ್ಟು ಭಯ? ನಿನಗೆ ಈ ವಿಚಾರ ಗೊತ್ತಿದೆಯೋ?" ಎಂದು ಮತ್ತೆ ಪ್ರಶ್ನೆ ಮಾಡಿದನು.

ರಣ—ಆ ಶೋಚನೀಯ ಸಮಾಚಾರ ಮಹಾರಾಜರಿಗೆ ಗೊತ್ತಿರಬಹುದು.

ಸತ್ಯಾಶ್ರಯನಿಗೆ ರಣರಾಗನ ಮಾತು ವಿಸ್ಮಯವನ್ನುಂಟು ಮಾಡಿತು. ನಿಜಾಂಶವನ್ನು ಹೇಳಲು ಈ ರೀತಿ ಮರೆಮಾಚುತ್ತಿದ್ದಾನೆಂದು ತಿಳಿಯಿತು. ಸಮಾಚಾರ ಗೊತ್ತಿಲ್ಲವೆಂದು ಹೇಳಿದರೆ ಇಲ್ಲದ ಸುಳ್ಳು ಸಮಾ

ಚಾರವನ್ನೇ ನಿಜವೆಂದು ತೋರುವಂತೆ ಆತನು ಹೇಳಿಬಿಡಬಹುದೆಂದು ಭಾವಿಸಿ "ಹೌದು, ಗೊತ್ತಿದೆ. ಆದರೆ ಮಹಿಷ ಬಲಿ ಪೂಜೆಗೂ ದುರ್ಗಾಧಿ ಪತಿಯ ದರ್ಶನಕ್ಕೂ ಸಂಬಂಧವೇನು ?" ಎಂದು ವಿಚಾರಯುಕ್ತವಾಗಿ ಕೇಳಿದನು ಸತ್ಯಾಶ್ರಯ.

"ಸಂಬಂಧ ಬಹಳವಿದೆ, ಮಹಾರಾಜ. ಬಹಳವಿದೆ. ನಿಜವಾದ ವಿಚಾರ ವನ್ನು ನಾನು ನಿಮಗೆ ತಿಳಿಸುತ್ತೇನೆ ಕೇಳಿರಿ." ಎಂದು ಬಾಯಿಬಿಟ್ಟನು ರಣರಾಗ! ಈ ಸಮಯವನ್ನೇ ಕಾಯುತ್ತಿದ್ದ ಸತ್ಯಾಶ್ರಯನು ಸರಿಯಾಗಿ ಕುಳಿತು ಕೇಳಲಾರಂಭಿಸಿದನು. ರಣರಾಗನ ಕಥೆ ಮುಂದುವರಿಯಿತು.

"ಈ ದುರ್ಗದ ಕಥೆ ಇಪ್ಪತ್ತಾರು ವರ್ಷಗಳಿಂದ ಕೆಟ್ಟಿದೆ ಮಹಾರಾಜ. ಸರದಾರ ಸತ್ಯವರ್ಮ ಮಹಾರಾಜರನ್ನು ತಾವು ನೋಡಿರಲಾರಿರಿ.

"ನೋಡಿಲ್ಲ, ಕೇಳಿಬಲ್ಲೆನು. ಅವರು ಸತ್ಯದಿಂದ ಪ್ರಜಾಪರಿಪಾಲನೆ ಮಾಡಿದವರೆಂದು ಈಗಲೂ ಪ್ರತೀತಿ ಇದೆ."

"ಸರಿ ಅಂಥ ಸತ್ಯವಂತರು ಇನ್ನೆಲ್ಲಿ! ಕೀರ್ತಿವರ್ಮ ಮಹಾರಾಜರು ಅವರ ಹಿರಿಯ ಮಕ್ಕಳು. ಚಂಡವರ್ಮ ಮಹಾರಾಜರು ಎರಡನೆಯವರು. ಮಕ್ಕಳನ್ನು ಮುದ್ದಿನಿಂದ ಸಾಕಿದರು. ಅವಸಾನ ಕಾಲದಲ್ಲಿ ಅವರು ಇಬ್ಬರು ಮಕ್ಕಳನ್ನೂ ಹತ್ತಿರ ಕರೆದು, ಅವರಲ್ಲಿ ಯಾವ ವಿಧವಾದ ಭಿನ್ನಭಾವಗಳೂ ಬರಕೂಡದೆಂದೂ, ದುರ್ಗದ ಕೀರ್ತಿ ಅಳಿಯದಂತೆ ನೋಡಿಕೊಳ್ಳಬೇಕೆಂದೂ ಕೋರಿದರು. ಕೀರ್ತಿವರ್ಮ ಮಹಾರಾಜರಿಗೆ ದುರ್ಗದ ಅಧಿಕಾರವನ್ನು ವಹಿಸಿ ಪರಮಪದವನ್ನು ಪಡೆದರು."

"ಏಸು, ಅಣ್ಣತಮ್ಮಂದಿರಲ್ಲಿ ಭಿನ್ನಭಾವಗಳಿದ್ದುವೇ ?

"ಇಲ್ಲ. ವಿದ್ಯಾರ್ಜನೆಗಾಗಿ ಕೀರ್ತಿವರ್ಮ ಮಹಾರಾಜರು ಕಲ್ಯಾಣಿಗೆ ತೆರಳಿದರು. ಅಲ್ಲಿರುವಾಗ ಕಲ್ಯಾಣಿ ಚಾಳುಕ್ಯ ವಂಶದ ಮಂಗಳಕೇಶಿ ಮಹಾರಾಜರ ಪುತ್ರಿ ವಸುಮತಿದೇವಿಯನ್ನು ಕೊಟ್ಟು ಅವರಿಗೆ ಲಗ್ನವಾಯಿತು. ಎರಡು ವರ್ಷಗಳು ಕಲ್ಯಾಣಿಯಲ್ಲಿಯೇ ಕಳೆದುವು. ಕೊನೆಗೆ ದುರ್ಗಕ್ಕೆ

ದಂಪತಿಗಳು ಹಿಂದಿರುಗುವ ದಿನ ಗೊತ್ತಾಯಿತು. ಒಂದು ಸಾಯಂಕಾಲ ಕೀರ್ತಿವರ್ಮ ಮಹಾರಾಜರು ಸಹಧರ್ಮಿಣಿ ವಸುಮತಿದೇವಿಯೊಡನೆ ದುರ್ಗವನ್ನು ಪ್ರವೇಶಿಸಿದರು. ದುರ್ಗದ ಹೊಸ ರಾಣಿಯನ್ನು ನೋಡಲು ಜನ ಕಿಕ್ಕಿರಿದು ನೆರೆದಿದ್ದರು. ದುರ್ಗವನ್ನು ಪ್ರವೇಶಿಸಿದೊಡನೆ ಸಂಭ್ರಮದಿಂದ ಎಲ್ಲರೂ ಜಯಘೋಷ ಮಾಡಿದರು. ಆದರೆ—

" ಆ ಮೇಲೆ ! "

"ಆ ಮೇಲೆ ಏನು ಹೇಳಲಿ ಮಹಾರಾಜ ! ಕೀರ್ತಿವರ್ಮ ಮಹಾರಾಜರು ಕುಳಿತಿದ್ದ ಕುದುರೆ ಮುಗ್ಗರಿಸಿತು. ಕೀರ್ತಿವರ್ಮರು ಕೆಳಗೆ ಬಿದ್ದರು. ಅಷ್ಟೇ ಅಲ್ಲ. ಶಸ್ತ್ರಾಲಯದಲ್ಲಿ ಜೋಡಿಸಿದ್ದ ಕಬ್ಬಿಣದ ಕವಚ ಮತ್ತು ಶಿರಸ್ತ್ರ ಇದ್ದಕ್ಕಿದ್ದಂತೆ ಕೆಳಗೆ ಬಿದ್ದುವು."

" ಆ ಮೇಲೆ ! "

" ಈ ಅಪಶಕುನದ ದುಷ್ಫಲವೋ ಏನೋ ಆ ದಿನದಿಂದ ವಸುಮತಿ ದೇವಿಯ ಆರೋಗ್ಯ ಕೆಟ್ಟಿತು. ಆಗ ಆಕೆ ಗರ್ಭವತಿ. ಕೀರ್ತಿವರ್ಮ ಮಹಾರಾಜರು ರಾಣಿಯ ಆರೋಗ್ಯಕ್ಕಾಗಿ ಬಹಳ ಶ್ರಮಪಟ್ಟರು. ರಾಣಿಯವರು ಪ್ರಸವ ವೇದನೆಯನ್ನು ಸಹಿಸಿದರು. ಪುತ್ರರತ್ನ ಅವರ ಭಾಗ್ಯವನ್ನು ಬೆಳಗಿತು. ದುರ್ಗದಲ್ಲೆಲ್ಲ ಸಂಭ್ರಮ ! ಆದರೆ—"

" ಆದರೆ ಏನಾಯಿತು ! "

" ಮುಂದಿನ ಕಥೆಯನ್ನು ಹೇಗೆ ವರ್ಣಿಸಲಿ ಮಹಾರಾಜ ! ವಸುಮತಿ ದೇವಿಯರಿಗೆ ವಿಶ್ರಾಂತಿ ಬೇಕಾಗಿತ್ತು. ಆದಕಾರಣ, ಆರೋಗ್ಯನಿಮಿತ್ತವಾಗಿ ಕೀರ್ತಿವರ್ಮ ಮಹಾರಾಜರು ಪತ್ನಿಯೊಡನೆ ತನ್ನ ಪ್ರಾಣ ಸ್ನೇಹಿತನಾದ ವೀರಸೇನನ ಕನಕದುರ್ಗದಲ್ಲಿ ಕೆಲವು ಕಾಲ ಇರಬೇಕೆಂದು ನಿರ್ಧರಿಸಿದರು. ಆದರೆ, ಮಗುವನ್ನು ಮಾತ್ರ ಜತೆಯಲ್ಲಿ ಕರೆದುಕೊಂಡು ಹೋಗಲು ಇಷ್ಟಪಡಲಿಲ್ಲ."

" ಹಾಗಾದರೆ ಮಗುವಿನ ಗತಿ ! "

"ಮಗುವನ್ನು ನೋಡಿಕೊಳ್ಳಲು ಇಪ್ಪತ್ತೈದು ವರ್ಷದ ಶೀಲವತಿ ಎಂಬ ಸುಂದರ ಸ್ತ್ರೀಯೊಬ್ಬಳನ್ನು ಉಪಮಾತೆಯಾಗಿ ನೇಮಿಸಿದರು."

"ಮಹಾರಾಜರ ಜೊತೆಯಲ್ಲಿ ನೀನು ಹೋಗಲಿಲ್ಲವೇ ?"

"ಇಲ್ಲ."

"ಆ ವೇಳೆ!"

"ಕೀರ್ತಿವರ್ಮ ಮಹಾರಾಜರು ವಸುಮತಿದೇವಿಯರೊಡನೆ ಕನಕ ದುರ್ಗಕ್ಕೆ ಪ್ರಯಾಣ ಬೆಳಸಿದರು. ಅಯ್ಯೋ, ಹೋದವರು ಇಬ್ಬರೂ ಜೀವ ಸಹಿತ ಹಿಂದಕ್ಕೆ ಬರಲಿಲ್ಲ! ಪರಮದಯಾಳು ಕೀರ್ತಿವರ್ಮ ಪ್ರಭುಗಳು ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ನಾನೆಂತಹ ಪಾಪಿ!"

ರಣರಾಗನು ದುಃಖದಿಂದ ತನ್ನನ್ನು ತಾನೇ ದೂಷಿಸಿಕೊಂಡನು. ತಲೆಯನ್ನು ಚಚ್ಚಿಕೊಂಡನು. ನಾಲಿಗೆಯನ್ನು ಕಚ್ಚಿಕೊಂಡನು. ಆತನ ಪರಿಸ್ಥಿತಿಯನ್ನು ನೋಡಿ ಸತ್ಯಾಶ್ರಯನಿಗೆ ಮರುಕ ಹುಟ್ಟಿ "ರಣರಾಗ, ಇದೇನಿದು! ದುರ್ಗರಕ್ಷಕನಾದ ನಿನಗೆ ಧೈರ್ಯವಿರಬೇಕು ಅಳುವುದರಿಂದ ಫಲವಿಲ್ಲ." ಎಂದು ಸಮಾಧಾನಪಡಿಸಿದನು. ರಣರಾಗನು ಒಂದು ಕ್ಷಣ ಸತ್ಯಾಶ್ರಯನ ಕಡೆ ನೋಡಿ—"ಮಹಾರಾಜ, ಆ ಪ್ರಸಂಗ ಹಾಗಿತ್ತು. ಆ ಘೋರ ಕೃತ್ಯ!" ಎಂದು ಮತ್ತೆ ಗೋಳಿಟ್ಟನು. ಸತ್ಯಾಶ್ರಯನಿಗಂತೂ ಆ ಘೋರ ಕೊಲೆಗೂ ರಣರಾಗನಿಗೂ ಏನಾದರೂ ಸಂಬಂಧವಿರಬಹುದೇ ಎನ್ನುವಷ್ಟು ಸಂಶಯವುಂಟಾಯಿತು. ಆದರೆ, ಕೇಳಲಿಲ್ಲ.

ರಣರಾಗನು ತನ್ನ ಕಥೆಯನ್ನು ನಿಲ್ಲಿಸಿದುದನ್ನು ಕಂಡು ಸತ್ಯಾಶ್ರಯನು "ಮಗುವಿನ ಗತಿ ಏನಾಯಿತು!" ಎಂದು ಕೇಳಿದಾಗ ರಣರಾಗನು ತನ್ನ ಚಿತ್ತವಿಭ್ರಮವನ್ನು ತಿಳಿದು ಮಗುವಿನ ಸುದ್ದಿಯನ್ನು ಹೇಳತೊಡಗಿದನು.

"ವೀರವರ್ಮ ವಸುಮತಿ ಇವರುಗಳನ್ನು ಯಾರೋ ಕೊಲೆ ಮಾಡಿದರೆಂಬ ಸುದ್ದಿ ಚಂಡವರ್ಮ ಮಹಾರಾಜರಿಗೆ ತಿಳಿಯಿತು. ಮಹಾರಾಜರು

ತನ್ನ ಪ್ರಿಯ ಅಣ್ಣನ ದುರ್ಮರಣಕ್ಕಾಗಿ ಬಹಳ ಶೋಧಿಸಿದರು. ಶವಗಳನ್ನು ಹುಡುಕಿಸಿ ದುರ್ಗಕ್ಕೆ ತಂದು ಅಪರಕ್ರಿಯೆಗಳನ್ನು ನಡೆಯಿಸಿದರು. ಕೊಲೆ ಪಾತಕರನ್ನು ಹಿಡಿಸಿ ಮರಣದಂಡನೆಯನ್ನು ವಿಧಿಸಿದರು. ಇಷ್ಟೆಲ್ಲ ಆಯಿತು ಆದರೆ—"

"ಆದರೆ, ಮಗು ಉಳಿಯಲಿಲ್ಲವೆ ?"

"ಇಲ್ಲ ಮಹಾರಾಜ ! ಕೀರ್ತಿವರ್ಮ ಮತ್ತು ವಸುಮತಿ ಇವರುಗಳು ಕೊಲೆಯಾದ ಮೂರನೆಯ ದಿನದಿಂದ ಮಗುವಿಗೆ ವಾಯುರೋಗ ಕಾಣಿಸಿಕೊಂಡಿತು. ದುಃಖದಲ್ಲಿ ದುಃಖ ಸೇರಿತು. ರಾಜಕುಮಾರನು ದೈವಾಧೀನನಾದನು.."

"ಏನು, ವಾಯುರೋಗ ಬಂದು ದೈವಾಧೀನ ! ಚಿಕಿತ್ಸೆ ಮಾಡಬಹುದಾಗಿತ್ತಲ್ಲ ರಣರಾಗ !"

"ಸರಿಯಾದ ಚಿಕಿತ್ಸೆಯೇ ಆಯಿತು. ಆದರೆ, ವಿಧಿ ಸಂಕಲ್ಪ !"

"ಸರಿ. ಅಲ್ಲಿ ಕಾಣುವ ಶ್ವೇತ ಶಿಲಾಸ್ತಂಭ ಯಾವುದು ?"

"ಅದೇ ಚಂಡವರ್ಮ ಮಹಾರಾಜರು ತನ್ನ ಪ್ರಿಯ ಸಹೋದರನ ಹೆಸರಿನಲ್ಲಿ ಕಟ್ಟಿಸಿರುವ ಸ್ಮಾರಕ."

"ಮಹಿಷ ಬಲಿ ವೃತ್ತಾಂತವೇನು ? ಹೇಳಬಲ್ಲೆಯಾ ?"

"ಹೇಳುತ್ತೇನೆ ಮಹಾರಾಜ. ಅದೊಂದು ಹಬ್ಬದ ಆಹುತಿ. ಯುಗಾದಿಯ ಮೂರನೆಯ ದಿನ ದುರ್ಗದ ಅಭಿಮಾನ ದೇವತೆಗೆ ಕೋಣನನ್ನು ಆಹುತಿ ಕೊಡುವುದು ಅನಾದಿಯಿಂದ ನಡೆದು ಬಂದಿರುವ ಪದ್ಧತಿ. ಆ ದಿನ ದುರ್ಗಾಧಿಪತಿ ತನ್ನ ಆಶ್ರಿತ ಜನರಿಗೆ ಅನ್ನಸಂತರ್ಪಣೆ ನಡೆಸುವುದುಂಟು. ಕೀರ್ತಿವರ್ಮ ಮಹಾರಾಜರಿಗೆ ಈ ಉತ್ಸವದಲ್ಲಿ ಬಹಳ ಆಸಕ್ತಿಯಿತ್ತು."

" ಚಂಡವರ್ಮ ಮಹಾರಾಜರಿಗೋ ! "

" ಚಂಡವರ್ಮ ಮಹಾರಾಜರಿಗೆ ಆಸಕ್ತಿಯಿಲ್ಲವೆಂದಲ್ಲ. ಹಿರಿಯರ ಪದ್ಧತಿಯನ್ನು ನಡೆಸಲೇಬೇಕಲ್ಲವೇ ? ಆದರೆ, ಈ ಸಲ ಮಹಿಷ ಬಲಿ ಉತ್ಸವ ನಡೆದಾಗ ಆದ ವಿಚಿತ್ರ ಪ್ರಸಂಗವನ್ನು ಕಂಡು ಅವರಿಗೆ ಭೀತಿಯುಂಟಾಗಿದೆ. ಉತ್ಸವವನ್ನು ನಿಲ್ಲಿಸಿಬಿಡಬೇಕೆಂದಿದ್ದಾರೆ."

" ವಿಚಿತ್ರ ಪ್ರಸಂಗವೇನು ? "

" ಈ ವರ್ಷ ಪದ್ಧತಿ ಪ್ರಕಾರ ಹಬ್ಬದ ದಿನ ಮಹಿಷ ಬಲಿ ಆಯಿತು. ಆಶ್ರಿತ ಜನರು ರಾಜಭೋಜನಕ್ಕೆ ಕುಳಿತರು ಕೂಡಲೇ ದುರ್ಗದ ಗುಪ್ತ ದ್ವಾರ ದಢ್ಢೆಂದು ತೆರೆಯಿತು. ಜ್ವಾಲೆಯೊಂದು ಹೊರಗೆ ಬಂದು ಚಂಡವರ್ಮ ಮಹಾರಾಜರ ಕಡೆ ಮಾಯವಾಯಿತು. ಜನರು ಗಾಬರಿಯಿಂದ ಎದ್ದರು. ಚಂಡವರ್ಮ ಮಹಾರಾಜರು ಮೂರ್ಛೆ ಹೋದರು."

" ಏಕೆ ? "

" ಅಣ್ಣನ ನೆನಪು ! ಅವರೇ ಕೀರ್ತಿವರ್ಮ ಮಹಾರಾಜರು ! "

" ಏನೆಂದೆ ? "

" ಜ್ವಾಲೆಯ ಸ್ವರೂಪದಲ್ಲಿರುವ ಕೀರ್ತಿವರ್ಮ ಮಹಾರಾಜರಿರಬಹುದೆಂದು ನನ್ನ ಭಾವನೆ."

ರಣರಾಗನ ಕಥೆ ಇಲ್ಲಿಗೆ ಮುಗಿಯಿತು. ಆದರೆ, ಯಾರಿಂದ ಕೊಲೆಯಾಯಿತೆಂಬುದಾಗಲಿ, ಯಾರು ಕೊಲೆಮಾಡಿದರೆಂಬುದಾಗಲಿ ಗೊತ್ತಾಗಲಿಲ್ಲ. ರಾಜಕಾರ್ಯದಲ್ಲಿ ತೊಡಗಿದ್ದ ಸತ್ಯಾಶ್ರಯನಿಗೆ ಸದ್ಯದಲ್ಲಿ ಆ ವಿವರಗಳು ಬೇಕಿರಲಿಲ್ಲ. ಚಂಡವರ್ಮ ಮಹಾರಾಜರ ಅತಿಥಿಯಾಗಿರುವವರಿಗೆ ಅವರ ಮನೆತನದ ವಿಚಾರದಲ್ಲಿ ದೋಷಾರೋಪಣೆ ಮಾಡುವುದು ತರವಲ್ಲವೆಂದು ಭಾವಿಸಿದನು. ಉಂಡಮನೆಗೆ ಎರಡು ಬಗೆಯುವುದು ಹೀನತ ಲಕ್ಷಣ. ಅಂತು,

ವೃದ್ಧ ವನಚರಿಯ ಮಾತಿಗೂ, ರಣರಾಗನ ಮಾತಿಗೂ, ತನ್ನ ಕನಸಿನ ಕಳ ವಳಕ್ಕೂ ಇರುವ ಸಂಬಂಧ ಗೊತ್ತಾಯಿತು ಸತ್ಯಾಶ್ರಯನಿಗೆ. ಅಷ್ಟು ಹೊತ್ತಿಗೆ ಸರಿಯಾಗಿ ಚಂದ್ರಸೇನ, ವೀರಧವಳ ಮತ್ತು ಲಲಿತಪ್ರಭೆ ಇವರು ಗಳು ವನವಿಹಾರದಿಂದ ಹಿಂದಿರುಗಿದರೆಂದು ತಿಳಿಯಿತು. ತಕ್ಷಣ ತನ್ನ ಪೀಠ ದಿಂದ ಎದ್ದನು. ರಣರಾಗ ಎಂದಿನಂತೆ ನಮಿಸಿ ತೆರಳಿದನು. ಅಂದಿನ ಅನುಭವ ಆತನಿಗೆ ಹಿಂದೆ ಎಂದೂ ಆಗಿರಲಿಲ್ಲ!

ಕೊಲೆಪಾತಕರ ತವರುಮನೆಯಂತಿದ್ದ ಅಜಿಂಕ್ಯ ದುರ್ಗದಲ್ಲಿ ಸತ್ಯಾಶ್ರಯ ನಂಥ ಧರ್ಮಾತ್ಮನು ಇರತಕ್ಕುದಲ್ಲ. ಆದರೆ, ಕೊಲೆಪಾತಕರು ಯಾರೆಂಬು ದನ್ನು ತಿಳಿಯುವುದು ಹೇಗೆ? ಕೊಲೆ ತಾನಾಗಿಯೇ ಬಯಲಿಗೆ ಬರಬೇಕಾದ ಬಲೆ. ಪ್ರಶ್ನೆಗೆ ನಿಲುಕಲಾರದ ಗೂಢ ಸಮಸ್ಯೆ ಕೊಲೆ! ಸತ್ಯಾಶ್ರಯನು ಕೊಲೆಯ ಸಮಸ್ಯೆಯನ್ನು ಬಿಡಿಸಲು ಬಂದಿರಲಿಲ್ಲ. ರಾಜಮಹೇಂದ್ರದ ಸಿಂಹಾ ಸನದ ರಕ್ಷಣೆ ಆತನ ಮುಂದಿರುವ ಪವಿತ್ರಕಾರ್ಯ. ಇತರ ಸನ್ನಿವೇಶದಲ್ಲಿ ಸತ್ಯಾಶ್ರಯನು ಅಜಿಂಕ್ಯ ದುರ್ಗವನ್ನು ಮರುದಿನವೇ ಬಿಟ್ಟು ಹೊರಡಬಹುದಾ ಗಿತ್ತು. ಆದರೆ, ಸದ್ಯದಲ್ಲಿ ಸತ್ಯಾಶ್ರಯನು ಸ್ಥಾನಭ್ರಷ್ಟನಾಗಿದ್ದಾನೆ. ಅಜಿಂಕ್ಯ ದುರ್ಗದಲ್ಲಿ ಚಂಡವರ್ಮನ ಅತಿಥಿಯಾಗಿರುವುದಲ್ಲದೆ ಬೇರೆ ಮಾರ್ಗವೇ ಇಲ್ಲ. ರಣರಾಗನ ಕಥೆಯನ್ನು ಕೇಳಿದ ಮೇಲೆ ಸತ್ಯಾಶ್ರಯನು ಉಭಯ ಸಂಕಟ ದಿಂದ ಬಾಗಿಲ ಬಳಿಗೆ ಬಂದನು. ಅಲ್ಲಿ ಪ್ರಬಲ ಸಂಕಟವೊಂದು ಕಾದಿತ್ತು.

# ೮. ಆಗ್ರಹ.

## ಯಾರ ಸುಖಕ್ಕೆ ಯಾರು ಹೊಣೆ

ಚಂದ್ರಸೇನನು ಅವಸರದಿಂದ ಬರುತ್ತಿದ್ದುದನ್ನು ಕಂಡು ಸತ್ಯಾಶ್ರಯನು ಒಳಗೆ ಬಂದನು. ಲಲಿತಪ್ರಭೆಯೊಡನೆ ಸಡಗರದಿಂದ ಮಗನು ಬರುವನೆಂದು ಕಾದಿದ್ದ ಸತ್ಯಾಶ್ರಯನಿಗೆ ಚಂದ್ರಸೇನನ ವಿಚಿತ್ರ ವರ್ತನೆ ಅರ್ಥವಾಗಲಿಲ್ಲ. ಚಂದ್ರಸೇನನು ಒಳಗೆ ಬಂದೊಡನೆಯೇ ವನವಿಹಾರದ ಮಾತನ್ನೆತ್ತಲಿಲ್ಲ. ತಂದೆಯ ಮುಖವನ್ನು ದುಮದುಮನೆ ನೋಡುತ್ತ ನಿಂತನು. ಸತ್ಯಾಶ್ರಯನು ಗಾಬರಿಯಿಂದ—"ಚಂದ್ರಸೇನ, ಲಲಿತಪ್ರಭೆಯೆಲ್ಲಿ? ಕಾಡಿನಲ್ಲಿ ಈ ದಿನವೂ ವಿಲಕ್ಷಣ ವನಚರಿಯನ್ನು ಕಂಡಿರಾ!—ವೀರಧವಳನು ನಿನ್ನ ಜತೆಯಲ್ಲಿರಲಿಲ್ಲವೇ!—ನೀನು ಕೋಪೋದ್ದೀಪಿತನಾಗಿರುವೆಯಲ್ಲವೇ? ಇವೇ ಮೊದಲಾದ ಹಲವು ಪ್ರಶ್ನೆಗಳನ್ನು ಒಂದೇ ಉಸಿರಿನಲ್ಲಿ ಕೇಳಿದನು. ಚಂದ್ರಸೇನನಿಗೆ ಇವೆಲ್ಲಕ್ಕೂ ಉತ್ತರ ಕೊಡುವಷ್ಟು ಶಾಂತಿಯಿರಲಿಲ್ಲ. "ಲಲಿತಪ್ರಭೆ ಆಕೆಯ ಮಹಲಿಗೆ ಹೋದಳು." ಎಂದು ಸುಮ್ಮನೆ ಕುಳಿತನು. ಸತ್ಯಾಶ್ರಯನಿಗಂತೂ ಸ್ವಲ್ಪ ಸಮಾಧಾನವಾಯಿತು. ಮಗಳು ಸುರಕ್ಷಿತವಾಗಿ ವನದಿಂದ ಮನೆಗೆ ಬಂದಳೆಂದು ತಿಳಿದು ತನ್ನ ಪೀಠದಲ್ಲಿ ಕುಳಿತು, ಚಂದ್ರಸೇನನನ್ನೂ ಕುಳಿತುಕೊಳ್ಳುವಂತೆ ಹೇಳಿದನು. ಮಗನ ಅಂದಿನ ಪ್ರಚಂಡ ಕೋಪಕ್ಕೆ ಕಾರಣ ಏನಿರಬಹುದೆಂದು ತಿಳಿಯುವ ಕುತೂಹಲದಿಂದ—"ಮಗು, ನಿಜಾಂಶವನ್ನು ಹೇಳು. ಹೆದರಬೇಡ" ಎಂದು ಸಂತವಿಸಿ ನುಡಿದನು.

ಚಂದ್ರಸೇನನಿಗೆ ನಿಜಾಂಶಕ್ಕಿಂತ ನಿಗ್ರಹ ನಾಲಗೆಯ ಮೇಲೆ ಸುಳಿಯಿತು.—"ತಂದೆ, ವೀರಧವಳನನ್ನು ನಮ್ಮ ಮನೆಯಿಂದ ಕಳುಹಿಸಿಬಿಡು." ಎಂದು ನುಡಿದು ನೆಲವನ್ನು ನೋಡುತ್ತ ಕುಳಿತನು.

ಮಗನು ಹೀಗೆ ಊರ್ಧ್ವಮುಖನಾಗಿ ಕುಳಿತುದರ ಅರ್ಥ ಸತ್ಯಾಶ್ರಯನಿಗೆ ತಿಳಿಯುವುದಾದರೂ ಹೇಗೆ? ಆತನು ಚಂದ್ರಸೇನನನ್ನು ಕುರಿತು "ಮಗು,

ಹೇಳು. ಏನಿದ್ದರೂ ಹೇಳಿಬಿಡು. ಕೋಪ ಬೇಡ." ಎಂದು ಕೇಳಿದನು. ನಿಜ. ಚಂದ್ರಸೇನನು ಅಣ್ಣನಲ್ಲವೆ ? ಲಲಿತಪ್ರಭೆ ತಂಗಿಯಲ್ಲವೆ ? ತಂಗಿಯ ಮೇಲೆ ಅಣ್ಣನ ಅಧಿಕಾರ! ಅಣ್ಣನ ಅಧಿಕಾರಕ್ಕೆ ತಂಗಿಯ ಪ್ರೇಮಭಂಗ! ಆದರೆ ಪ್ರೇಮಭಂಗಕ್ಕೆ ದಂಡೋಪಾಯಕ್ಕಿಂತ ಸಾಮೋಪಾಯ ಫಲಕಾರಿ. ಯುವಕನಾದ ಚಂದ್ರಸೇನನಿಗೆ ಅನುಭವವಿರಲಿಲ್ಲ. ಆತನು ಮತ್ತೆ ಹುಬ್ಬು ಗಂಟಿಕ್ಕಿ—"ಅಪ್ಪಾ, ವನವಿಹಾರಕ್ಕೆ ಹೋಗಿದ್ದಾಗ ನಾನು ಲಲಿತಪ್ರಭೆಯನ್ನು ವೀರಧವಳನ ಜೊತೆಯಲ್ಲಿ ಬಿಟ್ಟು, ವೈಗಾವಲಿನ ಸವಾರರನ್ನು ಕರೆದುಕೊಂಡು ಎದುರಿಗೆ ಬಂದ ಒಂದು ಜಿಂಕೆಯ ಬೇಟೆಗಾಗಿ ಹೊರಟೆನು." ಕೂಡಲೇ ಸತ್ಯಾಶ್ರಯನು ಆತನ ಮನಸ್ಸಿನ ಭಾವವನ್ನು ಅರಿತು "ಮಗು, ನೀನು ಹಾಗೆ ಬಿಟ್ಟು ಹೋದ ಮೇಲೆ ಈಗ ಸಿಟ್ಟುಮಾಡುವುದಾದರೂ ಏಕೆ ?" ಎಂದನು.

ಚಂದ್ರಸೇನ—ಸಿಟ್ಟಿಗೆ ಕಾರಣವಿದೆ. ನಾನು ಹಿಂದಕ್ಕೆ ಬರುವಾಗ ಅವರಿಬ್ಬರ ನಗು ದೂರದಿಂದಲೇ ಕೇಳಿಸಿತು. ಲಲಿತಪ್ರಭೆ ಈ ರೀತಿ ನಗುವುದು ನನಗೆ ಒಪ್ಪಲಿಲ್ಲ. ಆಹ್ಲಾದಕ್ಕೆ ಕಾರಣವೇನಿರಬಹುದೆಂದು ತಿಳಿಯಲು ಸಮೀಪದ ಮರದ ಹಿಂದೆ ನಿಂತು ಅವರ ಸಂಭಾಷಣೆಯನ್ನು ಕೇಳಿಸಿಕೊಂಡೆನು.

ಸತ್ಯಾಶ್ರಯ—ಸಂಭಾಷಣೆಯಲ್ಲಿ ತಪ್ಪೇನಿದೆ, ಮಗು ?

ಚಂದ್ರ—ಸಂಭಾಷಣೆಗೂ ಒಂದು ಮಿತಿಯುಂಟಲ್ಲವೆ ? ಅವರ ಸಂಭಾಷಣೆ ಸಾಮಾನ್ಯವಾಗಿರಲಿಲ್ಲ. ನಮ್ಮ ವಂಶಕ್ಕೆ ಕಳಂಕ ತರುವ ಸಂಭಾಷಣೆ ಅದು. ಲಲಿತಪ್ರಭೆಗೆ ವೀರಧವಳನಲ್ಲಿ ಗಾಢವಾದ ಅನುರಾಗವಿದೆ.

ಸತ್ಯಾ—ಯೌವನದಲ್ಲಿ ಅನುರಾಗ ಉಕ್ಕುವುದು ಸ್ವಾಭಾವಿಕ, ಮಗು.

ಚಂದ್ರ—ಆದರೆ, ಯಾರಲ್ಲಿ ಅನುರಾಗ! ಅನಾಥ ವೀರಧವಳನೊಡನೆ ಅಲ್ಲ; ಅವನೊಬ್ಬ ಪರದೇಶಿ.

ಸತ್ಯಾ—ಅದಿರಲಿ. ಆ ಮೇಲೆ ? ಹಿಂದೆ ನೋಡಿದ್ದ ವನಚರಿ ಮತ್ತೆ ಕಾಡಿನಲ್ಲಿ ಕಾಣಿಸಿಕೊಂಡಳೇ ?

ಚಂದ್ರ—ಹೌದು. ಕಾಣಿಸಿಕೊಂಡಳು ಅವಳು ನಮ್ಮ ಪರಸ್ಪರ ಬಾಂಧವ್ಯವನ್ನು ವಿಚಾರಿಸಿ, ಕೊನೆಗೆ ವೀರಧವಳನಿಗೂ ಲಲಿತಪ್ರಭೆಗೂ ಜೊತೆ ಎಂದು ಭವಿಷ್ಯ ಹೇಳುವವಳಂತೆ ಹರಟಿದಳು. ನನ್ನ ಕೋಪವಂತೂ ನೂರ್ಮಡಿಯಾಯಿತು. ಆಕೆಯನ್ನು ಹೊಡೆಯಲು ಹೋದೆನು. ಆಕೆ ಓಡಿ ಹೋದಳು. ತರುವಾಯ ನಾವು ಒಬ್ಬರೊಡನೊಬ್ಬರು ಮಾತನಾಡದೆ ದುರ್ಗವನ್ನು ಸೇರಿದೆವು.

ಸತ್ಯಾಶ್ರಯನಿಗೆ ಅಜಿಂಕ್ಯ ದುರ್ಗದಲ್ಲಿ ಇರಬೇಕೇ ಇರಬೇಡವೇ ಎಂಬ ಉಭಯ ಸಂಕಟದ ಜೊತೆಗೆ ಇದೊಂದು ಪ್ರಬಲ ಸಂಕಟವೂ ಸೇರಿತು. ವೀರಧವಳನು ಗುಣವಂತನೆಂದೂ, ಧನವಂತನೆಂದೂ, ಸತ್ಯಾಶ್ರಯನು ತಿಳಿದಿದ್ದನು. ವೀರಧವಳನು ಲಲಿತಪ್ರಭೆಗೆ ಅನುರೂಪನೂ ಅನುಗುಣನೂ ಆದ ವರನೆಂದೂ ಆತನು ಭಾವಿಸಿದ್ದನು. ಆದರೆ ಆಗಿನ ಸಂದರ್ಭದಲ್ಲಿ ಅದನ್ನು ಹೇಳುವುದಾದರೂ ಹೇಗೆ ? ಜ್ಯೇಷ್ಠ ಪುತ್ರನಿಗೆ ಅಂದಿನ ಪ್ರಸಂಗದಿಂದ ವೀರಧವಳನಲ್ಲಿ ಅಸಡ್ಡೆಯುಂಟಾಗಿದೆಯೆಂಬುದು ವ್ಯಕ್ತವಾದ ಮೇಲೆ ತನ ಅಭಿಪ್ರಾಯವನ್ನು ಸೂಚಿಸುವುದಾದರೂ ತರವಲ್ಲ. ಒಂದು ವೇಳೆ ಸೂಚಿಸುವುದಾದರೆ ತಂದೆಮಕ್ಕಳಿಗೆ ವಿರೋಧಬರುತ್ತದೆಂದು ಸತ್ಯಾಶ್ರಯನು ಯೋಚಿಸಿದನು. ದುರ್ವಿಧಿ ಸತ್ಯಾಶ್ರಯನನ್ನು ಕಾಡುತ್ತಿರುವಾಗ ಆತನ ಪ್ರಯತ್ನ ಸಾಗುವ ಹಾಗಿರಲಿಲ್ಲ. ತನ್ನ ಮನಸ್ಸನ್ನು ಬಿಚ್ಚಿ ಸ್ಪಷ್ಟವಾಗಿ ಚಂದ್ರಸೇನನೊಡನೆ ವೀರಧವಳ ಲಲಿತಪ್ರಭೆ ಇವರುಗಳ ವಿವಾಹ ಬಾಂಧವ್ಯವನ್ನು ಕುರಿತು ಮಾತನಾಡಿದ್ದರೆ ಚಂದ್ರಸೇನನು ತಂದೆಯ ಮಾತಿಗೆ ವಿರುದ್ಧವಾಗಿ ನಿಲ್ಲುತ್ತಿರಲಿಲ್ಲವೋ ಏನೋ ! ಸತ್ಯಾಶ್ರಯನು ಪ್ರಯತ್ನ ಮಾಡುವುದಕ್ಕೆ ಮುಂದಾಗಿಯೇ ವಿರುದ್ಧವಾಗಿ ನಿಲ್ಲುತ್ತಾನೆಂದು ತನ್ನಲ್ಲಿ ತಾನೇ ಭಾವಿಸಿದ್ದುದಾದರೂ ತಪ್ಪು. ಅಂತು ಚಂದ್ರಸೇನನ ಮಾತನ್ನು ಕೇಳಿ ನಿಟ್ಟುಸಿರ್ಬಿಟ್ಟು—"ಮಗು, ವೀರಧವಳನು ಈ ರೀತಿ ಮಾಡುವನೆಂದು ನಾನು ತಿಳಿದಿರಲಿಲ್ಲ. ಮರ್ಯಾದೆ ಹೋಗುವುದಕ್ಕೆ ಮೊದಲೇ ನಾವು ಲಲಿತಪ್ರಭೆಗೆ ವಿವಾಹ ಮಾಡಿಬಿಡಬೇಕು." ಎಂದನು.

ಚಂದ್ರ—ವಿವಾಹ! ವರನು ಯಾರು?

ಸತ್ಯಾ—ಸರದಾರ್ ಚಂಡವರ್ಮ.

ಚಂದ್ರ—ಐವತ್ತು ವರ್ಷ ತುಂಬಿದ ವರನಿಗೆ ಹದಿನಾರು ವರ್ಷದ ಹೆಣ್ಣು! ಛೆ, ನನಗೇಕೋ ಇದು ಸಮಾಧಾನವಾಗಿಲ್ಲ.

ಸತ್ಯಾ—ಮಗು, ಚಂಡವರ್ಮನು ಲಲಿತಪ್ರಭೆಯನ್ನು ಕೊಟ್ಟು ವಿವಾಹ ಮಾಡುವಂತೆ ಹಿಂದೆಯೇ ಕೋರಿದ್ದಾನೆ. ವಂಶ, ವೈಭವ, ಅಂತಸ್ತು—ಇವುಗಳು ಚೆನ್ನಾಗಿದ್ದರೆ ಸಾಕು. ವಯಸ್ಸು ಮುಖ್ಯವಲ್ಲ. ಅಲ್ಲದೆ, ಚಂಡವರ್ಮನು ನಮಗೆ ಕಷ್ಟದಲ್ಲಿ ಸಹಾಯ ಮಾಡಿದ್ದಾನಲ್ಲವೇ? ನನ್ನ ಮಾತಿಗೆ ಬೆಲೆ ಕೊಡು, ಮಗು.

ಚಂದ್ರ—ಲಲಿತಪ್ರಭೆ ಒಪ್ಪಿದರೆ ಆಗಬಹುದು. ಆದರೆ, ವೀರಧವಳನನ್ನು ನಮ್ಮ ಮನೆಯಿಂದ ಓಡಿಸಿಬಿಡಬೇಕು.

ಸತ್ಯಾ—ಮಗು, ವೀರಧವಳನು ಎಷ್ಟಾದರೂ ಅನಾಥ. ಆತನ ಮೇಲೆ ದ್ವೇಷ ಬೇಡ. ಲಲಿತಪ್ರಭೆಯನ್ನು ಚಂಡವರ್ಮನಿಗೆ ಕೊಟ್ಟು ವಿವಾಹ ಬಾಂಧವ್ಯ ನಡೆದ ಮೇಲೆ ಇನ್ನೇನಿದೆ? ಚಂಡವರ್ಮನ ಮೇಲೆ ವೀರಧವಳನು ಪಂಥಕಟ್ಟಲು ಅಸಾಧ್ಯ. ಅಲ್ಲದೆ, ಆತನನ್ನು ಕಳುಹಿಸಿಬಿಟ್ಟರೆ ಆಗ ಶತ್ರು ಪಕ್ಷವನ್ನು ಸೇರಿ ನಮಗೆ ತೊಂದರೆ ಕೊಡಬಹುದು.

ಚಂದ್ರ—ಇದರ ಮೇಲೆ ನಿಮ್ಮ ಇಷ್ಟ. ನಾನಂತೂ ವೀರಧವಳನೊಡನೆ ಯಾವ ವಿಧವಾದ ಸಂಪರ್ಕವನ್ನೂ ಇಟ್ಟುಕೊಳ್ಳುವುದಿಲ್ಲ.

ಅಷ್ಟು ಹೊತ್ತಿಗೆ ಲಲಿತಪ್ರಭೆ ಒಳಗೆ ಬಂದಳು. ತನ್ನ ಅಣ್ಣನು ಅಲ್ಲಿರುವನೆಂಬುದು ಗೊತ್ತಿರಲಿಲ್ಲ. ಆದರೆ, ಲಲಿತಪ್ರಭೆ ಬಂದ ಕೂಡಲೇ ಚಂದ್ರಸೇನನು ಹೊರಟುಹೋದನು. ಆತನು ಅಲ್ಲಿಯೇ ಕುಳಿತಿದ್ದರೆ ಚೆನ್ನಾಗಿತ್ತು. ಲಲಿತಪ್ರಭೆಯ ಮಾತಿನಿಂದ ನಿಜಾಂಶವನ್ನು ತಿಳಿಯಬಹುದಾಗಿತ್ತು.

ಸತ್ಯಾಶ್ರಯನು ಮಗಳನ್ನು ನೋಡಿದನು. ತಂದೆಯ ನೋಟದಲ್ಲಿ ಎಂದಿನಂತೆ ಸೌಮ್ಯವಿರಲಿಲ್ಲ. ಜುಗುಪ್ಸೆಯಿಂದ ಕಾಂತಿಹೀನವಾಗಿತ್ತು ಮುಖ! ಅಣ್ಣ ತನ್ನ ಪ್ರಣಯ ಪ್ರಸಂಗವನ್ನು ತಂದೆಗೆ ಹೇಳಿರುವನೆಂದು ಭಾವಿಸಿ—"ತಂದೆ, ನನ್ನ ಮೇಲೆ ನಿಮಗೆ ಕೋಪವೇ ?" ಎಂದಳು ಲಲಿತ ಪ್ರಭೆ ಬೆದರಿ ಬೆಂಡಾಗಿ! ಹೆಂಗಸಿನ ಮನಸ್ಸು ಬಹಳ ಸೂಕ್ಷ್ಮ! ಸತ್ಯಾಶ್ರಯನು ಮಗಳ ಬಗೆ ಬೆದರಿದೆಯೆಂದು ತಿಳಿದು ಹತ್ತಿರ ಕರೆದು ಮೈದಡವಿ ಕುಳ್ಳಿರಿಸಿ—"ಮಗು, ನಿನ್ನ ಮನಸ್ಸು ಈದಿನ ಏಕೋ ಬೆದರಿರುವಂತಿದೆ. ಕಾರಣವೇನೇ ಇರಲಿ ತಿಳಿಸು. ಅಂಜಿಕೆಯಿಲ್ಲದೆ ತಿಳಿಸು. ನಿನ್ನ ಹಿತಸಾಧನೆಗಿಂತ ಹೆಚ್ಚಿನದು ಯಾವುದೂ ಇಲ್ಲ ನನಗೆ. ಹೇಳು." ಎಂದು ವಾತ್ಸಲ್ಯ ಪೂರಿತವಚನಗಳಿಂದ ಕೇಳಿದನು. ತಂದೆಯ ವಾತ್ಸಲ್ಯಕ್ಕೂ ಲಲಿತಪ್ರಭೆಯ ಲಜ್ಜೆಗೂ ಸ್ಪರ್ಧೆ ಹುಟ್ಟಿತು. ಸತ್ಯಾಶ್ರಯನು ಇದನ್ನು ಅರಿತು "ಪ್ರಭಾ, ನೀನು ಲಜ್ಜಾವತಿ, ಸತ್ಯವತಿ. ನನ್ನ ಜೀವನದ ಉಸಿರು. ಹೇಳು, ವೀರಧವಳನು ನಿನ್ನಿಂದ ಯಾವುದಾದರೂ ವಿಷಯದಲ್ಲಿ ವಚನ ಅಥವಾ ವಾಗ್ದಾನ ತೆಗೆದುಕೊಂಡಿರುವನೇ ? ಹೇಳು" ಎಂದನು. ಲಲಿತಪ್ರಭೆಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಆಕೆ ಸೆರಗಿನಿಂದ ಅಶ್ರುಜಲವನ್ನು ಒತ್ತಿ "ಇಲ್ಲ" ಎಂದು ನುಡಿದು, ತಂದೆಯ ಮುಖವನ್ನು ನೋಡಿದಳು. ತನ್ನ "ಇಲ್ಲ" ತಂದೆಯಲ್ಲಿ "ಅಲ್ಲ" ಎಂದ. ತೋರಿತು ಲಲಿತಪ್ರಭೆಗೆ! ಲಜ್ಜೆ ಶೋಕವಾಗಿ ಪರಿಣಮಿಸಿತು. ಕೊನೆಗೆ ಸ್ವಲ್ಪ ಧೈರ್ಯ ತಂದುಕೊಂಡು—"ತಂದೆ, ವೀರಧವಳನಲ್ಲಿ ತಪ್ಪಿಲ್ಲ." ಎಂದಳು ಲಲಿತಪ್ರಭೆ.

ಸತ್ಯಾಶ್ರಯ—ಮಗು, ತಪ್ಪು ಯಾರದೆಂದು ಕೇಳಲಿಲ್ಲ. ಪ್ರೇಮ ಸಾಮ್ರಾಜ್ಯದಲ್ಲಿ ತಪ್ಪನ್ನು ಹುಡುಕುವುದು ಮೂರ್ಖತನ. ಎರಡು ಕೈ ಸೇರಿದರೆ ಚಪ್ಪಾಳೆ ಎಂಬ ಗಾದೆಯನ್ನು ನೀನು ಅರಿಯೆಯಾ? ವೀರಧವಳನಿಗೂ ನಿನಗೂ ನಡೆದ ಸಂಭಾಷಣೆ ಏನು ?

ಲಲಿತಪ್ರಭೆ—ವೀರಧವಳನು ತನ್ನ ಸ್ಥಿತಿಯನ್ನು ತಾನೇ ಹಳಿದುಕೊಂಡು, ತಾನೊಬ್ಬ ಅನಾಥ ಬಾಲಕನೆಂದೂ, ಮುಂದೆ ಎಲ್ಲಿಯಾದರೂ ಹೋಗಿ ಜೀವಿಸುವುದು ಲೇಸೆಂದೂ ಹೇಳಿದನು.

ಸತ್ಯಾ—ಇಷ್ಟು ದಿನ ಇಲ್ಲದ ಅನಾಥಪ್ರೇತ ಈಗ ಎಲ್ಲಿಂದ ಬಂತು ! ಆದಕ್ಕೆ ನೀನು ಏನು ಹೇಳಿದೆ ?

ಲಲಿತ—ನಮ್ಮನ್ನು ಬಿಟ್ಟು ಹೋಗಬೇಡವೆಂದು ಹೇಳಿದೆನು. ನಮ್ಮ ತಂದೆಗಿಂತ ಗುಣಾಢ್ಯರಾದ ರಕ್ಷಕರು ಯಾರೂ ಇಲ್ಲವೆಂದು ತಿಳಿಸಿದೆನು.

ಸತ್ಯಾ—ಆದರೆ, ವೀರಧವಳನಲ್ಲಿ ನಿನಗೆ ಅನುರಾಗವುಂಟೆ?

ಲಲಿತಪ್ರಭೆಗೆ ಎದೆ ಒಡೆಯಿತು. ತಂದೆಯ ಮುಖವನ್ನು ಕ್ಷಣಕಾಲ ನೋಡಿ—"ತಂದೆ, ಯಾವ ಅನುರಾಗವಿದ್ದರೂ ನಿಮಗಾಗಿ! ನಿಮ್ಮನ್ನು ಬಿಟ್ಟು ಅನುರಾಗವಿಲ್ಲ." ಎಂದಳು ಆ ವಿನಯಸಂಪನ್ನೆ! ಸತ್ಯಾಶ್ರಯನಿಗೆ ಪ್ರಬಲ ಸಂಕಟ—ಲಲಿತಪ್ರಭೆಗೆ ವೀರಧವಳನಲ್ಲಿರುವ ಪ್ರೇಮಕ್ಕೋಸ್ಕರವಲ್ಲ; ಚಂಡ ವರ್ಮನಿಗೆ ತಾನು ಕೊಟ್ಟಿರುವ ವಾಗ್ದಾನಕ್ಕಾಗಿ! ಅದು ಸತ್ಯಾಶ್ರಯನ ತಪ್ಪಲ್ಲ ಮೇಧಾವಿಗಳೂ, ಸಮರ್ಥರೂ, ಅನುಭವಶಾಲಿಗಳೂ, ವಯೋವೃದ್ಧರೂ ಆದ ಮಹನೀಯರು ಅನೇಕವೇಳೆ ದಾಂಪತ್ಯಸಾಮ್ರಾಜ್ಯದಲ್ಲಿ ಎಡವಿ ಮುಗ್ಗರಿಸಿ ದ್ದಾರೆ. ಸತ್ಯಾಂಶವನ್ನು ಸ್ವಾರ್ಥಸಾಧನೆಗೆ ಸೂರೆಮಾಡಿದ್ದಾರೆ. ಸೌಮ್ಯವನ್ನು ವೈಷಮ್ಯದಲ್ಲಿ ಮುಳುಗಿಸಿದ್ದಾರೆ. ಸರಿಯಾದ ವಯಸ್ಸಿನಲ್ಲಿ ಯೋಗ್ಯನಾದ ವರನಿಗೆ ಕೊಟ್ಟು ವಿವಾಹ ಮಾಡುವುದಕ್ಕೆ ಬದಲಾಗಿ ಸಮಯೋಚಿತ ನಡೆಯು ವುದು ಉತ್ತಮವೆಂದು ವಾದಿಸಿ ಮೋಸಹೋಗಿದ್ದಾರೆ. ಇಂದು ಸತ್ಯಾಶ್ರಯನ ಪರಿ ಹಾಗಿತ್ತು. ಆತನು ಲಲಿತಪ್ರಭೆಯನ್ನು ಕುರಿತು—"ಮಗು, ನಿನ್ನ ಮುದ್ದುಮಾತಿಗಾಗಿ ನಾನು ಮೆಚ್ಚಿದೆ. ನಿನಗೆ ತಂದೆಯಲ್ಲಿರುವ ವಾತ್ಸಲ್ಯಕ್ಕೆ ಎಣೆಯಿಲ್ಲ. ಆದರೆ, ವೀರಧವಳನ ಮೇಲಣ ಅನುರಾಗವನ್ನು ಬಿಡು. ಅಜಿಂಕ್ಯ ದುರ್ಗದ ಚಂಡವರ್ಮರಿಗೆ ನಿನ್ನನ್ನು ಕೊಟ್ಟು ವಿವಾಹ ಮಾಡ ಬೇಕೆಂದು ಯೋಚಿಸಿದ್ದೇನೆ." ಎಂದು ನುಡಿದು ಮಗಳ ಮುಖವನ್ನು ನೋಡಿದನು.

ಲಲಿತಪ್ರಭೆಯ ಕಣ್ಣುಮುಂದೆ ಕತ್ತಲು ಕವಿದಂತಾಯಿತು. ತನ್ನ ತಂದೆಗೆ ಚಂಡವರ್ಮನ ಮೇಲೆ ಇಷ್ಟು ಅಭಿಮಾನವಿದೆಯೆಂದು ಆಕೆಗೆ ಗೊತ್ತಿರಲಿಲ್ಲ. ಲಲಿತಪ್ರಭೆ ಗದ್ಗದ ಕಂಠದಿಂದ "ಅಪ್ಪಾ, ವೀರಧವಳನನ್ನು

ನಾನು ಪ್ರೀತಿಸುತ್ತೇನೆಂಬ ಒಂದು ತಪ್ಪಿಗಾಗಿ ಚಂಡವರ್ಮನಿಗೆ ನನ್ನನ್ನು ಕೊಡಬೇಕೆಂದಿರುವಿರಾ!" ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

"ಮಗು, ತಪ್ಪಿಗಾಗಿ ಇದೊಂದು ಶಿಕ್ಷೆಯಲ್ಲ. ಚಂಡವರ್ಮ ನಮಗೆ ಕಷ್ಟದಲ್ಲಿ ಸಹಾಯ ಮಾಡಿದ್ದಾನೆ. ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕಾದುದು ಧರ್ಮ. ಅಲ್ಲದೆ ಚಂಡವರ್ಮ ಸತ್ಕುಲಪ್ರಸೂತನು. ಅಜಿಂಕ್ಯ ದುರ್ಗಕ್ಕೆ ಬರುವುದಕ್ಕೆ ಮುಂದಾಗಿಯೇ ನಿನ್ನ ವಿವಾಹ ಬಾಂಧವ್ಯವನ್ನು ಕುರಿತು ಆತನು ಪ್ರಸ್ತಾವಿಸಿದ್ದನು."

"ತಾವು ಏನು ಹೇಳಿದ್ದಿರಿ ಆಗ?"

"ದುರ್ಗಕ್ಕೆ ಹೋದಮೇಲೆ ಆ ವಿಚಾರವೆಂದು ಹೇಳಿದ್ದೆನು."

ಚಂಡವರ್ಮನ ಸ್ವಾರ್ಥಸಾಧನೆಯ ಒಳಸಂಚು ಲಲಿತಪ್ರಭೆಗೆ ವ್ಯಕ್ತವಾಯಿತು. ಆದರೆ, ತಂದೆಗೆ ಗೊತ್ತಿಲ್ಲದುದುಂಟೆ! ಗೊತ್ತಿಲ್ಲದಿದ್ದರೂ ಹಿರಿಯರಿಗೆ ಬುದ್ಧಿ ಹೇಳುವುದು ಕಿರಿಯರ ಕೆಲಸವಲ್ಲ; ಅಥವಾ ಚಂಡವರ್ಮನಲ್ಲಿ ದೋಷವಿದೆಯೆಂದು ಹೇಳಿದರೆ ಅದು ವೀರಧವಳನ ಮೇಲಣ ಅಭಿಮಾನದ ಪರಿಣಾಮವೆಂದು ಪರಿಗಣಿಸಬಹುದು. ಲಲಿತಪ್ರಭೆಗೆ ದಿಕ್ಕುತೋಚಲಿಲ್ಲ. ಸುಮ್ಮನೆ ನಿಂತಳು ಸ್ತಬ್ಧಳಾಗಿ! ಮಗಳ ಪರಿಸ್ಥಿತಿಯನ್ನು ನೋಡಿ ಸತ್ಯಾಶ್ರಯನಿಗೆ ಮರುಕ ಹುಟ್ಟಿತು. ಆದರೆ ಆಡಿದ ಮಾತಿಗೆ ತಪ್ಪುವುದು ಸತ್ಯಾಶ್ರಯನಂಥ ರಣಧೀರನಿಗೆ ಉಚಿತವೆಂದು ತೋರಲಿಲ್ಲ. ಕೊನೆಗೆ ಲಲಿತಪ್ರಭೆಯನ್ನು ಬಳಿಗೆ ಕರೆದು ಮೈದಡವಿ "ಮಗು, ನಿನ್ನ ಸುಖಕ್ಕಾಗಿಯೇ ನಾನು ಚಂಡವರ್ಮನಿಗೆ ನಿನ್ನನ್ನು ಕೊಡಬೇಕೆಂದು ಯೋಚಿಸಬೇಕಾಯಿತು. ಅಜಿಂಕ್ಯದುರ್ಗದ ರಾಣಿಯಾಗುವ ಯೋಗ ನಿನ್ನದು. ಚಿಂತಿಸಬೇಡ. ಈ ವೃದ್ಧ ತಂದೆಯ ಮಾತನ್ನು ಕೇಳು." ಎಂದನು.

ಸತ್ಯಾಶ್ರಯನು ಆಡಿದ ಕೊನೆಯ ವಾಕ್ಯ ಲಲಿತಪ್ರಭೆಯ ಮನವನ್ನು ಕರಗಿಸಿತು. "ಈ ವೃದ್ಧ ತಂದೆಯ ಮಾತನ್ನು ಕೇಳು"—ಅದೀಗ ಕಿರಿಯರ ಕರ್ತವ್ಯ. ಕೇಳದಿದ್ದರೆ ಕರ್ತವ್ಯಲೋಪ! ಲಲಿತಪ್ರಭೆಯಂಥ

ವಿನಯಸಂಪನ್ನೆ ಕರ್ತವ್ಯವನ್ನು ಬಿಟ್ಟು ನಡೆಯಲಾರಳು. ಕರ್ತವ್ಯಕರ್ಮವೇ ವಿಧಿನಿಯಮ ವಿಧಿನಿಯಮವೇ ಕರ್ತವ್ಯಕರ್ಮ. ಎಲ್ಲ ನಿಯಮಗಳಿಗಿಂತಲೂ ವಿಧಿನಿಯಮ ಉನ್ನತ. ಎಲ್ಲ ಕರ್ಮಗಳಿಗಿಂತಲೂ ಕರ್ತವ್ಯಕರ್ಮ ಉನ್ನತ. ವಿಧಿಯಾದರೂ ಕರ್ತವ್ಯಕರ್ಮವನ್ನು ಬಿಟ್ಟು ನಡೆಯಲಾರನು. ಯಾವಕಾಲಕ್ಕೆ ಯಾವುದು ಕರ್ತವ್ಯವೋ ಅದನ್ನು ಮಾಡುವುದು ಲೇಸು. ಲಲಿತಪ್ರಭೆ ವೃದ್ಧತಂದೆಯ ಮಾತನ್ನು ಕೇಳಬೇಕಾದುದು ಕರ್ತವ್ಯವೆಂದು ಬಗೆದು "ತಂದೆ, ತಮ್ಮ ಇಷ್ಟವಿದ್ದಂತಾಗಲಿ." ಎಂದು ತಿಳಿಸಿಬಿಟ್ಟಳು.

ಲಲಿತಪ್ರಭೆ ಒಪ್ಪಿದಳೆಂದು ತಿಳಿದು ತನ್ನ ಮನಸ್ಸಿನ ಒಂದು ಹೊರೆ ಇಳಿದಂತಾಯಿತು ಸತ್ಯಾಶ್ರಯನಿಗೆ. ಹೊರೆ ಇಳಿಯಿತೋ ಅಥವಾ ಹೊರೆ ಹೆಚ್ಚಿತೋ ಹೇಳುವವರಾರು! ಅಂತು, ಸತ್ಯಾಶ್ರಯನು ಮಗಳನ್ನು ಮನೆಗೆ ಕಳುಹಿಸಿದನು ಮನಮೆಚ್ಚಿ!

ವೀರಧವಳನನ್ನು ಕರೆಯಿಸಿ ದಂಡಿಸಬೇಕೇ ದಂಡಿಸಬೇಡವೇ ಎಂಬ ವಿಚಾರವನ್ನು ಯೋಚಿಸುತ್ತ ಕುಳಿತನು ಸತ್ಯಾಶ್ರಯ. ಬೇಡವೆನಿಸಿತು ಆತನಿಗೆ. ಲಲಿತಪ್ರಭೆಯನ್ನು ಚಂಡವರ್ಮನಿಗೆ ಲಗ್ನಮಾಡಿಕೊಡುವೆನೆಂದು ಸತ್ಯಾಶ್ರಯನು ವೀರಧವಳನಿಗೆ ತಿಳಿಸಬೇಕಾದ ಅಗತ್ಯವೇನಿದೆ? ವೀರಧವಳ ನಿರ್ಗತಿಕನಲ್ಲವೇ? ಒಂದುವೇಳೆ ತಿಳಿಸಿದರೆ ಪ್ರಮಾದವಾದೀತೆಂಬ ಭಯ! ಪ್ರೇಮಕ್ಕೆ ಭಂಗವುಂಟಾದರೆ ಆತ್ಮಹತ್ಯ ಇಲ್ಲವೇ ಬದ್ಧದ್ವೇಷ ಇವೆರಡೇ ದಾರಿಯೆಂದು ಮೂರ್ಖರು ಭಾವಿಸುತ್ತಾರೆ. ಆದರೆ, ಯೋಗ್ಯವಾದ ದಾರಿಯೂ ಇದೆ. ಆತ್ಮಸುಖತ್ಯಾಗವೇ ಅದು. ತ್ಯಾಗಶೀಲನಾದ ವೀರಧವಳನು ಆತ್ಮಹತ್ಯವನ್ನಾಗಲಿ ಬದ್ಧದ್ವೇಷವನ್ನಾಗಲಿ ಎಸಗಿಯಾನೆ! ಸತ್ಯಾಶ್ರಯನ ಆತ್ಮಗೌರವಕ್ಕಾಗಿ ತನ್ನ ಆತ್ಮಸುಖತ್ಯಾಗಮಾಡಿ ಚಂಡವರ್ಮನ ಕುಯುಕ್ತಿಯಿಂದ ಸಮಸ್ತರನ್ನೂ ಪಾರುಗಾಣಿಸುತ್ತಿದ್ದನೋ ಏನೊ! ಅಂತು, ಸತ್ಯಾಶ್ರಯನು ವೀರಧವಳನೊಡನೆ ಲಲಿತಪ್ರಭೆ—ಚಂಡವರ್ಮರ ವಿವಾಹಪ್ರಸಂಗವನ್ನು ಚರ್ಚಿಸುವುದು ತರವಲ್ಲವೆಂದು ಭಾವಿಸಿದನು. ಚಂಡವರ್ಮನ ಉಂಡಋಣವಿರುವವರೆಗೆ ವೀರಧವಳನ ಕಂಡಋಣಕ್ಕೆ ಬೆಲೆ ಎಲ್ಲಿಯದು!

ವೀರಧವಳನ ಪರಿಸ್ಥಿತಿಯಾದರೂ ವಿಚಿತ್ರವಾಗಿದ್ದಿತು. ವನದಿಂದ ಹಿಂತಿರುಗುವಾಗ ಚಂದ್ರಸೇನನು ತನ್ನೊಡನೆ ಮಾತನಾಡಲಿಲ್ಲ. ತನ್ನ ತಂದೆಯನ್ನು ನೋಡಲು ಹೋದವನು ಮತ್ತೆ ಮಾತಿಗಾದರೂ ಬರಲಿಲ್ಲ. ವೃದ್ಧ ವನಚರಿ ಆಡಿದ "ಜೊತೆಗಾರಿಕೆ"ಯ ಜೊಳ್ಳುನುಡಿಗಳಿಗಾಗಿ ಆತನಿಗೆ ಬೇಸರವಾಗಿರುವುದೇ? ಲಲಿತಪ್ರಭೆಗೂ ನನಗೂ ವಿವಾಹಬಾಂಧವ್ಯ ಸಲ್ಲತಕ್ಕುದಲ್ಲವೆಂದು ಆತನು ಬಗೆದನೇ?—ಇರಬಹುದು. ನಾನೊಬ್ಬ ಅನಾಥನೆಂದು ಆತನಿಗೆ ತಾತ್ಸಾರವಾಗಬಹುದು." ಹೀಗೆಂದು ವೀರಧವಳನು ಯೋಚಿಸುತ್ತ ಚಂದ್ರಸೇನನ ಆಗಮನವನ್ನು ನಿರೀಕ್ಷಿಸುತ್ತ ಕುಳಿತನು. ಚಂದ್ರಸೇನನಾಗಲಿ, ಚಂದ್ರಸೇನನೊಡನೆ ಲಲಿತಪ್ರಭೆಯಾಗಲಿ ಯಾರೂ ತನ್ನ ವಸತಿಗೆ ಬರಲಿಲ್ಲ. ಏನೋ ಪ್ರಮಾದ ನಡೆದಿದೆಯೆಂದು ಆತನಿಗೆ ವ್ಯಕ್ತವಾಯಿತು. "ಯಾರ ಸುಖಕ್ಕೆ ಯಾರು ಹೊಣೆ" ಎಂದು ನಿರ್ಧರಿಸಿ ಎದ್ದು ಶಯನಗೃಹಕ್ಕೆ ತೆರಳಿದನು.

# ೯. ಪ್ರಾಯಶ್ಚಿತ್ತ

## ನಡುರಾತ್ರಿಯಲ್ಲಿ ನಿತ್ಯರೋದನ

ಅಜಿಂಕ್ಯದುರ್ಗದಲ್ಲಿ ನಗಾರಿಯ ಶಬ್ದ ರಾತ್ರಿ ಹನ್ನೆರಡುಗಂಟೆಯಾಯಿತೆಂಬ ಸೂಚನೆ ಕೊಟ್ಟಿತು. ವಾಡಿಕೆಯಂತೆ ಕಾವಲುಗಾರರು ತಮ್ಮತಮ್ಮ ಸರದಿಯ ಗಡಿಯಲ್ಲಿ ನಿಂತರು. ದುರ್ಗದ ಪ್ರಜೆಗಳು ನಿದ್ರಾಪರವಶವಾಗಿರುವ ಕಾಲ. ಎಲ್ಲೆಲ್ಲಿಯೂ ನಿಶಾಕಾಂತೆ ನಿಶ್ಶಬ್ದವನ್ನು ಅಪ್ಪಿ ಮೈಮರೆತಿದ್ದಳು. ದುರ್ಗದ ದಕ್ಷಿಣಾಗ್ರದಲ್ಲಿ ಮಧುವನವು ಸರದಾರ ವಂಶಸ್ಥರ ಸಮಾಧಿಗಳಿಂದಲೂ ನಿಬಿಡ ಲತಾಕುಂಜಗಳಿಂದಲೂ ಭಯಂಕರವಾಗಿತ್ತು. ಮಧುವನದ ನಡುವೆ ಶ್ರೀಮನ್ನಾರಾಯಣ ದೇವಾಲಯದಲ್ಲಿ ನಂದಾದೀವಿಗೆಯು ಮಾತ್ರ ಆ ಕಗ್ಗತ್ತಲೆಯ ಭೀಕರತೆಯನ್ನು ಭೇದಿಸಿತ್ತು. ದೇವರ ಸನ್ನಿಧಿಯಲ್ಲಿ ಶಾಂತಿಯನ್ನು ಕಾಣಬಯಸುವವರಿಗೆ ಅದು ಸರಿಯಾದ ಕಾಲ. ಶ್ರೀಮನ್ನಾರಾಯಣ ದೇವಾಲಯದಲ್ಲಿ ಶಾಂತಿಯನ್ನು ಬೇಡಲು ಮಧ್ಯರಾತ್ರಿಯಲ್ಲಿ ಬರುವುದಾದರೂ ಸಾಮಾನ್ಯವಲ್ಲ.

ಇದ್ದಕ್ಕಿದ್ದಹಾಗೆ ನಂದಾದೀವಿಗೆಯ ಸಮೀಪದಲ್ಲಿ ಮೊಳಕಾಲೂರಿ ಕುಳಿತುಕೊಂಡಿತು ಒಂದು ವ್ಯಕ್ತಿ! ಆ ವ್ಯಕ್ತಿಯು ಯಾರೆಂಬುದನ್ನು ತಿಳಿಯಲು ಸಾಧ್ಯವಾಗುವಂತಿರಲಿಲ್ಲ ಷಷ್ಟಿಪೂರ್ತಿಯಾದ ಒಬ್ಬ ಪುರುಷವ್ಯಕ್ತಿಯೆಂದು ತೋರಿತು. ಏಕೆಂದರೆ, ವಯಸ್ಸಿನಿಂದ ಶರೀರವು ಬಾಗಿತ್ತು. ಅತನ ಧ್ವನಿಯಲ್ಲಿ ಗಂಡಸಿನ ಮಂದಕಂಠ. ವ್ಯಕ್ತಿಯು ಮೈತುಂಬ ದುಪ್ಪಟಿಯನ್ನು ಹೊದ್ದುಕೊಂಡಿದ್ದರೂ ಮೊಳಕಾಲೂರಿ ಕುಳಿತಾದ ಸೊಂಟಕ್ಕೆ ಕಟ್ಟಿದ್ದ ಕತ್ತಿಯನ್ನು ಬಿಚ್ಚಿ ಪಕ್ಕದಲ್ಲಿ ಇಟ್ಟದು ಕಾಣಿಸಿತು. ಆ ಪುರುಷನು ಯಾರಾದರೇನು? ದೇವರ ಸನ್ನಿಧಿಯಲ್ಲಿ ಶಾಂತಿಯನ್ನು ಬೇಡಲು ಬಂದ ಅಸಾಮಾನ್ಯ ಪುರುಷನೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಆ ಪುರುಷನು ತನ್ನ ಎರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ದುಃಖದಿಂದ ಏನನ್ನೊ ಅಸ್ಪಷ್ಟವಾಗಿ ಬೇಡುತ್ತಿದ್ದನು. ಬಹಳಹೊತ್ತು ಆತನು ವಿಗ್ರಹದ ಹಾಗೆ ಸ್ತಬ್ಧನಾಗಿ ಕುಳಿತಿದ್ದನು. ತರುವಾಯ ಎದ್ದು ನಿಂತು ಬಿಕ್ಕಳಿಸುತ್ತ ತನ್ನ ಕೆನ್ನೆಗೆ ತಾನೇ ಹೊಡೆದುಕೊಂಡನು. ಕೊನೆಗೆ ದೇವರಿಗೆ ದೀರ್ಘದಂಡ ನಮಸ್ಕಾರಮಾಡಿ ಬಿಚ್ಚಿಟ್ಟ ಕತ್ತಿಯನ್ನು ಸೊಂಟಕ್ಕೆ ಬಿಗಿದು ದೇವಾಲಯದಿಂದ ದಕ್ಷಿಣ ದಿಡ್ಡಿ ಬಾಗಿಲಿಗೆ ಬಂದನು. ಬಾಗಿಲಿಗೆ ಬೀಗ ಹಾಕಿತ್ತು. ಕಾವಲುಗಾರರು ನಿದ್ರಾಲೋಕದಲ್ಲಿದ್ದರು. ಆ ಪುರುಷನು ತನ್ನಲ್ಲಿದ್ದ ಬೀಗದ ಕೈಯಿಂದ ದಿಡ್ಡಿಯ ಬಾಗಿಲನ್ನು ಸದ್ದಿಲ್ಲದಂತೆ ತೆಗೆದು ಮುಂದೆ ಹೊರಟನು.

ದಿಡ್ಡಿ ಬಾಗಿಲ ಎದುರಿಗೆ ವಿಶಾಲವಾದ ಮೈದಾನ. ಆ ಪುರುಷನು ಅತ್ತಿತ್ತ ನೋಡುತ್ತ ಎಚ್ಚರಿಕೆಯಿಂದ ಆ ಮೈದಾನವನ್ನು ದಾಟಿ ಕುರುಚು ಗಿಡಗಳ ಕಾಡನ್ನು ಹೊಕ್ಕನು. ನಕ್ಷತ್ರಗಳು ಈ ವಿಚಿತ್ರಪುರುಷನ ವಿಚಿತ್ರ ವರ್ತನೆಯನ್ನು ನೋಡುವಂತೆ ನಭದಲ್ಲಿ ಕಾಣಿಸುತ್ತಿದ್ದುವು. ಕಾಡಿನಲ್ಲಿ ಸ್ವಲ್ಪದೂರ ಹೋದ ಮೇಲೆ ಒಂದು ದೊಡ್ಡ ಸ್ಫಟಿಕಸ್ತಂಭ ಸಿಕ್ಕಿತು. ಅಣ್ಣ. ಕೀರ್ತಿವರ್ಮ ಅತ್ತಿಗೆ ವಸುಮತಿದೇವಿಯ ಜ್ಞಾಪಕಾರ್ಥವಾಗಿ ತಮ್ಮ ಚಂಡ ವರ್ಮ ಕಟ್ಟಿಸಿದ್ದ ಸ್ಫಟಿಕಸ್ತಂಭ! ಆ ಮನುಷ್ಯನು ಆ ಕಂಬದ ಮುಂದೆ ಮೊಳ ಕಾಲೂರಿ ಕುಳಿತು ಪ್ರಾರ್ಥನೆ ಸಲ್ಲಿಸಿದನು. ತರುವಾಯ ಗಟ್ಟಿಯಾಗಿ ಕಿರಿ ಚುತ್ತ ಸ್ವಲ್ಪಕಾಲ ಎದೆಯನ್ನು ಎರಡುಕೈಗಳಿಂದ ಬಡಿದುಕೊಂಡು ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಿದ್ದನು. ಕೊನೆಗೆ ಸ್ಫಟಿಕಸ್ತಂಭಕ್ಕೆ ಪ್ರದಕ್ಷಿಣೆ ಬಂದು ದೀರ್ಘದಂಡ ನಮಸ್ಕಾರಮಾಡಿ ದಕ್ಷಿಣ ದಿಡ್ಡಿ ಬಾಗಿಲಿನ ಮಾರ್ಗ ವಾಗಿ ದುರ್ಗವನ್ನು ಪ್ರವೇಶಿಸಿದನು.

ಅಜಿಂಕ್ಯ ದುರ್ಗದ ಅದ್ಭುತ ಕ್ರಿಯೆಗಳಲ್ಲಿ ನಡುರಾತ್ರಿಯಲ್ಲಿ ನಡೆಯು ತ್ತಿದ್ದ ಈ ನಿತ್ಯರೋದನವೂ ಒಂದು. ಕೀರ್ತಿವರ್ಮ ವಸುಮತಿಯರ ಕೊಲೆ ಯಾದಂದಿನಿಂದ ಬಂದ ಬಂಧನವಿದು! ಯಾರಿಗೆ ಬಂಧನವೆಂಬುದನ್ನಾಗಲಿ, ಏಕೆ ಬಂಧನವೆಂಬುದನ್ನಾಗಲಿ ಯಾರೂ ಅದುವರೆಗೆ ಅರಿಯರು. ಕೊಲೆ ಪಾತಕರ ದಾರಿ ಕೊಲೆಪಾತಕರಿಗೇ ಗೊತ್ತು! ಕಂಡುಹಿಡಿಯುವತನಕ ಕೊಲೆಪಾತಕರ ಪುಣ್ಯವೇ ಪುಣ್ಯ!

ವೀರಧವಳನಿಗೆ ರಾತ್ರಿ ನಿದ್ರೆ ಬರಲಿಲ್ಲ. ಮೊದಲೇ ನೊಂದಿದ್ದ ಮನಕ್ಕೆ ನೋವೇ ಕನಸಾಗಿ ರಾತ್ರಿ ಕಳೆಯಿತು. ಸತ್ಯಾಶ್ರಯನು ತನ್ನನ್ನು ಕರೆಸಿ ಧಿಕ್ಕರಿಸಿದ ಹಾಗೂ, ಲಲಿತಪ್ರಭೆ ತಂದೆಯ ವರ್ತನೆಯನ್ನು ಕಂಡು ಬಿಕ್ಕಿಬಿಕ್ಕಿ ಅಳುತ್ತಿದ್ದ ಹಾಗೂ, ಚಂಡವರ್ಮನು ತನ್ನ ಕಡೆ ಕೈತೋರಿಸಿ ಅಪಹಾಸ್ಯ ಮಾಡಿದ ಹಾಗೂ, ಚಂದ್ರಸೇನನು ತನ್ನೊಡನೆ ಮಾತನಾಡದೆ ಮೌನವ್ರತ ವನ್ನು ಅವಲಂಬಿಸಿದ ಹಾಗೂ ಕನಸಿನಲ್ಲಿ ಕಂಡನು ವೀರಧವಳ. ಪ್ರಾತಃ ಕಾಲ ಎದ್ದು ತನ್ನ ಕನಸಿನ ಪರಿಯನ್ನು ನೆನೆದು ಚಿಂತಿಸಿದನು. ಆದರೆ ಅನ್ನ ದಾತ ಸತ್ಯಾಶ್ರಯನಿಗೆ ತನ್ನಲ್ಲಿರುವ ನಂಬಿಕೆಯನ್ನು ಮರೆಯಲಿಲ್ಲ. ಆತನಿಗೆ ನೋವುಂಟಾಗುವ ಕೃತ್ಯ ತನಗೆ ಬೇಡವೆಂದು ನಿರ್ಧರಿಸಿದನು.

## ೧೦. ಒಡಕು

### ಇಲ್ಲ; ಆಕೆಗೆ ಪೂರ್ಣ ಸಮ್ಮತಿ ಇದೆ!

ಅಜಿಂಕ್ಯ ದುರ್ಗದಲ್ಲಿ ಬೆಳಕು ಹರಿಯಿತು. ಹಕ್ಕಿಗಳು ಸುಪ್ರಭಾತವನ್ನು ಚಿಲಿಪಿಲಿಗುಟ್ಟುತ್ತ ಆದರಿಸಿದುವು. ಆದರೆ, ಆ ದಿನ ಎಲ್ಲರಿಗೂ ಸುಪ್ರಭಾತವಾಗಿರಲಿಲ್ಲ. ಸತ್ಯಾಶ್ರಯನ ಸವಿಸಂಸಾರದಲ್ಲಿ ಕಹಿ ಸೇರುವ ದಿನ ಎಲ್ಲರಿಗೂ ಸುಪ್ರಭಾತವಾಗಲಾರದಲ್ಲವೇ? ಚಂಡವರ್ಮನ ಅನುಸಂಧಾನ ಫಲಿಸಬೇಕಾದ ದಿನ ಎಲ್ಲರಿಗೂ ಸುಪ್ರಭಾತವಾಗಲಾರದಲ್ಲವೇ? ಅಂತು ಅಜಿಂಕ್ಯ ದುರ್ಗದಲ್ಲಿ ಬೆಳಕು ಹರಿಯಿತು. ಆದರೆ, ರಾಜಮಹೇಂದ್ರದ ಕಡೆಯಿಂದ ಕತ್ತಲು ಕವಿಯಿತು. ಬೆಳಕು ಕತ್ತಲುಗಳು ಒಂದು ಕಡೆ ಸೇರುವುದಿಲ್ಲವೆಂಬುದು ಪ್ರಕೃತಿ ನಿಯಮ. ಆದರೆ, ಮನುಷ್ಯನಿಯಮ ಎಷ್ಟೋ ವೇಳೆ ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿರುತ್ತದೆ. ಮಾನವನ ಕುಂದುಕೊರತೆಗಳಿಗೆ ಇದೇ ಕಾರಣ. ಪ್ರಕೃತಿ ನಿಯಮಭಂಗ! ಸತ್ಯಾಶ್ರಯನ ಬಾಳಿನ ಬೆಳಕಿನಲ್ಲಿ ಚಂಡವರ್ಮನ ಕುತಂತ್ರದ ಕತ್ತಲು ಕವಿಯಿತೆಂದ ಮೇಲೆ ಇನ್ನೇನಿದೆ! ನಿಗ್ರಹ ಅನುಗ್ರಹಗಳ ತೀಟವೇ ಗತಿ!

"ತಂದೆ, ತಮ್ಮ ಇಷ್ಟವಿದ್ದಂತಾಗಲಿ" ಎಂದಳು ಮಗಳು! ಮಗಳನ್ನು ಮನೆಗೆ ಕಳುಹಿಸಿದನು ಮನಮೆಚ್ಚಿ ತಂದೆ! ಅಷ್ಟೇ ಅಲ್ಲ. ಚಂಡವರ್ಮನಿಗೆ ಲಗ್ನ ನಿಶ್ಚಿತಾರ್ಥವನ್ನು ಮರುದಿನವೇ ಮುಗಿಸಬೇಕೆಂದು ಬಗೆದನು ಸತ್ಯಾಶ್ರಯ! ಚಂಡವರ್ಮನು ಅಜಿಂಕ್ಯ ದುರ್ಗವನ್ನು ಬಿಟ್ಟು ರಾಜಮಹೇಂದ್ರದಲ್ಲಿರುವುದು ವಾಚಕರಿಗೆ ಗೊತ್ತಿದೆ. ರಾಜನು ರಾಜಧಾನಿಯನ್ನು ಬಿಟ್ಟು ನೆರೆಯೂರಿನಲ್ಲಿ ಮೆರೆಯುವುದಾದರೂ ವಿಚಿತ್ರವೇ ಸರಿ. ಲಲಿತಪ್ರಭೆಯನ್ನು ಮುದ್ದಿಸಿ ಮನೆಗೆ ಕಳುಹಿಸಿದ ಮೇಲೆ ಸತ್ಯಾಶ್ರಯನು ವೃದ್ಧ ರಣರಾಗನನ್ನು ಕರೆದು, ಚಂಡವರ್ಮ ಮಹಾರಾಜರನ್ನು ರಾಜಮಹೇಂದ್ರದಿಂದ ಅಜಿಂಕ್ಯ ದುರ್ಗಕ್ಕೆ ಬರಮಾಡುವಂತೆ ಸೂಚಿಸಿದನು. ಸ್ವಾಮಿಭಕ್ತನಾದ

ರಣರಾಗನಿಗೆ ತನ್ನ ಸ್ವಾಮಿಯನ್ನು ಬರಮಾಡುವ ಮಹತ್ಕಾರ್ಯಕ್ಕಿಂತ ಮಿಗಿಲಾದುದು ಯಾವುದೂ ಇರಲಿಲ್ಲ !

ಅಜಿಂಕ್ಯ ದುರ್ಗದಲ್ಲಿ ಬೆಳಕು ಹರಿಯಿತು. ಚಂಡವರ್ಮ ಮಹಾರಾಜರು ದುರ್ಗಕ್ಕೆ ಅಶ್ವಾರೂಢರಾಗಿ ಬರುತ್ತಿರುವ ಸುದ್ದಿ ಸರದಾರ್ ಸತ್ಯಾಶ್ರಯನ ಕಿವಿಗೆ ಬಿತ್ತು. ಕೂಡಲೇ ಚಂದ್ರಸೇನ ಮತ್ತು ಕೆಲವು ಅನುಚರರೊಡನೆ ಚಂಡವರ್ಮನನ್ನು ಎದುರುಗೊಳ್ಳಲು ಹೊರಟನು ಸತ್ಯಾಶ್ರಯ ! ದುರ್ಗದ ಮಹಾದ್ವಾರದಲ್ಲಿ ಭೇಟಿ ಮಾಡುವುದಕ್ಕೆ ಬದಲಾಗಿ ದುರ್ಗಕ್ಕೆ ಹತ್ತು ಮೈಲಿ ದೂರದಲ್ಲಿ ಆಯಿತು ಇಬ್ಬರು ಸರದಾರರ ಭೇಟಿ ! ಭೇಟಿಯ ದೂರ ಹೆಚ್ಚಾದರೆ ಮರ್ಯಾದೆಯ ತೂಕವೂ ಹೆಚ್ಚುವುದೆಂಬುದು ಕೆಲವರ ಅಭಿಪ್ರಾಯ. ಆದರೆ, ದುಷ್ಟರನ್ನು ದೂರದಲ್ಲಿ ಕಾಣಬೇಕೆಂಬುದೂ ಒಂದು ಅಭಿಪ್ರಾಯ. ಅಭಿಪ್ರಾಯವೇನೇ ಇರಲಿ ; ಸತ್ಯಾಶ್ರಯನು ಚಂಡವರ್ಮನನ್ನು ದುರ್ಗಕ್ಕೆ ಹತ್ತು ಮೈಲಿ ದೂರದಲ್ಲಿಯೇ ಕಂಡು ಸ್ವಾಗತಿಸಿದನು. ತನ್ನನ್ನು ಸ್ವಾಗತಿಸಲು ಬಂದಿದ್ದ ಮಹನೀಯರಲ್ಲಿ ವೀರಧವಳನು ಇಲ್ಲದುದನ್ನು ಚಂಡವರ್ಮನು ಗಮನಿಸದೆ ಇರಲಿಲ್ಲ. ಅದರಂತೆ ತನ್ನನ್ನು ಸ್ವಾಗತಿಸಲು ಬಂದಿರುವ ಸುಸಮಯದಲ್ಲಿ ಚಂಡವರ್ಮನ ಮುಖ ಕಾಂತಿಹೀನವಾಗಿದ್ದುದನ್ನು ಸತ್ಯಾಶ್ರಯನೂ ಗಮನಿಸದೆ ಇರಲಿಲ್ಲ. ಇದಕ್ಕೆ ಕಾರಣವನ್ನು ಪರಸ್ಪರ ಕೇಳಿ ತಿಳಿಯಲು ಅದು ಸಮಯವಾಗಿರಲಿಲ್ಲ. ಏಕೆಂದರೆ, ಆನಂದದ ಆಗರದಲ್ಲಿ ಅನಿಷ್ಟವನ್ನು ಆಡಬಾರದು.

ಸತ್ಯಾಶ್ರಯನೂ, ಚಂಡವರ್ಮನೂ ಕುಶಲಪ್ರಶ್ನೆಗಳ ಸವಿಹಾಣಿಯಲ್ಲಿ ದುರ್ಗದ ಕಡೆಗೆ ಹೊರಟರು. ಇಷ್ಟರಲ್ಲಿ ಚಂಡವರ್ಮನ ಕುದುರೆ ಬೆದರಿ ಕಿವಿಗಳನ್ನು ನೆಟ್ಟಗೆ ಮಾಡಿಕೊಂಡು ಸುತ್ತುಮುತ್ತ ಸೆಳೆಯಲಾರಂಭಿಸಿತು. ಇದೇನೆಂದು ಎಲ್ಲರೂ ಬೆರಗಾಗಿ ನೋಡುತ್ತಿದ್ದರು. ಆಗ ಒಂದು ಪೊದೆಯಿಂದ ಈಚೆಗೆ ಹೊರಟಳು ವೃದ್ಧ ವನಚರಿ. ಸರದಾರ ಪರಿವಾರಕ್ಕೆ ಸ್ವಲ್ಪ ದೂರ ನಿಂತಳು. ಆಕೆಯ ವಿಕಾರ ಸ್ವರೂಪವನ್ನು ನೋಡಿ ಚಂಡವರ್ಮನ ಕುದುರೆ ಮತ್ತಷ್ಟು ಗಾಬರಿಗೊಂಡಿತು. ಚಂಡವರ್ಮನು ಕೆಳಗೆ ಬಿದ್ದನು. ಚಂದ್ರಸೇನನು ವನಚರಿಯನ್ನು ಕಂಡು ಕೋಪದಿಂದ—“ ಹೇ ಚಂಡಾಲಿ, ನಿನ್ನಿಂದ

ಸರದಾರ ಚಂಡವರ್ಮನಿಗೆ ಅಪಘಾತವಾಯಿತು" ಎಂದು ಗದರುತ್ತ ಹೊಡೆಯಲು ಹೋದನು. ಆ ವನಚರಿ "ಚಂಡವರ್ಮ" ಎಂಬ ಶಬ್ದ ಕಿವಿಗೆ ಬಿದ್ದ ಕೂಡಲೇ ಅಬ್ಬರಿಸಿ "ಚಂಡವರ್ಮ! ಚಂಡವರ್ಮ!" ಚೀರಿಡುತ್ತ ಓಡಿ ಕಾಡಿನಲ್ಲಿ ಮರೆಯಾದಳು.

ಸರದಾರ ಚಂಡವರ್ಮನು ಮತ್ತೆ ಕುದುರೆಯನ್ನು ಹತ್ತಿದನು. ಬಿದ್ದಾಗ ಹೆಚ್ಚು ಗಾಯವೇನೂ ಆಗಿರಲಿಲ್ಲ. ಚಂಡವರ್ಮನ ಯೋಗ ಕ್ಷೇಮವನ್ನು ವಿಚಾರಿಸುತ್ತ ದುರ್ಗದ ಕಡೆ ಹೊರಟಿತು ಸರದಾರ ಪರಿವಾರ. ದುರ್ಗದ ದಿಡ್ಡಿಯ ಬಾಗಿಲನ್ನು ಸೇರಿದ ಕೂಡಲೇ ದುರ್ಗರಕ್ಷಕನಾದ ರಣರಾಗನು ತನ್ನ ಸ್ವಾಮಿಯನ್ನು ಎದಿರ್ಗೊಂಡು ವಿನಯದಿಂದ ನಮಸ್ಕರಿಸಿದನು. ಮಂಗಳ ವಾದ್ಯಗಳು ಮೊಳಗಿದುವು. ಎಲ್ಲರೂ ದುರ್ಗವನ್ನು ಪ್ರವೇಶಿಸಿದರು. ಚಂಡವರ್ಮನು ತನ್ನ ದುರ್ಗಕ್ಕೆ ತಾನೇ ಮೆರವಣಿಗೆಯಲ್ಲಿ ಮುಂದೆ ಹೊರಟನು. ಈ ಸಂಭ್ರಮದಲ್ಲಿ ಶಸ್ತ್ರಾಲಯದಿಂದ ದೊಡ್ಡ ಶಬ್ದವು ಎಲ್ಲರ ಮನವನ್ನೂ ಸೆಳೆಯಿತು. ಉಕ್ಕಿನ ಶಿರಸ್ತ್ರವೂ ಸರ್ವಾಂಗ ಕವಚವೂ ನೇತುಹಾಕಿದ್ದ ಗೂಟದಿಂದ ಜಾರಿ ಕೆಳಗೆ ಬಿದ್ದ ರಭಸವು ಮೆರವಣಿಗೆಯ ಸಂಭ್ರಮವನ್ನು ಮುಳುಗಿಸಿತು. ಎಲ್ಲರೂ ಭಯದಿಂದ ಒಬ್ಬರನೊಬ್ಬರು ನೋಡುತ್ತ ನಿಂತರು ಕೆಲಕಾಲ! ಚಂಡವರ್ಮನು ಸತ್ಯಾಶ್ರಯನೊಡನೆ ಮೆರವಣಿಗೆಯಲ್ಲಿ ಮುಂದೆ ಹೊರಟನು. ಉಕ್ಕಿನ ಶಿರಸ್ತ್ರ ಬಿದ್ದರೇನು? ಸರ್ವಾಂಗ ಕವಚ ಎದ್ದರೇನು? ಚಂಡವರ್ಮನಿಗೆ ಬೇಕಾಗಿದ್ದುದು ಲಲಿತಪ್ರಭೆಯ ಲಲಿತ ಹಸ್ತ!

ಇತ್ತ ವೀರಧವಳನ ಪರಿಸ್ಥಿತಿಯಂತೂ ಹೇಳಲು ಅಸದಳವಾಗಿತ್ತು. ಹಿಂದಿನ ರಾತ್ರಿ ಶಯನಗೃಹವನ್ನು ಹೊಕ್ಕವನು ಕನಸಿನ ರಾಜ್ಯದಲ್ಲಿ ಸುತ್ತಿ ಸುತ್ತಿ ಬೇಸತ್ತು ಬಳಲಿ ಬೆಳಕು ಹರಿದುದನ್ನು ಕಂಡು ಎದ್ದನಷ್ಟೆ ಚಂಡವರ್ಮನ ಆಗಮನ ಆತನಿಗೆ ಗೊತ್ತಿರಲಿಲ್ಲ. ವಿಜ್ಜಲನು ಎಂದಿನಂತೆ ವೀರಧವಳನನ್ನು ಕಂಡು—"ಪ್ರಭು, ನಿನ್ನೆ ರಾತ್ರಿ ತಮಗೆ ಊಟವನ್ನು ತಂದಿದ್ದೆನು. ತಾವು ನಿದ್ರೆಯಿಂದ ಮಲಗಿದ್ದಿರಿ. ತಮಗೆ ಈಗ ಹಸಿವೆಗಾಗಿ

ಏನಾದರೂ ಬೇಕೇ ? ” ಎಂದನು. ವೀರಧವಳನಿಗೆ ವಿಜ್ಜಲನ ಮಾತು ಅರ್ಥವಾಗಲಿಲ್ಲ.

“ ಏನಂದೆ, ವಿಜ್ಜಲ ? ನನಗೆ ಊಟ ಇಲ್ಲಿ ! ”

“ ಹೌದು ಪ್ರಭು. ಚಂದ್ರಸೇನನಿಗೆ ಆತನ ಮಹಲಿನಲ್ಲಿಯೇ ಊಟ. ತಮಗೆ ತಮ್ಮ ಮಹಲಿನಲ್ಲಿಯೇ ಊಟ. ಇದೀಗ ಸತ್ಯಾಶ್ರಯ ಮಹಾರಾಜರ ಅಪ್ಪಣೆ !

“ ಎಂದಿನಿಂದ ? ”

“ ನಿನ್ನೆಯಿಂದ ”

ವೀರಧವಳನಿಗೆ ಎಲ್ಲವೂ ಅರ್ಥವಾಯಿತು. ಆದರೆ, ತನ್ನ ಮನಸ್ಸಿನ ಅಳಲನ್ನಾಗಲಿ ಆಗ್ರಹವನ್ನಾಗಲಿ ತೋರಿಸಲಿಲ್ಲ. “ ಸರಿ, ವಿಜ್ಜಲ. ದುರ್ಗದಲ್ಲಿ ಈ ಪ್ರಾತಃಕಾಲ ಮಂಗಳವಾದ್ಯಗಳು ಮೊಳಗುತ್ತಿದ್ದ ಕಾರಣವೇನು ? ” ಎಂದು ಕೇಳಿದನು.

“ ಕಾರಣ ದೊಡ್ಡದಾಗಿದೆ, ಪ್ರಭು. ಚಂಡವರ್ಮ ಸರದಾರರು ಸತ್ಯಾಶ್ರಯ ಸರದಾರರ ಅಳಿಯಂದಿರಾಗುತ್ತಾರೆ. ಕಾರಣ ದೊಡ್ಡದಾಗಿದೆ ! ”.

ವೀರಧವಳನು ಈ ಮಾತನ್ನು ಕೇಳಿ ನಂಬದೆ—“ ಏನು, ನಿಜವಾಗಿಯೂ ಲಲಿತಪ್ರಭೆ ಚಂಡವರ್ಮನ ಕೈಹಿಡಿಯುವಳೇ ! ” ಎಂದು ಆತುರದಿಂದ ನುಡಿದನು.

“ ನಿಜವಾಗಿ ಪ್ರಭು ! ನಿಜವಾಗಿಯೇ ! ”

ವೀರಧವಳನು ಮರುಮಾತನ್ನಾಡಲಿಲ್ಲ. ವಿಜ್ಜಲನು ವೀರಧವಳನ ಮುಖವನ್ನೇ ನೋಡುತ್ತ ನಿಂತನು, “ ವಿಜ್ಜಲ, ಏಕೆ ಹೀಗೆ ನೋಡುತ್ತೀಯೆ?

ಸಂತೋಷಪಡಬೇಕಾದ ಸಮಯವಿದು. ಇರಲಿ, ಹೋಗು." ಎಂದು ಕಳುಹಿಸಿಕೊಟ್ಟನು. ವಿಜ್ಜಲನಿಗೆ ಬಹಳ ಆಶ್ಚರ್ಯವಾಯಿತು. ಲಲಿತ ಪ್ರಭೆಯ ಮಾತನ್ನು ಎತ್ತಿದಾಗ ವೀರಧವಳನು ಅಬ್ಬರಿಸಿ ಬೊಬ್ಬಿರಿಯುವ ನೆಂದು ತಿಳಿದಿದ್ದನು ವಿಜ್ಜಲ. ಆದರೆ ವೀರಪುರುಷನ ಲಕ್ಷಣವೇ ಬೇರೆ. ಫಲಾ ಪೇಕ್ಷೆಯಾಗಲಿ ಸ್ವಾರ್ಥಸಾಧನೆಯಾಗಲಿ ವೀರಪುರುಷರ ಲಕ್ಷಣವಲ್ಲ. ವೀರ ಧವಳನು ಎಲ್ಲವನ್ನೂ ತಾಳ್ಮೆಯಿಂದ ಸಹಿಸಿದನು. ವಿಜ್ಜಲನು ಮತ್ತೆ ಬರುವು ದಾಗಿ ಹೇಳಿ ನಮಸ್ಕರಿಸಿ ಹೊರಟನು.

ಸರದಾರ ಚಂಡವರ್ಮನು ಅಜಿಂಕ್ಯ ದುರ್ಗಕ್ಕೆ ಬಿಜಯಮಾಡಿರುವ ವರ್ತಮಾನ ಸಾಮಂತ ಸರದಾರರಿಗೆ ತಿಳಿಯಿತು. ರಾಜಮಹೇಂದ್ರ ನಗರ ವನ್ನೇ ನಿವಾಸ ಸ್ಥಳವನ್ನಾಗಿ ಮಾಡಿಕೊಂಡಿದ್ದ ಚಂಡವರ್ಮನು ಅಂದು ದುರ್ಗಕ್ಕೆ ಬಿಜಯ ಮಾಡಿರುವುದನ್ನು ಕೇಳಿ ಅವರೆಲ್ಲರೂ ನಜರು ಮಜರೆ ಗಳನ್ನು ಅರ್ಪಿಸಲು ಬಂದರು. ಸಾಯಂಕಾಲ ಅಜಿಂಕ್ಯ ದುರ್ಗದ ಚಂಡ ಮಹಲಿನಲ್ಲಿ ಒಡ್ಡೋಲಗ. ಸಾಮಂತರಾದ ಸರದಾರ ಮಾಂಡಲಿಕರು ಚಂಡವರ್ಮನನ್ನು ಕಂಡು ಗೌರವ ಸೂಚಿಸಿದರು. ಸರದಾರ ಸತ್ಯಾಶ್ರಯ ನನ್ನೂ ಕಂಡು ಮಾತನಾಡಿಸಿದರು. ದೇಶಭ್ರಷ್ಟನಾಗಿ ಅಜಿಂಕ್ಯ ದುರ್ಗಕ್ಕೆ ಬಂದ ಸತ್ಯಾಶ್ರಯನನ್ನು ಮಾತನಾಡಿಸುವುದೆಂದರೆ ಅವರಿಗೆ ಹೆದರಿಕೆ. ಒಂದಾನೊಂದು ಕಾಲದಲ್ಲಿ ಪೂರ್ವ ಚಾಳುಕ್ಯರಾಜ್ಯದ ಸಮರ್ಥ ಸರದಾರ ನಾಗಿ, ಸನ್ಮಂತ್ರಿಯಾಗಿ, ಸ್ವದೇಶ ರಕ್ಷಕನಾಗಿ ಮೆರೆದ ಸತ್ಯಾಶ್ರಯನು ದೇಶ ಭ್ರಷ್ಟನಾದರೆ ಸಾಮಂತ ಸರದಾರರಿಗೂ ಬೇಕಿಲ್ಲದ ಮನುಷ್ಯನಾಗಬೇಕಾಗು ತ್ತದೆ. ನವೀನ ಮಂತ್ರಿ ಮಂಡಲಕ್ಕೆ ವಿರೋಧವಾಗಿ ನಡೆದರೆ ತಮಗೆ ತೊಂದರೆಯಾದೀತೆಂದು ಹೆದರಿ ಸಾಮಂತ ಸರದಾರರು ಇಷ್ಟು ದಿನವಾದರೂ ಅಜಿಂಕ್ಯ ದುರ್ಗಕ್ಕೆ ಪ್ರತ್ಯೇಕವಾಗಿ ಬಂದು ಸತ್ಯಾಶ್ರಯನಿಗೆ ಗೌರವ ಸಲ್ಲಿಸಿರ ಲಿಲ್ಲ. ರಾಜನೀತಿಯ ಅಂತರಾರ್ಥವಾದರೂ ಅಷ್ಟೆ. ನೀತಿಗಾಗಿ ಒಬ್ಬ ರಾಜನನ್ನು ಬಿಡುವ ಜನರಿಗಿಂತ ಒಬ್ಬ ರಾಜನಿಗಾಗಿ ಒಂದು ನೀತಿಯನ್ನು ಬಿಡುವ ಜನರೇ ಅಧಿಕ. ಅಂತು, ಚಂಡವರ್ಮನನ್ನು ನೋಡಲು ಬಂದ ಸರದಾರರು ಸತ್ಯಾಶ್ರಯನನ್ನೂ ಕಂಡು ಮಾತನಾಡಿಸಿದರು. ವ್ಯವಹಾರ

ಚಾತುರ್ಯವೆಂದರೆ ಇದು. ಸಂಧಿ ವಿಗ್ರಹ! ಕಂಡೂಕಾಣದ ಕಪಟನಾಟಕ! ನಾಟಕ ಮುಗಿಯಿತು. ಸರದಾರರು ತಮ್ಮ ತಮ್ಮ ದುರ್ಗಗಳಿಗೆ ತೆರಳಿದರು.

ಆ ರಾತ್ರಿ ಸತ್ಯಾಶ್ರಯನು ಚಂಡವರ್ಮನ ಗೌರವಾರ್ಥವಾಗಿ ತನ್ನ ಮಹಲಿನಲ್ಲಿಯೇ ಔತಣ ಏರ್ಪಡಿಸಿದ್ದನು. ಭೋಜನ ಸಮಯದಲ್ಲಿ ಚಂಡ ವರ್ಮನನ್ನು ಬರಮಾಡಿಕೊಂಡಿರುವ ಉದ್ದೇಶವನ್ನು ಪ್ರಸ್ತಾಪಿಸಿದನು. ಲಲಿತ ಪ್ರಭೆಯೂ ಚಂದ್ರಸೇನನೂ ಸಮಪಂಙ್ತಿಯಲ್ಲಿ ಕುಳಿತು ಇವರಿಬ್ಬರ ಮಾತು ಗಳನ್ನೂ ಗಮನಿಸುತ್ತಿದ್ದರು. ವೀರಧವಳನನ್ನು ಕರೆಯಿಸಲಿಲ್ಲ. ಸತ್ಯಾ ಶ್ರಯನು ಲಲಿತಪ್ರಭೆಯನ್ನು ಹತ್ತಿರ ಕರೆದು "ಮಗು, ಚಂಡವರ್ಮ ಮಹಾ ರಾಜರು ಬಂದಿದ್ದಾರೆ. ನೀನು ಅನುಕೂಲಳಾದ ವಧು. ನನ್ನ ಇಚ್ಛೆ ಯಂತೆ ನಿನ್ನ ಸುಖಕ್ಕಾಗಿ ಚಂಡವರ್ಮ ಮಹಾರಾಜರ ಪತ್ನಿಯಾಗಿ ಬದುಕು." ಎಂದು ಆಶೀರ್ವದಿಸಿದನು. ಚಂಡವರ್ಮನು ಲಲಿತಪ್ರಭೆಯ ಮುಖವನ್ನೇ ಎವೆಯಿಕ್ಕದೆ ನೋಡುತ್ತಿದ್ದನು. ಲಲಿತಪ್ರಭೆಯ ಕಣ್ಣಿನ ನೀರು ಚಂಡ ವರ್ಮನ ಕಣ್ಣಿಗೆ ಬಿತ್ತು! ಕಣ್ಣೀರು ಬರಲು ಕಾರಣವೇನೆಂಬುದನ್ನು ಕೇಳು ವುದು ಹೇಗೆ? ಮದವಣಿಗನಿಗೆ ಮದುಮಗಳ ಕಣ್ಣೀರು ಕೆಲವು ವೇಳೆ ಪನ್ನೀ ರಿನಂತೆ ಕಾಣುತ್ತದೆ. ಅಂತು ಕಣ್ಣೀರನ್ನು ಪನ್ನೀರೆಂದು ಭಾವಿಸಿ ಸುಮ್ಮ ನಿದ್ದನು ಚಂಡವರ್ಮ. ಆದರೆ, ತನ್ನನ್ನು ವರಿಸಲು ನುಗ್ಗಿ ಬರುವಳೆಂದು ತಿಳಿದಿದ್ದ ಚಂಡವರ್ಮನಿಗೆ ಲಲಿತಪ್ರಭೆ ತಗ್ಗಿ ನಿಂತುದು ಸ್ವಲ್ಪ ಸಂಶಯಕ್ಕೆ ಎಡೆಗೊಟ್ಟಿತು. ಮುಂದೆ ವಿಚಾರಿಸೋಣವೆಂದು ಅಂದು ಕುಳಿತನು ಗಂಭೀರನಾಗಿ.

ಪೂರ್ವ ಪದ್ಧತಿಯ ಪ್ರಕಾರ ಸತ್ಯಾಶ್ರಯನು ಮುದ್ದುಮಗಳನ್ನು ಚಂಡ ವರ್ಮನಿಗೆ ಒಪ್ಪಿಸಿಕೊಟ್ಟುದಾಯಿತು. ನಿಶ್ಚಿತಾರ್ಥ ಮುಗಿಯಿತು. ಲಲಿತ ಪ್ರಭೆಯೂ ಚಂದ್ರಸೇನನೂ ತಮ್ಮ ಮಹಲುಗಳಿಗೆ ಹೋದರು. ಅವರು ಅತ್ತ ಹೋದ ಮೇಲೆ ಇತ್ತ ಚಂಡವರ್ಮನು ಸತ್ಯಾಶ್ರಯನಿಗೆ ತನ್ನ ಮನಸ್ಸಿನ ಬೇಗುದಿಯನ್ನು ತೋರಿಸಿದನು. ಲಲಿತಪ್ರಭೆಯ ಮುಖದಲ್ಲಿ ದುಃಖವಿರು ವುದಕ್ಕೂ, ಆಕೆಯ ನೇತ್ರದಲ್ಲಿ ಅಶ್ರುಜಲ ಕಂಡುಬಂದುದಕ್ಕೂ ಕಾರಣವೇ

ನೆಂದು ಕೇಳಿದನು. "ಅಜಿಂಕ್ಯ ದುರ್ಗದಲ್ಲಿ ಆಕೆಗೆ ತೊಂದರೆಯೋ? ಅಥವಾ ಆಕೆಗೆ ನನ್ನ ಮೇಲೆ ಅಭಿಮಾನವಿಲ್ಲವೋ?" ಎಂದು ವಿಚಾರಿಸಿದನು. ಸತ್ಯಾಶ್ರಯನು ಮಗಳ ದುಃಖಕ್ಕೆ ಕಾರಣವನ್ನು ಬಲ್ಲನು. ಆ ದುಃಖಪರಿಹಾರಕ್ಕಾಗಿಯೇ ಕೈಹಾಕಿದ ಪ್ರಸಂಗವಿದು. ವೀರಧವಳನ ಮೇಲಣ ವ್ಯಾಮೋಹಕ್ಕೆ ಶೀಘ್ರದಲ್ಲಿ ತಡೆಗಟ್ಟಬೇಕೆಂದು ಕೈಹಾಕಿದ ಪ್ರಸಂಗದಲ್ಲಿ ಕಾರಣವನ್ನು ತಿಳಿಸುವುದಾದರೂ ಹೇಗೆ? ಸತ್ಯಾಶ್ರಯನು ಬಹಳ ಆಳವಾಗಿ ದೀರ್ಘವಾಗಿ ಯೋಚಿಸಿ ಕೊನೆಗೆ—"ಸರದಾರರೇ, ತಾವು ಹಾಗೆ ಸಂಶಯ ಪಡಲು ಕಾರಣವಿಲ್ಲ. ಇಲ್ಲ; ಆಕೆಗೆ ಪೂರ್ಣ ಸಮ್ಮತಿ ಇದೆ ತಮ್ಮ ವಿಚಾರದಲ್ಲಿ. ಆದರೆ—"

"ಆದರೆ ಏನು? ಆಕೆಗೆ ವೀರಧವಳನ ಮೇಲೆ ಅಭಿಮಾನವಿರಬಹುದೆಂದು ತೋರುತ್ತದೆ." ಎಂದು ಕೇಳಿಬಿಟ್ಟನು ಚಂಡವರ್ಮ.

"ಇರಬಾರದು. ಒಂದುವೇಳೆ ಇದ್ದರೂ ತಮ್ಮಂಥ ಆಪ್ತರಿಗೆ ದ್ರೋಹ ಮಾಡಲಾದೀತೆ?"

"ಸರಿ ಗೊತ್ತಾಯಿತು. ಹಾಗಾದರೆ ಆದಷ್ಟು ಬೇಗ ವಿವಾಹ ನೆರವೇರಿಸುವುದು ಉಭಯತಾಪಿ ಉತ್ತಮವೆಂದು ತೋರುತ್ತದೆ."

"ತೋರುತ್ತದೆ ನಿಜ. ಆಗಬಹುದು."

ಹೀಗೆ, ಚಂಡವರ್ಮನೂ, ಸತ್ಯಾಶ್ರಯನೂ ತಮ್ಮತಮ್ಮಲ್ಲಿ ಒಡಂಬಡಿಕೆ ಮಾಡಿಕೊಂಡು ತಮ್ಮ ತಮ್ಮ ಶಯನಗೃಹಗಳಿಗೆ ತೆರಳಿದರು. ಈ ಸಮಾಗಮದಲ್ಲಿ ಗೆದ್ದವರು ಯಾರು? ಸೋತವರು ಯಾರು? ಅಂತು ಮುದ್ದು ಮಗಳ ಮದುವೆಗೆ ಹೀಗೆ ಮುಡಿಪು ಕಟ್ಟಿದನು ಸತ್ಯಾಶ್ರಯ!

## ೧೧. ಸಿಂಹಗುಹೆ

### ನಿನ್ನ ಉಪಕಾರವನ್ನು ನಾನು ಮರೆಯುವುದಿಲ್ಲ !

ಮತ್ತೆ ಬರುವೆನೆಂದು ಹೇಳಿಹೋದ ವಿಜ್ಜಲನು ಮಾರನೆಯ ದಿನ ಪ್ರಾತಃಕಾಲ ಬಂದು ವೀರಧವಳನನ್ನು ಕಂಡನು. ವೀರಧವಳನ ಮುಖ ವನ್ನು ನೋಡುತ್ತ ಗಾಬರಿಯಿಂದ—"ಪ್ರಭು, ರಾತ್ರಿ ನಿದ್ರೆಯಿಲ್ಲವೆ !" ಎಂದು ಕೇಳಿದನು. ವೀರಧವಳನಿಗೆ ನಿದ್ರೆಯ ಚಿಂತೆ ಇರಲಿಲ್ಲ. ಲಲಿತಪ್ರಭೆಗೆ ತನ್ನಿಂದ ತೊಂದರೆಯಾಯಿತೆಂಬ ಚಿಂತೆ ಆತನ ಹೃದಯವನ್ನು ಇರಿಯು ತ್ತಿತ್ತು. ಆದರೆ ಯಾರಿಂದ ಯಾರಿಗೆ ತೊಂದರೆಯೆಂಬುದನ್ನು ಯೋಚಿಸುತ್ತ ಕುಳಿತರೆ ಫಲವಿಲ್ಲ ಪ್ರೇಮ ಸಾಮ್ರಾಜ್ಯದಲ್ಲಿ ! ಅಂತು, **ತಪ್ಪು ತನ್ನದೆಂದು ಒಪ್ಪಿಕೊಳ್ಳುವುದು ಉತ್ತಮರ ಲಕ್ಷಣ.** ವೀರಧವಳನೂ ಸಹ ತಪ್ಪು ತನ್ನದೆಂದು ಸಮಾಧಾನ ತಂದುಕೊಂಡನು. ವಿಜ್ಜಲನು ಮಾತ್ರ ಅಷ್ಟಕ್ಕೇ ಸುಮ್ಮನಿರಲಿಲ್ಲ. "ಪ್ರಭು, ನೀವೊಬ್ಬರೇ ದುಃಖದಲ್ಲಿಲ್ಲ. ನಿಮ್ಮ ಹಾಗೆ ಈ ದುರ್ಗದಲ್ಲಿ ಇನ್ನೊಂದು ಪ್ರಾಣಿ ದುಃಖದಲ್ಲಿದೆ ! ತಾಯಿ ಲಲಿತಪ್ರಭೆಯೂ ಸಹ ನಿಮ್ಮ ಹಾಗೆ ದುಃಖದಲ್ಲಿ ಮುಳುಗಿದ್ದಾರೆ !" ಎಂದನು. ವಿಜ್ಜಲನ ಮಾತು ಮರ್ಮಭೇದಕವಾಗಿತ್ತು. ವೀರಧವಳನು ಆತನ ಮುಖವನ್ನು ನೋಡಿ— "ಏನಂದೆ ವಿಜ್ಜಲ ? ನನಗಾಗಿ ಲಲಿತಪ್ರಭೆಗೆ ದುಃಖವೇ !" ಎಂದನು.

"ಹೌದು ನಿಮಗಾಗಿ !"

"ಅದೇಕೆ ನನಗಾಗಿ ದುಃಖ, ವಿಜ್ಜಲ ?"

ವಿಜ್ಜಲನು ಸುಮ್ಮನಿರಲು ಸಾಧ್ಯವಾಗಲಿಲ್ಲ. ಹಿಂದಿನ ರಾತ್ರಿ ಭೋಜನ ಸಮಯದಲ್ಲಿ ಸತ್ಯಾಶ್ರಯನು ಲಲಿತಪ್ರಭೆಯನ್ನು ಪೂರ್ವ ಪದ್ಧತಿ ಪ್ರಕಾರ ಚಂಡವರ್ಮ ಸರದಾರರಿಗೆ ಒಪ್ಪಿಸಿದ ವಿಚಾರವನ್ನು ಚಾಚೂ ತಪ್ಪದೆ ಬಿತ್ತರಿ ಸಿದನು. ಕಣ್ಣೀರಿನ ಕಥೆಯನ್ನು ಕಣ್ಣೀರಿನಲ್ಲಿ ಕಾರಿದನು. ಆದರೆ, ವೀರ

ಧವಳನು ಕಣ್ಣೀರಿಡಲಿಲ್ಲ. ಲಲಿತಪ್ರಭೆ ತನ್ನನ್ನು ಪ್ರೀತಿಸುತ್ತಾಳೆಂಬುದು ಆತನಿಗೆ ಅರಿವಾಯಿತು. ಆತನು ವಿಜ್ಜಲನನ್ನು ಸಂತೈಸಿ—"ವಿಜ್ಜಲ, ನಾನು ಲಲಿತಪ್ರಭೆಯನ್ನು ಪ್ರೀತಿಸುವುದು ಸರಿಯೋ ತಪ್ಪೋ?" ಎಂದು ಕೇಳಿದನು.

" ಸರಿ ".

ವೀರಧವಳ — ವಿಜ್ಜಲ, ನೀನು ಹಾಗೆ ಹೇಳುವೆಯೆಂದು ನನಗೆ ಗೊತ್ತಿತ್ತು. ಆದರೆ, ನಾನೊಬ್ಬ ಅನಾಥ.

ವಿಜ್ಜಲ—ಅನಾಥ! ಎಲ್ಲಿಯ ಅನಾಥ! ಪ್ರಭು, ದೇವರಿಗೆ ನಿಮ್ಮ ಶುದ್ಧ ಪ್ರೇಮ ಗೊತ್ತಿದೆ. ನಿರಾಶರಾಗಬೇಡಿ. ದಿನದಿನಕ್ಕೂ ನೀವು ಊಟ ಕಡಮೆ ಮಾಡುತ್ತಿರುವಿರಿ. ಇದನ್ನು ನೋಡಿ ನನಗೆ ಬಹಳ ದುಃಖವಾಗುತ್ತಿದೆ. ನಿಮಗೋಸ್ಕರ ನಾನು ಏನು ಮಾಡಿದರೆ ನಿಮಗೆ ಸಂತೋಷವಾದೀತು!

ವೀರ—ನೀನು ನನ್ನ ವಿಚಾರದಲ್ಲಿ ಇಟ್ಟಿರುವ ಪ್ರೀತಿಗೆ ಬಹಳ ಸಂತೋಷ. ಆದರೆ ನಿನಗೆ ಹೇಳುವ ಕೆಲಸ ಯಾವುದೂ ಇಲ್ಲ.

ವಿಜ್ಜಲ—ಹಾಗಾದರೆ ನಿಮಗೆ ಸುಮ್ಮನೆ ಏಕೆ ಈ ದುಃಖ?

ವೀರ—ವಿಜ್ಜಲ. ಅದಕ್ಕೆ ಕಾರಣ ನಮ್ಮ ಅಂಧಶ್ರದ್ಧೆ. **ಆಸೆಯೆಂಬುದು ಮರುಭೂಮಿಯಲ್ಲಿರುವ ಬಿಸಿಲ್ಗುದುರೆಯಂತೆ.** ವಿಜ್ಜಲ, ನನ್ನಲ್ಲಿ ಸ್ವಾಭಿಮಾನ ಇಲ್ಲವೆಂದು ತಿಳಿಯಬೇಡ. ಲಲಿತಪ್ರಭೆಯ ಮೇಲಣ ವ್ಯಾಮೋಹವನ್ನು ವರ್ಜಿಸಿ ದೂರ ಹೋಗಲು ನನಗೆ ಸಾಧ್ಯ. ಆದರೆ, ಸತ್ಯಾಶ್ರಯ ಮಹಾರಾಜರು ಮಾಡಿರುವ ಉಪಕಾರ ನನ್ನನ್ನು ಹಿಂದಕ್ಕೆ ಸೆಳೆಯುತ್ತಿದೆ. ಈ ದುರ್ಗವನ್ನು ಬಿಟ್ಟು ಹೋಗಕೂಡದೆಂದು ನಿರ್ಧರಿಸಿದ್ದೇನೆ.

ವಿಜ್ಜಲ—ಪ್ರಭು, ಏಕೆ ನಿರಾಶರಾಗುತ್ತೀರಿ. ಏನಾದರೂ ಗುರುತು ಅಥವಾ ಪತ್ರ ಕೊಡಿ. ನಾನು........ ...

ವೀರ—ಇಲ್ಲ, ಹಾಗೆ ಗುಪ್ತಸಂಧಾನ ಮಾಡಲು ನನಗೆ ಬರುವುದಿಲ್ಲ.

ವಿಜ್ಜಲ— ಇರಲಿ, ಹಂಸಿಕೆಯ ಸ್ವಭಾವ ಒಳ್ಳೆಯದು. ತಾಯಿ ಲಲಿತ ಪ್ರಭೆಯ ಮೇಲೆ ಆಕೆಗೆ ಬಹಳ ಪ್ರೀತಿ. ನಾನು ಆಕೆಯನ್ನು ಕಂಡು ಈ ವಿಚಾರಗಳನ್ನು ತಿಳಿಸಿ ಬರುತ್ತೇನೆ.

ವೀರಧವಳನಿಗೆ ವಿಜ್ಜಲನ ಆಪ್ತ ವಚನವನ್ನು ಕೇಳಿ ಅಚ್ಚರಿಯಾಯಿತು. ವಿಜ್ಜಲನಿಗೆ ತನ್ನ ವಿಚಾರದಲ್ಲಿ ಇಷ್ಟು ಭಕ್ತಿ ಭರವಸೆಯಿದೆಯೆಂದು ತಿಳಿದಿರ ಲಿಲ್ಲ. ಈ ಕಷ್ಟ ಸಮಯದಲ್ಲಿ ಆತನೇ ಉತ್ತಮ ಸ್ನೇಹಿತನೆಂದು ಭಾವಿಸಿ ದನು ವೀರಧವಳ. ವಿಜ್ಜಲನು ವೀರಧವಳನಿಗೆ ನಮಸ್ಕರಿಸಿ ಹೊರಟು ಹೋದನು.

ಪ್ರಾತಃಕಾಲ ೯ ಗಂಟೆಯಾಗಿತ್ತು. ವೀರಧವಳನು ಬಿಲ್ಲುಬಾಣಗಳನ್ನು ಧರಿಸಿ ಬೇಸರವನ್ನು ನೀಗಲು ಅಜಿಂಕ್ಯ ದುರ್ಗದ ವನಾಂತರವನ್ನು ಪ್ರವೇಶಿ ಸಿದನು ಏಕಾಕಿಯಾಗಿ !

ಇತ್ತ ಚಂಡವರ್ಮನು ಮುಖಮಜ್ಜನ ಮಂಗಳಸ್ನಾನವನ್ನು ಮುಗಿಸಿ ಸರದಾರ ಸತ್ಯಾಶ್ರಯನ ಮಹಲಿಗೆ ಬಂದನು. ಹಿಂದಿನ ರಾತ್ರಿಯ ನಿಶ್ಚಿ ತಾರ್ಥ ಪ್ರಸಂಗವನ್ನು ಕುರಿತು ಮಾತನ್ನು ಮುಂದುವರಿಸಿದನು. ಅಷ್ಟರಲ್ಲಿ ರಣರಾಗ ಒಳಗೆ ಬಂದು ನಮಸ್ಕರಿಸಿ—"ಸ್ವಾಮಿ, ಸಿಂಹಗುಹೆಯ ಸಹೋ ದರರು ಉನ್ಮತ್ತಸಿಂಹ ಮತ್ತು ದುರ್ಜಾತಸಿಂಹ, ಇವರುಗಳು ತಮ್ಮನ್ನು ಕಾಣಲು ಬಂದಿದ್ದಾರೆ. ದಿಡ್ಡಿ ಬಾಗಿಲಿನಲ್ಲಿ ನಿಂತಿದ್ದಾರೆ. ಅಪ್ಪಣೆಯಾಗ ಬೇಕು". ಎಂದು ತಿಳಿಸಿದನು.

ಉನ್ಮತ್ತಸಿಂಹ, ದುರ್ಜಾತಸಿಂಹ ಇವರುಗಳು ಬಂದರೆಂದು ತಿಳಿದು ವೈಬಿವರಿತು ಚಂಡವರ್ಮನಿಗೆ! ಏಕೆಂದರೆ, ಅವರು ತುಂಟರೆಂದು ಆತನಿಗೆ ಗೊತ್ತಿತ್ತು. ಸಿಂಹಗುಹೆ ಎಂಬ ದುರ್ಗದ ದರೋಡೆಗಾರರೆಂದು ಆ ಪ್ರಾಂತದಲ್ಲಿ ಅವರಿಗೆ ಪ್ರಸಿದ್ಧಿ. ಏನೇ ಆಗಲಿ ಅವರೂ ಸಹ ಸರದಾರರು. ಅಜಿಂಕ್ಯ ದುರ್ಗಕ್ಕೆ ಸಾಮಂತರು. ಚಂಡವರ್ಮನು ಅಜಿಂಕ್ಯ ದುರ್ಗಕ್ಕೆ ಬಹಳ ಕಾಲದ ಮೇಲೆ ಬಂದುದನ್ನು ತಿಳಿದು ದರ್ಶನಲಾಭಕ್ಕಾಗಿ ಚಿತ್ತೈಸಿತ್ತು ಅವರ ಸವಾರಿ! ಸತ್ಯಾಶ್ರಯನಿಗೆ ಈ ಎರಡು ಸಿಂಹಗಳ ಪರಿಚಯ ಸಾಲದು. ಆದರೆ,

ಸತ್ಯಾಶ್ರಯನ ವಿಚಾರ ಅವರಿಗೆ ಗೊತ್ತಿತ್ತು. ಲಲಿತಪ್ರಭೆ ಲಗ್ನಕ್ಕೆ ಯೋಗ್ಯಳಾಗಿರುವುದನ್ನೂ ಬಲ್ಲರು ಅವರು.

ಚಂಡವರ್ಮನು ಕೋಪದಿಂದ ರಣರಾಗನನ್ನು ನೋಡಿ—"ಆ ದರೋಡೆಕೋರರೋ! ಹೋಗು, ದುರ್ಗದ ಬಾಗಿಲನ್ನು ಮುಚ್ಚು. ಒಂದು ವೇಳೆ ಅವರು ನನ್ನನ್ನು ಕಾಣಬೇಕೆಂದು ಒತ್ತಾಯ ಮಾಡಿದರೆ, ದುರ್ಗದ ಬಾಗಿಲಿನಲ್ಲಿರುವ ಪಹರೆಯವರು ಅವರಿಗೆ ಆಯುಧವಂದನೆ ಮತ್ತು ಪರಾಕು ಸಲ್ಲಿಸಕೂಡದು" ಎಂದು ಆಜ್ಞೆ ಮಾಡಿದನು. ಸತ್ಯಾಶ್ರಯನಿಗೆ ಚಂಡವರ್ಮನ ವರ್ತನೆ ಯುಕ್ತವಲ್ಲವೆಂದು ತೋರಿತು. ಅಜಿಂಕ್ಯ ದುರ್ಗದ ದಣಿಯಲ್ಲವೇ ಚಂಡವರ್ಮ! ಆದರೆ, ತಿಳಿದುದನ್ನು ತಿಳಿಸುವುದು ತಿಳಿದವರ ಲಕ್ಷಣ. ಆದುದರಿಂದ ಸತ್ಯಾಶ್ರಯನು ಚಂಡವರ್ಮನನ್ನು ಕುರಿತು—"ಸರದಾರರೇ, ಅವರು ದರೋಡೆಗಾರರಾಗಿದ್ದರೂ ಅವರಾಗಿಯೇ ನಮ್ಮ ಭೇಟಿಗೆ ಬಂದಿರುವುದರಿಂದ ಬಾಗಿಲನ್ನು ಮುಚ್ಚಿದರೆ ಅವರಿಗೆ ಅವಮಾನವಲ್ಲವೇ? ತಾವು ಯೋಚಿಸಬೇಕು." ಎಂದನು. ಚಂಡವರ್ಮನು ಸತ್ಯಾಶ್ರಯನ ಮಾತಿಗೆ ಬೆಲೆ ಕೊಡಬೇಕಾದ ಸಂದರ್ಭವಿದ್ದುದರಿಂದ ತನ್ನ ಆಜ್ಞೆಯನ್ನು ತಿದ್ದಿಕೊಂಡು, ಬಾಗಿಲು ತೆಗೆಯಬಹುದೆಂದೂ, ಆದರೆ ಪಹರೆಯವರು ಆಯುಧವಂದನೆ ಮತ್ತು ಪರಾಕು ಮಾತ್ರ ಸಲ್ಲಿಸಕೂಡದೆಂದೂ ರಣರಾಗನಿಗೆ ತಿಳಿಸಿದನು.

ರಣರಾಗನು ದಣಿಯ ಅಪ್ಪಣೆಯನ್ನು ಪಡೆದು ಬರುವ ವೇಳೆಗೆ ಸಿಂಹಗುಹೆಯ ಸಿಂಹದ್ವಯಗಳು ಪೂರ್ವ ಮಹಾದ್ವಾರದ ಒಳಿಗೆ ಬಂದಿದ್ದರು. ರಣರಾಗನು ಚಂಡವರ್ಮನ ಅಣತಿಯನ್ನು ಪಹರೆಯವರಿಗೆ ಸೂಚಿಸಿ, ಮಹಾದ್ವಾರದ ಬಾಗಿಲುಗಳನ್ನು ತೆರೆದನು. ಉನ್ಮತ್ತಸಿಂಹನೂ, ದುರ್ಜಾತಸಿಂಹನೂ ಅಂಗರಕ್ಷಕರೊಡನೆ ದುರ್ಗವನ್ನು ಪ್ರವೇಶಿಸಿದರು. ಆಯುಧವಂದನೆಯನ್ನಾಗಲಿ, ಪರಾಕನ್ನಾಗಲಿ ಸಲ್ಲಿಸದೆ ಉದಾಸೀನ ಭಾವದಿಂದ ನಿಂತಿದ್ದುದನ್ನು ಉನ್ಮತ್ತಸಿಂಹನು ನೋಡಿ ರಣರಾಗನನ್ನು ಕುರಿತು—"ರಣರಾಗ, ಇದೇನು ಅಗೌರವ! ಇರಲಿ." ಎಂದು ಹೂಂಕರಿಸಿದನು.

ರಣರಂಗನು ಮರ.ಮಾತನ್ನಾಡದೆ ಅವರಿಬ್ಬರನ್ನೂ ಸತ್ಯಾಶ್ರಯನ ಮಹಲಿನ ಬಳಿಗೆ ಕರೆದುಕೊಂಡು ಹೋದನು. ಸತ್ಯಾಶ್ರಯನೂ, ಚಂಡವರ್ಮನೂ, ಚಂದ್ರಸೇನನೂ ಇವರ ಆಗಮನವನ್ನು ನಿರೀಕ್ಷಿಸಿ ಕುಳಿತಿದ್ದರು ಸಭಾ ಮಂದಿರ ದಲ್ಲಿ. ಉನ್ಮತ್ತಸಿಂಹನೂ, ದುರ್ಜಾತಸಿಂಹನೂ ಅಂಗರಕ್ಷಕರನ್ನು ಆಚೆ ನಿಲ್ಲಿಸಿ ಒಳಗೆ ಬಂದು ತಮ್ಮ ಆಸನಗಳಲ್ಲಿ ಕುಳಿತರು. ಚಂಡವರ್ಮನು ಅವರನ್ನು ನೋಡಿ—" ಸರದಾರರೇ, ಸಿಂಹಗುಹೆಯಲ್ಲಿ ಎಲ್ಲರೂ ಕ್ಷೇಮವೇ ? ತಮ್ಮಂಥ ವೀರಪುರುಷರ ಭೇಟಿಯಿಂದ ನನಗೆ ಬಹಳ ಸಂತೋಷವಾಯಿತು." ಎಂದು ಸ್ವಾಗತಿಸಿದನು.

ಮಹಾದ್ವಾರದಲ್ಲಿ ಆದ ಅಗೌರವವನ್ನು ಮರೆತಿರಲಿಲ್ಲ ಉನ್ಮತ್ತಸಿಂಹ. ಆತನು ಚಂಡವರ್ಮನ ಸ್ವಾಗತವನ್ನು ಗಮನಿಸದೆ—" ಸರದಾರರೇ, ಸಂತೋ ಷಕ್ಕೆ ಗುರುತು ಯಾವುದು ? ನಿಮ್ಮ ಪಹರೆಯವರು ನಮಗೆ ಆಯುಧ ವಂದನೆ ಯನ್ನಾಗಲಿ ಪರಾಕನ್ನಾಗಲಿ ಸಲ್ಲಿಸದೆ ಉದಾಸೀನ ಭಾವದಿಂದ ಇರುವುದು ಸಂತೋಷದ ಹೆಗ್ಗುರುತಲ್ಲವೇ ? " ಎಂದು ಮೂದಲಿಸಿದನು. ದುರ್ಜಾತ ಸಿಂಹನು ಸುಮ್ಮನಿರಲಿಲ್ಲ. " ನಿಮ್ಮ ದುರ್ಗದಲ್ಲಿ ನಮ್ಮಂಥವರಿಗೆ ತಿರಸ್ಕಾರ! ಛೀ, ನಿಮ್ಮಂಥ ದೊಡ್ಡ ಸರದಾರರಿಗೆ ಇದು ಯೋಗ್ಯವಲ್ಲ." ಎಂದು ಒದರಿದನು. ಮಾತಿಗೆ ಮಾತು ಮಂಥನವಾಯಿತು. ಬಿಸಿಯೇರಿತು. ಸತ್ಯಾಶ್ರಯನು ಅಡ್ಡ ಬಂದರೂ ಚಂಡವರ್ಮನ ಆರ್ಭಟವಾಗಲಿ, ಸಿಂಹಗುಹೆಯ ಸಿಂಹಗಳ ಗರ್ಜನೆಯಾಗಲಿ ನಿಲ್ಲಲಿಲ್ಲ. ಕಡೆಗೆ ಉನ್ಮತ್ತಸಿಂಹನು ಚಂಡವರ್ಮನನ್ನು ನೋಡಿ ಬಿರುದನಿಯಿಂದ—" ಈ ದಿನದಿಂದ ನಾವು ಶತ್ರುಗಳೆಂದು ತಿಳಿಯಿರಿ. ನಮಗಾದ ಅಗೌರವಕ್ಕಾಗಿ ತಕ್ಕ ಪ್ರತೀಕಾರ ಮಾಡುತ್ತೇವೆ." ಎಂದು ಕೂಗಿದನು. ಸಭಾ ಮಂದಿರವು ನೊಳಗಿತು.

ಸಭಾ ಮಂದಿರದಲ್ಲಿ ಈ ವಾಗ್ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಲಲಿತ ಪ್ರಭೆ ತನ್ನ ಸಹಚರಿ ಹಂಸಿಕೆಯೊಡನೆ ಪಕ್ಕದ ಲತಾಕುಂಜದಲ್ಲಿ ವಿಹರಿಸು ತ್ತಿದ್ದಳು. ವಾಗ್ಯುದ್ಧದ ಬೊಬ್ಬೆ ಆಕೆಯ ಕಿವಿ ಮುಟ್ಟಿತು. ಇದೇನಿರಬಹು ದೆಂದು ಹಂಸಿಕೆಯ ಜತೆ ಸಭಾಮಂದಿರದ ಬಾಗಿಲ ಬಳಿಗೆ ಬರುತ್ತಿದ್ದಳು. ಆ ಸಮಯಕ್ಕೆ ಸರಿಯಾಗಿ ಸಿಂಹಸಹೋದರರು ಸಭಾಮಂದಿರದಿಂದ

ಬುಸುಗುಟ್ಟುತ್ತ ಹೊರಟರು ತಮಗೆ ಆದ ಅವಮಾನಕ್ಕೆ ಯಾವ ರೀತಿ ಪ್ರತೀಕಾರ ಮಾಡಬೇಕೆಂಬುದನ್ನು ಯೋಚಿಸುತ್ತ ಲತಾಕುಂಜದ ಬಳಿ ನಿಂತರು. ಎದುರಿಗೆ ಸ್ವಲ್ಪ ದೂರದಲ್ಲಿ ನಿಂತಿದ್ದ ಇಬ್ಬರು ನಾರಿಯರನ್ನು ನೋಡಿ, ಸೌಂದರ್ಯವತಿಯಾಗಿ ಹಿಂದೆ ನಿಂತಿರುವವಳೇ ಲಲಿತಪ್ರಭೆ ಎಂದು ನಿರ್ಧರಿಸಿದರು. ರಾಜಪುತ್ರಿಗೆ ಬೆಂಬಲ ಸಖಿ! ಆದರೆ ಕಷ್ಟದಲ್ಲಿ ನಾರಿಯರು ಪರಸ್ಪರ ಸಹಾಯ ಮಾಡುವುದಾದರೂ ಅಸಂಭವ. ರಾಜಪುತ್ರಿಗೆ ಏಕೆ ಭಯವೋ ಸಖಿಗೂ ಅದಕ್ಕೇ ಭಯ. **ಪ್ರಾಣಭಯಕ್ಕಿಂತ ಮಾನಭಯ ದೊಡ್ಡದು.** ಸಿಂಹ ಸಹೋದರರನ್ನು ಕಂಡು ಸಖಿಯೂ ರಾಜಪುತ್ರಿಯೂ ಹೆದರಿದರು. ಉತ್ತರ ಕ್ಷಣದಲ್ಲಿಯೇ ದುರ್ಜಾತಸಿಂಹ ಮುಂದೆ ನುಗ್ಗಿ ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಲಲಿತಪ್ರಭೆಯನ್ನು ಬಾಹುಗಳಿಂದ ಎತ್ತಿ ಕುದುರೆಯ ಮೇಲೆ ಕುಳಿತು ವಾಯುವೇಗದಿಂದ ಪೂರ್ವ ಮಹಾದ್ವಾರದ ಕಡೆಗೆ ತೆರಳಿದನು. ಹಂಸಿಕೆ ಬೆದರಿ ಚೀರಿಡುತ್ತ ಅಂತಃಪುರಕ್ಕೆ ಓಡಿದಳು. ಉನ್ಮತ್ತಸಿಂಹ ಇತರ ಅಂಗರಕ್ಷಕರೊಡನೆ ಅಣ್ಣನ ಬೆಂಗಾವಲಿನಲ್ಲಿ ಹಿಂದೆ ಹೊರಟನು.

ದುರ್ಗದಲ್ಲೆಲ್ಲ ಹಾಹಾಕಾರ ಎದ್ದಿತು. ಅಶ್ವಶಾಲೆಯಿಂದ ಕುದುರೆಗಳನ್ನು ಹತ್ತಿ ಶಸ್ತ್ರಸಹಿತ ಮೂವತ್ತು ಜನ ಸವಾರರು ಹೊರಡಲು ಸಿದ್ಧರಾದರು. ಸ್ವಲ್ಪ ಹೊತ್ತಿಗೆ ಸತ್ಯಾಶ್ರಯ ಚಂಡವರ್ಮ ಮತ್ತು ಚಂದ್ರಸೇನ ಇವರುಗಳೂ ಅವರವರ ಕುದುರೆಗಳನ್ನು ತರಿಸಿ ಸವಾರರೊಡನೆ ದುರ್ಗವನ್ನು ಬಿಟ್ಟು ದಂಗೆಕೋರರನ್ನು ಹಿಂಬಾಲಿಸಿದರು. ದಂಗೆಕೋರರು ಆ ವೇಳೆಗೆ ತುಂಬ ದೂರ ಸಾಗಿದ್ದರು. ಲಲಿತಪ್ರಭೆಯ ಕೋಮಲ ಕಾಯ ದುರ್ಜಾತ ಸಿಂಹನ ಕಂಕುಳಿನಲ್ಲಿ ಕಂಪಿಸುತ್ತಿತ್ತು. ಕೂಗಬೇಕೋ ಕೊರಗಬೇಕೋ ಕಾಣದಾದಳು ಕ್ರೂರಕರ್ಮಿಗಳ ಕೈಯಲ್ಲಿ!

ಅಷ್ಟುಹೊತ್ತಿಗೆ ದುರ್ಗದ ಕಡೆಯಿಂದ ಸವಾರರು ಹಿಂಬಾಲಿಸುತ್ತಿರುವುದನ್ನು ನೋಡಿದನು ಉನ್ಮತ್ತಸಿಂಹ. ದುರ್ಜಾತಸಿಂಹನನ್ನು ಕೂಗಿ—"ಮುಂದೆ ಹೋಗು. ನಾನೂ ಸವಾರರೂ ಈ ದುರ್ಗದ ಕುನ್ನಿಗಳಿಗೆ ಬುದ್ಧಿ ಕಲಿಸಿಬರುತ್ತೇವೆ." ಎಂದು ತಿಳಿಸಿದನು. ದುರ್ಜಾತಸಿಂಹ ಹಾಗೆಯೇ ಮಾಡಬಹುದಾ

ಗಿತ್ತು. ಆದರೆ, ಲಲಿತಪ್ರಭೆಯ ~~ಘಂಟಸೂತ್ರ~~ ಚೆನ್ನಾಗಿತ್ತು ! ದುರ್ಜಾತ ಸಿಂಹನು ಉನ್ಮತ್ತನೊಬ್ಬನನ್ನೇ ಯುದ್ಧಕ್ಕೆ ನಿಲ್ಲಿಸಿ ಹೊರಡಲು ಒಪ್ಪಲಿಲ್ಲ. ಸತ್ಯಾಶ್ರಯನೂ ಚಂದ್ರಸೇನನೂ ಬಲಾಢ್ಯರೆಂದು ಆತನಿಗೆ ಗೊತ್ತು. ಜೊತೆಗೆ ಚಂಡವರ್ಮನೂ ಆತನ ಸವಾರರೂ ಇದ್ದಾರೆ. ಆದುದರಿಂದ, ಇವರೆಲ್ಲ ರೊಡನೆ ಯುದ್ಧ ಮಾಡಿ ಉನ್ಮತ್ತನು ಮಡಿದರೆ ತಾನಿದ್ದೂ ಫಲವಿಲ್ಲವೆಂದು ಬಗೆದನು. **ದುಷ್ಟರಲ್ಲಿಯೂ ಧರ್ಮವಿಲ್ಲವೇ ?** ಆದರೆ, ದುಷ್ಟರ ಧರ್ಮ ದಲ್ಲಿ ಶಿಷ್ಟರ ಮಾರ್ಗವಿದೆ! ದುರ್ಜಾತಸಿಂಹನು ಧರ್ಮಬದ್ಧನಾಗಿ ಲಲಿತ ಪ್ರಭೆಯನ್ನು ಶಕ್ತರೂ, ನಂಬಿಕೆಯುಳ್ಳವರೂ ಆದ ನಿರಾನಂದ ಮತ್ತು ನಿಷಿದ್ಧ ಎಂಬ ಇಬ್ಬರು ಸವಾರರ ಜತೆಯಲ್ಲಿ ಸಿಂಹಗುಹೆಗೆ ಕಳುಹಿಸಿ, ತಾನೂ ಯುದ್ಧಕ್ಕೆ ಸಿದ್ಧನಾಗಿ ನಿಂತನು. ಆ ಸವಾರರು ಲಲಿತಪ್ರಭೆಯೊಡನೆ ಗಿಡ ಮರಗಳಿಂದ ಕೂಡಿದ ಬೇರೊಂದು ಮಾರ್ಗವಾಗಿ ಸಿಂಹಗುಹೆಯ ಕಡೆಗೆ ನಡೆದರು. ಇತ್ತ ದುರ್ಗದ ಸವಾರರೂ, ಸಿಂಹಗುಹೆಯ ಶೂರರೂ ಸಂಧಿ ಸಿದರು ಸಮರೋನ್ಮುಖರಾಗಿ!

ಸತ್ಯಾಶ್ರಯನೂ, ಚಂದ್ರಸೇನನೂ ಲಲಿತಪ್ರಭೆಯನ್ನು ಅಲ್ಲಿ ಕಾಣದೆ ಖಿನ್ನರಾದರು. ಸಮರವಂತೂ ಸರಿಸಮವಾಗಿಯೇ ನಡೆಯಿತು. ಎರಡು ಕಡೆಯವರೂ ಖಡಾಖಡಿಯಿಂದ ಎರಗಿದರು. ಮಗಳಿಗಾಗಿ ತಂದೆಯೂ, ತಂಗಿಗಾಗಿ ಚಂದ್ರಸೇನನೂ ಸಾವುನೋವುಗಳನ್ನು ಗಮನಿಸದೆ ಕಾದಿದರು. ಚಂಡವರ್ಮನು ಕಾದುವ ತವಕದಲ್ಲಿ ಬಾಯಿಮಾಡಿದನೇ ವಿನಾ ಕೈಮಾಡ ಲಿಲ್ಲ. ಆತನಿಗೆ ಬೇಕಾಗಿದ್ದುದು ಲಲಿತಪ್ರಭೆ. ಲಲಿತಪ್ರಭೆಯನ್ನು ಪೊದೆ ಗಳ ಸಂದಿಯಲ್ಲಿ ಹುಡುಕುವುದರಲ್ಲಿ ಮುಗಿಯಿತು ಆತನ ಸಾಹಸ. ಕೈಕೆಸ ರಾಗದೆ ಬಾಯಿಗೆ ಮೊಸರನ್ನು ಬಯಸುವ ಜಾಣ ಚಂಡವರ್ಮ !

ಇತ್ತ ನಿರಾನಂದ ಮತ್ತು ನಿಷಿದ್ಧರು ದಣಿಯ ಆಜ್ಞೆಯಂತೆ ಲಲಿತ ಪ್ರಭೆಯನ್ನು ಸಿಂಹಗುಹೆಗೆ ಕರೆದುಕೊಂಡು ದಟ್ಟವಾದ ಅರಣ್ಯ ಮಾರ್ಗ ವಾಗಿ ಹೊರಟರು. ನಿರಾನಂದನು ಲಲಿತಪ್ರಭೆಯನ್ನು ತನ್ನ ಕುದುರೆಯ ಮೇಲೆ ಜೋಪಾನವಾಗಿ ಕುಳ್ಳಿರಿಸಿದನು. ತಾನೂ ಸಹ ಹಿಂದೆ ಅದೇ

ಕುದುರೆಯ ಮೇಲೆ ಕುಳಿತು ನಿಷಿದ್ಧನ ಬೆಂಗಾವಲಿನೊಡನೆ ಪ್ರಯಾಣ ಬೆಳೆಸಿದನು ದಡ್ಡವಾದ ಕಾಡಿನಲ್ಲಿ. ಏಳು ಮೈಲಿ ಪ್ರಯಾಣ ನಿರಾತಂಕ ವಾಗಿ ಸಾಗಿತು. ಸಿಂಹಗುಹೆಗೆ ಸುಮಾರು ಮೂರು ಮೈಲಿ ದೂರದಲ್ಲಿ ವಿಶ್ರಾಂತಿಗಾಗಿ ಒಂದು ಮರದ ಕೆಳಗೆ ಕುಳಿತರು. ದಣಿಯ ದೊಡ್ಡ ಕಾರ್ಯವನ್ನು ನೆರವೇರಿಸಿದೆವೆಂದು ಅವರಿಗೆ ಸಂತೋಷ. ಲಲಿತಪ್ರಭೆ ಇದ್ದಕ್ಕಿದ್ದಹಾಗೆ "ವೀರ" ಎಂದು ಕೂಗಿದಳು. "ವೀರ" ಎಂಬ ಹೆಸ ರನ್ನು ಕೇಳಿ ಸಿಂಹಗುಹೆಯ ಸವಾರರು ಬೆಚ್ಚಿದರು. ಎದ್ದು ನಿಲ್ಲುವುದರೊಳ ಗಾಗಿ ವೀರಧವಳನು ಪ್ರತ್ಯಕ್ಷ ರುದ್ರನಂತೆ ಎದುರಿಗೆ ಬಂದನು. ಒರೆಯಿಂದ ಕತ್ತಿಯನ್ನು ಬಿಚ್ಚಿ ಹೊಡೆದನು ನಿರಾನಂದನ ತಲೆಗೆ. ಒಂದೇ ಏಟಿಗೆ ಪ್ರಜ್ಞೆ ತಪ್ಪಿ ಬಿದ್ದನು ನಿರಾನಂದ! ನಿಷಿದ್ಧನ ಪಾಡು ನಾಯಿಪಾಡಾಯಿತು. ಪ್ರಾಣಭೀತಿಯಿಂದ ಓಡಲಾರಂಭಿಸಿದನು. ವೀರಧವಳನು ಬಾಣಪ್ರಯೋಗಕ್ಕೆ ಸಿದ್ಧನಾದುದನ್ನು ಕಂಡು ಅಲ್ಲಿಯೇ ನಿಂತು "ಶರಣು ಶರಣು" ಎಂದು ನುಡಿದು ಶರಣಾಗತನಾದನು ನಿಷಿದ್ಧ! ಹೀಗೆ ಶರಣಾಗತನಾದ ನಿಷಿದ್ಧನನ್ನು ಮನ್ನಿಸಿ ವೀರಧವಳನು ಸುತ್ತಲೂ ನೋಡಿದನು. ಲಲಿತಪ್ರಭೆ ವೃಕ್ಷಮೂಲ ದಲ್ಲಿ ನಿಂತು ವೀರಧವಳನ ಪ್ರತಾಪವನ್ನು ಕಣ್ಣಾರೆ ನೋಡಿ ತಣಿದಳು. ಹಿಂದಿನ ದಣಿವು ಅಂದಿನ ತಣಿವಿನಲ್ಲಿ ತಂಪಾಗಿತ್ತು. ಕೆದರಿದ ತಲೆಕೂದ ಲನ್ನು ಸರಿಪಡಿಸಿಕೊಂಡು ತಲೆಬಾಗಿ ನಿಂತಿದ್ದಳು ನಲ್ಮೆಯ ನಿರೀಕ್ಷಣೆ ಯಲ್ಲಿ!

ವೀರಧವಳನೂ ಲಲಿತಪ್ರಭೆಯೂ ಸಂಧಿಸಿದರು ಮತ್ತೆ ಅರಣ್ಯದಲ್ಲಿ. ಅನುರಾಗದ ಅವಳಿಜವಳಿಗಳಂತೆ ಒಪ್ಪುತ್ತಿದ್ದರು ಅವರು. ಆದರೆ, ಆತಂಕದ ಹೊಸಲಿನಲ್ಲಿ ಅನುರಾಗಕ್ಕೆ ಹೊತ್ತುಂಟೆ! ಬೇಸರದಿಂದ ಬೇಟೆಗಾಗಿ ಅಜಿಂಕ್ಯ ದುರ್ಗದಿಂದ ಅರಣ್ಯಕ್ಕೆ ಬಂದ ವೀರಧವಳನಿಗೆ ಲಲಿತಪ್ರಭೆ ಸಂಧಿಸುವ ಯೋಚನೆಯಾದರೂ ಎಲ್ಲಿಯದು! ಕುದುರೆಯ ಗೊರಸಿನ ಸಪ್ಪಳದಲ್ಲಿ ಅಡ ಗಿತ್ತು ಅನುರಾಗದ ಪುನರ್ಮಿಲನ! ಸಿಂಹಗುಹೆಯ ಸವಾರರು ಕಾಡಿನ ದಾರಿಹಿಡಿದುದರ ಫಲವಿದು. ರಾಜಮಾರ್ಗದಲ್ಲಿ ಬಂದಿದ್ದರೆ ಕಥೆಯೇ ಬೇರೆ ಯಾಗುತ್ತಿತ್ತು.

ಲಲಿತಪ್ರಭೆಯು ಬಿಡುಗಡೆಯಾದ ಸಮಯ ಸನ್ನಿವೇಶಗಳನ್ನು ದೂರ ದಲ್ಲಿ ನಿಂತು ಕಂಡಳು ವೃದ್ಧ ವನಚರಿ. ವೀರಧವಳನು ಲಲಿತಪ್ರಭೆಯೊಡನೆ ಮಾತನಾಡುತ್ತಿದ್ದುದನ್ನು ನೋಡಿ ಸ್ವಲ್ಪ ಹತ್ತಿರ ಬಂದು ನಿಂತಳು. ಪರ ಮಾತ್ಮನು ಅವರಿಬ್ಬರನ್ನೂ ಕಾಪಾಡಲೆಂದು ಮನದಲ್ಲಿ ಧ್ಯಾನಿಸಿದಳು. ಲಲಿತ ಪ್ರಭೆ ಅರಣ್ಯಕ್ಕೆ ಬರಲು ಕಾರಣ ಆಕೆಗೆ ಗೊತ್ತಿರಲಿಲ್ಲ. ಅವರ ಮಾತನ್ನು ಕಿವಿಗೊಟ್ಟು ಕೇಳಿದಳು.

ವೀರಧವಳ—ಲಲಿತ, ಇದೇನು! ಇಲ್ಲಿಗೆ ಹೇಗೆ ಬಂದೆ?

ಲಲಿತಪ್ರಭೆ—ನೀವು ಹೇಗೆ ಬಂದಿರಿ!

ವೀರ—ಲಲಿತ, ಸರಸಸಲ್ಲಾಪಗಳಿಗೆ ಇದು ಹೊತ್ತಲ್ಲ. ನಡೆದಿರುವ ಸಂಗತಿ ಏನು? ಬೇಗ ಹೇಳು.

ಲಲಿತ—ನಾನೇನೂ ಸರಸಕ್ಕೆ ಬರಲಿಲ್ಲ. ನೀವು ಹೇಗೆ ಬಂದಿರಿ ಎಂದು ಕೇಳಿದೆ. ಅಷ್ಟೆ.

ವೀರ—ಓಹೋ, ಸರಸ ಹೋಗಿ ಸಿಡುಕು ಬಂತಲ್ಲ ಲಲಿತ, ಸಿಡುಕು!

ಲಲಿತ—ನನಗೇತಕ್ಕೆ ಸಿಡುಕು! ಯಾರ ಮೇಲೆ ಸಿಡುಕು!

ವೀರ—ಸರಿ, ಸರಸವೂ ಇಲ್ಲ; ಸಿಡುಕೂ ಅಲ್ಲ. ಹೋಗಲಿ ಬಿಡು. ಇಲ್ಲಿಗೆ ಹೇಗೆ ಬಂದೆ ಹೇಳು!

ಲಲಿತಪ್ರಭೆ ವೀರಧವಳನ ಸಮುಖದಲ್ಲಿ ಕ್ಷಣಕಾಲ ತಂದೆಯನ್ನು ಮರೆತ ಳೆಂದು ತೋರುತ್ತದೆ. ಅಂತು, ತಕ್ಷಣ ಕಣ್ಣಿನಲ್ಲಿ ನೀರು ತುಂಬಿತು. ವೀರ ಧವಳನಿಗೆ ಕಣ್ಣೀರಿನ ಅರ್ಥ ತಿಳಿಯುತಿಲ್ಲ!

ವೀರ—ಲಲಿತ, ಏಕೆ ಕಣ್ಣೀರು!

ಲಲಿತ—ಅಯ್ಯೋ ನನ್ನ ತಂದೆಯ ಗತಿ! ಆ ದುರಾತ್ಮರು ಸಿಂಹಗುಹೆ ಯವರಂತೆ! ನನ್ನನ್ನು ಅಪಹರಿಸಿದರು. ಹಿಂದೆ ಅಜಿಂಕ್ಯ ದುರ್ಗದ ಪಡೆ

ಬರುತ್ತಿತ್ತು. ಈ ಸರದಾರರ ಜೊತೆಯಲ್ಲಿ ನನ್ನನ್ನು ಕಳುಹಿಸಿದರು. ಇಲ್ಲಿಗೆ ಮೂರು ಮೈಲಿ ದೂರದಲ್ಲಿ ಖಡಾಖಡಿ ಯುದ್ಧ ನಡೆದಿರಬೇಕು. ಹಾ ತಂದೆ, ಹಾ ಚಂದ್ರಸೇನ !

ಲಲಿತಪ್ರಭೆಗೆ ಪ್ರಜ್ಞೆ ತಪ್ಪಿತು. ವೀರಧವಳನು ಆಕೆಯನ್ನು ಹತ್ತಿರ ದಲ್ಲಿದ್ದ ನದಿಯ ತೀರಕ್ಕೆ ತಂದು ಶೈತ್ಯೋಪಚಾರ ಮಾಡಿ ಮರಳಿ ಮೊದಲಿದ್ದ ವೃಕ್ಷಮೂಲಕ್ಕೆ ತಂದು ಕುಳ್ಳಿರಿಸಿದನು. ಲಲಿತಪ್ರಭೆಯ ಮಾತು ಮುಗಿದ ಕೂಡಲೇ ವೃದ್ಧ ವನಚರಿ ಅರಣ್ಯದಲ್ಲಿ ಓಡಿದಳು. ಮೂರು ಮೈಲಿ ದೂರ ದಲ್ಲಿ ನಡೆಯುತ್ತಿದ್ದ ಸಮರಾಂಗಣದ ಕಡೆಗೆ ನುಗ್ಗಿದಳು. ಮೋಹ ವ್ಯಾಮೋಹಗಳ ಗೊಂದಲದಲ್ಲಿ ಸಾಗಿತ್ತು ಸರದಾರರ ಕೊಳುಗುಳ !

ಸತ್ಯಾಶ್ರಯನು ತನ್ನ ಕುದುರೆಯನ್ನು ದುರ್ಜಾತಸಿಂಹನ ಕಡೆ ತಿರುಗಿಸಿ " ದುಷ್ಟಾ, ಇದೇನು ಮಾಡಿದೆ! " ಎಂದು ಕೋಪದಿಂದ ಕತ್ತಿಯನ್ನು ಬೀಸಿ ದನು. ದುರ್ಜಾತನು ತಂದೆಯ ಮೇಲೆ ಬೀಳುವುದನ್ನು ನೋಡಿ ಚಂದ್ರ ಸೇನನು ಸಹಾಯಕ್ಕೆ ಬಂದನು. ಇದನ್ನು ಕಂಡು ಉನ್ಮತ್ತಸಿಂಹನು ಚಂದ್ರಸೇನನನ್ನು ಮುತ್ತಿದನು. ಅಷ್ಟರಲ್ಲಿ ಪಕ್ಕದ ಪೊದೆಗಳ ನಡುವೆ ಕರ್ಕಶ ಧ್ವನಿಯಾಯಿತು. ಎಲ್ಲರೂ ಗಾಬರಿಯಿಂದ ಯುದ್ಧವನ್ನು ನಿಲ್ಲಿಸಿ ಸುತ್ತಲೂ ನೋಡಿದರು. " ಚಂಡಾಲರೇ, ಯಾರಿಗೋಸ್ಕರ ನೀವು ಹೋರಾಡುತ್ತೀರೋ ಆ ತರುಣಿಯನ್ನು ಒಬ್ಬ ತರುಣ ಶೂರ ಯೋಧನು ಬಿಡುಗಡೆ ಮಾಡಿರು ವನು! "—ಎಂದು ಮತ್ತೆ ಮೊಳಗಿತು ಆ ಕರ್ಕಶ ಧ್ವನಿ. ! ಉನ್ಮತ್ತಸಿಂಹನಿ ಗಂತೂ ಸಹನೆ ಮೀರಿತು. ಯಾರ ಧ್ವನಿ, ಏಕೆ ಧ್ವನಿ ಎಂಬುದನ್ನು ವಿಚಾರಿ ಸದೆ ಕ್ರೋಧದಿಂದ ದುರ್ಜಾತಸಿಂಹನನ್ನು ಹಿಂದೆ ಬರುವಂತೆ ಹೇಳಿ ನಾಗಾ ಲೋಟದಲ್ಲಿ ಕುದುರೆಯನ್ನು ಗುಹೆಯ ಕಡೆ ಓಡಿಸಿದನು. ದುರ್ಜಾತಸಿಂಹ ನಿಗೆ ತಾನು ಮಾಡಿದ ತಪ್ಪು ಗೊತ್ತಾಯಿತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ !

ವೃದ್ಧ ವನಚರಿ ಕರ್ಕಶ ಧ್ವನಿ ಮಾಡುತ್ತ ಪೊದೆಯಿಂದ ಈಚೆಗೆ ಬಂದಳು. ಸತ್ಯಾಶ್ರಯನೂ, ಚಂದ್ರಸೇನನೂ, ಚಂಡವರ್ಮನೂ ಆಕೆ

ಯನ್ನು ಎವೆಯಿಕ್ಕದೆ ನೋಡುತ್ತ ನಿಂತರು. ವನಚರಿ ದಿಗ್ಭ್ರಾಂತರಾಗಿ ನಿಂತಿರುವ ಅವರನ್ನು ಕಂಡು—"ಸರದಾರರೇ, ಇನ್ನೇಕೆ ಭಯ! ತರುಣಿಯ ಬಿಡುಗಡೆ ಆಯಿತು. ಯಾವನು ಆಕೆಯನ್ನು ಬಿಡುಗಡೆ ಮಾಡಿರುವನೋ ಅವನೇ ಆಕೆಗೆ ಯೋಗ್ಯ ವರ." ಎಂದು ಕೂಗುತ್ತ ಕಾಡಿನಲ್ಲಿ ಕಣ್ಮರೆಯಾದಳು.

ತರುಣ ಯೋಧನು ಯಾರಿರಬಹುದೆಂಬುದನ್ನು ಸರದಾರರು ತಾವೇ ಅರಿತುಕೊಂಡರು. ಸತ್ಯಾಶ್ರಯನು ಚಂಡವರ್ಮನ ಕಡೆ ನೋಡಿದನು. ವೃದ್ಧ ಸ್ತ್ರೀಯಳ ಮಾತಿನಿಂದ ಚಂಡವರ್ಮನ ಮನಸ್ಸಿನ ಮೇಲೆ ದುಷ್ಪರಿಣಾಮವುಂಟಾಗಿರಬಹುದೆಂದು ಭಾವಿಸಿದನು. ಚಂಡವರ್ಮನಿಗಂತೂ ಯಾವ ಪರಿಣಾಮವೂ ಆಗಿರಲಿಲ್ಲ. ಲಲಿತಪ್ರಭೆಯು ಸುರಕ್ಷಿತವಾಗಿ ತನಗೆ ಸಿಕ್ಕಿದರೆ ಸಾಕು. ಅದಕ್ಕಾಗಿ ಯಾರು ಕಾದಿ ಮಡಿದರೇನು? ಯಾರು ನೊಂದು ನರಳಿದರೇನು? ವೀರಧವಳನು ಕಷ್ಟಪಟ್ಟು ಲಲಿತಪ್ರಭೆಯನ್ನು ಬಿಡುಗಡೆ ಮಾಡಿದ್ದರೆ ಒಳ್ಳೆಯದೆ! ಸತ್ಯಕ್ಕೆ ತಲೆಬಾಗುವ ಸತ್ಯಾಶ್ರಯನಿರುವಾಗ ಆತನಿಗೆ ಸಂಶಯವೇನಿದೆ? ಅಂತು, ಸತ್ಯಾಶ್ರಯನು ಚಂದ್ರಸೇನ ಚಂಡವರ್ಮರೊಡನೆ ಸಿಂಹಗುಹೆಯ ಕಡೆಗೆ ವೇಗವಾಗಿ ಹೊರಟನು. ಕಳೆದುಳಿದ ಸವಾರರೂ ಹಿಂಬಾಲಿಸಿದರು.

ಇತ್ತ ಶೈತ್ಯೋಪಚಾರಗಳಿಂದ ಲಲಿತಪ್ರಭೆ ಎಚ್ಚೆತ್ತು ವೃಕ್ಷಮೂಲದಲ್ಲಿ ದೂರ ನಿಂತಿದ್ದ ವೀರಧವಳನನ್ನು ಹತ್ತಿರ ಕರೆದಳು. ವೀರಧವಳನಿಗಾದರೂ ಮನಸ್ಸಿನಲ್ಲಿ ಸುಖದುಃಖಗಳ ಒಂದು ಸಮರವೇ ಆಗುತ್ತಿತ್ತು. ಲಲಿತಪ್ರಭೆಯ ಅಪಹರಣ, ಸತ್ಯಾಶ್ರಯನ ಸಂತಾಪ—ಇವುಗಳ ನಡುವೆ ತನ್ನನ್ನು ಹತ್ತಿರ ಕರೆಯುತ್ತಿರುವ ಮುದ್ದುಮೋಹನರನ್ನೆ! ಹತ್ತಿರ ಬಂದು "ಲಲಿತ, ಆಯಾಸವಾಯಿತೆ!" ಎಂದು ಕೇಳಿದನು. ಲಲಿತಪ್ರಭೆಗೆ ಆಯಾಸದ ಮಾತು ಬೇಕಾಗಿರಲಿಲ್ಲ. ವೀರಧವಳನು ಆ ಕಾಡಿಗೆ ಅಷ್ಟು ಹೊತ್ತಿನಲ್ಲಿ ಏತಕ್ಕೆ ಬಂದನೆಂಬ ವಿಚಾರ ಬೇಕಿತ್ತು ಆಕೆಗೆ! ತನ್ನ ಮೇಲಣ ಪ್ರೇಮದಿಂದ ಬಂದಿರಬಹುದೇ ಎಂಬ ಶಂಕೆ! ಪ್ರೇಮದಿಂದ ಬಂದಿರಬಹುದು ಅಥವಾ

ಪ್ರೇಮದಿಂದ ರಕ್ಷಿಸಿರಲೂಬಹುದು. ಆದರೆ, ಪ್ರೇಮವನ್ನು ಗಂಡಸಿನ ಬಾಯಿಂದ ಕೇಳಬೇಕೆಂಬುದು ಸ್ತ್ರೀ ಸ್ವಭಾವ. ವೀರಧವಳನಂತೂ ಬಾಯಿಮಾತಿನ ಬಡಾಯಿಗಾರನಲ್ಲ. ಅಂತು, ಲಲಿತಪ್ರಭೆಗೆ ತನ್ನಲ್ಲಿರುವ ಅನುರಾಗಕ್ಕೆ ಭಂಗ ಬರಬಾರದೆಂದು ಭಾವಿಸಿ, "ಲಲಿತ, ಅಜಿಂಕ್ಯ ದುರ್ಗದಲ್ಲಿ ನನಗೆ ಗತಿಯಾರೆಂದು ಅರಣ್ಯಕ್ಕೆ ಬಂದೆನು. ಬೇಟೆಯಿಂದಲಾದರೂ ಬೇಸರವನ್ನು ಕಳೆಯ ಬೇಕೆಂದು ಬಂದೆನು. ಇಲ್ಲಿ ನಿನ್ನನ್ನು ಕಂಡೆನು. ಕುದುರೆಯ ಗೊರಸಿನಲ್ಲಿ ಅಡಗಿತ್ತು ಅನುರಾಗದ ಪುನರ್ಮಿಲನ." ಎಂದು ನೆಲವನ್ನು ನೋಡುತ್ತ ನುಡಿದನು.

ಲಲಿತಪ್ರಭೆ—ಹೌದು, ಬೇಟೆಯಿಂದ ಅನುರಾಗ! ಅನುರಾಗದಿಂದ ಬೇಟೆ! ನಾನೂ ಒಂದು ಬೇಟೆಯ ವಸ್ತುವಲ್ಲವೇ?

ವೀರಧವಳ—ಲಲಿತ, ಹಾಗೆನ್ನಬಾರದು. ನೀನು ಸರದಾರ ಸತ್ಯಾಶ್ರಯನ ಏಕಮಾತ್ರ ಪುತ್ರಿ. ಚಂಡವರ್ಮನ ಅರಗಿಣಿ!

ಲಲಿತಪ್ರಭೆಗೆ ಚಂಡವರ್ಮನ ಹೆಸರು ಕೇಳಿದೊಡನೆಯೇ ಕಾಯ ಕಂಪಿಸಿತು. "ವೀರ, ನೀನೂ ನನ್ನನ್ನು ಅಣಕಮಾಡುವೆಯಾ? ನಮ್ಮನ್ನು ಮೀರಿದ ದೇವರೊಬ್ಬರಿದ್ದಾನೆ. ನನ್ನ ಹೃದಯವನ್ನು ಬಿಚ್ಚಿ ನೋಡಬಲ್ಲ ಪರಮಾತ್ಮನೊಬ್ಬನಿದ್ದಾನೆ. ಬರಿಯ ಮಾತಿನಿಂದ ಪ್ರಯೋಜನವೇನು!" ಎಂದು ಕಣ್ಣೀರಿಟ್ಟಳು. ವೀರಧವಳನಿಗೆ ತನ್ನ ಮಾತಿನ ಪರಿಣಾಮ ತಿಳಿಯಿತು. ಲಲಿತಪ್ರಭೆಯ ಹೃದಯದ ಅಮರಜ್ಯೋತಿಯನ್ನು ಅರಿತನು.

ಅಷ್ಟರಲ್ಲಿ ದೂರದ ಗದ್ದಲ ಇಬ್ಬರನ್ನೂ ಬೆರಗು ಮಾಡಿತು. ಅಶ್ವಾರೋಹಿಗಳ ಹೋರಾಟದ ಗದ್ದಲ! ಗದ್ದಲವು ಇವರ ಕಡೆಗೆ ಬರುತ್ತಿತ್ತು. ತೀರಾ ಹತ್ತಿರ ಬಂದ ಮೇಲೆ ವೀರಧವಳನು ಆ ಅಶ್ವಾರೋಹಿಗಳ ಗುಂಪಿನಲ್ಲಿ ಕರಿವೈಯ ಯಮದೂತರಂತಿದ್ದ ಇಬ್ಬರು ಸವಾರರನ್ನು ಕಂಡನು. ಸತ್ಯಾಶ್ರಯನು ಅವರನ್ನು ಬೆನ್ನಟ್ಟಿ ಬರುತ್ತಿದ್ದನು. ತಕ್ಷಣ ಲಲಿತಪ್ರಭೆಯನ್ನು ನೋಡಿ—"ಅಲ್ಲಿ ನೋಡು, ನಿಮ್ಮ ತಂದೆ" ಎಂದು ತೋರಿಸಿದನು. ಲಲಿತಪ್ರಭೆಯು ಗಾಬರಿಯಿಂದ—"ವೀರ, ವೀರ, ತಡಮಾಡಬೇಡ. ಮುಂದೆ

ಬರುತ್ತಿರುವವರೇ ನನ್ನನ್ನು ದುರ್ಗದಿಂದ ಅಪಹರಿಸಿಕೊಂಡು ಬಂದವರು. "ಹಾ, ತಂದೆ!" ಎಂದು ಗೋಳಿಟ್ಟಳು. ವೀರಧವಳನು ಲಲಿತಪ್ರಭೆಯನ್ನು ಸಮಾಧಾನಪಡಿಸಿ, ಬಿಲ್ಲನ್ನು ಗುರಿಯಿಟ್ಟು ಆ ಕರಿವೈಯ ಯಮದೂತರ ಕಡೆಗೆ ಎರಡು ಬಾಣಗಳನ್ನು ಪ್ರಯೋಗಿಸಿದನು. ಬಾಣಗಳು ಬಂದ ಕಡೆಗೆ ಯಮದೂತರು ನೋಡಿದರು. ಅವರ ಕಣ್ಣಿಗೆ ಲಲಿತಪ್ರಭೆ ಕಾಣಲಿಲ್ಲ. ಲಲಿತಪ್ರಭೆಯ ಮುಂದೆ ನಿಂತಿದ್ದ ವೀರಧವಳನನ್ನು ನೋಡಿ ಹೆದರಿದರು ಆ ಯಮದೂತರು! ಮತ್ತೆ ಅಲ್ಲಿ ನಿಲ್ಲದೆ ಕುದುರೆಗಳನ್ನು ರಭಸದಿಂದ ಸಿಂಹಗುಹೆಯ ಕಡೆಗೆ ಓಡಿಸುತ್ತ ಕಣ್ಮರೆಯಾದರು. ಹಿಂದೆ ಸತ್ಯಾಶ್ರಯ! ಮುಂದೆ ವೀರಧವಳ! ಅವರಿಗೆ ಬೇರೆ ಗತಿಯುಂಟೆ! ವೃಕ್ಷಮೂಲದಲ್ಲಿ ನಿಂತಿದ್ದ ಲಲಿತಪ್ರಭೆಯು ತನ್ನ ತಂದೆಯನ್ನು ಕಂಡು—"ತಂದೆ" ಎಂದು ಕೂಗಿದಳು. ಅಷ್ಟು ಹೊತ್ತಿಗೆ ಚಂದ್ರಸೇನ, ಚಂಡವರ್ಮ ಮತ್ತು ಇತರ ಸವಾರರು ಬಂದು ಸೇರಿದರು.

ಮಗಳು ಸುರಕ್ಷಿತವಾಗಿರುವುದನ್ನು ಕಂಡು ವೃದ್ಧ ತಂದೆಗೆ ಸಂತೋಷವಾಯಿತು. ದೂರದಲ್ಲಿ ವೀರಧವಳ! ತಂದೆಯು ತನ್ನ ಸಮೀಪಕ್ಕೆ ಬಂದೊಡನೆಯೇ ಲಲಿತಪ್ರಭೆ ವೀರಧವಳನ ಕಡೆ ಉಪಕಾರ ದೃಷ್ಟಿಯಿಂದ ಒಂದು ಸಲ ನೋಡಿ ತಲೆಬಾಗಿಸಿ ನಿಂತಳು. ಸತ್ಯಾಶ್ರಯನಿಗೆ ಅರ್ಥವಾಯಿತು. ವೀರಧವಳನು ದೂರ ನಿಂತಿರುವುದನ್ನು ನೋಡಿ ಸತ್ಯಾಶ್ರಯನು ತಾನೊಬ್ಬನೇ ಆತನ ಬಳಿಗೆ ಬಂದು ಕ್ಷಣಮಾತ್ರ ನಿಂತು ಆತನಿಗೆ ಸಮಾಧಾನವಾಗುವಂತೆ—"ಧವಳ, ನಿನ್ನ **ಉಪಕಾರವನ್ನು ನಾನು ಮರೆಯುವುದಿಲ್ಲ.**" ಎಂದು ಸೂಚಿಸಿದನು. ಚಂಡವರ್ಮ ಇದನ್ನು ಗಮನಿಸಲಿಲ್ಲ. ಆತನ ಗಮನವೆಲ್ಲ ಲಲಿತಪ್ರಭೆಯ ಮೇಲಿತ್ತು! ವೀರಧವಳನು ಅಲ್ಲಿ ನಿಲ್ಲಲಿಲ್ಲ. ಬಂದ ದಾರಿ ಹಿಡಿದು ಅಜಿಂಕ್ಯ ದುರ್ಗಕ್ಕೆ ತೆರಳಿದನು. ಸತ್ಯಾಶ್ರಯನೂ ಇತರರೂ ಸಹ ಲಲಿತಪ್ರಭೆಯೊಡನೆ ದುರ್ಗಾಭಿಮುಖವಾಗಿ ಹೊರಟರು. ಸಂಜೆ ನಾಲ್ಕು ಗಂಟೆಯ ಸಮಯವಾಗಿತ್ತು.

## ೧೨. ಯುಗಾದಿ

### ಅಂದಿನ ರಾತ್ರಿ !

ಐದು ವಾರಗಳು ಕಳೆದುವು. ಯುಗಾದಿ ಹುಟ್ಟಿತು. ವರ್ಷಪ್ರತಿಪದದಲ್ಲಿ ದೇವಿಪೂಜೆಯ ಉತ್ಸವಕ್ಕೆ ಸಕಲ ಸನ್ನಾಹಗಳೂ ನಡೆದುವು. ಅಜಿಂಕ್ಯ ದುರ್ಗದ ಸುತ್ತಮುತ್ತಲಿನ ಎಲ್ಲ ಸರದಾರರಿಗೂ ಆಮಂತ್ರಣ ಹೋಯಿತು. ಸಿಂಹಗುಹೆಯ ಸಿಂಹಗಳನ್ನು ಮಾತ್ರ ಬಿಟ್ಟರು. ಬಹಳ ವರ್ಷಗಳಿಂದ ಈ ಸಮಾರಂಭ ನಡೆದಿರಲಿಲ್ಲ. ಏಕೆಂದರೆ, ಚಂಡವರ್ಮನು ದುರ್ಗಾಧಿಪತಿಯಾದ ಮೇಲೆ ಅಜಿಂಕ್ಯ ದುರ್ಗವನ್ನು ಬಿಟ್ಟು ರಾಜಮಹೇಂದ್ರ ಸೇರಿಕೊಂಡನಷ್ಟೆ. ತನ್ನೂರು ತನಗೆ ಬೇಕಿರಲಿಲ್ಲ ಸರದಾರನಿಗೆ! ಭೋಗ ಲಾಲಸೆಗಾಗಿ ಆತನು ಊರು ಬಿಟ್ಟವನಲ್ಲ ; ಅಳಿದ ಅಣ್ಣನ ಮರಣಶೋಕವನ್ನು ಮರೆಯುವುದಕ್ಕಾಗಿ ! ಅಂತು ಅಣ್ಣನ ಮರಣಶೋಕವನ್ನು ಮರೆಯುವ ಅವಸ್ಥೆಯಲ್ಲಿ ದುರ್ಗದ ಅಭಿಮಾನದೇವತೆಯಾದ ದೇವಿ ಪೂಜೆಯ ವ್ಯವಸ್ಥೆಯನ್ನೂ ಮರೆತಿದ್ದನು. ದೇವಿಪೂಜೆಯ ದಿನ ಮಹಿಷಬಲಿಯನ್ನೂ ಅನ್ನಸಂತರ್ಪಣೆಯನ್ನೂ ನಿಂತು ನಡೆಸಬೇಕಾದುದು ದುರ್ಗಾಧಿಪತಿಯ ಕರ್ತವ್ಯವಾಗಿತ್ತು. ಹಿರಿಯರ ಕಾಲದಿಂದ ನಡೆದುಬಂದ ಕರ್ತವ್ಯವಿದು. ಆದರೆ, ಚಂಡವರ್ಮನಿಗೆ ಹಿರಿಯರ ಕರ್ತವ್ಯ ಕಟ್ಟಳೆ ಏಕೆ ? ತನ್ನ ಕರ್ತವ್ಯ ಏನಲ್ಲದಿದ್ದರೂ ಲಲಿತಪ್ರಭೆಯ ಪಾಣಿಗ್ರಹಣ ! ಸ್ವಾರ್ಥಸಾಧನೆಗಾಗಿ ಸದಾಚಾರವನ್ನಾದರೂ ಬಿಡಬಲ್ಲ ಬಲಾಢ್ಯ ಚಂಡವರ್ಮ !

ದೇವಿ ಪೂಜೆ, ದೇವಿ ಪೂಜೆಯ ದಿನ ಮಹಿಷಬಲಿ ! ಅದರಲ್ಲಿಯೂ ದುರ್ಗಾಧಿಪತಿಯ ಸ್ವಹಸ್ತ! ಅಜಿಂಕ್ಯ ದುರ್ಗದ ಜನರಿಗೆ ಅದಕ್ಕಿಂತ ಹಿರಿದಾದ ಹಬ್ಬ ಬೇರೊಂದಿಲ್ಲ. ಬಹಳ ವರ್ಷಗಳಿಂದ ನಡೆಯದಿದ್ದ ಈ ನಾಡಹಬ್ಬ ಅಂದು ದುರ್ಗಾಧಿಪತಿ ಚಂಡವರ್ಮ ಮಹಾರಾಜರ ಮೇಲ್ವಿಚಾರಣೆಯಲ್ಲಿ ನಡೆಯುವ ಸಂಭ್ರಮವನ್ನು ನೋಡಲು ಕಿಕ್ಕಿರಿದು ಸೇರಿತ್ತು ಜನ ಅಜಿಂಕ್ಯ ದುರ್ಗದಲ್ಲಿ ! ಕವಾತು ಮೈದಾನ ತಳಿರು ತೋರಣಗಳಿಂದ ಶೋಭಾಯಮಾನ

ವಾಗಿತ್ತು. ಈ ಕವಾತು ಮೈದಾನದ ಒಂದು ಮೂಲೆಯಲ್ಲಿ ಅಜಿಂಕ್ಯ ದುರ್ಗದ ಅಭಿಮಾನ ದೇವತೆಯ ಗುಡಿ. ಗುಡಿಯೆಂದರೆ ಗೋಪುರವಲ್ಲ. ಗುಡಾರವೂ ಅಲ್ಲ. ಒಂದು ಕಲ್ಲು ಕಂಬ. ಇದನ್ನೇ ಜನರು ಕರುಗಲ್ಲು ಎಂಬುದು ವಾಡಿಕೆಯಾಗಿತ್ತು. ಇದಕ್ಕೆ ನೆರಳಿಲ್ಲ. ಊರು ದೇವರಿಗೆ ಊರೇ ನೆರಳೆಂಬಂತೆ ಈ ಕರುಗಲ್ಲು ದೇವಿ ಕವಾತು ಮೈದಾನದ ಒಂದು ಮೂಲೆಯಲ್ಲಿ ಮೆರೆದಿದ್ದಳು. ಯುಗಾದಿ ಪ್ರತಿಪದದ ದಿನ ಅಮ್ಮನಿಗೆ ಪೂಜೆ! ಮಹಿಷಬಲಿ ಪೂಜೆ !! ದುರ್ಗಾಧಿಪತಿಯ ಸ್ವಹಸ್ತ !!!

ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಕಿಕ್ಕಿರಿದು ನಡೆಯಿತು ಜನ ಕವಾತು ಮೈದಾನದ ಕಡೆಗೆ! ಸಾಯಂಕಾಲ ೪ ಗಂಟೆಯ ಸಮಯಕ್ಕೆ ಸಕಲ ಸನ್ನಾಹಗಳೂ, ಸಂದೋಹಗಳೂ ಮುಗಿದುವು. ಎಲ್ಲರೂ ದುರ್ಗಾಧಿ ಪತಿ ಚಂಡವರ್ಮ ಮಹಾರಾಜರು ಬರುವುದನ್ನೇ ಎದಿರುನೋಡುತ್ತ ನಿಂತರು. ನಗಾರಿ ನೌಪತ್ತುಗಳ ಧ್ವನಿಯಾಯಿತು. ರಾಜದ್ವಾರದ ಒಳಭಾಗದಲ್ಲಿ ಶಸ್ತ್ರ ಸಜ್ಜಿತರಾದ ಸವಾರರು ಎರಡು ಕಡೆಗಳಲ್ಲಿಯೂ ಸಿದ್ಧರಾದರು. ಇದಿಗೋ, ಚಂಡವರ್ಮ ಮಹಾರಾಜರು! ಮಹಾರಾಜರು ಧರಿಸಿದ್ದ ಉಡಿಗೆ ತೊಡಿಗೆ ಅಜಿಂಕ್ಯ ದುರ್ಗದ ರಾಜಮನೆತನದ ಕೀರ್ತಿಕಲಶಗಳಂತಿದ್ದುವು. ಚಾಳುಕ್ಯ ವಂಶದ ಕೀರ್ತಿಕಲಶಗಳಲ್ಲವೇ ಅವು? ಚಂಡವರ್ಮನೂ ಚಾಳುಕ್ಯ ವಂಶದ ಅರಸಲ್ಲವೇ ? ಆತನ ಮಸ್ತಕದಲ್ಲಿದ್ದ ಶಿರಸ್ತ್ರ, ವಜ್ರ ವೈಡೂರ್ಯಗಳಿಂದ ಪ್ರಕಾಶಿಸುತ್ತಿತ್ತು. ಆತನ ಭುಜದಂಡದಲ್ಲಿ ಅಮೂಲ್ಯವಾದ ಭುಜಕೀರ್ತಿ ಯಿತ್ತು. ಉಭಯ ಹಸ್ತಾಂಗುಲಿಗಳಲ್ಲಿಯೂ ಉಂಗುರಗಳು! ಮುದ್ರೆಯುಂ ಗರದ ಜೊತೆಗೆ ಒಂಭತ್ತು ಉಂಗುರಗಳು ವಿರಾಜಿಸುತ್ತಿದ್ದುವು ಹೆಬ್ಬೆರಳು ಸಹಿತವಾಗಿ! ನೀಳವಾದ ಜರತಾರಿಯ ನಿಲುವಂಗಿ. ಮುತ್ತಿನ ಕಂಠೀಹಾರ. ಹೀಗೆ ಸರ್ವಾಲಂಕೃತನಾಗಿ ದಿವ್ಯತೇಜಿಯನ್ನೇರಿ ನಡೆತಂದನು ಚಾಳುಕ್ಯ ವಂಶಾಧೀಶ್ವರ ಚಂಡವರ್ಮ!

ಚಂಡವರ್ಮನು ನಿಜಾಸನದಲ್ಲಿ ಕುಳಿತು ಸಿಂಹಾವಲೋಕನ ಕ್ರಮದಿಂದ ಗುರುಜನ, ಪರಿಜನ, ನಾರೀಜನ, ಸಮಸ್ತಜನ ಸಮೂಹವನ್ನೂ ಒಂದು ಸಲ ನೋಡಿದನು. ದೇವಿ ಪೂಜೆಗೆ ಮುಂದಾಗಿ ಅಂಗಸಾಧನೆ, ಸಾಹಸ ಚಮ

ತ್ಕೃತಿಗಳ ಕಾರ್ಯಕ್ರಮವಿತ್ತು. ಕುಸ್ತಿ, ಕತ್ತಿವರಸೆ, ಬಾಣಪ್ರಯೋಗ, ಆನೆಯ ಕಾಳಗ, ಕುದುರೆ ಕವಾಯಿತು—ಹೀಗೆ ಅನೇಕ ಸಾಹಸ ಕಾರ್ಯ ಗಳು ಒಂದೊಂದಾಗಿ ನಡೆದುವು ಮೈದಾನದಲ್ಲಿ. ಇಷ್ಟರಲ್ಲಿ ದುರ್ಗರಕ್ಷಕ ರಣರಾಗನು ಅನುಚರರ ಸಮೇತನಾಗಿ ಬಲಿಪೂಜೆಗಾಗಿ ಪುಷ್ಟ ಮಹಿಷನನ್ನು ಒಡಗೊಂಡು ತಮ್ಮಟೆ ಕಹಳೆಗಳ ಮಾರ್ದನಿಯಲ್ಲಿ ಸಡಗರದಿಂದ ಮೈದಾನ ವನ್ನು ಹೊಕ್ಕನು. ಜನರ ನೋಟ ಕೋಣನ ಕಡೆಗೆ ತಿರುಗಿತು. ರಣ ರಾಗನು ದೇವಿಯ ಗುಡಿಗೆ ಪ್ರದಕ್ಷಿಣೆ ಮಾಡಿ ಚಂಡವರ್ಮನ ಮುಂಗಡೆ ತಲೆ ಬಾಗಿ ನಿಂತನು. ಪೂಜಾರಿಯು ಒಂದು ರಕ್ತವರ್ಣದ ಪುಷ್ಪಮಾಲೆಯನ್ನು ತಂದು ಚಂಡವರ್ಮನಿಗೆ ಒಪ್ಪಿಸಿದನು. ಚಂಡವರ್ಮನು ಮಹಿಷದ ಕೊರ ಳಿಗೆ ಹೂಮಾಲೆಯನ್ನು ತೊಡಿಸಿ ಅದರ ಹಣೆಗೆ ಸಿಂಧೂರದ ತಿಲಕವನ್ನಿಟ್ಟು ಆಶೀರ್ವದಿಸಿದನು! ಹಾಗೆಯೇ ಮಹಿಷ ಸಮೇತ ದುರ್ಗಕ್ಕೆ ಮೂರು ಸಲ ಪ್ರದಕ್ಷಿಣೆ ಬಂದು ದೇವಿಯ ಎದುರಿಗೆ ನಿಂತನು. ಮಹಿಷಬಲಿಯನ್ನು ನೋಡುವ ಸಡಗರದಲ್ಲಿ ಸಮಸ್ತ ಜನರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿ ತಿದ್ದರು. ನಗಾರಿ ನೌಬತ್ತುಗಳು ಮೊಳಗಿದುವು. ಚಂಡವರ್ಮನು ಪಟ್ಟ ಕತ್ತಿಯನ್ನು ಇರಿದು ದೇವಿಗೆ ನಮಸ್ಕರಿಸಿ ಮಹಿಷವನ್ನು ದೇವಿಗೆ ಬಲಿ ಗೊಟ್ಟನು ಒಂದೇ ಹೊಯ್ಲಿಗೆ! ಮಹಿಷಬಲಿಯಲ್ಲಿ ಕಾಣಿಸಿತು ಚಂಡ ವರ್ಮನ ಕಾಯಶಕ್ತಿ! ಮಹಿಷಬಲಿ ಮುಗಿದ ಮೇಲೆ ಮಹಾಮಂಗಳಾರತಿ ನಡೆದು ದೇವಿಪೂಜೆಯ ಕೊನೆಯ ಅಂಕ ಪ್ರಾರಂಭವಾಯಿತು. ಅಷ್ಟರಲ್ಲಿ ಪ್ರಚಂಡ ಬಿರುಗಾಳಿ! ನೆರೆದಿದ್ದ ಜನಸಮೂಹ ತತ್ತರಿಸಿತು! ದೇವಿಯ ಮುಂದೆ ಉರಿಯುತ್ತಿದ್ದ ದೀಪ ಭಗ್ಗನೆ ದೊಡ್ಡ ಜ್ವಾಲೆಯಾಗಿ ಕಾಣಿಸಿತು. ಬಿರುಗಾಳಿ ನಿಂತ ಮೇಲೆ ಮೈನಡುಗುವಂತೆ ಭೂಮಿ ಗುಡುಗಿತು.

ದೇವಿಪೂಜೆಯ ಕೊನೆಯ ಅಂಕವೇ ರಾಜಭೋಜನ, ಅನ್ನಸಂತರ್ಪಣೆ! ನೆರೆದಿದ್ದ ಜನರಿಗೆಲ್ಲ ಔತಣವಾಗಬೇಕಾದುದರಿಂದ ಪಾಕಶಾಲೆಯಲ್ಲಿ ಅವಸರ ದಿಂದ ಭಟ್ಟರು ಬೆಂದು ಬೇಯಿಸುತ್ತಿದ್ದರು. ಸರದಾರರಿಗೊಂದು ಕಡೆ, ಸಾಮಾನ್ಯರಿಗೊಂದು ಕಡೆ, ಅಧಿಕಾರಿಗಳಿಗೊಂದು ಕಡೆ, ಆಳುಕಾಳಿಗೊಂದು ಕಡೆ ಭೋಜನಕ್ಕೆ ವ್ಯವಸ್ಥೆಯಾಗಿತ್ತು. ಎಲ್ಲರೂ ಬಿರುಗಾಳಿಯನ್ನು ಮರೆತು

ಭೋಜನಕ್ಕೆ ಕುಳಿತರು. ಸರದಾರ ಚಂಡವರ್ಮನ ಸ್ವಂತ ಮೇಲ್ವಿಚಾರಣೆಯಲ್ಲಿ,—ವೃದ್ಧ ರಣರಾಗನ ಸೇವಾತತ್ಪರತೆಯಲ್ಲಿ—ಯಾವುದಕ್ಕೆ ಕೊರತೆ! ಈ ಸಲ ಮಹಿಷಬಲಿ ಪೂಜೆಯಲ್ಲಿ ವಿಶೇಷ ಆದರಣೆಯೂ ಇತ್ತು. ಸರದಾರ ಸತ್ಯಾಶ್ರಯ, ಲಲಿತಪ್ರಭೆ, ಚಂದ್ರಸೇನ—ಇವರುಗಳು ಅಜಿಂಕ್ಯ ದುರ್ಗದಲ್ಲಿರುವುದು ಒಂದು ವಿಶೇಷ ವಿಚಾರವಲ್ಲವೇ? ತಾನು ಕೈಹಿಡಿಯ ಬೇಕೆಂದಿರುವ ಲಲಿತಪ್ರಭೆಗೆ ತನ್ನ ವೈಭವದ ಸವಿಯುಂಟಾಗುವುದೆಂದು ಒಂದು ಹೆಮ್ಮೆ ಚಂಡವರ್ಮನಿಗೆ! ಪಾಪ, ಗುಣದಿಂದ ಗೆಲ್ಲದುದನ್ನು ಹಣದಿಂದ ಗೆಲ್ಲಬಹುದೆಂದು ತಿಳಿದಿದ್ದನು ಚಂಡವರ್ಮ. **ಹಣದಿಂದ ಗೆದ್ದುದು ಶಾಶ್ವತವಲ್ಲ.** ಇದನ್ನು ಆತನು ಅರಿತಿರಲಿಲ್ಲ.

ಎಲ್ಲ ಜನರ ಭೋಜನ ಮುಗಿದ ಮೇಲೆ ಚಂಡವರ್ಮನು ತನಗಾಗಿ ಗೊತ್ತುಮಾಡಿದ್ದ ಪೀಠದಲ್ಲಿ ಕುಳಿತನು. ಎಲೆಯ ಮೇಲೆ ಬಡಿಸಿದ್ದ ಭಕ್ಷ್ಯ ಭೋಜ್ಯಗಳನ್ನು ಒಮ್ಮೆ ನೋಡಿದನು. ಆಪೋಶನಕ್ಕೆ ನೀರನ್ನು ಅಂಗೈಯಲ್ಲಿ ತೆಗೆದುಕೊಂಡನು. ಆ ನೀರನ್ನು ಮಂತ್ರಿಸಿ ಕುಡಿದುದೂ ಆಯಿತು. ಅಷ್ಟ ರಲ್ಲಿ ಶಸ್ತ್ರಾಗಾರದಲ್ಲಿ ದಡ್ ಬಡ್ ಎಂದು ಶಬ್ದವುಂಟಾಯಿತು. ಶಸ್ತ್ರಾ ಗಾರದಲ್ಲಿ ನೇತುಹಾಕಿದ್ದ ಶಿರಕ ಮತ್ತು ಸರ್ವಾಂಗ ಕವಚ ಕೆಳಗೆ ಬಿದ್ದುವು. ಚಂಡವರ್ಮನ ಮುಖದ ತೇಜಸ್ಸು ಮಾಯವಾಯಿತು. ಊಟವಂತೂ ಮುಗಿಯಿತು. ಜನಸಂದಣಿಯ ಗದ್ದಲದಲ್ಲಿ ಈ ಸಣ್ಣ ಅಪಶಕುನವನ್ನು ಯಾರೂ ಗಮನಿಸಲಿಲ್ಲ. ಔತಣವು ಪೂರೈಸಿದ ಮೇಲೆ ಅಂದಿನ ಮಹಿಷಬಲಿ ಉತ್ಸವ ಮುಕ್ತಾಯಗೊಂಡಿತು.

ಚಂಡವರ್ಮನು ಸತ್ಯಾಶ್ರಯ ಮೊದಲಾದ ಸರದಾರರನ್ನು ಬೀಳ್ಕೊಟ್ಟು ತನ್ನ ಶಯನಗೃಹಕ್ಕೆ ಬಂದನು. ಉತ್ಸವದ ಆತುರದಲ್ಲಿ ಆತನಿಗೆ ಆಯಾಸ ವಾಗಿತ್ತು. ಆಯಾಸದ ಜೊತೆಗೆ ಕೊನೆಯದಾಗಿ ಅಪಶಕುನವೂ ಸೇರಿತು. ಹಿಂದಾದ ಸಂದರ್ಭಗಳೆಲ್ಲ ಒಂದೊಂದಾಗಿ ಆತನ ಮನೋಮಾರ್ಗದಲ್ಲಿ ಚಲಿಸಿದುವು. ಒಟ್ಟಿನಲ್ಲಿ ಆತನ ತಲೆಯ ತೂಕ ಹೆಚ್ಚಿತು. ತೂಕಡಿಕೆಯೂ ಬಂತು. **ತಲೆಯಲ್ಲಿ ಚಿಂತೆ ತುಂಬಿದರೆ ತಲೆಯ ತೂಕ ಹೆಚ್ಚುವುದೆಂದು ಬಲ್ಲವರು ಹೇಳುವರು.** ಸಂತೋಷದ ಸವಿಸಾಗರದಲ್ಲಿ ತೇಲುತ್ತಿದ್ದ ಚಂಡ

ವರ್ಮನ ತಲೆಗೆ ಸೀಸದ ಗುಂಡು ಕಟ್ಟಿದಂತಾಯಿತು ಸೀಸಕದ ಪತನ! ಅಂತು, ಯೋಚನೆಯ ಬಿರುಬಿನಲ್ಲಿ ಚಂಡವರ್ಮನು ಪವಡಿಸಿದನು ಪರ್ಯಂಕದ ಮೇಲೆ! ಅಂದಿನ ಉತ್ಸವ ಪ್ರಸಂಗಗಳು ಪ್ರತಿಬಿಂಬಿಸಿದುವು ಕನಸಿನಲ್ಲಿ!

ಶಸ್ತ್ರಾಗಾರದಲ್ಲಿ ಸೀಸಕವೂ, ಸರ್ವಾಂಗ ಕವಚವೂ ಬಿದ್ದಂತೆ ಭಾಸವಾಯಿತು. ಚಂಡವರ್ಮನು ಬೆಚ್ಚಿ ಎದ್ದು ಮತ್ತೆ ಮಲಗಿದನು. ಕವಾತು ಮೈದಾನ, ದೇವಿಯ ಗುಡಿ, ಜನ, ಜಾತ್ರೆ ಎಲ್ಲವೂ ಸುಳಿದುವು ಕನಸಿನಲ್ಲಿ! ಇದ್ದಕ್ಕಿದ್ದ ಹಾಗೆ ಬಿರುಗಾಳಿ ಎದ್ದಿತು. ಬಿರುಗಾಳಿ ನಿಂತ ಕೂಡಲೇ ದೇವಿಯ ಗುಡಿಯಿಂದ ಒಂದು ವ್ಯಕ್ತಿ ಈಚೆಗೆ ಬಂದಿತು. ಸರ್ವಾಂಗ ಕವಚ ಸೀಸಕಗಳನ್ನು ಧರಿಸಿ ಬಿಚ್ಚಿದ ಕತ್ತಿಯನ್ನು ಹಿಡಿದು ಬರುತ್ತಿತ್ತು ಆ ವ್ಯಕ್ತಿ! ಮರುಕ್ಷಣದಲ್ಲಿಯೇ ಆ ವ್ಯಕ್ತಿ ಚಂಡವರ್ಮನು ಊಟಕ್ಕೆ ಕುಳಿತಿದ್ದ ಪ್ರದೇಶಕ್ಕೆ ಬಂದು ನಿಂತಿತು. ಚಂಡವರ್ಮನು ಭಯದಿಂದ ನಡುಗುತ್ತ ಊಟವನ್ನು ಬಿಟ್ಟು ಎದ್ದನು. ಆ ವ್ಯಕ್ತಿ ಚಂಡವರ್ಮನನ್ನೇ ನೋಡುತ್ತಿತ್ತು. ವ್ಯಕ್ತಿಯ ನೋಟ ಕ್ರೂರವಾಗಿ, ಜ್ವಾಲಾಮುಖಿಯಂತೆ ಕಣ್ಣು ಬೆಂಕಿಯನ್ನು ಉಗುಳುತ್ತಿದ್ದುವು ಚಂಡವರ್ಮನ ಮೇಲೆ! ಒಂದು ಕ್ಷಣದ ತರುವಾಯ ಆ ವ್ಯಕ್ತಿ ಲಲಿತಪ್ರಭೆಯ ಬಳಿಗೆ ಬಂದಿತು. ಕೈಯನ್ನು ಚಂಡವರ್ಮನ ಕಡೆ ತೋರಿಸಿ "ಬೇಡ, ಬೇಡ" ಎಂದು ಸನ್ನೆ ಮಾಡಿತು. ಕೊನೆಗೆ ಆ ವ್ಯಕ್ತಿ ಲಲಿತಪ್ರಭೆಗೆ ಆಶೀರ್ವಾದ ಮಾಡಿ ದೇವಿಯ ಗುಡಿಯಲ್ಲಿ ಮಾಯವಾಯಿತು.

ಚಂಡವರ್ಮನು ಕನಸಿನ ಕಳವಳದಲ್ಲಿ ಚೀರಿಡುತ್ತ ದಿಗ್ಗನೆ ಎದ್ದು ಹಾಸಿಗೆಯ ಮೇಲೆ ಕುಳಿತನು. ಆ ವ್ಯಕ್ತಿಯ ಸ್ವರೂಪವು ತನ್ನ ಅಣ್ಣ ಕೀರ್ತಿವರ್ಮನನ್ನು ಹೋಲುತ್ತಿತ್ತೆಂದು ನೆನಪಿಗೆ ಬಂದೊಡನೆಯೇ ಆತನ ಕಣ್ಣಿನಲ್ಲಿ ನೀರು ತುಂಬಿತು. ಆದರೆ, ಇದೆಲ್ಲ ಕನಸು ಎಂಬುದನ್ನು ತಿಳಿದು ಮತ್ತೆ ಮಲಗಿದನು. ಕನಸಿನ ಅಣ್ಣನ ಕನವರಿಕೆಗಾಗಿ ಭಯಪಡುವಂತಿರಲಿಲ್ಲ ಚಂಡವರ್ಮ. ಆದರೆ, ಕಣ್ಣೀರು ಬಂದುದೇಕೆ? ಇದರ ಮರ್ಮ ಚಂಡವರ್ಮನಿಗೇ ಗೊತ್ತು!

## ೧೨. ತಿರಸ್ಕಾರ

### ಅವನ ವಿಚಾರ ನಿನಗೆ ಗೊತ್ತೋ?

ಇತ್ತ ಹಂಸಿಕೆ ಮತ್ತು ವಿಜ್ಜಲ ಇವರುಗಳ ರಾಯಭಾರದಲ್ಲಿ ವೀರಧವಳ ಮತ್ತು ಲಲಿತಪ್ರಭೆ ಇವರುಗಳು ಬೇಸರವನ್ನು ನೀಗುತ್ತಿದ್ದರು. ವೀರಧವಳ ಮತ್ತು ಲಲಿತಪ್ರಭೆ ಇವರುಗಳ ಸಂಮಿಲನಕ್ಕಾಗಿ ಹಂಸಿಕೆಯೂ ವಿಜ್ಜಲನೂ ಪ್ರಬಲ ಪ್ರಯತ್ನ ನಡೆಸಿದರು. ಚಂಡವರ್ಮನ ಪ್ರಚಂಡ ಪ್ರತಾಪ, ಚಂದ್ರ ಸೇನನ ಸೂಕ್ಷ್ಮ ದೃಷ್ಟಿ---ಇವುಗಳ ನಡುವೆ ಎಷ್ಟೋ ವೇಳೆ ಎಲ್ಲ ಪ್ರೇಮಾನು ಸಂಧಾನಗಳೂ ಬಯಲಾಗುತ್ತಿದ್ದುವು. ಈ ಪ್ರೇಮಾನುಸಂಧಾನಗಳು ವೀರಧವಳನಿಗಾಗಲಿ, ಲಲಿತಪ್ರಭೆಗಾಗಲಿ ಬೇಕಾಗಿರಲಿಲ್ಲ. **ಆತ್ಮೀಯವಾದ ಭಕ್ತಿಭರವಸೆ ಇರುವಲ್ಲಿ ಅನುಸಂಧಾನವೇಕೆ? ಸಂಧಾನದ ಫಲ ಸಂತಾಪ! ಆತ್ಮನಿಷ್ಠೆಯ ಫಲ ಶಾಂತಿ!** ಇಷ್ಟಾದರೂ ಲೌಕಿಕ ಸಂಪ್ರದಾಯಬದ್ಧರಾದ ಹಂಸಿಕೆ ಮತ್ತು ವಿಜ್ಜಲ ಇವರುಗಳಿಗೆ ಒಂದು ಸಲವಾದರೂ ವೀರಧವಳ ಮತ್ತು ಅಲಿತಪ್ರಭೆಯ ಭೇಟಿಯಾಗಬೇಕೆಂಬ ಆಸೆ ತಪ್ಪಲಿಲ್ಲ. ಅನುಸಂಧಾನಕ್ಕೆ ಅವರು ಒಪ್ಪುವುದಿಲ್ಲವೆಂದು ತಿಳಿದು ಹಂಸಿಕೆಯೂ ವಿಜ್ಜಲನೂ ಬೇರೊಂದು ಉಪಾಯವನ್ನು ಹುಡುಕಿದರು. ವೀರಧವಳನು ಸಾಮಾನ್ಯವಾಗಿ ಮಧ್ಯಾಹ್ನದ ವೇಳೆ ಅಜಿಂಕ್ಯ ದುರ್ಗದ ಮಧುವನದಲ್ಲಿ ಕಾಲವನ್ನು ನೂಕುವುದು ವಾಡಿಕೆಯಾಗಿತ್ತು. ಮಧುವನದ ಶ್ರೀಮನ್ನಾರಾಯಣನ ದಿವ್ಯ ಸನ್ನಿಧಿಯಲ್ಲಿ ತನ್ನ ಚಿಂತೆಯನ್ನು ಮರೆಯುತ್ತಿದ್ದನು.

ಒಂದು ದಿನ ಹಂಸಿಕೆ ಮತ್ತು ವಿಜ್ಜಲರ ಅನುಸಂಧಾನ ಫಲಿಸಿತು. ನಡುವಗಲ ಮಾರ್ತಾಂಡನ ಚಂಡಾಂಶುವಿನಿಂದ ಭೂತಳ ಬೇಗುದಿಗೊಂಡಿತ್ತು. ಈ ತಾಪಕ್ಕೆ ಪಕ್ಷಿಗಳು ಬಳಲಿ ತಮ್ಮ ತಮ್ಮ ಗೂಡುಗಳಲ್ಲಿ ಬಿಸಿಯುಸಿರು ಬಿಡುತ್ತಿದ್ದುವು. ಇಂಥ ವೇಳೆಯಲ್ಲಿ ಲಲಿತಪ್ರಭೆ ಪರಿಚಾರಿಕೆಯಾದ ಹಂಸಿಕೆಯೊಡನೆ ತನ್ನ ಮಹಲಿನಿಂದ ಹೊರಟು ನೇರವಾಗಿ ಮಧುವನಕ್ಕೆ

ಬಂದಳು. ನಾರಾಯಣನ ಸನ್ನಿಧಿಯಲ್ಲಿ ನಮಿಸುತ್ತ ಕುಳಿತಿದ್ದ ವೀರಧವಳ ನನ್ನು ಕಂಡು ಹಂಸಿಕೆಯನ್ನು ದೂರ ನಿಲ್ಲುವಂತೆ ಹೇಳಿ ತಾನೊಬ್ಬಳೇ ಮುಂದೆ ಬಂದಳು. ಲಲಿತಪ್ರಭೆ ಅರ್ಚಕರಿಲ್ಲದ ಹೊತ್ತಿನಲ್ಲಿ ಏಕೆ ಬಂದಳೆಂಬುದು ವೀರಧವಳನಿಗೆ ತಿಳಿಯಲಿಲ್ಲ. ಅರ್ಚಕರಿಗೆ ವಿರಾಮವೆಂದರೆ ನಡುವಗಲಿನಲ್ಲಿ. ದಿನದಲ್ಲಿ ಉಳಿದ ವೇಳೆ ಭಕ್ತರ ಭಕ್ತಿಗೆ ಮೀಸಲು. ಅಂತು ಲಲಿತಪ್ರಭೆ ಅರ್ಚಕರಿಲ್ಲದ ವೇಳೆ ಬಂದಿದ್ದಾಳೆ. ತನ್ನನ್ನು ನೋಡಲು ಇದೊಂದು ಸಂಚು ಇರಬಹುದೇ ಎನಿಸಿತು ವೀರಧವಳನಿಗೆ. ಸಂಚೋ ಅಥವಾ ಹೊಂಚೋ ಈ ಅನಿರೀಕ್ಷಿತ ಸಮಾಗಮ ಮುಂದುವರಿಯಿತು.

ವೀರಧವಳನನ್ನು ಕಂಡು ಲಲಿತಪ್ರಭೆಯ ಮುಖದಲ್ಲಿ ಸಂತೋಷಕ್ಕಿಂತ ಗಾಂಭೀರ್ಯ ಕಾಣುತ್ತಿತ್ತು. ಅವಳು ಬಹಳ ಹೊತ್ತು ವೀರಧವಳನ ಮುಂದೆ ಸ್ತಬ್ಧಳಾಗಿ ನಿಂತಿದ್ದಳು.

ವೀರಧವಳ—ಲಲಿತ, ನೀನು ನನ್ನನ್ನು ಇಲ್ಲಿ ಭೇಟಿ ಮಾಡಲು ಹೇಳಿ ಕಳುಹಿಸದೆ ಬಂದಿರುವೆಯಲ್ಲ. ಏನಾದರೂ ಅವಸರದ ಸಮಾಚಾರವುಂಟೆ ?

ಲಲಿತಪ್ರಭೆ—ಉಂಟು. ಆದರೆ, ನಾಳೆ ಮಧ್ಯಾಹ್ನ ನೀವು ನನ್ನನ್ನು ಸ್ಮಾರಕ ಸ್ಫಟಿಕ ಸ್ತಂಭದ ಬಳಿ ದುರ್ಗದ ಆಚೆ ಸಂಧಿಸುವಿರಾದರೆ ಎಲ್ಲ ವನ್ನೂ ತಿಳಿಸಿಬಿಡುತ್ತೇನೆ.

ವೀರಧವಳನಿಗೆ ಇಂಥ ಚೋರವೃತ್ತಿ ಬೇಕಿರಲಿಲ್ಲ. ಆದರೆ, ಹೆಂಗಸಿನ ಕರುಳು ! ಅದರಲ್ಲಿಯೂ ಲಲಿತಪ್ರಭೆ ! ನುಡಿದಂತೆ ನಡೆಯದಿದ್ದರೆ ಪ್ರಮಾದ ವಾದೀತೆಂದು ನಂಬಿ " ಆಗಲಿ " ಎಂದು ಉತ್ತರ ಕೊಟ್ಟನು.

ಮಾರನೆಯ ದಿನ ಮಧ್ಯಾಹ್ನಕ್ಕೆ ಸರಿಯಾಗಿ ವೀರಧವಳನೂ, ಲಲಿತ ಪ್ರಭೆಯೂ ದುರ್ಗದ ಆಚೆ ಸ್ಮಾರಕ ಸ್ಫಟಿಕ ಸ್ತಂಭದ ಬಳಿ ಭೇಟಿ ಮಾಡಿ ದರು. ಲಲಿತಪ್ರಭೆಯ ಜತೆಯಲ್ಲಿ ಬಂದಿದ್ದ ಹಂಸಿಕೆಯು ತನ್ನ ಒಡತಿ ಯನ್ನು ಅಲ್ಲಿ ಬಿಟ್ಟು ಸ್ವಲ್ಪ ದೂರ ಸರಿದು ನಿಂತಳು. ವೀರಧವಳನು ಲಲಿತ ಪ್ರಭೆಯ ಮನಸ್ಸಿನಲ್ಲಿ ಯಾವುದೋ ಒಂದು ಗಹನವಾದ ಯೋಚನೆ ಹುದು

ಗಿದೆಯೆಂಬುದನ್ನು ಅರಿತನು. ಹೇಳಲು ಬಾಯಿಲ್ಲದೆ ಆಕೆ ತವಿಸುತ್ತಿದ್ದಾಳೆಂದು ಭಾವಿಸಿದನು. ಕೊನೆಗೆ ಆಕೆಯ ಮೌನವನ್ನು ಭೇದಿಸಬೇಕೆಂದು ನೆನೆದು—"ಲಲಿತ, ನೀನು ಚಂಡವರ್ಮನನ್ನು ವಿವಾಹವಾಗುತ್ತೀಯೇನು?" ಎಂದು ಕೇಳಿದನು. ವೀರಧವಳನ ತಲೆಯ ಹೊರೆಯಾದರೂ ಅಷ್ಟೆ. ಆಕೆಗೆ ಹೇಳಲು ಬಾಯಿಲ್ಲ! ಈತನಿಗೆ ಕೇಳಲು ಮನವಿಲ್ಲ! ಅಂತು, ಗಹನವಾದ ಪ್ರಶ್ನೆಯನ್ನೇ ಕೇಳಿಬಿಟ್ಟನು ವೀರಧವಳ! ಲಲಿತಪ್ರಭೆಗೆ ಈ ಪ್ರಶ್ನೆಯೇ ಮುಂದಾಗಿ ಬಂದುದು ದಿಗ್ಭ್ರಮೆಯನ್ನುಂಟುಮಾಡಿತು. ಎಲ್ಲಿ ಹೋದರೂ ಈ ಚಂಡವರ್ಮನ ಪ್ರತಾಪವೇ ಬರುವುದಾದರೆ ಲಲಿತಪ್ರಭೆ ಏನು ಮಾಡಿಯಾಳು!

ಆಕೆಯು ಮನಸ್ಸಿನ ಹೊರೆಯನ್ನು ಶ್ರಮಪಟ್ಟು ಇಳಿಸುವುದರಲ್ಲಿ—"ದೇವರೇ, ನಾನು ಹೇಗೆ ಉತ್ತರ ಕೊಡಲಿ!" ಎಂದು ಅತ್ಯಂತ ಕ್ಷೀಣಸ್ವರದಿಂದ ನುಡಿದಳು. ಆಕೆಯ ಕಣ್ಣಿನಿಂದ ನೀರು ಗಳಗಳನೆ ಹರಿಯುತ್ತಿತ್ತು. ಮತ್ತೆ ದುಃಖದಿಂದ "ವೀರ, ಎಲ್ಲವೂ ನನ್ನ ಇಚ್ಛೆಗೆ ವಿರುದ್ಧವಾಗಿಯೇ ಆಗುತ್ತಿದೆ. ತಂದೆಯ ವಚನ ಮತ್ತು ಅಣ್ಣನ ನಿಶ್ಚಯ—ಈ ಎರಡು ನನ್ನ ಎಲ್ಲ ಸುಖಗಳನ್ನೂ ಭಸ್ಮ ಮಾಡಿಬಿಡುತ್ತಿವೆ. ಇನ್ನು ಆರು ದಿನಗಳಿಗೆ ನನ್ನ ಮರಣವಿದೆ!........" ಎಂದಳು. ವೀರಧವಳನು ಲಲಿತಪ್ರಭೆಯ ದೃಢ ಸಂಕಲ್ಪವನ್ನು ತಿಳಿದು ಬೆರಗಾದನು. ಆದರೆ, ಆಕೆಯ ಮರಣದ ಸುದ್ದಿಯನ್ನು ಮರೆಯುವಂತೆ ಮಾಡಬೇಕೆಂದು ಭಾವಿಸಿ—"ಲಲಿತ, ಇಷ್ಟು ನಿರಾಶಳಾಗಬೇಡ. ಆರು ದಿನಗಳಿವೆಯಲ್ಲವೇ? ಈ ಆರು ದಿನಗಳಲ್ಲಿ ಎಷ್ಟೊಂದು ಬದಲಾವಣೆ ಆಗಬಹುದು! ಎಷ್ಟೊಂದು ವಿಚಾರ ಕೇಳಬಹುದು! ಎಷ್ಟೊಂದು ಅದ್ಭುತ ನೋಡಬಹುದು! ಪರಮಾತ್ಮನ ಕೃಪೆ ನಮ್ಮ ಮೇಲೆ ಸಂಪೂರ್ಣವಾಗಿದೆ. ಆತನು ದೀನದಯಾಳು! ಧೈರ್ಯದಿಂದಿರು." ಎಂದು ಸಂತೈಸಿದನು.

ಲಲಿತಪ್ರಭೆ—ಆದರೆ, ಈಗಿನ ಪರಾಧೀನಸ್ಥಿತಿಯಲ್ಲಿರುವ ನನಗೆ ಗತ್ಯಂತರವೆಲ್ಲಿದೆ?

ವೀರಧವಳ—ಗತ್ಯಂತರವಿದೆ. "ದೇವರನು ನೆನೆದು ನಿಜ ಕರ್ತವ್ಯ ವನ್ನೆಸಗು; ಕಾಲನಂದಿಗೆ ನಿನ್ನ ಪುಣ್ಯದೊಲುವೆಯುಲಿ" ಎಂಬ ಕವಿ ವಚನವನ್ನು ಮರೆತೆಯಾ? ಗತ್ಯಂತರವಿದೆಯೆಂದು ನುಡಿಯುತ್ತಿದೆ ನನ್ನ ಅಂತರಾತ್ಮ!

ಲಲಿತ—ವೀರ, "ನಾನೊಂದ ಆಲೋಚಿಸಿದೊಡೆ ತಾನೊಂದ ಆಲೋಚಿಸುವುದು ವಿಚಿತ್ರದ ದೈವಂ" ಎಂಬಂತೆ ಆಗಿದೆ ನನ್ನ ಪರಿಸ್ಥಿತಿ. ಮನಸ್ಸೊಂದು ಕಡೆ ಇದೆ. ಕರ್ತವ್ಯ ಬೇರೊಂದು ಕಡೆ ಇದೆ.

ವೀರ—ನಿನಗೆ ಇಷ್ಟವಿಲ್ಲದವರನ್ನು ಮತ್ತೊಬ್ಬರ ಇಷ್ಟಪೂರ್ತಿಗಾಗಿ ಒಪ್ಪುವೆಯಾ? ಚಂಡವರ್ಮನ ಐಶ್ವರ್ಯ ನಿನಗೆ ಬೇಕೆ!

ಲಲಿತಪ್ರಭೆ ಐಶ್ವರ್ಯದ ಮಾತನ್ನು ಕೇಳಿ ಕಿಡಿಕಿಡಿಯಾದಳು. ಗಾಂಭೀರ್ಯದಿಂದ "ವೀರ, ಐಶ್ವರ್ಯವೇ? ಐಶ್ವರ್ಯ! ಸಜೀವ ಐಶ್ವರ್ಯ ಬಿಟ್ಟು ನಿರ್ಜೀವ ಐಶ್ವರ್ಯವೇ? ಹಾಗೆಂದಿಗೂ ತಿಳಿಯಬೇಡ." ಎಂದು ನುಡಿದಳು.

ಇವರ ಮಾತಿನಲ್ಲಿ ಹೊತ್ತು ಗೊತ್ತಾಗಲಿಲ್ಲ. ಇಳಿಹೊತ್ತಿನ ಸಮಯ ವಾಯಿತು. ಜನ ಸಂಚಾರ ಹೆಚ್ಚಿದುದನ್ನು ಕಂಡು ಅವರು ತಮ್ಮ ಪ್ರೇಮ ಬಂಧನದಿಂದ ಮುಕ್ತರಾಗಿ ಹೊರಡಲನುವಾದರು. ಲಲಿತಪ್ರಭೆಯು ಹಂಸಿಕೆ ಯೊಡನೆ ದುರ್ಗದ ಕಡೆ ತೆರಳಿದಳು. ವೀರಧವಳನು ಸ್ಫಟಿಕ ಸ್ತಂಭದ ಬಳಿ ಕ್ಷಣಕಾಲ ಕುಳಿತನು.

ಇತ್ತ ದುರ್ಗದ ಕಡೆಗೆ ಲಲಿತಪ್ರಭೆಯು ಸಾಗಿಸಿದಳು. ದಾರಿಯಲ್ಲಿ ಚಂದ್ರಸೇನನು ತಂಗಿಯನ್ನು ಸಂಧಿಸಿ "ಪ್ರಭೆ, ಇದೇನು! ಇಷ್ಟು ಹೊತ್ತಿನಲ್ಲಿ ಇಲ್ಲಿ!" ಎಂದು ಅವಸರದಿಂದ ಕೇಳಿದನು. ಲಲಿತಪ್ರಭೆಗೆ ಏನು ಹೇಳ ಬೇಕೆಂದು ತಿಳಿಯಲಿಲ್ಲ. ಚಂದ್ರಸೇನನು ಹಂಸಿಕೆಯ ಕಡೆ ನೋಡಿ—"ಇರಲಿ, ಇದೆಲ್ಲ ನಿನ್ನ ಆಟ!" ಎಂದು ಗದರಿದನು. ಲಲಿತಪ್ರಭೆಯೂ ಹಂಸಿಕೆಯೂ ಮರುಮಾತಾಡದೆ ದುರ್ಗಕ್ಕೆ ಬಂದರು. ಚಂದ್ರಸೇನನು ಹಲ್ಲು ಕಡಿಯುತ್ತ

ಮುಂದೆ ಹೊರಟನು. ಇದು ವೀರಧವಳನನ್ನು ಭೇಟಿ ಮಾಡಲು ಬಂದಿದ್ದ ಪ್ರಸಂಗವಿರಬಹುದೆಂದು ಊಹಿಸಿದನು. ಸ್ವಲ್ಪ ಹೊತ್ತಿನಲ್ಲಿ ಸ್ಫಟಿಕ ಸ್ತಂಭದ ಹತ್ತಿರ ಬಂದನು. ಅಲ್ಲಿ ವೀರಧವಳನು ತನ್ನ ಯೋಚನೆಯ ಭರದಲ್ಲಿ ಬಾಹ್ಯ ಪ್ರಪಂಚವನ್ನು ಮರೆತು ಕುಳಿತಿದ್ದುದನ್ನು ಕಂಡನು. ವೀರಧವಳನೊಡನೆ ಮಾತಿನ ಸಲಿಗೆಯನ್ನು ಬಹಳ ದಿನಗಳ ಹಿಂದೆ ಬಿಟ್ಟಿದ್ದನಷ್ಟೆ ಚಂದ್ರಸೇನ. ತನ್ನ ತಂಗಿಯೊಡನೆ ಸರಸಸಲ್ಲಾಪದಿಂದ ವರ್ತಿಸಿದುದನ್ನು ಕಂಡ ದಿನ ಹುಟ್ಟಿತು ವೀರಧವಳನ ಮೇಲೆ ಆಕ್ರೋಶ! ಆಕ್ರೋಶವಲ್ಲದಿದ್ದರೆ ಮನಸ್ತಾಪ! **ದೊಡ್ಡ ಸಂಸಾರಗಳಲ್ಲಿ ಇಂಥ ಮನಸ್ತಾಪಗಳೇ ಇತರ ಎಲ್ಲ ತಾಪಗಳಿಗೂ ಮೂಲ.** ಮಾತೇ ಮನಸ್ತಾಪಕ್ಕೆ ಮದ್ದು. ಮಾತು ಬಿಟ್ಟು ಮನಸ್ತಾಪವನ್ನು ಗುಣಪಡಿಸುವುದಾದರೂ ಹೇಗೆ? ಅಂತು ಚಂದ್ರ ಸೇನನ ಮನಸ್ತಾಪ ಮತ್ತಷ್ಟು ಹೆಚ್ಚಿತು ವೀರಧವಳನನ್ನು ನೋಡಿ! ರೋಷಾ ವೇಶದಿಂದ ತನ್ನ ಕಡೆಗೆ ಅವಸರದಲ್ಲಿ ಬರುತ್ತಿದ್ದ ಚಂದ್ರಸೇನನನ್ನು ತಲೆಯೆತ್ತಿ ನೋಡಿದನು ವೀರಧವಳ. ಕೂಡಲೇ ಎದ್ದು ಆತನ ಆಗಮನವನ್ನು ನಿರೀಕ್ಷಿ ಸುತ್ತಿರುವಲ್ಲಿ ಚಂದ್ರಸೇನನು ವೀರಧವಳನ ಬಳಿಗೆ ಬಂದು, ಕೆಂಡದಂತೆ ಕೆರ ಳಿದ ಕಣ್ಣುಗಳಿಂದ ನೋಡುತ್ತ "ತೆಗೆದುಕೋ" ಎಂದು ಒರೆಯಿಂದ ಕತ್ತಿ ಯನ್ನು ಸೆಳೆದನು. ವೀರಧವಳನು ಚಂದ್ರಸೇನನ ದುರ್ಮಾನದ ದಾವಾಗ್ನಿ ಯನ್ನು ನೋಡಿ ಆಶ್ಚರ್ಯಪಟ್ಟನು. ಆತನ ಆಗ್ನೇಯಾಸ್ತ್ರಕ್ಕೆ ತಕ್ಕ ವಾರು ಣಾಸ್ತ್ರ ಪ್ರಯೋಗ ಮಾಡದಿದ್ದರೆ ಪ್ರಮಾದವಾದೀತೆಂದು ಭಾವಿಸಿದನು. **ಅಗ್ನಿಗೆ ಅಗ್ನಿ ಸೇರಿದರೆ ಪ್ರಳಯ! ಅಗ್ನಿಗೆ ಜಲ ಸೇರಿದರೆ ಶಾಂತಿ!** ವೀರಧವಳನು ಉದಾತ್ತಸ್ವಭಾವದವನಾದುದರಿಂದ ಎರಡನೆಯ ಜಲಶೇಚ ನೆಯ ವಿಧಾನವನ್ನೇ ಮನದಲ್ಲಿ ಬಗೆದನು. ಆದರೆ, ಎಲ್ಲ ವಿಧಾನಗಳಿಗಿಂತ ಭಗವಂತನ ವಿಧಾನ ಶ್ರೇಷ್ಠ! ವಿಧಿ ಸಂಕಲ್ಪ ಅವರಿಬ್ಬರ ಗಮನವನ್ನೂ ಬೇರೆ ಕಡೆ ತಿರುಗಿಸಿತು.

ದೂರದಲ್ಲಿ ಒಂದು ಕಾಡು ಹಂದಿ ಸ್ಫಟಿಕ ಶಿಲಾಸ್ತಂಭದ ಕಡೆ ನುಗ್ಗಿ ಬರುತ್ತಿತ್ತು! ಕಾಡು ಹಂದಿಯೆಂದರೆ ಬೇಟೆಗಾರರಿಗೂ ಭಯ! ಕೃದ್ಧ ವರಾ ಹದ ಕೋರೆದಾಡೆಗಳಿಗೆ ಜಗ್ಗದ ವಸ್ತುವಿಲ್ಲ. ವರಾಹವು ಮೇಲೆ ನುಗ್ಗಿ

ಬರುತ್ತಿರುವುದನ್ನು ನೋಡಿ ಚಂದ್ರಸೇನನ ಆಕ್ರೋಶ, ಮನಸ್ತಾಪ, ಎಲ್ಲವೂ ಮಾಯವಾದುವು. ಸುಖದಲ್ಲಿ ಮನುಷ್ಯನಿಗೆ ಕೋಪತಾಪ ಎಲ್ಲವೂ ಬೇಕು. ಕಷ್ಟದಲ್ಲೊ ? ಕಷ್ಟದಲ್ಲಿ ಮನುಷ್ಯನಿಗೆ ಎಲ್ಲರ ಕನಿಕರವೂ ಬೇಕು. ಚಂದ್ರಸೇನನು ಕಷ್ಟದಲ್ಲಿ "ವೀರಧವಳಾ, ಹೊಡಿ !" ಎಂದು ಕೂಗುತ್ತಾ ಓಡಲಾರಂಭಿಸಿದನು. ವೀರಧವಳನು ವರಾಹವನ್ನು ಹೊಡೆಯಲೇ ಬೇಕಾಗಿತ್ತು. ತನ್ನನ್ನು ಹೊಡೆಯಲು ಬಂದ ಚಂದ್ರಸೇನನಿಗಾಗಿ ವರಾಹ ವನ್ನು ಹೊಡೆಯಲೇ ಬೇಕಾಗಿತ್ತು. ಇದಕ್ಕಿಂತ ಪತ್ಯುಪಕಾರವುಂಟೇ ? ವೀರಧವಳನು ಬಿಲ್ಲನ್ನು ಸಿದ್ಧಪಡಿಸಿಕೊಂಡು ಗುರಿಯಿಟ್ಟು ಬಾಣ ಪ್ರಯೋಗ ಮಾಡಿದನು. ಬಾಣದ ಕೊನೆಯು ವರಾಹದ ಎದೆಗೆ ಬಲವಾಗಿ ನಾಟಿತು. ವರಾಹವು ನೋವಿನಿಂದ ನರಳುತ್ತ ಚಂದ್ರಸೇನನು ಹೋದ ದಾರಿಯನ್ನೇ ಹಿಡಿಯಿತು. ವೀರಧವಳನು ಹಿಂದೆಯೇ ಹೊರಟನು. ಬಹಳ ದೂರ ಓಡಿದ ಮೇಲೆ ಆ ಕಾಡು ಹಂದಿ ಸತ್ತು ಕೆಳಗೆ ಬಿತ್ತು. ಚಂದ್ರಸೇನನು ಎಲ್ಲಿ ಹೋದನೆಂಬುದು ಗೊತ್ತಾಗಲಿಲ್ಲ. ಕಾಡುಹಂದಿಯು ಎದೆಗೆ ತಾನು ಗುರಿ ಯಿಟ್ಟು ಹೊಡೆದ ಬಾಣವು ಚುಚ್ಚಿಕೊಂಡು ಮೈಯಲ್ಲಿ ಮುರಿದುಹೋ ಗಿತ್ತು. ಆದರೆ, ಸತ್ತ ಕಾಡುಹಂದಿಯನ್ನು ಆಗ ನೋಡುತ್ತ ಹಿಗ್ಗುವ ಕಾಲ ವಾಗಿರಲಿಲ್ಲ. ಚಂದ್ರಸೇನನನ್ನು ಹುಡುಕುತ್ತ ಕಾಡಿನಲ್ಲಿ ಅಲೆದನು ವೀರ ಧವಳ. ಆದರೆ.........ಚಂದ್ರಸೇನನೆಲ್ಲಿ ! ಸಂಜೆ ಆಯಿತು. ವೀರಧವಳನು ಅಜಿಂಕ್ಯ ದುರ್ಗಕ್ಕೆ ಹಿಂತಿರುಗಿದನು. ಚಂದ್ರಸೇನನು ದುರ್ಗಕ್ಕೆ ಬಂದಿಲ್ಲ ವೆಂದು ತಿಳಿಯಿತು.

ಚಂದ್ರಸೇನನ ಕೊಲೆ ! ವೀರಧವಳನು ಸತ್ಯಾಶ್ರಯನನ್ನು ಕಾಣುವು ದಕ್ಕೆ ಮೊದಲೇ ವಿಜ್ಜಲನು ಬಂದು ಚಂದ್ರಸೇನನ ಕೊಲೆಯ ವರ್ತಮಾನ ವನ್ನು ಆತನಿಗೆ ತಿಳಿಸಿದನು ಆ ಕೊಲೆ ವೀರಧವಳನಿಂದಲೇ ಆದುದೆಂಬ ವದಂತಿಯೂ ಇತ್ತು. ಆದರೆ, ವಿಜ್ಜಲನು ಅದನ್ನು ಹೇಳಲಿಲ್ಲ. ದೋಷಾ ರೋಪಣೆಗೆ ಸಿಕ್ಕಿರುವವರ ಬಳಿ ಸುಳಿದಾಡಿದರೂ ಆ ದೋಷ ತಮಗೆ ಅಂಟುವು ದೆಂದು ಜನರ ನಂಬಿಕೆ. ವಿಜ್ಜಲನು ಮಧ್ಯಸ್ಥ ವಹಿಸುವುದಾದರೂ ಹೇಗೆ ? ಅಷ್ಟು ಮಾತ್ರ ತಿಳಿಸಿ ಉಪಕಾರ ಮಾಡಿದುದನ್ನು ಮರೆಯುವಂತಿರಲಿಲ್ಲ.

ಹಂದಿಯನ್ನು ಕೊಂದ ಮೇಲೆ ಚಂದ್ರಸೇನನನ್ನು ಎಷ್ಟು ಹುಡುಕಿದರೂ ಸಿಕ್ಕ ಲಿಲ್ಲವೆಂಬುದನ್ನು ವೀರಧವಳನು ತಿಳಿಸಿದನು. ಇಷ್ಟನ್ನೇ ಸತ್ಯಾಶ್ರಯನಿಗೆ ಹೇಳಿದರಾಯಿತೆಂದು ವಿಜ್ಜಲನು ಹೊರಟುಹೋದನು.

ಚಂಡವರ್ಮನಿಗೆ ಇಂದು ಮಹದಾನಂದ! ವೀರಧವಳನ ಮೇಲೆ ಕೊಲೆಯ ರುಜುವಾತನ್ನು ತಂದು ಆತನನ್ನು ನಿಗ್ರಹಿಸುವುದಕ್ಕೆ ಅದಕ್ಕಿಂತ ಅನುಕೂಲ ಸನ್ನಿವೇಶ ಬೇಕೇ! ಚಂದ್ರಸೇನನು ಬಾರದಿರುವುದೇಕೆಂದು ತಿಳಿಯಲು ಚಂಡವರ್ಮನಿಗೆ ಹೇಳಿಕಳುಹಿಸಿದನು ಸತ್ಯಾಶ್ರಯ. ಚಂಡ ವರ್ಮನು ಆತುರದಿಂದ ಸತ್ಯಾಶ್ರಯನ ಮಹಲಿಗೆ ಬರುತ್ತಿರುವ ವೇಳೆಗೆ ದಾರಿ ಯಲ್ಲಿ ಅರಣ್ಯರಕ್ಷಕರು ಕೈಯಲ್ಲಿ ಯಾವುವೋ ಬಟ್ಟೆಬರೆಗಳನ್ನು ಹಿಡಿದುಕೊಂಡು ಬರುತ್ತಿರುವುದನ್ನು ನೋಡಿದನು. ಕತ್ತಲೆಯಲ್ಲಿ ಅವರು ಓಡಿ ಬರುತ್ತಿರುವು ದನ್ನು ಕಂಡು ಗಾಬರಿಯಾಗಿ, ಅವರು ಹತ್ತಿರ ಬರುವುದನ್ನೇ ಕಾದಿದ್ದನು. ಅರಣ್ಯರಕ್ಷಕರು ದುರ್ಗಾಧಿಪತಿಯನ್ನು ಕಂಡು ನಮಿಸಿ—"ಪ್ರಭು!" ಎಂದು ಗೋಳಿಟ್ಟರು. ಕೈಯ್ಯಲ್ಲಿದ್ದ ಕತ್ತಿಯನ್ನೂ, ರಕ್ತದಿಂದ ತೊಯ್ದು ಬಟ್ಟೆ ಗಳನ್ನೂ ತೋರಿಸಿ—"ಇವು ಚಂದ್ರಸೇನ ಮಹಾರಾಜರ ವಸ್ತುಗಳು" ಎಂದರು. "ಅದು ಹೇಗೆ?" ಎಂದು ಚಂಡವರ್ಮನು ಕೇಳಲು, ಅವರು— "ಪ್ರಭು, ಸ್ಫಟಿಕ ಶಿಲಾಸ್ತಂಭದ ಹುಗ್ಗಲಲ್ಲಿರುವ ಕಾಡಿನಲ್ಲಿ ಚಂದ್ರಸೇನನ ಖೂನಿಯಾಗಿದೆ. ಖೂನಿಕಾರರು ಶವವನ್ನು ಸಹ ಬಿಡದೆ ತೆಗೆದುಕೊಂಡು ಹೋಗಿದ್ದಾರೆ. ಈ ವಸ್ತುಗಳು ಮಾತ್ರ ಅಲ್ಲಿದ್ದುವು. ಜೊತೆಗೆ ಬಾಣದ ಮೊನೆಯ ಇದೊಂದು ತುಂಡೂ ಸಿಕ್ಕಿತು. ಇದಿಗೋ!" ಎಂದು ಕಣ್ಣೀ ರಿಟ್ಟರು. ಕಾಕತಾಳನ್ಯಾಯದಂತೆ ದೊರೆತ ಈ ರುಜುವಾತಿನಿಂದ ಚಂಡ ವರ್ಮ ಹಿಗ್ಗಿದನು. ಅವರ ಜೊತೆಯಲ್ಲಿಯೇ ಸತ್ಯಾಶ್ರಯನ ಮಹಲಿಗೆ ನಡೆದನು.

ಚಂಡವರ್ಮನು ಸತ್ಯಾಶ್ರಯನಿಗೆ ನಮಸ್ಕರಿಸಿ ಕರೆಸಿದ ಕಾರಣವನ್ನು ಕೇಳುವಷ್ಟರಲ್ಲಿ ಸತ್ಯಾಶ್ರಯನ ಕಣ್ಣುಗಳಲ್ಲಿ ನೀರು ತುಂಬಿತು. ಗದ್ಗದ ಸ್ವರದಿಂದ "ಮಹಾರಾಜ, ನನ್ನ ಚಂದ್ರಸೇನ ಮಧ್ಯಾಹ್ನ ಕಾಡಿಗೆ ಹೋಗಿ ಇಷ್ಟು ಹೊತ್ತಾದರೂ ಬಂದಿಲ್ಲ" ಎಂದು ನುಡಿದನು. ಸತ್ಯಾಶ್ರಯನ

ಕಣ್ಣೀರು ಚಂಡವರ್ಮನ ಕಣ್ಣುಗಳಿಗೂ ನೀರು ತಂದಿತು. ಚಂಡವರ್ಮನ ಕಣ್ಣೀರಿನಲ್ಲಿ ಪರಿತಾಪಕ್ಕಿಂತ ಅನುತಾಪವಿತ್ತು. ಚಂಡವರ್ಮನು ಯಾರಿಗಾಗಿ ಪರಿತಪಿಸಬೇಕು ? ಚಂದ್ರಸೇನನಿಗಾಗಿ ಪರಿತಪಿಸಲು ಈತನೇನು ತಂದೆಯೇ ? ಸತ್ಯಾಶ್ರಯನ ಪರಿತಾಪಕ್ಕಾಗಿ ಈತನ ಅನುತಾಪ ಅಷ್ಟೆ. ಅನುತಾಪದ ಅಂತ ರಾಳವನ್ನು ಅರಿತವರು ಯಾರು! **ವಿಕಟತಾಪವೂ ಅನುತಾಪವಾಗಿಯೇ ತೋರುತ್ತದೆ.** ಅಂತು, ಚಂಡವರ್ಮನು ತನ್ನ ಕಣ್ಣೀರನ್ನು ಮುಂಬೆರಳಿನಿಂದ ಒತ್ತಿ, ಸತ್ಯಾಶ್ರಯನನ್ನು ಸಂತೈಸಿದನು. ಸ್ವಲ್ಪ ಹೊತ್ತು ಸುಮ್ಮನಿದ್ದು ಅರಣ್ಯರಕ್ಷಕರು ತಂದಿರುವ ವರ್ತಮಾನವನ್ನು ತಿಳಿಸಲು ಅನುವಾದನು. ಸತ್ಯಾಶ್ರಯನನ್ನು ಒಂದು ಸಲ ನೋಡಿ "ಮಹಾರಾಜ, ಚಂದ್ರಸೇನನ ಯೋಚನೆ ಬಿಡಿ!" ಎಂದು ಮೆಲ್ಲನೆ ಉಸುರಿದನು.

"ಏನು, ಚಂದ್ರಸೇನನು ಬರುವನೆಂಬ ನಂಬಿಕೆ ಇದೆಯೆ?"

"ನಂಬಿಕೆ ಇದೆ. ಆದರೆ—"

"ಆದರೆ—ಈಗ ಎಲ್ಲಿದ್ದಾನೆ ?"

"ಅರಣ್ಯರಕ್ಷಕರು ಬಂದಿದ್ದಾರೆ. ಅವರನ್ನು ಕೇಳಿದರೆ ಎಲ್ಲಿದ್ದಾನೆಂಬುದನ್ನು ತಿಳಿಯಬಹುದು, ಮಹಾರಾಜ."

ಅರಣ್ಯರಕ್ಷಕರು ಒಳಗೆ ಬಂದು ತಾವು ತಂದಿದ್ದ ಗುರುತಿನ ವಸ್ತುಗಳನ್ನು ಮುಂದಿಟ್ಟರು. ಸತ್ಯಾಶ್ರಯನು ಅವುಗಳನ್ನು ನೋಡಿ—"ಇದೇನು? ಚಂದ್ರಸೇನನ ಬಟ್ಟೆ, ಕತ್ತಿ! ಈ ಬಾಣದ ಚೂರು ಎಲ್ಲಿತ್ತು!" ಎಂದು ಅರಣ್ಯರಕ್ಷಕರನ್ನು ಆತುರದಿಂದ ಕೇಳಿದನು. ಅರಣ್ಯರಕ್ಷಕರು—"ಪ್ರಭು, ಚಂದ್ರಸೇನ ಖೂನಿ—ಖೂನಿ!" ಎಂದು ಗೋಳಿಟ್ಟರು. ಈ ವಸ್ತುಗಳು ಕೊಲೆಯಾದ ಪ್ರದೇಶದಲ್ಲಿದ್ದುವೆಂದು ತಿಳಿಸಿದರು. "ಚಂದ್ರಸೇನನ ಕಳೇಬರ ಅಲ್ಲಿರಲಿಲ್ಲವೇ!" ಎಂದು ಒಂದೇ ಉಸಿರಿನಲ್ಲಿ ಕೇಳಿದನು ಸತ್ಯಾಶ್ರಯ! "ಇಲ್ಲ" ಎಂದರು ಅರಣ್ಯರಕ್ಷಕರು.

ಚಂಡವರ್ಮನು ಅರಣ್ಯರಕ್ಷಕರನ್ನು ಹೋಗುವಂತೆ ಸೂಚಿಸಿದನು. ದುಃಖಾಕ್ರಾಂತನಾಗಿ ಹಂಬಲಿಸುತ್ತಿದ್ದ ಸತ್ಯಾಶ್ರಯನ ಹತ್ತಿರ ಬಂದು—“ ಇದೆಲ್ಲ ಹೇಗಾಯಿತೆಂಬುದು ನನಗೆ ಗೊತ್ತಿದೆ.” ಎಂದನು.

“ ಏನು ! ನಿಮಗೆ ಗೊತ್ತಿದೆಯೆ ? ”

“ ಹೌದು, ಇದೆಲ್ಲ ವೀರಧವಳನ ಕೈವಾಡ ! ”

“ ಅದು ಹೇಗೆ ? ”

“ ಮಹಾರಾಜ, ಮಧ್ಯಾಹ್ನ ಚಂದ್ರಸೇನನು ಸ್ಫಟಿಕ ಶಿಲಾಸ್ತಂಭದ ಕಡೆ ಹೋಗುತ್ತಿದ್ದುದನ್ನು ದ್ವಾರಪಾಲಕರು ಕಂಡರು ! ಸ್ವಲ್ಪ ಹೊತ್ತಾದ ಮೇಲೆ ಸ್ಫಟಿಕ ಶಿಲಾಸ್ತಂಭದ ಕಡೆಯಿಂದ ಗದ್ದಲ ಕೇಳಿಬಂದಿತಂತೆ. ಈ ವಿಚಾರ ವನ್ನು ನನಗೆ ತಿಳಿಸಿದರು. ನಾನು ಅವರನ್ನು ಅಲ್ಲಿಗೆ ಹೋಗಿ ನೋಡುವಂತೆ ಆಜ್ಞಾಪಿಸಿದೆನು. ಅವರು ಕಂಡುದಾದರೂ ಏನು ? ಈ ಬಟ್ಟೆ, ಈ ಕತ್ತಿ, ಈ ಬಾಣದ ಚೂರು ! ”

“ ಈ ಬಟ್ಟೆ, ಕತ್ತಿ ಚಂದ್ರಸೇನನವು. ಈ ಬಾಣದ ಮೊನೆ ಯಾರದು ? ಈ ಬಾಣದಿಂದ ಚಂದ್ರಸೇನನು ಮೃತಪಟ್ಟಿರಬೇಕೆಂದು ಹೇಳಲಾದೀತೆ ! ”

“ ಮೃತಪಟ್ಟಿರಬಹುದು. ವೀರಧವಳನನ್ನು ಕರೆಯಿಸಿ ವಿಚಾರಿಸಿದರೆ ತಮಗೆ ನಿಜಾಂಶ ಗೊತ್ತಾಗುತ್ತದೆ.”

ಸತ್ಯಾಶ್ರಯನು ಕೂಡಲೆ ಸವಾರರನ್ನು ಕರೆದು—“ ತಕ್ಷಣ ವೀರಧವ ಳನ ಮಹಲಿಗೆ ಹೋಗಿ ಜತೆಯಲ್ಲಿಯೇ ವೀರಧವಳನನ್ನು ಕರೆದುಕೊಂಡು ಬನ್ನಿರಿ. ತಡಮಾಡಬೇಡಿರಿ.” ಎಂದು ಆಜ್ಞಾಪಿಸಿದನು.

ವೀರಧವಳನು ಸ್ವಲ್ಪ ಹೊತ್ತಿನಲ್ಲಿ ಸಭಾಮಂಟಪಕ್ಕೆ ಬಂದನು. ಸಭಾ ಮಂಟಪದಲ್ಲಿ ಚಂಡವರ್ಮನೂ ಇದ್ದುದನ್ನು ನೋಡಿದನು. ತನ್ನ ಪಾಲನ ಕರ್ತನಾದ ಸತ್ಯಾಶ್ರಯನಿಗೆ ವಿನಯಪೂರ್ವಕವಾಗಿ ನಮಸ್ಕರಿಸಿ ತಲೆಬಾಗಿ

ನಿಂತನು. ಸತ್ಯಾಶ್ರಯನು ಬಹಳ ಹೊತ್ತು ಆತನ ಮುಖವನ್ನು ದುರದುರನೆ ನೋಡಿ—"ನಿನ್ನನ್ನು ನಾನು ಏಕೆ ಬರಹೇಳಿರುವೆನೆಂಬುದು ಗೊತ್ತಿದೆಯೋ! ನನ್ನ ಚಂದ್ರಸೇನ ಇದುವರೆಗೂ ಕಾಡಿನಿಂದ ಬಂದಿಲ್ಲ. ಅವನ ವಿಚಾರ ನಿನಗೆ ಗೊತ್ತೋ?" ಎಂದನು. "ಗೊತ್ತು" ಎಂದನು ವೀರಧವಳ. ತನಿಖೆಯ ಕ್ರಮದಲ್ಲಿ ಮೊದಲನೆಯ ಪ್ರಶ್ನೆಗೆ ಬಂದ ಉತ್ತರ ಸತ್ಯಕ್ಕೂ ಅಸತ್ಯಕ್ಕೂ ಒಂದೇ ಆಗಿತ್ತು. ಸತ್ಯದ ದೃಷ್ಟಿಯಲ್ಲಿ ವೀರಧವಳನು ಚಂದ್ರಸೇನನನ್ನು ನೋಡಿದ್ದುದು ನಿಜ. ಅಸತ್ಯದ ದೃಷ್ಟಿಯಲ್ಲಿ ವೀರಧವಳನು ಚಂದ್ರಸೇನನ ಕೊಲೆಯನ್ನು ನೋಡಿದ್ದುದು ನಿಜವಲ್ಲ. ಆದರೆ, ವಿರೋಧ ಪಕ್ಷದವರಿಗೆ "ಗೊತ್ತು" ಎಂಬುದು ಬೇಕೇ ಹೊರತು "ಏನು ಗೊತ್ತು?" ಎಂಬುದಲ್ಲ. ಪ್ರಶ್ನೆ ಕೇಳಿರುವ ಉದ್ದೇಶಕ್ಕೆ "ಗೊತ್ತು" ಎಂಬುದು ವಿರೋಧ ಪಕ್ಷದವರಿಗೆ ಸಾಕು. ವೀರ ಧವಳನು "ಗೊತ್ತು" ಎಂದೊಡನೆಯೇ ಸತ್ಯಾಶ್ರಯನು ಚಂಡವರ್ಮನ ಕಡೆ ನೋಡಿದನು. ಚಂಡವರ್ಮನು "ಸರಿ" ಎಂದನು. ಸತ್ಯಾಶ್ರಯನು ತನಿಖೆಯನ್ನು ಮುಂದುವರಿಸಿ—"ಧವಳ, ಚಂದ್ರಸೇನನು ಎಲ್ಲಿರುವನು? ಹೇಳು!" ಎಂದನು.

"ನನಗೆ ತಿಳಿಯದು."

"ಹಾಗಾದರೆ, ನಿನಗೆ ಗೊತ್ತಿರುವುದು ಏನು?"

"ಮಹಾರಾಜ, ನನಗೆ ಗೊತ್ತಿರುವುದಿಷ್ಟು. ಈ ಮಧ್ಯಾಹ್ನ ನಾನು ಸ್ಫಟಿಕ ಶಿಲಾಸ್ತಂಭದ ಬಳಿ ಇದ್ದೆನು. ಅಲ್ಲಿಗೆ ಚಂದ್ರಸೇನನೂ ಬಂದನು. ಆ ವೇಳೆಗೆ ದೂರದಲ್ಲಿ ಒಂದು ಕಾಡುಹಂದಿ ನಮ್ಮ ಕಡೆ ನುಗ್ಗುವುದನ್ನು ಕಂಡೆವು. ಆ ಹಂದಿ ಚಂದ್ರಸೇನನ ಮೇಲೆ ಬೀಳುವುದರಲ್ಲಿತ್ತು. ನಾನು ಕೂಡಲೇ ಬಾಣಪ್ರಯೋಗ ಮಾಡಿದೆನು. ನಮ್ಮ ಬಾಣದ ಮೊನೆ ಅದರ ಮೈಯಲ್ಲಿ ನಾಟಿತು. ಚಂದ್ರಸೇನನು ಭಯದಿಂದ ಓಡಿದನು. ಹಂದಿಯೂ ಸಹ ನೋವಿನಿಂದ ಘೋರಿಡುತ್ತ ಆತನ ಹಿಂದೆಯೇ ಹೋಯಿತು. ನಾನೂ ಸಹ ಹಿಂದೆಯೇ ಹೊರಟೆನು. ಬಹಳ ದೂರ ಓಡಿದ ಮೇಲೆ ಅಲ್ಲಿ ಹಂದಿಯು ಸತ್ತು ಬಿದ್ದಿತ್ತು. ಚಂದ್ರಸೇನನು ಮಾತ್ರ ಕಾಣಿಸಲಿಲ್ಲ. ನಾನು ಕಾಡಿ

ನಲ್ಲೆಲ್ಲ ಹುಡುಕಿದರೂ ಸಿಕ್ಕಲಿಲ್ಲ. ಸಂಜೆ ದುರ್ಗಕ್ಕೆ ಬಂದು ಊಟದ ತರು ವಾಯ ನಿಮಗೆ ತಿಳಿಸಬೇಕೆಂದು ಕಾದಿದ್ದೆನು."

" ಓಹೋ! ಚಂದ್ರಸೇನನು ಭಯದಿಂದ ಓಡಿದನು. ನೀನು ಹಂದಿ ಯನ್ನು ಹೊಡೆದೆ! ಸರಿ. ಈ ಬಾಣದ ಮೊನೆ ನಿನ್ನದೇನು? ನೋಡು."

" ಹೌದು, ನನ್ನದು."

" ಈ ಬಟ್ಟೆಗಳು ಯಾರವು? "

" ಚಂದ್ರಸೇನನವು "

" ಸರಿ, ಈ ಕತ್ತಿ ? "

" ಅದು ಸಹ ಚಂದ್ರಸೇನನದೆ "

ಚಂಡವರ್ಮನು ಆ ಸಮಯಕ್ಕೆ ಸರಿಯಾಗಿ ವೀರಧವಳನನ್ನು ಕುರಿತು ತಿರಸ್ಕಾರಭಾವದಿಂದ—" ನಿನ್ನ ದುಷ್ಕೃತ್ಯವನ್ನು ಒಪ್ಪಿಕೊ. ನಿಜ ಹೇಳು!" ಎಂದನು.

ವೀರಧವಳನಿಗೆ ಇದೊಂದು ಒಳಸಂಚು ಎಂದು ಗೋಚರವಾಯಿತು. ಆದರೆ, ಯಾರ ಒಳಸಂಚು ಎಲ್ಲಿಯ ಒಳಸಂಚು ಎಂಬುದನ್ನು ಹೇಳುವು ದಾದರೂ ಹೇಗೆ? ಆತನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ತನಿಖೆ ಮಾಡು ತ್ತಿರುವಾಗ, ಹೇಳಿದರೂ ನಂಬುವವರು ಯಾರು?

ವೀರಧವಳನು ಸತ್ಯಾಶ್ರಯನನ್ನು ನೋಡಿ—" ಮಹಾರಾಜ, ಈ ಎಲ್ಲ ಪರಿಸ್ಥಿತಿಯಿಂದ ನೀವು ತಿಳಿದುಕೊಂಡಿರುವುದಾದರೂ ಏನು?" ಎಂದು ಕೇಳಿದನು.

" ತಿಳಿದುಕೊಂಡಿರುವುದು ಇನ್ನೇನು? ವೀರಧವಳನು ಚಂದ್ರಸೇನನನ್ನು ಖೂನಿ ಮಾಡಿರುತ್ತಾನೆಂಬುದೆ!"

ಈ ಮಾತುಗಳನ್ನು ಕೇಳಿ ವೀರಧವಳನು ಕಿವಿಗಳನ್ನು ಮುಚ್ಚಿ—"ನಾನು ಪರಮಾತ್ಮನನ್ನು ಸ್ಮರಿಸಿ ಹೇಳುತ್ತೇನೆ ! ಇದು........"

ಅಷ್ಟರಲ್ಲಿ ಮಹಲಿನ ಬಾಗಿಲನ್ನು ತೆಗೆದು ಎರಡನೆಯ ಅರಣ್ಯರಕ್ಷಕನು ಒಳಗೆ ಬಂದನು. ಅವನ ಉಡುಪೆಲ್ಲ ನೀರಿನಲ್ಲಿ ತೊಯ್ದುಹೋಗಿತ್ತು ಅವನ ಕೈಯಲ್ಲಿ ಒದ್ದೆಯಾದ ಮತ್ತು ಹರಿದ ಚಂದ್ರಸೇನನ ರುಮಾಲು ಮತ್ತು ನಿಲುವಂಗಿ ಇವುಗಳಿದ್ದುವು. ಅವನು ಈ ಎರಡು ವಸ್ತುಗಳನ್ನೂ ಸತ್ಯಾಶ್ರಯನ ಮುಂದಿರಿಸಿ ನಮಸ್ಕರಿಸಿ—" ಸ್ವಾಮಿ, ಈ ವಸ್ತುಗಳನ್ನು ನದಿ ಪ್ರವಾಹದಲ್ಲಿ ಕಂಡು, ಅವು ಚಂದ್ರಸೇನನವೆಂದು ಗುರ್ತಿಸಿ ತಮ್ಮ ಬಳಿಗೆ ತಂದಿದ್ದೇನೆ. " ಎಂದನು.

ಸತ್ಯಾಶ್ರಯನಿಗೆ ಅವುಗಳನ್ನು ಕಂಡು ದುಃಖವು ಎಲ್ಲೆ ಮೀರಿತು. ಮರುಕ್ಷಣವೇ ಕೋಪಶಿಖಿ ಕಣ್ಣುಗಳಲ್ಲಿ ಕಿಡಿಗಳನ್ನು ಕಾರಿತು. ಆತನು ಕೋಪತಾಪಗಳಿಂದ ತಪ್ತನಾಗಿ ಮೂರ್ಛೆಹೋದನು. ಸತ್ಯಾಶ್ರಯನು ಮೂರ್ಛೆಯಿಂದ ಎದ್ದು, ವೀರಧವಳನನ್ನು ನೋಡಿ—' ಧವಳ, ಇಷ್ಟು ಬಲವಾದ ರುಜುವಾತುಗಳು ಇರುವಾಗ ನೀನು ನಿನ್ನ ದುಷ್ಕೃತ್ಯವನ್ನು ಇಲ್ಲವೆಂದು ಮರೆಮಾಜುವೆಯೋ ? " ಎಂದು ಮತ್ತೆ ಕೇಳಿದನು. ವೀರಧವನಿಗೆ ಇಂತಹ ಕಠಿಣ ಪ್ರಸಂಗವು ಒಡಗುವುದೆಂದೂ, ತಾನೊಬ್ಬ ಕೊಲೆಪಾತಕನಾಗಿ ಸಭಿಕರೆದುರಿಗೆ ನಿಲ್ಲಬೇಕಾಗುವುದೆಂದೂ ಹೇಗೆ ತಾನೇ ತಿಳಿಯಬೇಕು! ಸಹಿಸಲಸಾಧ್ಯವಾದ ದುಃಖದಿಂದ ವೀರಧವಳನು—" ಮಹಾರಾಜ, ನಾನು ನಿರ್ದೋಷಿ— ನಿರ್ದೋಷಿ ! " ಎಂದು ಹೇಳುತ್ತ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದನು.

ಬಹಳ ಹೊತ್ತಾದ ಮೇಲೆ ವೀರಧವಳನಿಗೆ ಪ್ರಜ್ಞೆ ಬಂತು. ತಾನು ಎಲ್ಲಿರುವೆನೆಂಬುದೇ ಅರಿವಾಗಲಿಲ್ಲ. ಎಲ್ಲ ಕಡೆಗಳಲ್ಲಿಯೂ ಕತ್ತಲು ! ಹಿಂದಿನ ತನಿಖೆ ಪ್ರಸಂಗ ಒಂದೊಂದಾಗಿ ನೆನಪಿಗೆ ಬಂದುವು. ಹಣೆಯನ್ನು ಒರೆಸಿಕೊಳ್ಳಲು ಕೈ ಎತ್ತಿದನು. ಕೈ ತೂಕವಾಗಿತ್ತು ಕಬ್ಬಿಣದ ಸರಪಣಿಗಳ ಹೊರೆಯಿಂದ ! ಎದ್ದು ನಿಲ್ಲಲು ಪ್ರಯತ್ನಿಸಿದನು. ಕಾಲುಗಳಿಗೂ ಬಿಗಿದಿತ್ತು

ಕಬ್ಬಿಣದ ಸರಪಣಿ ! ತಾನು ಒಣಹುಲ್ಲಿನ ಹಾಸಿಗೆಯ ಮೇಲೆ ಮಲಗಿರುವುದೂ ತಿಳಿಯಿತು. ಅಜಿಂಕ್ಯ ದುರ್ಗದ ಕಾರಾಗೃಹದಲ್ಲಿ ತಾನೊಬ್ಬ ಕೈದಿಯಾಗಿರುವೆನೆಂದು ಅರಿವಾಯಿತು ವೀರಧವಳನಿಗೆ!

**ಅಸತ್ಯಕ್ಕೆ ಸತ್ಯದ ಸವಿ ತಿಳಿಯಬೇಕಾದರೆ ಕಾರಾಗೃಹ ವಾಸದಲ್ಲಿ! ಅದರಂತೆ ಸತ್ಯಕ್ಕೆ ಅಸತ್ಯದ ಕಹಿ ತಿಳಿಯಬೇಕಾದರೂ ಕಾರಾಗೃಹ ವಾಸದಲ್ಲಿಯೇ!** ಇಂದು ಸತ್ಯಶೀಲನಾದ ವೀರಧವಳನಿಗೆ ಅಸತ್ಯದ ಕಹಿ ಎಷ್ಟೆಂಬುದನ್ನು ತಿಳಿಯಲು ಅವಕಾಶ ದೊರೆಯಿತು. ಚಂಡವರ್ಮನ ಅಸತ್ಯದ ದಾರಿ ವೀರಧವಳನನ್ನು ಕಾರಾಗೃಹಕ್ಕೆ ತಂದಿತ್ತು.

# ೧೪. ಬಿರುಗಾಳಿ

## ಯಾರು ನೀನು !

ರಾಜಕಾರಣದಿಂದ ರಾಜಮಹೇಂದ್ರವನ್ನು ಬಿಟ್ಟು ಅಜಿಂಕ್ಯ ದುರ್ಗಕ್ಕೆ ಬಂದ ಮೇಲೆ ಸತ್ಯಾಶ್ರಯನ ಜೀವನದಲ್ಲಿ ಶಾಂತಿಯಿರಲಿಲ್ಲ. ಧೀರೋದಾತ್ತನಾದ ಈ ಸರದಾರನು ಹಲವು ಕಷ್ಟ ಪರಂಪರೆಗಳನ್ನು ಸಹಿಸಿದನು. ಆದರೆ, ಅಂದಿನ ಕಷ್ಟಕ್ಕೆ ಹಿಂದಿನದು ಯಾವುದೂ ಎಣೆಯಿರಲಿಲ್ಲ. ತನ್ನ ಏಕಮಾತ್ರ ಪುತ್ರನ ಭಯಂಕರ ಕೊಲೆಯಿಂದ ಆತನಿಗೆ ಸೊಂಟ ಮುರಿದಂತಾಗಿತ್ತು. ಆತನ ಆಶಾತಂತು ಕಿತ್ತುಹೋಗಿತ್ತು ! ಆತನಿಗೆ ಎಲ್ಲ ಕಡೆಗಳಲ್ಲಿಯೂ ನಿರಾಶೆಯ ಕಗ್ಗತ್ತಲೆಯೇ ಕಾಣುತ್ತಿತ್ತು. ತಾನು ಸಾಕಿಸಲಹಿದ ವೀರಧವಳನೇ ತನಗೆ ಮೃತ್ಯುವಾದನೆಂಬುದು ಆತನನ್ನು ದುಃಖಸಾಗರದಲ್ಲಿ ಮುಳುಗಿಸಿತ್ತು. ಲಲಿತಪ್ರಭೆಯೂ ಸಹ ಅಣ್ಣನ ಮರಣವು ವೀರಧವಳನಿಂದ ಆಯಿತೆಂದು ಕೇಳಿ ಅವಾಕ್ಕಾಗಿದ್ದಳು. ಇವೆಲ್ಲವೂ ಚಂಡವರ್ಮನ ಒಳಸಂಚು ಎಂಬುದು ತಂದೆಗಾಗಲಿ, ಮಗಳಿಗಾಗಲಿ ಗೊತ್ತಿರಲಿಲ್ಲ. ಒಂದುವೇಳೆ ಚಂಡವರ್ಮನಿಗೆ ವೀರಧವಳನಲ್ಲಿ ಹಗೆತನವಿದ್ದರೂ ಅದನ್ನು ಸಾಧಿಸಲು ಆತನು ವೀರಧವಳನ ಮೇಲೆ ಕೊಲೆಯ ಆಪಾದನೆಯನ್ನು—ಅದರಲ್ಲೂ ಚಂದ್ರಸೇನನ ಕೊಲೆಯ ಆಪಾದನೆಯನ್ನು—ತಂದು ಒಡ್ಡಬೇಕಾದ ಅವಶ್ಯಕತೆಯೇನಿದೆಯೆಂಬುದೂ ಅವರಿಗೆ ತಿಳಿಯಲಿಲ್ಲ. ಸತ್ಯಾಶ್ರಯನು ಚಂಡವರ್ಮನ ಅತಿಥಿ. ಲಲಿತಪ್ರಭೆಯನ್ನು ಪಡೆಯಲು ಈ ದಾಕ್ಷಿಣ್ಯವೇ ಸಾಕಾಗಿತ್ತು. ವೀರಧವಳನು ಅದಕ್ಕೆ ಅಡ್ಡಿಯಾಗಿರಲಿಲ್ಲ. ಆದುದರಿಂದ ಈಗ ನಡೆದಿರುವ ಪ್ರಸಂಗಗಳು ಅತ್ಯಂತ ಗೂಢ ಸಮಸ್ಯೆಗಳಾಗಿದ್ದುವು ತಂದೆ ಮಕ್ಕಳಿಗೆ! ಸಮಸ್ಯೆ ಏನೇ ಇರಲಿ, ಚಂದ್ರಸೇನನಿಗೆ ಒದಗಿದ ದುರ್ಗತಿಗಾಗಿ ಅಥವಾ ದುರ್ಮರಣಕ್ಕಾಗಿ ಅವರು ಕರಗಿ ಕೃಶರಾದರು. ಸಿಂಹಗುಹೆಯ ಕಳತಂತ್ರ ಅವರು ಅರಿಯಲಿಲ್ಲ !

ಒಂದು ಸಾಯಂಕಾಲ. ಹಂಸಿಕೆ ಆಗತಾನೇ ದೀಪ ಹಚ್ಚಿದ್ದಳು. ಗಗನ ತಲದಲ್ಲಿ ಕಾರ್ಮುಗಿಲು ಕವಿದಿತ್ತು. ಬಿರುಗಾಳಿಯ ಸೂಚನೆಯಿತ್ತು ! ಇಂಥ ಸಮಯದಲ್ಲಿ ಸತ್ಯಾಶ್ರಯನು ಲಲಿತಪ್ರಭೆಯ ಮಹಲಿಗೆ ಬಂದನು. ಲಲಿತಪ್ರಭೆ ತನ್ನ ಕೊಟಡಿಯಲ್ಲಿ ಶೋಕತಪ್ತಳಾಗಿ ಕುಳಿತಿದ್ದಳು. ತನ್ನ ಮುದ್ದುಮಗಳ ದೀನಸ್ಥಿತಿಯನ್ನು ಕಂಡು ಸತ್ಯಾಶ್ರಯನಿಗೆ ಸಂಕಟವುಂಟಾಯಿತು. ಬಹಳ ಹೊತ್ತು ಇಬ್ಬರೂ ಚಂದ್ರಸೇನನನ್ನು ನೆನೆದು ದುಃಖಿಸಿದರು. ಕೊನೆಗೆ ಸತ್ಯಾಶ್ರಯನು ಲಲಿತಪ್ರಭೆಯನ್ನು ಸಂತೈಸುತ್ತ—" ಮಗು, ಈಗ ನಾವು ಶೋಕ ಮಾಡಿದರೂ ಕುಮಾರನು ಮರಳಿ ಬಾರನು. ಇಲ್ಲ ! ಇಲ್ಲ ! ಈಗ ನನ್ನ ಕುಮಾರ ನೀನೇ ! " ಎಂದು ಆಕೆಯ ಹಣೆಯನ್ನು ಮುಟ್ಟಿ ನುಡಿದನು. ತನ್ನ ಮಗಳ ಮನಸ್ಸನ್ನು ಶಾಂತ ಮಾಡಿ ಸತ್ಯಾಶ್ರಯನು ಹೊರಗೆ ಬಂದು ತನ್ನ ಮಹಲನ್ನು ಪ್ರವೇಶಿಸಿದನು.

ಆಗ ಕತ್ತಲೆ ! ಪಕ್ಕದಲ್ಲಿದ್ದ ಶಸ್ತ್ರಾಲಯದಿಂದ ಯಾರೋ ಸರಿದು ಹೋದಂತಾಯಿತು. ಅಜಿಂಕ್ಯ ದುರ್ಗದ ಮಾಯೆಯನ್ನು ಯಾರು ಬಲ್ಲರು ! ಸತ್ಯಾಶ್ರಯನು ಮುಂದಕ್ಕೆ ಹೆಜ್ಜೆ ಇಡಲಿಲ್ಲ. ಶಸ್ತ್ರಾಲಯದಿಂದ ಒಬ್ಬ ಪುರುಷನು ಗೂನುತ್ತ ಹೊರಟನು. ಅವನನ್ನು ನೋಡಿ " ಯಾರು ನೀನು ? " ಎಂದು ಕೂಗಿದನು ಸತ್ಯಾಶ್ರಯ. ಸ್ವಲ್ಪ ಸಮಾಧಾನವಾಯಿತು. ಆ ಪುರುಷ ವ್ಯಕ್ತಿಯ ಪರಿಚಯವಿದ್ದುದರಿಂದ ಸತ್ಯಾಶ್ರಯನು ಆತನನ್ನು ಬಳಿಗೆ ಕರೆದು— " ವೈಹಾಸಿಕ ! ಇಷ್ಟು ಹೊತ್ತಿನಲ್ಲಿ ಈ ಶಸ್ತ್ರಾಲಯದಲ್ಲಿ ಏನು ಮಾಡು ತ್ತಿದ್ದೆ ? " ಎಂದು ಕುತೂಹಲದಿಂದ ಕೇಳಿದನು. ವೈಹಾಸಿಕನು ಅಜಿಂಕ್ಯ ದುರ್ಗಾಧಿಪತಿಗಳ ಒಡ್ಡೋಲಗದಲ್ಲಿ ಎರಡು ತಲೆಮಾರುಗಳಿಂದ ಚಾರಣ ವೃತ್ತಿಯಲ್ಲಿದ್ದವನು. ಅರಸನೋಲಗದಲ್ಲಿ "ಪರಾಕು" ಹೇಳುವ ಸ್ತುತಿಪಾಠಕ ನಿವನು. ದುರ್ಗದ ಆಗುಹೋಗುಗಳನ್ನು ಬಲ್ಲವನು. ರಣರಾಗನನ್ನು ಬಿಟ್ಟರೆ ವೈಹಾಸಿಕ, ವೈಹಾಸಿಕನನ್ನು ಬಿಟ್ಟರೆ ರಣರಾಗ ಎಂಬಂತೆ ಇವರಿಬ್ಬರೂ ಅಜಿಂಕ್ಯ ದುರ್ಗಕ್ಕೆ ಹಳಬರಾಗಿದ್ದರು. ಆದರೆ, ವೈಹಾಸಿಕನ ಜೀವನ ಧರ್ಮಮಾರ್ಗದಲ್ಲಿ ಬೆಳೆದಿತ್ತು. ರಣರಾಗನ ಜೀವನಮರ್ಮ ಮಾರ್ಗದಲ್ಲಿ ಬೆಳೆದಿತ್ತು. ಅಷ್ಟೇ ವ್ಯತ್ಯಾಸ ! ಇಂದು ಸತ್ಯಾಶ್ರಯನಿಗೆ ವೃದ್ಧ ಚಾರಣನ

ಸಂಪರ್ಕವುಂಟಾದುದು ದೈವಲೀಲೆಯೇ ವಿನಾ ಅನ್ಯಥಾ ಅವರು ಸೇರಬಹುದಾದ ಸಂದರ್ಭಗಳೇ ಇರಲಿಲ್ಲ. ಕಗ್ಗತ್ತಲೆಯ ಬಾಳಿನ ಘೋರಾರಣ್ಯದಲ್ಲಿ ತಡಹಿ ಎಡಹುತ್ತಿದ್ದ ಸತ್ಯಾಶ್ರಯನಿಗೆ ವೈಹಾಸಿಕನು ಅಂದು ಒಂದು ಮಿಣುಕು ಹುಳುವಾದನು !

ವೃದ್ಧ ಚಾರಣನು ಭೂಮಿಯನ್ನು ಮುಟ್ಟಿ ನಮಸ್ಕರಿಸಿ—"ಮಹಾರಾಜ, ನಾನು ಇಲ್ಲಿಗೆ ಬಂದೆ. ಅದಕ್ಕೆ ನಿಮಗೆ ಕೋಪ ಬಂದಿತೆ? ನಿಮ್ಮ ಚರ್ಯೆಯಿಂದ ನೀವು ಬಹಳ ದಯಾಳುವೆಂದು ಕಾಣುತ್ತದೆ. ಇಲ್ಲಿಗೆ ಬಂದ ವಿಚಾರ ಹೇಳುತ್ತೇನೆ. ಒಳಗೆ ಬನ್ನಿರಿ" ಎಂದು ವಿನಯದಿಂದ ನುಡಿದನು. ಸತ್ಯಾಶ್ರಯನು ವೃದ್ಧ ಚಾರಣನೊಡನೆ ಮಹಲನ್ನು ಪ್ರವೇಶಿಸಿ ಆತನು ಏನು ಹೇಳುವನೆಂಬುದನ್ನು ಗಮನಿಸುತ್ತ ನಿಂತನು. ವೈಹಾಸಿಕನು ಅತ್ತಿತ್ತ ಸದ್ದುಸುಳಿವನ್ನು ನೋಡಿ ಪಿಸುಮಾತಿನಲ್ಲಿ ತನ್ನ ಕಥೆಯನ್ನು ಹೇಳಲಾರಂಭಿಸಿದನು.

"ಪ್ರಭು, ಈ ಶಸ್ತ್ರಾಲಯದಲ್ಲಿ ಈ ದುರ್ಗದ ಮೂಲಪುರುಷನ ಸರ್ವಾಂಗ ಕವಚವೂ, ಸೀಸಕವೂ ಇವೆ."

"ಅದು ನನಗೂ ಗೊತ್ತಿದೆ."

"ಗೊತ್ತಿದೆ ಸರಿ. ಅವು ಕೆಳಗೆ ಬೀಳುವ ಪ್ರಸಂಗ ತಮಗೆ ಗೊತ್ತೇ?"

"ಗೊತ್ತು ಒಂದು ಸಲ. ಚಂಡವರ್ಮ ಮಹಾರಾಜರು ರಾಜಮಹೇಂದ್ರದಿಂದ ದುರ್ಗಕ್ಕೆ ಮೊನ್ನೆ ಬಂದಾಗ !"

"ಅವು ಕೆಳಗೆ ಬಿದ್ದಾಗಲೆಲ್ಲ ದುರ್ಗಾಧಿಪತಿಗೆ ಏನಾದರೂ ತೊಂದರೆ ಸಂಭವಿಸುತ್ತದೆ."

"ಇದನ್ನು ಯಾವ ಧೈರ್ಯದ ಮೇಲೆ ಹೇಳುತ್ತೀಯೆ."

"ಮಹಾರಾಜ, ನನ್ನ ಅನುಭವವೇ ನನಗೆ ಧೈರ್ಯ. ಸತ್ಯವರ್ಮ ಮಹಾರಾಜರೂ ಹಾಗೆಯೇ ಹೇಳುತ್ತಿದ್ದರು. ಅದರ ನಿಜಾಂಶ ಈಗ

ಇಪ್ಪತ್ತುನಾಲ್ಕು ವರ್ಷಗಳಿಗೆ ಹಿಂದೆ ಅನುಭವಕ್ಕೆ ಬಂತು. ಕೀರ್ತಿವರ್ಮ ಮಹಾರಾಜರ ವಿವಾಹ ಸಮಯದಲ್ಲಿ ಅವು ಕೆಳಗೆ ಬಿದ್ದುವು. ಅದರ ಪರಿಣಾಮ ಬಹಳ ಭಯಂಕರವಾಗಿತ್ತು. ಈಗ ಮತ್ತೆ ಅದೇ ಚಮತ್ಕಾರ ನಡೆಯುತ್ತಿದೆ. ಚಂಡವರ್ಮ ಮಹಾರಾಜರು ದುರ್ಗಕ್ಕೆ ಬಂದಾಗ ಅವು ಬಿದ್ದುದನ್ನು ನೀವೇ ತಿಳಿದಿದ್ದೀರಿ."

"ಹೌದು ; ಅದರ ಅರ್ಥವೇನು ?"

"ಮಹಾರಾಜ, ನಾನು ಈಗ ನಿಜಾಂಶ ಹೇಳಿದರೆ ತಮಗೆ ಕೋಪ ಬರುತ್ತದೆ."

"ಇಲ್ಲ ; ನಿನ್ನ ಮನಸ್ಸಿನಲ್ಲಿರುವುದನ್ನು ನಿರ್ಭಯವಾಗಿ ಹೇಳು."

"ನೋಡಿ, ಮಹಾರಾಜ; ಈ ಕೆಟ್ಟ ಚಿಹ್ನೆಯಿಂದ ಮುಂದೆ ಬರಲಿರುವ ಕಷ್ಟವನ್ನು ಊಹೆಮಾಡೋಣ. ಕೀರ್ತಿವರ್ಮ ಮಹಾರಾಜರ ವಿವಾಹಕ್ಕೆ ಮುಂಚೆ ಈ ಅಪಶಕುನ ಆಗಿತ್ತು. ಈಗ ನಿಮ್ಮ ಪ್ರಿಯ ಕುಮಾರಿಯ ಲಗ್ನ ಚಂಡವರ್ಮ ಮಹಾರಾಜರೊಡನೆ ಆಗಲಿರುವ ಸಮಯದಲ್ಲಿ ಮತ್ತೆ ಅದೇ ಅಪಶಕುನ! ಮಹಾರಾಜ, ಈ ವಿಚಾರವನ್ನು ತಾವು ದೀರ್ಘವಾಗಿ ಯೋಚಿಸಬೇಕು. ನಾನು ನನ್ನ ಸ್ವಾಮಿಯಾದ ಚಂಡವರ್ಮ ಮಹಾರಾಜರಿಗೆ ವಿರುದ್ಧವಾಗಿ ಹೇಳುತ್ತಿರುವೆನೆಂದು ತಾವು ಭಾವಿಸಬಾರದು. ಮೇಲಿಂದ ಮೇಲೆ ಆಗುತ್ತಿರುವ ಈ ವಿಚಿತ್ರವನ್ನು ನೋಡಿದ ಮೇಲೂ ಕಣ್ಣು ಮುಚ್ಚಿ ಕುಳಿತಿರುವುದು ಸೂಕ್ತವಲ್ಲ. ಸದ್ಯದಲ್ಲಿ, ನಿಮಗೆ ಕಠಿಣ ಪ್ರಸಂಗ ಒದಗುವ ಹಾಗಿದೆ. ನೀವೇ ಅದನ್ನು ದೀರ್ಘವಾಗಿ ಆಲೋಚಿಸಬೇಕು."

ವೃದ್ಧ ಚಾರಣನು ಇಷ್ಟು ಹೇಳಿ, ಸತ್ಯಾಶ್ರಯನ ಮುಖವನ್ನು ನೋಡಿದನು. ಮಗನ ವಿಯೋಗದ ದುರ್ಭರ ಶೋಕದಿಂದ ಮೊದಲೇ ಮಂಕುಕವಿದಿದ್ದ ಸತ್ಯಾಶ್ರಯನಿಗೆ ಇದೊಂದು ಗೂಢಾರ್ಥವೂ ಘನವಾಗಿ ಕಂಡಿತು. ಉಳಿದ ವೇಳೆಗಳಲ್ಲಿ ಶಕುನಗಳಿಗೆ ಕಿವಿಗೊಡದ ಸತ್ಯಾಶ್ರಯನಿಗೆ ಆಗಿನ ಕಷ್ಟದಲ್ಲಿ ತೃಣವೇ ಪರ್ವತವಾಗಿತ್ತು ಕಾಲೋಚಿತವಾಗಿ! ಆದರೆ, ದೇಶಭ್ರಷ್ಟನಾಗಿ

ದಾಕ್ಷಿಣ್ಯಕ್ಕೆ ಸಿಕ್ಕಿ ಚಂಡವರ್ಮನಿಗೆ ಕೊಟ್ಟಿರುವ ವಾಗ್ದಾನವನ್ನು ಮುರಿಯುವುದಾದರೂ ಹೇಗೆ? ಮುರಿದರೆ ಮಾತಿಗೆ ವಿರೋಧ! ಮುರಿಯದಿದ್ದರೆ ಮಗಳಿಗೆ ವಿರೋಧ! ಮುರಿದರೆ ರಾಜಕಾರ್ಯಕ್ಕೆ ಕೆಡುಕು! ಮುರಿಯದಿದ್ದರೆ ಸ್ವಕಾರ್ಯಕ್ಕೆ ಕೆಡುಕು! ಹೀಗೆ ಉಭಯ ಸಂಕಟದಿಂದ ವಿಷಣ್ಣವದನನಾಗಿ ನೆಲವನ್ನು ನೋಡುತ್ತ ಯೋಚನಾತರಂಗದಲ್ಲಿ ತೇಲುತ್ತಿದ್ದನು ಸತ್ಯಾಶ್ರಯ! ವೃದ್ಧ ಚಾರಣ ಇದನ್ನು ನೋಡಿದನು. ತನ್ನ ಮಾತು ಸತ್ಯಾಶ್ರಯನಿಗೆ ಹಿಡಿಯಿತೆಂದು ಭಾವಿಸಿ ನಮಸ್ಕರಿಸಿ ತೆರಳಿದನು.

ಆ ರಾತ್ರಿ ನಡೆದ ಮತ್ತೊಂದು ಘಟನೆಯೂ ಸಹ ವಿಚಾರಯುಕ್ತವಾಗಿತ್ತು. ಮಧ್ಯರಾತ್ರಿ ಇರಬಹುದು. ಎಲ್ಲೆಲ್ಲಿಯೂ ಘೋರಾಂಧಕಾರ! ಅಜಿಂಕ್ಯ ದುರ್ಗದ ನೈಋತ್ಯ ದಿಕ್ಕಿನಲ್ಲಿ ಮಿಂಚಿತು. ಸ್ವಲ್ಪ ಹೊತ್ತಿಗೆ ಬಿರುಗಾಳಿ ಎದ್ದಿತು. ಕೃಷ್ಣ ಮೇಘಗಳು ವಿದ್ಯುಲ್ಲತೆಯ ಸ್ಪರ್ಶದಿಂದ ಘರ್ಜಿಸುತ್ತಿದ್ದುವು. ಕ್ರೂರ ಮೃಗಗಳು ತಮ್ಮ ತಮ್ಮ ಗುಹೆಗಳಲ್ಲಿ ಮೇಘಗರ್ಜನೆಯ ಜೊತೆಗೆ ತಾವೂ ಭೋರಿಡುತಿದ್ದುವು. ಕೃಷ್ಣ ಮೇಘಗಳೇ ಕಳಚಿಬಿದ್ದಂತೆ ಮಳೆ ಸುರಿಯಿತು ಮುಸಲಧಾರೆಯಾಗಿ!

ಇಂಥ ಕಾಳರಾತ್ರಿಯಲ್ಲಿ ವೃದ್ಧ ವನಚರಿ ಹೊರಟಳು ಸ್ಫಟಿಕ ಶಿಲಾಸ್ತಂಭದ ಕಡೆಗೆ! ಆಕೆಯನ್ನು ನೋಡಿದರೆ ಸೃಷ್ಟಿದೇವತೆಯೇ ಭಯಂಕರ ರೂಪು ತಳೆದು ಸಂಚರಿಸುತ್ತಿದ್ದಂತೆ ತೋರುತ್ತಿತ್ತು. ಬೆಟ್ಟದ ಕಿಬ್ಬಿಯಲ್ಲಿ ಈಕೆಯ ಮನೆ. ಮಳೆಯಲ್ಲಿ ಸಂಪೂರ್ಣ ನೆನೆದು ನಡುರಾತ್ರಿಯಲ್ಲಿ ದಟ್ಟವಾದ ಕಾಡಿನಲ್ಲಿರುವ ಸ್ಫಟಿಕ ಶಿಲಾಸ್ತಂಭದ ಕಡೆಗೆ ಆಕೆ ಹೊರಡಬೇಕಾದ ಪ್ರಮೇಯವೇನಿದ್ದಿತೊ ಬಲ್ಲವರು ಯಾರು! ವಿದ್ಯುಲ್ಲತೆಯ ಹೊಳಪಿನಲ್ಲಿ ದಾರಿಹಿಡಿದು ನಡೆದಳು. ಸ್ವಲ್ಪ ಹೊತ್ತು ಆ ಕಾಡಿನಲ್ಲಿ ಅತ್ತಿತ್ತ ಅಲೆದು ಕೊನೆಗೆ ಸ್ಫಟಿಕ ಶಿಲಾಸ್ತಂಭದ ಬಳಿಗೆ ಬಂದಳು. ಸ್ಫಟಿಕ ಶಿಲಾಸ್ತಂಭಕ್ಕೆ ಮೂರು ಸಲ ಪ್ರದಕ್ಷಿಣೆ ಮಾಡಿ ಮಂಡಿಯೂರಿ ಕರಯುಗ್ಮಗಳನ್ನು ಜೋಡಿಸಿ ಕಣ್ಮುಚ್ಚಿ ಪ್ರಾರ್ಥನೆ ಮಾಡಿದಳು.

ವನಚರಿ ಕುಳಿತು ಪ್ರಾರ್ಥನೆಯಲ್ಲಿ ಮಗ್ನಳಾಗಿರುವ ಸಮಯದಲ್ಲಿ ಮತ್ತೊಂದು ವ್ಯಕ್ತಿ ಪಕ್ಕದ ಕಾಡಿನಿಂದ ಮೆಲ್ಲನೆ ಸುಳಿದು ಸ್ಫಟಿಕಸ್ತಂಭದ

ಎದುರಿಗೆ ನಿಂತು ದೀರ್ಘದಂಡಪ್ರಣಾಮ ಮಾಡಿ ವನಚರಿಗೆ ಸ್ವಲ್ಪ ದೂರ ದಲ್ಲಿ ಕುರಿತು ಪ್ರಾರ್ಥನೆಗೆ ತೊಡಗಿತು. ಕಗ್ಗತ್ತಲೆಯಾದುದರಿಂದ ತೀರಾ ಹತ್ತಿರದಲ್ಲಿದ್ದರೂ ಒಬ್ಬರನ್ನೊಬ್ಬರು ನೋಡುವಂತಿರಲಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಆ ವೃದ್ಧ ವನಚರಿ ತನ್ನ ಪ್ರಾರ್ಥನೆಯ ಒಂದು ಅಂಕವನ್ನು ಮುಗಿಸಿ, ಆ ಮಿಂಚಿನ ಬೆಳಕಿನಲ್ಲಿ ತನ್ನ ಪಕ್ಕದಲ್ಲಿದ್ದ ಮನುಷ್ಯನನ್ನು ಕಂಡು—"ಯಾರು ನೀನು!" ಎಂದು ಕೇಳಿದಳು. "ನೀನು ಯಾರು!" ಎಂದಿತು ಆ ವ್ಯಕ್ತಿ! ವೃದ್ಧ ವನಚರಿ ಇಂಥ ವ್ಯಕ್ತಿಗಳಿಗೆ ಹೆದರು ವವಳಲ್ಲ. ದೀಕ್ಷಾಬದ್ಧಳಾದ ಆಕೆಗೆ ದೇವರೊಬ್ಬನಲ್ಲದೆ ಬೇರೆ ವ್ಯಕ್ತಿ ಇರಲಿಲ್ಲ. ಆ ದೀಕ್ಷೆ ಏನೆಂಬುದನ್ನು ಯಾರೂ ಅರಿಯರು. ಆದರೆ, ಅಜಿಂಕ್ಯ ದುರ್ಗದ ಸಮಗ್ರ ವ್ಯಾಪಾರವೆಲ್ಲವನ್ನೂ ಬಲ್ಲಳು ಅವಳು. ಆಕೆ ಆ ವ್ಯಕ್ತಿಯನ್ನು ಸಂಬೋಧಿಸಿ, "ನಾನು ಯಾರು ಎಂಬುದನ್ನು ಹೇಳುವ ಕಾಲ ಬಂದಿಲ್ಲ. ಅಲ್ಲದೆ, ಆ ಕಾಲ ಬರುವವರೆಗೆ ನಾನು ಹೇಳುವುದೂ ಇಲ್ಲ. ಆದರೆ, ನೀನು ಯಾರು ಎಂಬುದು ನನಗೆ ಗೊತ್ತು!" ಎಂದಳು. ಹತ್ತಿರ ಕರೆದು ಕಿವಿಯಲ್ಲಿ ಆತನು ಯಾರೆಂಬುದನ್ನು ಹೇಳಿದಳು. ತಾನು ಯಾರೆಂಬುದಾಗಲಿ, ತಾನು ಆ ಸ್ಫಟಿಕ ಶಿಲಾಸ್ತಂಭದ ಬಳಿಗೆ ನಡುರಾತ್ರಿ ಬರುವುದಾಗಲಿ ಯಾರಿಗೂ ಗೊತ್ತಿಲ್ಲವೆಂದು ಭಾವಿಸಿದ್ದ ಆ ಮನುಷ್ಯನಿಗೆ ಆ ವೃದ್ಧ ವನಚರಿಯ ಕಿವಿ ಮಾತು ಕೇಳಿ ಮೈ ಬೆವರಿತು. ತನ್ನ ಬಲಗೈಯಿಂದ ಹಣೆಯನ್ನು ಚಚ್ಚಿ ಕೊಳ್ಳುತ್ತ, ಇನ್ನೊಂದು ಕೈಯನ್ನು ತನ್ನ ಎದೆಯ ಮೇಲಿಟ್ಟು ಪ್ರಲಾಪಿ ಸಿದನು ಅವನು. "ಅಯ್ಯೋ ಆಯಿತು! ನನ್ನ ಮೃತ್ಯು ಸಮೀಪಿಸಿತು!" ಎಂದು ಕೂಗುತ್ತ ಅಲ್ಲಿಂದ ಎದ್ದು ಒಂದೇ ಹಾರಿಗೆ ಕಾಡಿನಲ್ಲಿ ಕಣ್ಮರೆ ಯಾದನು.

ಆತನು ಹೊರಟುಹೋದ ಮೇಲೆ ಆ ವೃದ್ಧ ವನಚರಿ ಮತ್ತೆ ಪ್ರಾರ್ಥನೆಗೆ ಕುಳಿತು ಅನ್ಯೋನ್ಯಭಾವದಿಂದ ಧ್ಯಾನಿಸತೊಡಗಿದಳು. ಅಷ್ಟುಹೊತ್ತಿಗೆ ಮಳೆಯೂ ನಿಂತಿತು. ಕೊನೆಯ ಪ್ರಾರ್ಥನೆ ಮುಗಿದ ಮೇಲೆ ಎದ್ದು ನಿಂತು ಸುತ್ತಲೂ ನೋಡಿದಳು. ಆ ಸ್ತಂಭದ ಸುತ್ತಲೂ ಒಂದು ಬಗೆಯ ವಿಚಿತ್ರ ಪ್ರಕಾಶ! ಇದೇನೆಂದು ತವಕಪಡುತ್ತಿರುವಲ್ಲಿ ಆ ಸ್ತಂಭದ ಹತ್ತಿರ ಎರಡು

ಆಕೃತಿಗಳು ಕಾಣಿಸಿಕೊಂಡುವು! ಒಂದು ಪುರುಷ ವ್ಯಕ್ತಿ; ಇನ್ನೊಂದು ಸ್ತ್ರೀ ವ್ಯಕ್ತಿ! ಸ್ತ್ರೀ ವ್ಯಕ್ತಿ ವೃದ್ಧ ವನಚರಿಯ ಸಮೀಪಕ್ಕೆ ಬಂದಿತು. ವನಚರಿ ಎರಡು ಕೈಗಳನ್ನೂ ಎತ್ತಿ ಜೋಡಿಸಿ ಮುಗಿದು—"ಶಾಂತಿಯಿಂದಿರಿ. ಈಗ ಆಗಿರುವ ತಪ್ಪು ಸರಿಯಾಗುವವರೆಗೆ ನಾನು ಈ ಜಡದೇಹವನ್ನು ಬಿಡುವುದಿಲ್ಲ." ಎಂದು ನುಡಿದಳು. ಸ್ತ್ರೀವ್ಯಕ್ತಿ ಹಿಂದಕ್ಕೆ ಹೋಗಿ ಮಾಯವಾಯಿತು. ತರುವಾಯ ಎರಡನೆಯ ಪುರುಷ ವ್ಯಕ್ತಿ ಮುಂದೆ ಬಂತು! ಅಜಿಂಕ್ಯ ದುರ್ಗದ ಕಡೆಗೆ ತನ್ನ ಕೈಯನ್ನು ತೋರಿಸಿ ಆ ಕಡೆ ಹೋಯಿತು.

ವೃದ್ಧ ವನಚರಿಗೆ ಆ ರಾತ್ರಿ ಆದ ಅನುಭವದಿಂದ ಮೈನಡುಗುತ್ತಿತ್ತು. ಮತ್ತೆ ಬಿರುಗಾಳಿ ಎದ್ದಿತು. ಸ್ವಲ್ಪ ಹೊತ್ತು ಸುಮ್ಮನೆ ಒಂದು ಕಡೆ ಕುಳಿತಳು. ಆಗ ದೂರದಲ್ಲಿ ಕುದುರೆಯ ಗೊರಸಿನ ಸಪ್ಪಳು ಕೇಳಿಸಿತು. ಉತ್ತರ ಕ್ಷಣದಲ್ಲಿ ಯಾರೋ ದಢ್ಢೆಂದು ಬಿದ್ದುದು ಅರಿವಾಯಿತು. ಕೂಡಲೆ ಆ ಕಡೆ ಓಡಿದಳು! "ಯಾರು ನೀನು?"—ಎಂದು ನೋವಿನಿಂದ ಕೇಳಿದಳು ವೃದ್ಧ ವನಚರಿ. ಅಲ್ಲಿ ಆಕೆಯ ಕಣ್ಣಿಗೆ ಕಂಡವರಾದರೂ ಯಾರು? ದುರ್ಜಾತಸಿಂಹ! ರಾತ್ರಿ ದರೋಡೆ ಮುಗಿಸಿಕೊಂಡು ಹಿಂತಿರುಗುತ್ತಿದ್ದನು. ಕತ್ತಲೆಯಲ್ಲಿ ಕುದುರೆ ಎಡವಿ ಮುಗ್ಗರಿಸಿ ಕೆಳಗೆ ಬಿದ್ದಿದ್ದನು ದುರ್ಜಾತ ಸಿಂಹ! ವೃದ್ಧ ವನಚರಿಯು ಆತನಿಗೆ ಶುಶ್ರೂಷೆ ಮಾಡಿದಳು. ತರುವಾಯ ಇಬ್ಬರೂ ಜೊತೆಯಲ್ಲಿ ಸಿಂಹಗುಹೆಯ ಕಡೆಗೆ ತೆರಳಿದರು.

# ೧೫. ಭೇದೋಪಾಯ

## ನಾನು ಕೇವಲ ಮಿತ್ರಭಾವದಿಂದ ಬಂದಿದ್ದೇನೆ.

ಇತ್ತ ಸತ್ಯಾಶ್ರಯನು ವೃದ್ಧ ಚಾರಣನ ಮೂಲಕ ಚಂಡವರ್ಮನ ವಿಚಾರವನ್ನು ತಿಳಿದು ತನ್ನ ಕನ್ಯೆಯ ವಿವಾಹದ ಯೋಚನೆಯಲ್ಲಿ ಶಯನಗೃಹ ವನ್ನು ಪ್ರವೇಶಿಸಿದನು. ಹೊರಗಡೆ ಗುಡುಗಿನ ಆರ್ಭಟ ! ತಲೆಯಲ್ಲಿ ಸಿಡಿಲಿನ ತಾಪ !! ಸತ್ಯಾಶ್ರಯನಿಗೆ ನಿದ್ರೆ ಬರಲಿಲ್ಲ. ಬಹಳ ಕಾಲ ಸಾರಾಸಾರ ವಿಚಾರತರಂಗದಲ್ಲಿ ತೇಲಿದನು. ತನ್ನ ಮುದ್ದು ಕುವರಿಯನ್ನು ಚಂಡ ವರ್ಮನಿಗೆ ಕೊಟ್ಟು ವಿವಾಹ ಬಾಂಧವ್ಯ ಬೆಳೆಸುವುದು ಶುದ್ಧ ಮೂರ್ಖತನ ವೆನ್ನಿಸಿತು. ಸಾಧ್ಯವಾದಷ್ಟು ರೀತಿಯಲ್ಲಿ ಈ ವಿವಾಹ ನೆರವೇರದಂತೆ ಮಾಡುವುದೇ ಲೇಸೆನಿತು ಆತನಿಗೆ. ಪ್ರವಾಹದ ಸೆಳೆತಕ್ಕೆ ಸಿಕ್ಕಿದ ಮನುಷ್ಯ ನಿಗೆ ದಡವನ್ನು ಸೇರಬೇಕೆಂಬ ಆಸೆ ಇರುತ್ತದೆ ; ನಿಜ ಆದರೆ ಆಸೆಯಿಂದಲೇ ಪ್ರವಾಹವನ್ನು ತಡೆಯುವುದಾದರೂ ಅಸಾಧ್ಯ. ಪ್ರವಾಹದ ಕ್ರಿಯೆಗೆ ಪ್ರತಿ ಕ್ರಿಯೆ ನಡೆಯಬೇಕು. ಸೆಳೆತವನ್ನು ತಡೆಯುವ ಸಾಧನವಿರಬೇಕು. ಸತ್ಯಾ ಶ್ರಯನಿಗೆ—ದೇಶಭ್ರಷ್ಟನಾಗಿರುವ ಸತ್ಯಾಶ್ರಯನಿಗೆ—ಯಾವ ಸಾಧನವೂ ಇರಲಿಲ್ಲ. ಚಂದ್ರಸೇನನ ದುರ್ಗತಿ, ವೀರಧವಳನ ಅಧೋಗತಿ ಇವುಗಳ ನಡುವೆ ಸತ್ಯಾಶ್ರಯನ ಪ್ರಗತಿಯಾದರೂ ಸಾಧ್ಯವಾಗಿರಲಿಲ್ಲ. ಅಂತು, ವೈಹಾಸಿಕನ ಸೂಚನೆ ಕತ್ತಲೆಯ ಮನೆಗೆ ಮಣಿದೀಪದಂತಿತ್ತು. ದೈವೇಚ್ಛೆ ಇದ್ದಂತಾಗಲೆಂದು ಬಗೆದು ಸತ್ಯಾಶ್ರಯನು ರಾತ್ರಿಯನ್ನು ಕಳೆದನು.

ಪ್ರಾತಃಕಾಲ. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಪುಷ್ಪಪರಿ ಮಳ ವನಪ್ರಾಂತವನ್ನೆಲ್ಲ ಆವರಿಸಿತ್ತು. ರಾತ್ರಿಯ ಭಯಂಕರ ಬಿರುಗಾಳಿ ಯನ್ನು ಜನರು ಮರೆತರು ಸುಪ್ರಭಾತದ ಸವಿಸೊಬಗಿನಲ್ಲಿ ! **ಸುಖದಲ್ಲಿ ಕಷ್ಟ ವನ್ನು ಮರೆಯುವುದು ಮನುಷ್ಯನ ಸ್ವಭಾವ. ಆದರೆ, ಕಷ್ಟದಲ್ಲಿ ಸುಖ ವನ್ನು ಮರೆಯುವುದು ಅಷ್ಟು ಸುಲಭವಲ್ಲ.** ದಿನಕರನ ಸ್ವಾಗತದಲ್ಲಿ ಭಯಂ ಕರನ ಮಾತೆಲ್ಲಿ ! ಇಂಥ ಸಮಯದಲ್ಲಿ ಸತ್ಯಾಶ್ರಯನ ಮುಖದಲ್ಲಿ ಮಾತ

ಖಿನ್ನತೆ ಮೂಡಿತ್ತು. ಕಷ್ಟದ ದಿನಗಳಲ್ಲಿ ಸುಖದ ಸವಿಯನ್ನು ನೆನೆದು ದುಃಖಿಸುತ್ತಿರಲಿಲ್ಲ ಸತ್ಯಾಶ್ರಯ. ಕಷ್ಟದಿಂದ ಪಾರಾಗುವ ಬಗೆಯನ್ನು ಕಾಣದೆ ಖಿನ್ನನಾಗಿದ್ದನು ಅವನು. ಚಂಡವರ್ಮನು ಯಥಾಕ್ರಮದಂತೆ ಸತ್ಯಾಶ್ರಯನ ಮಹಲಿಗೆ ಬಂದು ಮುಂದಿನ ಕ್ರಮವನ್ನು ಪರ್ಯಾಲೋಚಿಸ ಬೇಕೆಂಬುದನ್ನು ಸೂಚಿಸಿದನು. ಸತ್ಯಾಶ್ರಯನು—"ಸಾಕು, ಗೊತ್ತಾ ಯಿತು." ಎಂದು ಕೂಡಲೇ ನುಡಿದನು. ಆತನ ಮನಸ್ಸಿನ ಖೇದವು ಮಾತಿನಲ್ಲಿ ಕಾಣಿಸಿತು. ಆದರೆ, ಚಂಡವರ್ಮನ ಹಿಡಿತದಿಂದ ತಪ್ಪಿಸಿ ಕೊಳ್ಳುವುದಾದರೂ ಸುಲಭವಾಗಿರಲಿಲ್ಲ.

ಚಂಡವರ್ಮ—ಮಹಾರಾಜ, ನಿಮ್ಮ ಯೋಗಕ್ಷೇಮಕ್ಕಾಗಿ ನಾನು ನುಡಿಯುತ್ತಿದ್ದೇನೆ. ತಿಳಿಯಿರಿ. ವೀರಧವಳನು ಚಂದ್ರಸೇನನನ್ನು ಕೊಲೆ ಮಾಡಿರುವುದು ನಿಮ್ಮ ವಂಶವನ್ನೇ ಕೊಲೆಮಾಡಿದಂತಿದೆ.

ಸತ್ಯಾಶ್ರಯ—ನೀವು ಹೇಳುವುದು ತಿಳಿಯಿತು. ಆತನು ನಿಜವಾ ಗಿಯೂ ನಿರ್ದೋಷಿಯಾಗಿದ್ದರೆ ತನ್ನ ಮೇಲೆ ಬಂದಿರುವ ಕಳಂಕವನ್ನು ತೊಳೆಯುವುದಕ್ಕೆ ಸಮಯ ಸಿಕ್ಕಬಹುದು. ಆದರೆ, ಈ ಕೊಲೆಯ ವಿಚಾ ರಣೆಯನ್ನು ನಡೆಸುವುದು ಕಷ್ಟವಾಗಿದೆ.

ಚಂಡ—ಕಷ್ಟವೇಕೆ, ಮಹಾರಾಜ? ನೀವೇ ಇದನ್ನು ಸ್ವಂತವಾಗಿ ವಿಚಾರಿಸುವುದು ನ್ಯಾಯವಿರುದ್ಧವಾಗಿದೆ. ಏಕೆಂದರೆ ಈಗ ನೀವು ನನ್ನ ದುರ್ಗದಲ್ಲಿ ಪರಾಧೀನರಾಗಿದ್ದೀರಿ. ಅಲ್ಲದೆ ಮಂತ್ರಿ ಮಂಡಲದ ದುರಾಗ್ರಹಕ್ಕೆ ಸಿಕ್ಕಿದ್ದೀರಿ. ಆದುದರಿಂದ ನಿಮ್ಮ ತೀರ್ಮಾನಗಳು ಕೇವಲ ಹಾಸ್ಯ ಪ್ರದವಾದಾವು. ಅಧಿಕಾರವಿಲ್ಲದ ತೀರ್ಮಾನಗಳಿಗೆ ಬೆಲೆಯಿಲ್ಲ. ಆದುದರಿಂದ, ಕೊಲೆಯ ವಿಚಾರಣೆ ನಮ್ಮ ಕೈಮೀರಿದ ಕೆಲಸ. ರಾಜಮಹೇಂದ್ರದಿಂದ ನ್ಯಾಯನಿಷ್ಣಾತರನ್ನು ಕರೆಯಿಸಿ ತೀರ್ಪು ಕೊಡಿಸಬೇಕಾಗಿದೆ.

ಸತ್ಯಾಶ್ರಯನಿಗೆ ಚಂಡವರ್ಮನ ಸೂಚನೆಯಲ್ಲಿ ಸ್ವಲ್ಪ ನಿಜವಿರುವಂತೆ ಕಂಡಿತು. ಆದರೆ, ಚಂಡವರ್ಮನಿಗೆ ವೀರಧವಳನ ಮೇಲೆ ಇಡೀ ಚಾಳುಕ್ಯ

ರಾಷ್ಟ್ರದಲ್ಲೆಲ್ಲ ಕೊಲೆಯ ಆಪಾದನೆ ಹೊರಿಸಬೇಕೆಂಬುದೇ ಉದ್ದೇಶವಾಗಿತ್ತು. ಆದುದರಿಂದ ಇದನ್ನು ಕೇವಲ ಮನೆಯ ಮಾತಿನಂತೆ ಪರಿಗಣಿಸುವುದಕ್ಕೆ ಬದಲಾಗಿ ಬಹಿರಂಗ ವಿಚಾರಣೆಯಲ್ಲಿ ಇತ್ಯರ್ಥಪಡಿಸಬೇಕೆಂದು ವಾದಿಸಿದನು. ಚಂಡವರ್ಮನ ವಾದದಲ್ಲಿ ಅಡಗಿದ್ದ ಭೇದೋಪಾಯ ಸತ್ಯಾಶ್ರಯನ ಗಮನಕ್ಕೆ ಅಂದು ಬರಲಿಲ್ಲ. ಅಂತು, ರಾಜಮಹೇಂದ್ರದಲ್ಲಿದ್ದ ಸರದಾರ ವೀರರಾಜರಿಗೆ ಹೇಳಿಕಳುಹಿಸಿ, ಯೋಗ್ಯರಾದ ನ್ಯಾಯಾಧೀಶರನ್ನು ಅಜಿಂಕ್ಯ ದುರ್ಗಕ್ಕೆ ಬರಮಾಡಿಕೊಂಡು, ಕೊಲೆಯ "ಮೊಕದ್ದಮೆ" ಯನ್ನು ಬಹಿರಂಗ ವಿಚಾರಣೆಗೆ ಗುರಿಪಡಿಸಬೇಕೆಂದು ನಿಶ್ಚಯಿಸಿದರು ಸರದಾರ ಮಹಾಶಯರು.

ಸತ್ಯಾಶ್ರಯನು ಇಂಥ ಮೊಕದ್ದಮೆಗಳನ್ನು ಅರಿಯದವನಲ್ಲ. ರಾಜಮಹೇಂದ್ರದಲ್ಲಿ "ಮೊಕದ್ದಮೆ" ಗಳಿಗೇನು ಕಡಮೆ. ವಾದವಿವರಣೆಗಳಿಗೇನು ಕಡಮೆ. ಬಹಿರಂಗ ಮೊಕದ್ದಮೆಗಳಿಗೂ ಅಂತರಂಗ ವಿಮರ್ಶೆಗಳಿಗೂ ಅಜಗಜಾಂತರ. ಅಂತರಂಗ ವಿಮರ್ಶೆ ಬಲ್ಲವನಿಗೆ ಬಹಿರಂಗ ವಿಚಾರಣೆಗಳ ಗದ್ದಲ ಬೇಕಿಲ್ಲ. **ಸತ್ಯದ ನೆಲೆ ಆತ್ಮ ವಿಮರ್ಶೆಗೆ ಸಿಕ್ಕುವಷ್ಟು ಬೇಗ ವಾದ ವಿವಾದಗಳಿಗೆ ಸಿಕ್ಕಲಾರದು.** ಆದರೆ, ಸತ್ಯಾಶ್ರಯನು ಸತ್ಯವಿರುವ ಕಡೆ ಜಯವೆಂದು ನಂಬಿದ್ದವನು. ಬಹಿರಂಗ ವಿಚಾರಣೆಯಾಗಲಿ, ಅಂತರಂಗ ವಿಮರ್ಶೆಯಾಗಲಿ "ಸತ್ಯಮೇವ ಜಯತೇ ನಾನೃತಂ" ಎಂದು ಬಗೆದು, ಚಂಡವರ್ಮನ ಸೂಚನೆಯಲ್ಲಿ ನಿಜವನ್ನು ಕಂಡನು. ಸೂಚನೆಯಲ್ಲಿ ನಿಜವೇನೋ ಇತ್ತು. ಆದರೆ, ಆ ನಿಜ ಚಂಡವರ್ಮನಷ್ಟೇ ನಿಜವಾಗಿತ್ತು ! ರಾಜಮಹೇಂದ್ರಕ್ಕೆ ಪತ್ರ ಹೊರಟಿತು. ಯೋಗ್ಯರಾದ ನ್ಯಾಯಾಧೀಶರನ್ನು ಕರೆದುಕೊಂಡು ಬರುವಂತೆ ಸರದಾರ ವೀರರಾಜರಿಗೆ ತಿಳಿಸಿದರು.

ಚಂಡವರ್ಮನು ಸ್ವಲ್ಪ ಹೊತ್ತು ಸುಮ್ಮನಿದ್ದು ಲಲಿತಪ್ರಭೆಯ ವಿವಾಹದ ಮಾತನ್ನು ಆರಂಭಿಸಿದನು. ಸತ್ಯಾಶ್ರಯನು ಒಂದು ಕ್ಷಣಕಾಲ ಯೋಚಿಸಿ—"ಚಂಡವರ್ಮ ಮಹಾರಾಜ, ನಿಮ್ಮೊಡನೆ ಒಂದು ಮಹತ್ತರವಾದ ವಿಚಾರವನ್ನು ಕುರಿತು ಯೋಚಿಸಬೇಕಾಗಿದೆ. ಆ ವಿಚಾರ ನಿಮ್ಮ

ಮುಂದೆ ಹೇಳುವುದಾದರೂ ಹೇಗೆ ಎಂಬುದೇ ನನಗೆ ತೋಚುವುದಿಲ್ಲ." ಎಂದು ಕ್ಷೀಣಸ್ವರದಿಂದ ನುಡಿದನು.

ಚಂಡವರ್ಮ—ಏನು, ಲಲಿತಪ್ರಭೆಯನ್ನು ನನಗೆ ಕೊಡುವ ವಿಚಾರ ದಲ್ಲಿ ಸಂಕೋಚವೇ ?

ಸತ್ಯಾಶ್ರಯ—ಮಹಾರಾಜ, ಕೊಡುವುದಕ್ಕೆ ಸಂಕೋಚವಲ್ಲ; ತಿಳಿಸು ವುದಕ್ಕೆ ಸಂಕೋಚ.

ಚಂಡ—ಆದರೆ, ಮಹಾರಾಜ, ವಿವಾಹ ಸಂದರ್ಭದಲ್ಲಿ ಸಂತೋಷ ಮತ್ತು ಸುಖ ಇವೆರಡಲ್ಲದೆ ಸಂಕೋಚ ಮತ್ತು ದುಃಖಕ್ಕೆ ಕಾರಣ ವಿಲ್ಲ.

ಸತ್ಯಾ—ವಿವಾಹವು ಸುಖದಾಯಕವೂ ಮಂಗಳದಾಯಕವೂ ಹೌದು. ಅದನ್ನು ನಾನು ಒಪ್ಪುತ್ತೇನೆ. ಆದರೆ, ಯಾರಿಗೆ ?

ಚಂಡ—ಏನು ? ನಿಮ್ಮ ಕನ್ಯೆಯ ಸಮ್ಮತಿ ಆಗುವುದಿಲ್ಲವೆಂದು ಹೇಳುವಿರಾ !

ಸತ್ಯಾ—ಸರದಾರ ಸಾಹೇಬ್, ನನ್ನ ಪ್ರಭೆಗೆ ಸಂಭವಿಸಿರುವ ದುಃಖ ಬೆಟ್ಟದ ಹಾಗಿದೆ. ನನ್ನ ಹಾಗೆಯೇ ನೀವೂ ಸಹ ದಯಾಳು. ಅಂತಃಕರಣದಿಂದ ನೋಡಿದರೆ ನೀವೂ ಸಹ ನನ್ನಂತೆಯೇ ಯೋಚಿಸಬಹುದು. ನಾನು ವಚನ ಕೊಟ್ಟಿದ್ದೇನೆ. ನನ್ನ ಮೂಲಕ ವಚನ ಭಂಗವಾಗಲಾರದು. ಆದರೆ, ನನ್ನ ಕನ್ಯೆಯ ನಿಜವಾದ ಸ್ಥಿತಿ ಈಗ ನನಗೆ ತಿಳಿಯುತ್ತದೆ.

ಚಂಡವರ್ಮನು ಕ್ಷಣಕಾಲ ಸುಮ್ಮನಿದ್ದು ಲಲಿತಪ್ರಭೆಯಂಥ ಸ್ತ್ರೀ ರತ್ನವು ತನ್ನ ಕೈತಪ್ಪಿ ಹೋಗಬಾರದೆಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡನು. ಅನಂತರ, ಸತ್ಯಾಶ್ರಯನನ್ನು ಕುರಿತು—"ಮಹಾರಾಜ, ನನ್ನ ಮಾನಾಪ ಮಾನ ಮತ್ತು ನಿಮ್ಮ ಮೇಲೆ ಈಗ ಒದಗಿರುವ ಪುತ್ರಶೋಕ—ಇವೆರಡೂ

ದೃಷ್ಟಿಗಳಿಂದ ಲಲಿತಪ್ರಭೆಯ ವಿವಾಹವನ್ನು ಆರು ತಿಂಗಳ ಕಾಲ ಮುಂದು ವರಿಸೋಣ" ಎಂದನು.

"ಸರಿ, ತಮ್ಮ ಸೂಚನೆ ತುಂಬ ಉತ್ತಮವಾಗಿದೆ" ಎಂದು ಒಪ್ಪಿದನು ಸತ್ಯಾಶ್ರಯ ಕ್ರೂರ ವಿಧಿಯ ಕೈಗೊಂಬೆಯಾಗಿ!

ಚಂಡವರ್ಮನಿಗೆ ವೀರಧವಳನನ್ನು ಕೊಲೆಪಾತಕನೆಂದು ನಿರ್ಧರಿಸಿದರೆ ಸಾಕಾಗಿತ್ತು. ಕೊಲೆಗೆ ಮರಣದಂಡನೆಯಾಗುವುದು ಖಂಡಿತವೆಂದು ತಿಳಿದಿದ್ದನು ಚಂಡವರ್ಮ. ಆದರೆ, ತನ್ನ ಮನಸ್ಸನ್ನು ತಾನೇ ನಂಬತಕ್ಕವನಲ್ಲ ಅವನು. ಒಂದು ವೇಳೆ ಕೊಲೆಯು "ಮೊಕದ್ದಮೆ" ಯಲ್ಲಿ ವೀರಧವಳನಿಗೆ ಮರಣದಂಡನೆಗೆ ಬದಲಾಗಿ ಬಿಡುಗಡೆಯಾದರೆ ಗತಿಯೇನೆಂಬುದು ಅವನನ್ನು ಕಾಡುತ್ತಿತ್ತು. ಅದಕ್ಕಾಗಿ ಬೇರೊಂದು ಉಪಾಯವನ್ನು ಹುಡುಕಿದನು. ವೀರಧವಳನನ್ನು ಕಾರಾಗೃಹದಿಂದ ಬಿಡಿಸಿ ಗುಪ್ತರೀತಿಯಲ್ಲಿ ಮುಂದಾಗಿಯೇ ಕೊಲೆ ಮಾಡಿಸಿಬಿಟ್ಟರೆ ಸರಿಯೆಂದು ನಿರ್ಧರಿಸಿದನು. ಅಜಿಂಕ್ಯ ದುರ್ಗದ ನಿರಂಕುಶ ಪ್ರಭುವಾದ ಚಂಡವರ್ಮನಿಗೆ ಅಡ್ಡಿ ಯಾರು! ವಿಧಿಯೊಂದನ್ನು ಮಾತ್ರ ಚಂಡವರ್ಮ ಕಂಡಿರಲಿಲ್ಲ. ಕಂಡಿದ್ದರೆ ವಿಧಿಯನ್ನೂ ಕಾರಾಗೃಹದಲ್ಲಿ ಇಡಲು ಹೇಸುತ್ತಿರಲಿಲ್ಲ ಚಂಡವರ್ಮ! ಅಂತು ವೀರಧವಳನನ್ನು ಗುಪ್ತ ರೀತಿಯಲ್ಲಿ ಸಂಹರಿಸಬೇಕಾದುದು ಅಗತ್ಯವಾಗಿತ್ತು ಚಂಡವರ್ಮನಿಗೆ ಆರು ತಿಂಗಳ ಅವಧಿಯಲ್ಲಿ.

ಸುಮಾರು ನಡುರಾತ್ರಿ! ವೀರಧವಳನು ನೆಲಮಾಳಿಗೆಯಲ್ಲಿ ತನ್ನ ಸೆರೆಮನೆಯ ನೆಲವನ್ನು ನೋಡುತ್ತ ದೀರ್ಘಾಲೋಚನೆಯಲ್ಲಿ ಹೆಜ್ಜೆ ಇಡುತ್ತಿದ್ದನು. ಸೆರೆಮನೆಯ ಒಂದು ಮೂಲೆಯಲ್ಲಿ ಒಣಹುಲ್ಲಿನ ಒಂದು ಹಾಸಿಗೆ. ಹತ್ತಿರದಲ್ಲಿಯೇ ಕೊಳಕಾದ ಊಟದ ತಟ್ಟೆ ಮತ್ತು ಒಡಕಲು ನೀರಿನ ಪಾತ್ರೆ. ಕಾರಾಗೃಹದಲ್ಲಿ ದೀಪವಿರಲಿಲ್ಲ. ಕಗ್ಗತ್ತಲು ಮತ್ತು ನಿಶ್ಶಬ್ದ ಇವುಗಳ ಭೀಕರ ಸ್ವರೂಪ ಎದ್ದು ಕಾಣುತ್ತಿತ್ತು ಸೆರೆಮನೆಯಲ್ಲಿ! ಎಷ್ಟೋ ಜನ ಕೈದಿಗಳಾಗಿ ತುಳಿದು ಹಳಿದು ಕಳೆದು ಹೋದ ಕಿರುಮನೆ ಆ ಸೆರೆಮನೆ! ಕಾರಾಗೃಹಕ್ಕೆ ಹೊರಗಡೆಯಿಂದ ಬೀಗ ಹಾಕಿತ್ತು. ವೀರಧವಳನು

ತನ್ನ ಮೇಲೆ ಹಟಾತ್ತಾಗಿ ಒದಗಿದ ಆಪಾದನೆಗಾಗಿ ದೀರ್ಘಾಲೋಚನೆಯಲ್ಲಿ ಮಗ್ನನಾಗಿದ್ದನು. ಆಗ ಹೊರಗಡೆ ಹೆಜ್ಜೆಯ ಶಬ್ದ ಕೇಳಿಸಿತು. ಅಷ್ಟು ಹೊತ್ತಿನಲ್ಲಿ ಯಾರೂ ಸೆರೆಮನೆಯ ಕಡೆ ಬರುವ ವಾಡಿಕೆ ಇರಲಿಲ್ಲ. ಒಂದು ವೇಳೆ ಕಾವಲುಗಾರನ ಗಸ್ತು ಇರಬಹುದೇ ಎಂದು ಯೋಚಿಸುತ್ತಿರುವಷ್ಟರಲ್ಲಿ ಸೆರೆಮನೆಯ ಅಗುಳಿಯನ್ನು ಹೊರಗಡೆ ತೆಗೆದಹಾಗಾಯಿತು. ಬಾಗಿಲು ತೆರೆಯಿತು. ಸರದಾರ ಚಂಡವರ್ಮನು ಒಳಗಡೆ ಬಂದನು. ಬಾಗಿಲನ್ನು ಸರಿಯಾಗಿ ಮುಚ್ಚಿ ವೀರಧವಳನ ಮುಂದುಗಡೆ ನಿಂತನು ಚಂಡವರ್ಮ!

ಸರದಾರ ಚಂಡವರ್ಮನನ್ನು ನೋಡಿ ವೀರಧವಳನಿಗೆ ಬಹಳ ಆಶ್ಚರ್ಯವಾಯಿತು. ಚಂಡವರ್ಮನು ವೀರಧವಳನನ್ನು ಸಮಾಧಾನಗೊಳಿಸುವುದಕ್ಕಾಗಿ ಒಂದೆರಡು ಸ್ನೇಹಪೂರಿತವಾದ ಮಾತುಗಳನ್ನು ಆಡಿದನು. ಸಮಾಧಾನ ಹೇಳುವುದರಲ್ಲೂ ಅಹಂಕಾರವಿತ್ತು ಚಂಡವರ್ಮನಿಗೆ! "ದುರ್ದೈವಿ ತರುಣ, ನನ್ನನ್ನು ನೋಡಿ ನಿನಗೆ ಆಶ್ಚರ್ಯವಾಗಬಹುದು. ಅದರಲ್ಲೂ ಈ ನಡುರಾತ್ರಿಯಲ್ಲಿ ಬಂದಿರುವುದಾದರೂ ಆಶ್ಚರ್ಯವೇ ಸರಿ. ಆದರೆ, ನಾನು ಇಲ್ಲಿಗೆ ಕೇವಲ ಸ್ನೇಹಭಾವದಿಂದ ಬಂದಿರುತ್ತೇನೆ." ಎಂದು ಉಸುರಿದನು ಚಂಡವರ್ಮ.

ವೀರಧವಳನಿಗೆ ಚಂಡವರ್ಮನ ಕಾರ್ಯಭಾರವೇನೆಂಬುದು ಗೊತ್ತಾಗಲಿಲ್ಲ. ಬಹುಶಃ ಕೊಲೆಯ ವಿವರಗಳನ್ನು ಸ್ವತಃ ತಿಳಿದು ತನ್ನನ್ನು ಕೊಲೆಯ ಆಪಾದನೆಯಿಂದ ಬಿಡುಗಡೆಮಾಡಲು ಬಂದಿರುವ ಮಿತ್ರನೆಂದು ಭಾವಿಸಿ— ಮಹಾರಾಜ, ಅರಣ್ಯದಲ್ಲಿ ಆಗಿರುವ ವಿಚಾರಗಳನ್ನು ನಿನ್ನೆ ವಿಶದವಾಗಿ ಹೇಳಲು ಆಗಲಿಲ್ಲ. ಅಂಥ .... .... " ಎಂದು ಮಾತು ಮುಗಿಸುವಷ್ಟರಲ್ಲಿಯೇ ಚಂಡವರ್ಮನು ಅವಸರದಿಂದ ನಡುವೆ ಬಾಯಿ ಹಾಕಿ— "ವೀರಧವಳ, ನಾನು ಯಾವ ಕೆಲಸಕ್ಕೆ ಬಂದಿರುವೆನೋ ಅದನ್ನು ಈ ಸಮರಾತ್ರಿಯಲ್ಲಿಯೇ ನೆರವೇರಿಸಬೇಕಾಗಿದೆ. ಆದಕ್ಕಾಗಿ ನನ್ನನ್ನು ಮಿತ್ರನಾಗಿ ಇಲ್ಲಿಗೆ ಕಳುಹಿಸಿದ್ದಾರೆ. ನಿನ್ನ ಮೇಲಿರುವ ಆಪಾದನೆ ಏನೇ ಇರಲಿ, ಅದನ್ನು ಹೇಳುವುದಕ್ಕೂ, ಕೇಳುವುದಕ್ಕೂ ಇದು ಸಮಯವಲ್ಲ."

"ಸಮಯವಲ್ಲ"—ಏಕೆ ಸಮಯವಲ್ಲವೋ ವೀರಧವಳನಿಗೆ ತಿಳಿಯ ಲಿಲ್ಲ. "ಕಳುಹಿಸಿದ್ದಾರೆ" ಯಾರು ಕಳುಹಿಸಿದ್ದಾರೋ ಅದೂ ತಿಳಿಯ ಲಿಲ್ಲ. ಹೋಗಲಿ, ಚಂಡವರ್ಮನನ್ನು ಇಲ್ಲಿಗೆ ಕಳುಹಿಸುವಷ್ಟು ಸಮರ್ಥರು ಯಾರಿರಬಹುದೋ ತಿಳಿಯಬೇಕೆಂದು ವೀರಧವಳನು ಕೂಡಲೆ—"ಕಳುಹಿಸಿ ದವರು ಯಾರು?" ಎಂದು ಕೇಳಿದನು. ಚಂಡವರ್ಮನಿಗೆ ಬೇಕಾಗಿದ್ದುದೂ ಅದೇ ಪ್ರಶ್ನೆಯೇ!

"ಲಲಿತಪ್ರಭೆ...." ಎಂದನು ಚಂಡವರ್ಮ ಗಂಭೀರವಾಗಿ! "ಏನು ಲಲಿತಪ್ರಭೆಯೆ?" ಎಂದು ವೀರಧವಳನು ಉತ್ಸಾಹದಿಂದ ನುಡಿದು— "ಮಹಾರಾಜ, ನಾನು ನಿರ್ದೋಷಿ ಎಂಬುದು ಆಕೆಗೆ ಗೊತ್ತುತಾನೆ?" ಎಂದು ಅವಸರದಿಂದ ಕೇಳಿದನು.

"ಅದು ಯಾವುದೂ ನನಗೆ ಗೊತ್ತಿಲ್ಲ. ನಿನಗೆ ಒಳ್ಳೆಯದು ಆಗ ಬೇಕೆಂದು ಅವಳಿಗೆ ಆಸೆಯಿದೆ." ಎಂದು ವೀರಧವಳನ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದನು.

"ನಿಜ, ಲಲಿತಪ್ರಭೆಗೆ ನನ್ನ ವಿಚಾರದಲ್ಲಿ ಅಪಾರ ಪ್ರೇಮವಿದೆ. ಆದರೆ, ಆಕೆಯ ಇಷ್ಟವಾದರೂ ಏನು?"

ಚಂಡವರ್ಮ—ಇಷ್ಟವನ್ನು ನಾನು ತಿಳಿಸುತ್ತೇನೆ. ನೀನು ಕಷ್ಟ ದಿಂದ ಪಾರಾಗಬೇಕೆಂಬುದೇ ಆಕೆಯ ಇಷ್ಟ.

ವೀರಧವಳ—ಅದು ಹೇಗೆ? ಕೊಲೆಯ ಆಪಾದನೆ ಸುಳ್ಳೆಂಬುದನ್ನು ಆಕೆ ತಿಳಿಯಬೇಕಲ್ಲವೇ?

ಚಂಡವರ್ಮ—ತರುಣ, ನಿನಗೆ ಅನುಭವ ಸಾಲದು. ಕೊಲೆಯ ಆಪಾದನೆಯನ್ನು ತಪ್ಪಿಸಿಕೊಳ್ಳುವುದು ಸುಲಭವಲ್ಲ. ಲಲಿತಪ್ರಭೆಗೆ ಆದರಿಂದ ದುಃಖವುಂಟಾದೀತು. ಮುಂದೆ ಜೀವಂತನಾಗಿದ್ದರೆ ಲಲಿತಪ್ರಭೆಗೆ—ಅಷ್ಟೇ ಏಕೆ, ಇಡೀ ದೇಶಕ್ಕೇ—ನೀನು ತಪ್ಪಿತಸ್ಥನಲ್ಲವೆಂಬುದನ್ನು ಸಾರಬಹುದು.

ಹೇಗೇ ಆಗಲಿ, ಕಾರಾಗೃಹ ವಾಸವಂತೂ ತಪ್ಪಲಾರದು. ನೀನು ಕೊಲೆಪಾತಕ ನೆಂಬುದು ನಿರ್ಧಾರವಾದರೆ ಮರಣದಂಡನೆಯಂತೂ ಖಂಡಿತ. ನಿನ್ನ ಕಷ್ಟದ ಹಂಬಲದಲ್ಲಿ ಲಲಿತಪ್ರಭೆಯ ಆರೋಗ್ಯ ಕೆಡುವುದು ನಿಜ. ಈಗಾಗಲೇ ಕೆಟ್ಟಿದೆ. ಆದುದರಿಂದಲೇ ಆಕೆಯ ಹಿತಕ್ಕಾಗಿಯೂ ನಿನ್ನ ಬಿಡುಗಡೆ ಗಾಗಿಯೂ ನೀನು ವಂಗದೇಶಕ್ಕೆ ಸದ್ಯದಲ್ಲಿ ಹೋಗುವುದು ಯುಕ್ತವಾಗಿದೆ."

ಈ ಮಾತುಗಳನ್ನು ಕೇಳಿ ವೀರಧವಳನಿಗೆ ಸಿಡಿಲೆರಗಿದಂತಾಯಿತು. ಲಲಿತಪ್ರಭೆಗೆ ದುಃಖವುಂಟಾಗುವ ಪ್ರಸಂಗಕ್ಕೆ ನಾನು ಅವಕಾಶ ಕೊಡಬಾರ ದೆಂದು ಮೊದಲು ಭಾವಿಸಿದನು. ಆದರೆ, ತಾನು ಕಾರಾಗೃಹದಿಂದ ಈ ರಾತ್ರಿ ಹೊರಟುಹೋದರೆ " ವೀರಧವಳನು ಕೊಲೆಪಾತಕನಾಗಿದ್ದುದರಿಂದಲೇ ತಲೆ ತಪ್ಪಿಸಿಕೊಂಡು ಹೋದನು." ಎಂದು ಜನರು ಆಡಿಕೊಳ್ಳುವರೆಂಬುದು ಆತನಿಗೆ ಮತ್ತೆ ಅಸಹ್ಯವಾಗಿ ತೋರಿತು. ಕೊನೆಗೆ ಆತನು ಚಂಡವರ್ಮ ನನ್ನು ನೋಡಿ—" ಮಹಾರಾಜ, ವಂಗದೇಶಕ್ಕೆ ಹೋಗುವುದಾದರೂ ಹೇಡಿಯ ಕೆಲಸ! ನನ್ನಿಂದಾಗದು. " ಎಂದು ತಿಳಿಸಿದನು.

ವೀರಧವಳನ ಹೃದಯವೇದನೆಯನ್ನೂ ನಿಶ್ಚಲ ಚಿತ್ತವನ್ನೂ ನೋಡಿ ಚಂಡವರ್ಮನಿಗೆ ಸಂತೋಷವುಂಟಾಯಿತು. ಆದರೆ ತನ್ನ ಸಂತೋಷ ವನ್ನು ಅಂತರಂಗದಲ್ಲಿಯೇ ಇಟ್ಟುಕೊಂಡು ವೀರಧವಳನ ಭುಜದ ಮೇಲೆ ಕೈಯಿಟ್ಟು—" ತರುಣ, ನೀನು ಇದಕ್ಕೆ ಮುಂಚೆ ಲಲಿತಪ್ರಭೆಯನ್ನು ಪ್ರೀತಿಸು ತ್ತಿದ್ದುದೇ ದಿಟವಾದರೆ, ಈಗ ನೀನು ಆಕೆಯ ಯೋಗಕ್ಷೇಮವನ್ನು ಮೊದಲು ರಕ್ಷಿಸಬೇಕಾಗಿದೆ. ಆಕೆಯು ಸುಖವಾಗಿದ್ದರಲ್ಲವೇ ನಿನ್ನ ಉದ್ದೇಶವು ಏನಿದ್ದರೂ ಸಫಲವಾದೀತು? ಕಾರಾಗೃಹದಲ್ಲಿದ್ದುಕೊಂಡು ನೀನು ಯಾವ ಮಹತ್ಕಾರ್ಯವನ್ನೂ ಸಾಧಿಸಲಾರೆ. ನಾನಂತೂ ನಿಮ್ಮಿಬ್ಬರ ಪ್ರೇಮಕ್ಕೆ ಎಂದಿಗೂ ಅಡ್ಡಬರಲಾರೆನು. ನಾನು ಇಲ್ಲಿಗೆ ಕೇವಲ ಮಿತ್ರಭಾವದಿಂದ ಬಂದಿದ್ದೇನೆ." ಎಂದು ಕನಿಕರ ಹುಟ್ಟುವಂತೆ ಒತ್ತಿ ಹೇಳಿದನು. "ನಿಮ್ಮಿಬ್ಬರ ಪ್ರೇಮಕ್ಕೆ ಎಂದಿಗೂ ಅಡ್ಡ ಬರಲಾರೆನು." ಎಂಬುದನ್ನು ಕೇಳಿ ವೀರಧವಳ ನಿಗೆ ಆಶ್ಚರ್ಯವುಂಟಾಯಿತು. ಮಾತನಾಡುವ ವ್ಯಕ್ತಿ ಚಂಡವರ್ಮನೇ ಹೌದೋ ಅಲ್ಲವೋ ಎಂದು ಸಂಶಯವುಂಟಾಯಿತು. ಮಾತನಾಡುವವನು

ಚಂಡವರ್ಮನೇ ವಿನಾ ಬೇರೊಬ್ಬರಲ್ಲ. ಏಕೆಂದರೆ, ಮೋಸದ ಸಾಮ್ರಾಜ್ಯದಲ್ಲಿ ಚಂಡವರ್ಮನನ್ನು ಮೀರಿದ ಮೋಸಗಾರರು ಬೇರೊಬ್ಬರಿರಲಿಲ್ಲ ಅಜಿಂಕ್ಯ ದುರ್ಗದಲ್ಲಿ! ವೀರಧವಳನಂಥ ನವ ಯುವಕನನ್ನು ಮರುಳುಮಾಡುವುದು ಚಂಡವರ್ಮನಂಥ "ವೃದ್ಧ ಯುವಕ" ನಿಗೆ ಕಷ್ಟವಾಗಿರಲಿಲ್ಲ! ಚಂಡವರ್ಮನ ಮಾತನ್ನು ನಂಬಬೇಕೇ ನಂಬಬಾರದೇ ಎಂದು ತನ್ನಲ್ಲಿ ತಾನೇ ತರ್ಕಿಸಿದನು ವೀರಧವಳ. ವೀರಧವಳನು ಮಾತನಾಡದೆ ಅಧೋಮುಖನಾಗಿ ಚಿಂತಿಸುತ್ತಿರುವುದನ್ನು ಚಂಡವರ್ಮನು ಗಮನಿಸಿ ಪತ್ತೆ ತನ್ನ ಭೇದೋಪಾಯದ ಬಲೆಯನ್ನು ಬೀಸಿದನು.

"ಧವಳ, ನೀನು ಯಾರು ಎಂಬುದರ ನೆಲೆಯನ್ನೇ ಅರಿಯದೆ ವೃಥಾ ಚಿಂತಿಸುವುದಾದರೂ ಏಕೆ? ಲಲಿತಪ್ರಭೆಯ ಪ್ರೇಮಕ್ಕೆ ನೀನು ಬಾಧ್ಯನಾಗಿದ್ದರೆ ನಿನ್ನ ಕುಲಗೋತ್ರಗಳನ್ನು ಮೊದಲು ನೀನು ಸಾಧಿಸಬೇಕು. ಆದುದರಿಂದಲೇ, ನೀನು ವಂಗದೇಶಕ್ಕೆ ತೆರಳಿ ಅಲ್ಲಿ ಸ್ವಸಾಮರ್ಥ್ಯದಿಂದ ನಿಮ್ಮ ವಂಶಸ್ಥರನ್ನು ಕಂಡುಹಿಡಿದು ಮರಳಿ ಬಂದರೆ ಲಲಿತಪ್ರಭೆಯನ್ನು ನಿನಗೆ ಒಪ್ಪಿಸುವುದರಲ್ಲಿ ಸತ್ಯಾಶ್ರಯ ಮಹಾರಾಜನು ಸ್ವಲ್ಪವೂ ಹಿಂಜರಿಯಬೇಕಾಗಿಲ್ಲ. ಇದನ್ನು ತಿಳಿ. ನನ್ನ ಹಿತೋಕ್ತಿಯನ್ನು ಗಮನಿಸು. ಈ ರಾತ್ರಿಯೇ ನೀನು ವಂಗದೇಶಕ್ಕೆ ಪ್ರಯಾಣ ಬೆಳಸು. ನಿನ್ನ ಬೆಂಗಾವಲಿಗಾಗಿ ಅಜಿಂಕ್ಯ ದುರ್ಗದ ಎಲ್ಲೆಕಟ್ಟಿನವರೆಗೆ ಇಬ್ಬರು ಸವಾರರನ್ನು ಕಳುಹಿಸುತ್ತೇನೆ." ಎಂದು ಕಪಟೋಕ್ತಿಯನ್ನೇ ನಿಜವೆಂಬಂತೆ ಉಸುರಿದನು ಚಂಡವರ್ಮ. ವೀರಧವಳನಿಗೆ ಚಂಡವರ್ಮನ ಮಾತು ನಿಜವೆಂದು ತೋರಿತು. ಲಲಿತಪ್ರಭೆಯ ರಕ್ಷಣೆಗಾಗಿ ಸುಳ್ಳನ್ನೇ ನಿಜವೆಂದು ಒಪ್ಪಿದನು ವೀರಧವಳ. ಆತನಿಗೆ ಲಲಿತಪ್ರಭೆಯನ್ನು ನೆನೆದು ಕಣ್ಣಿನಲ್ಲಿ ನೀರು ತುಂಬಿತು. ಲಲಿತಪ್ರಭೆಯನ್ನು ಮನದಲ್ಲಿ ಧ್ಯಾನಿಸಿ ಸೆರೆಮನೆಯ ಚಾವಣಿಯನ್ನು ನೋಡುತ್ತ "ಲಲಿತಪ್ರಭೆ, ನಿನ್ನ ಪ್ರೇಮಕ್ಕೋಸ್ಕರ—ಸಾಯುವ ಪರ್ಯಂತರ ನಿನ್ನ ಪ್ರೇಮಕ್ಕೋಸ್ಕರ—ನಾನು ನಿರ್ದೋಷಿಯಾಗಿದ್ದರೂ ನಿನ್ನ ಪ್ರೇಮಕ್ಕೋಸ್ಕರ—ನಿನಗೆ ಒದಗಿರುವ ಶೋಚನೀಯ ಸ್ಥಿತಿಯನ್ನು ತಪ್ಪಿಸಿಸುವುದಕ್ಕೋಸ್ಕರ ನಾನು ಇಲ್ಲಿಂದ ಓಡಿ ಹೋಗುತ್ತೇನೆ." ಎಂದು ಪ್ರಲಾಪಿಸಿ, ಚಂಡವರ್ಮನನ್ನು ನೋಡಿ—"ಮಹಾರಾಜ ಆಗಲಿ, ನನ್ನನ್ನು ಇಲ್ಲಿಂದ ಬೇಗ ಬಿಡುಗಡೆ ಮಾಡಿ."

ಎಂದು ಆವೇಶದಿಂದ ನುಡಿದನು. ಚಂಡವರ್ಮನಿಗೆ ವೀರಧವಳನ ಆವೇಶ, ಪ್ರಲಾಪ, ಆಲಾಪಗಳು ಬೇಕಿರಲಿಲ್ಲ. ಬಂದ ಕಾರ್ಯ ನೆರವೇರಿತೆಂದು ಆತನು ತನ್ನ ಅದೃಷ್ಟಕ್ಕೆ ತಾನೇ ಬೆರಗಾಗಿ ಸೊಂಟದಲ್ಲಿದ್ದ ಬೀಗದ ಕೈಯಿಂದ ಆತನ ಭುಜದ ಮೇಲೆ ಬಿಗಿದಿದ್ದ ಸರವಣಿಗಳನ್ನು ಬಿಡಿಸಿದನು.

ತಕ್ಷಣ ಕಾರಾಗೃಹದ ಬಾಗಿಲು ತೆರೆಯಿತು. ವೃದ್ಧ ರಣರಾಗನು ಕೈಯಲ್ಲಿ ಒಂದು ದೀಪವನ್ನು ಹಿಡಿದು ಶಸ್ತ್ರಸಿದ್ಧರಾದ ಇಬ್ಬರು ಯೋಧ ರೊಡನೆ ಹೊರಗಡೆ ಕಾದಿದ್ದನು. ಚಂಡವರ್ಮ ಮತ್ತು ವೀರಧವಳ ಇವರು ಮುಂದೆ ಸಾಗಿದರು. ಸ್ವಲ್ಪ ಮುಂದೆ ಹೋದ ಮೇಲೆ ವೃದ್ಧ ರಣರಾಗನು ದೀಪವನ್ನು ಆರಿಸಿದನು. ಎಲ್ಲರೂ ಕತ್ತಲೆಯಲ್ಲಿಯೇ ನಡೆದರು. ಸ್ವಲ್ಪ ಹೊತ್ತಿನಲ್ಲಿ ಅವರು ದುರ್ಗದ ದಕ್ಷಿಣ ದ್ವಾರಕ್ಕೆ ಬಂದರು. ವೃದ್ಧ ರಣರಾಗನು ಮುಂದೆ ಬಂದು ದುರ್ಗದ ಬಾಗಿಲನ್ನು ತೆರೆದನು. ಸ್ವಲ್ಪ ದೂರದಲ್ಲಿ ಒಂದು ಗಿಡದ ಕೆಳಗೆ ಮೂರು ಅಶ್ವಗಳು ನಿಂತಿದ್ದುವು. ಚಂಡವರ್ಮನು ವೀರಧವಳ ನನ್ನು ನೋಡಿ—"ಧವಳ, ದೇವರು ನಿನ್ನನ್ನು ಕಾಪಾಡಲಿ." ಎಂದು ತಿಳಿಸಿ ಆ ಅಶ್ವಗಳಲ್ಲಿ ಒಂದನ್ನು ಹತ್ತುವಂತೆ ಸೂಚಿಸಿದನು. ಉಳಿದ ಇಬ್ಬರು ಉಳಿದೆರಡು ಕುದುರೆಗಳ ಮೇಲೆ ಕುಳಿತರು. ಚಂಡವರ್ಮನು ತನ್ನ ವಿಚಾರ ದಲ್ಲಿ ಇಷ್ಟೊಂದು ಶ್ರದ್ಧೆವಹಿಸಿ "ದೇವರು ಕಾಪಾಡಲಿ" ಎಂದು ನುಡಿ ದುದಾದರೂ ವೀರಧವಳನಿಗೆ ಪರಮಾಶ್ಚರ್ಯವನ್ನುಂಟುಮಾಡಿತು. **ಶತ್ರು ವಿನ ನಾಲಿಗೆಯ ಮೇಲೆ ಆಕಸ್ಮಿಕವಾಗಿ ಹಿತವಚನಗಳು ಬರುವುದೂ ಉಂಟು.** ಇದು ಆತ್ಮಶಕ್ತಿಯ ಫಲ. ಶತ್ರುವು ಕೇವಲ ಮನಸ್ಸನ್ನೇ ನಂಬಿ ನಡೆಸುವ ಕುತ್ರಿಮ ಸಂಧಾನಗಳಿಗೆ ಆತ್ಮಶಕ್ತಿಯು ಮಣಿಯುವು ದಿಲ್ಲ. ತಾನೊಂದು ಬಗೆದರೆ ದೇವರೊಂದು ಬಗೆಯುವುದುಂಟು. ಆ ದೇವರೇ ಆತ್ಮಶಕ್ತಿ. ಕಾಯಶಕ್ತಿಯನ್ನು ಮನಶ್ಶಕ್ತಿಯೂ, ಮನಶ್ಶಕ್ತಿಯನ್ನು ಆತ್ಮಶಕ್ತಿಯೂ ಮೀರಬಲ್ಲವು. ಆದುದರಿಂದ ಶತ್ರುವಿನ ಆಟದಲ್ಲಿ ಆತ್ಮ ಶಕ್ತಿಯ ಪ್ರಭಾವದಿಂದ ತನಗೆ ತಾನೇ ಉತ್ತಮ ವಚನಗಳು ನಾಲಗೆಯ ಮೇಲೆ ಸುಳಿಯುವುದುಂಟು. ಚಂಡವರ್ಮನು "ನಾನಂತೂ ನಿಮ್ಮಿಬ್ಬರ ಪ್ರೇಮಕ್ಕೆ ಎಂದಿಗೂ ಅಡ್ಡ ಬರಲಾರೆನು. ದೇವರು ನಿನ್ನನ್ನು ಕಾಪಾಡಲಿ." ಎಂದು ಆಡಿದ ಎರಡು ನುಡಿಗಳು ಸಾಮಾನ್ಯವಾಗಿ ಶತ್ರುವಿನ ಬಾಯಿಂದ

ಬರೆತಕ್ಕ ಮಾತುಗಳಲ್ಲಿ ಆದಾಗ್ಯೂ ಚಂಡವರ್ಮನ ಆತ್ಮಶಕ್ತಿ ಈ ಮಾತುಗಳನ್ನು ಆಡಿಸಿತು. ಇದರಲ್ಲಿ ಚಂಡವರ್ಮನ ಅರ್ಥವೇ ಬೇರೆ. ಅದು ಮನಸ್ಸಿನ ಮೋಸಗಾರಿಕೆಯ ಅರ್ಥ. ಆದರೆ, ಆತ್ಮಶಕ್ತಿಯ ಗೂಢಾರ್ಥವನ್ನು ಚಂಡವರ್ಮನು ಅರಿಯುವುದಾದರೂ ಹೇಗೆ? ಅಂತು, ವೀರಧವಳನು ಕುದುರೆಯ ಮೇಲೆ ಕುಳಿತು ಒಮ್ಮೆ ದುರ್ಗದ ಕಡೆ ನೋಡಿ ದೇವರನ್ನು ನೆನೆದನು. "ಲಲಿತಪ್ರಭೆ ಸುಖವಾಗಿರಲಿ" ಎಂದು ಮನದಲ್ಲಿ ಆಶೀರ್ವದಿಸಿ ಹೊರಡಲನುವಾದನು.

ಅಷ್ಟರಲ್ಲಿ ಚಂಡವರ್ಮನು ಒಂದು ನಾಣ್ಯದ ಚೀಲವನ್ನು ವೀರಧವಳನ ಮುಂದಿಟ್ಟು—"ಇದಿಗೋ ತೆಗೆದುಕೊ, ದಾರಿಯ ಖರ್ಚಿಗೆ!" ಎಂದು ಹೇಳಿದನು. ವೀರಧವಳನು ಆತ್ಮಗೌರವಕ್ಕೆ ವಿರುದ್ಧವಾಗಿ ನಡೆಯತಕ್ಕವನಲ್ಲ. ಲಲಿತಪ್ರಭೆಯ ಸಲುವಾಗಿ ಈಗಾಗಲೇ ಸೆರೆಮನೆಯಿಂದ ತಪ್ಪಿಸಿಕೊಂಡಿರುವುದು ಆತ್ಮಗೌರವಕ್ಕೆ ವಿರುದ್ಧವಾಗಿತ್ತು. ಈಗ ಈ ಹಣದ ಗಂಟಿನ ಕಥೆಯನ್ನು ನೋಡಿ ವೀರಧವಳನು ವಿಷಾದದಿಂದ ಚಂಡವರ್ಮನನ್ನು ನೋಡಿ— "ಮಹಾರಾಜ, ನನಗೆ ಹಣ ಬೇಕಿಲ್ಲ. ಎಲ್ಲಿ ಬೇಕಾದರೆ ಅಲ್ಲಿ ನಾನು ನನ್ನ ಬಾಹುಬಲದಿಂದ ಉದರಭರಣದ ನಿರ್ವಾಹ ಮಾಡಿಕೊಳ್ಳಬಲ್ಲೆನು. ನಿಮ್ಮ ಮನಸ್ಸಿನಲ್ಲಿ ಏನಾದರೂ ನನಗೆ ಕೊಡಬೇಕೆಂಬ ಅಭಿಲಾಷೆಯಿದ್ದರೆ ನಿಮ್ಮ ಸೊಂಟದಲ್ಲಿರುವ ಕತ್ತಿಯನ್ನು ಕೊಡಿ." ಎಂದು ಕೇಳಿದನು.

ವೀರಧವಳನು ಕತ್ತಿಯನ್ನು ಕೇಳಿದ ತಕ್ಷಣ ಪೆಚ್ಚಾದನು ಚಂಡವರ್ಮ. ಕತ್ತಿಯನ್ನು ತನ್ನ ಮೇಲೆ ಪ್ರಯೋಗ ಮಾಡಬಹುದೆಂದು ಭೀತಿಯುಂಟಾಯಿತು. ಆದರೆ, ವೀರಧವಳನ ಮಾತಿನ ಗಾಂಭೀರ್ಯದಲ್ಲಿ ಅಂಥ ಪ್ರಮಾದಕ್ಕೆ ಅವಕಾಶವಿರಲಿಲ್ಲ. ಚಂಡವರ್ಮನು ಮರುಮಾತಾಡದೆ ತನ್ನ ಸೊಂಟದ ಕತ್ತಿಯನ್ನು ಒರೆಸಹಿತ ತೆಗೆದು ವೀರಧವಳನಿಗೆ ಕೊಟ್ಟನು. ವೀರಧವಳನು ಆ ಕತ್ತಿಯನ್ನು ಕೈಗೆ ತೆಗೆದುಕೊಂಡು ಒಂದು ಕ್ಷಣಕಾಲ ಪರಮಾತ್ಮನನ್ನು ಧ್ಯಾನಿಸಿ—"ಮಹಾರಾಜ, ನೀವು ಈಗ ಕೊಟ್ಟಿರುವ ಈ ವಸ್ತುವಿಗೋಸ್ಕರ ನಾನು ತಮಗೆ ಋಣಿಯಾಗಿದ್ದೇನೆ. ಈಗ ನನಗೆ ಜಗತ್ತಿನಲ್ಲಿ ಯಾರ ಅಥವಾ ಯಾವುದರ ಭಯವಾಗಲಿ ಇಲ್ಲ."—ಎಂದು ಹೇಳುತ್ತ ಆ ಕತ್ತಿ

ಯನ್ನು ಸೊಂಟಕ್ಕೆ ಸೇರಿಸಿದನು. ತರುವಾಯ ವೀರಧವಳನು ಜತೆಯಲ್ಲಿದ್ದ ಸವಾರರನ್ನು ತೋರಿಸಿ—" ಮಹಾರಾಜ, ಈಗ ನನಗೆ ಈ ಸವಾರರ ಬೆಂಗಾವಲು ಬೇಕಾಗಿಲ್ಲ." ಎಂದು ಸೂಚಿಸಿದನು. ಈ ಮಾತು ಚಂಡವರ್ಮನಿಗೆ ಅಷ್ಟು ಹಿತವಾಗಿರಲಿಲ್ಲ. ಕತ್ತಿಯನ್ನು ಬೇಡಿದಾಗ ಹಿತವನ್ನು ಕಂಡ ಚಂಡವರ್ಮ ಸರದಾರರನ್ನು ಬೇಡವೆಂದಾಗ ಹಿತವನ್ನು ಕಾಣದುದಾದರೂ ಏಕೆ? ಸವಾರರ ಮೂಲಕ ವೀರಧವಳನನ್ನು ಕೊಲೆಮಾಡಿಸಬೇಕೆಂಬ ಉದ್ದೇಶವಿದ್ದರೆ ಕತ್ತಿಯನ್ನು ವೀರಧವಳನ ಕೈಗೆ ಕೊಡಬಾರದಾಗಿತ್ತು. ವೀರಧವಳನ ಮಾತಿಗೆ ಪ್ರತ್ಯುತ್ತರವಾಗಿ—" ಕೇವಲ ದುರ್ಗದ ಸರಹದ್ದಿನವರೆಗೆ ಜೊತೆಗೆ ಬರುತ್ತಾರೆ, ಅಷ್ಟೆ." ಎಂದು ಹೇಳಿದನು ಚಂಡವರ್ಮ.

ವೀರಧವಳನು " ಆದುದಾಗಲಿ " ಎಂದು ನಿರ್ಧರಿಸಿ, ಕುದುರೆಯನ್ನು ಓಡಿಸುತ್ತ ಮುಂದೆ ಹೊರಟನು. ಇಬ್ಬರು ಸವಾರರೂ ಹಿಂದೆ ಹೊರಟರು. ಅಜಿಂಕ್ಯ ದುರ್ಗದ ಗಡಿಯನ್ನು ದಾಟಿದ ಮೇಲೆ ವೀರಧವಳನನ್ನು ಕೊಲೆ ಮಾಡಬೇಕೆಂದು ಚಂಡವರ್ಮನ ಆಜ್ಞೆಯಾಗಿತ್ತು ಸವಾರರಿಗೆ. ತನ್ನ ಭೇದೋಪಾಯ ಫಲಿಸಿತೆಂದು ಭಾವಿಸಿದನು ಚಂಡವರ್ಮ. ರಣರಾಗನೊಡನೆ ದುರ್ಗಕ್ಕೆ ಬಂದನು ಠೀವಿಯಿಂದ!

## ೧೬. ಪ್ರತಿಸ್ಪರ್ಧಿ

### ಅವನನ್ನು ಯಾರೂ ಹಿಂಬಾಲಿಸಬೇಡಿ.

ಸಿಂಹಗುಹೆಯ ಚಿಕ್ಕ ಕೊಠಡಿಯಲ್ಲಿ ಒಬ್ಬ ವೃದ್ಧ ಸ್ತ್ರೀ ಒಂದು ಗವಾಕ್ಷದ ಬಳಿ ಕುಳಿತುಕೊಂಡಿದ್ದಳು. ಅವಳು ಅಜಿಂಕ್ಯ ದುರ್ಗದ ವಿಚಾರ ವನ್ನು ಕುರಿತು ಯೋಚಿಸುತ್ತಿದ್ದಳು. ಹಿಂದಿನ ರಾತ್ರಿ ಸ್ಫಟಿಕ ಸ್ತಂಭದ ಹತ್ತಿರ ನೋಡಿದ ವ್ಯಕ್ತಿ ಯಾರಿರಬಹುದೆಂಬ ಆಲೋಚನೆ ಅವಳ ತಲೆಗೆ ಹೊರೆಯಾಗಿತ್ತು. ಆ ವೃದ್ಧ ಸ್ತ್ರೀ ಯಾರೆಂಬುದು ವಾಚಕರಿಗೆ ಗೊತ್ತಿರ ಬಹುದು. ಬಿರುಗಾಳಿಯ ರಾತ್ರಿ ದುರ್ಜಾತಸಿಂಹನು ಕುದುರೆಯಿಂದ ಬಿದ್ದ ಸದ್ದನ್ನು ಕೇಳಿ ಆ ಕಡೆ ಓಡಿದ ವೃದ್ಧ ವನಚರಿಯೇ ಅವಳು. ಆಕೆ ಆತನಿಗೆ ಶುಶ್ರೂಷೆ ಮಾಡಿದ ಮೇಲೆ, ಸಿಂಹಗುಹೆಯ ಕಡೆ ತೆರಳಿದುದನ್ನೂ ವಾಚಕರು ಬಲ್ಲರು. ದುರ್ಜಾತಸಿಂಹನು ಅವಳ ಉಪಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ಸಿಂಹಗುಹೆಯಲ್ಲಿ ಆಕೆಯ ಆರೈಕೆಗಾಗಿ ಸೌಕರ್ಯವನ್ನುಂಟು ಮಾಡಿದನು.

ರಾತ್ರಿಯಾಯಿತು. ವೃದ್ಧ ಸ್ತ್ರೀಗೆ ನಿದ್ರೆ ಬರುವಂತಿರಲಿಲ್ಲ. ಹಾಸಿಗೆ ಯಲ್ಲಿ ಎದ್ದು ಕುಳಿತು ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುತ್ತಿದ್ದಳು. "ನಾನು ಏಕೆ ಇಲ್ಲಿಗೆ ಬಂದಿದ್ದೇನೆ. ಏಕೆ ಇಲ್ಲಿಗೆ ಬಂದಿದ್ದೇನೆ"—ಎಂದು ಗಟ್ಟಿಯಾಗಿ ಹೇಳುತ್ತ ಕುಳಿತಿದ್ದ ಸ್ಥಳವನ್ನು ಬಿಟ್ಟು ಎದ್ದು ತನ್ನ ಊರು ಗೋಲನ್ನು ಕೈಗೆ ತೆಗೆದುಕೊಂಡು ಕೊಠಡಿಯಿಂದ ಹೊರಗೆ ಹೊರಟಳು. ಮೊದಲನೆಯ ರಾತ್ರಿ ದುರ್ಜಾತಸಿಂಹನ ಜೊತೆಯಲ್ಲಿ ಬಂದಾಗ ತನ್ನ ಕೊಠಡಿಯಿಂದ ಆಚೆ ಹೋಗುವ ದಾರಿಯನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದಳು. ಅದೇ ಮಾರ್ಗದಲ್ಲಿ ಹೊರಟು ಸ್ವಲ್ಪ ಮುಂದೆ ಹೋದ ಮೇಲೆ ಮೇಲುಪ್ಪರಿಗೆಗೆ ಹೋಗುವ ಮೆಟ್ಟಲುಗಳನ್ನು ಕಂಡಳು. ಅದರ ಪಕ್ಕದಲ್ಲಿ ಒಂದು ನೆಲ ಮಾಳಿಗೆಗೆ ಹೋಗುವ ದಾರಿಯೂ ಕಾಣಿಸಿತು.

ಸಿಂಹಗುಹೆ ಎಂದರೆ ಅಸಾಧ್ಯವಾದ ದುರ್ಗ! ವಾಚಕರು ಈ ದುರ್ಗದ ಸ್ಥಾನಮಾನಗಳನ್ನು ತಿಳಿಯಬೇಕಾದುದು ಅಗತ್ಯ. ಆ ನಾಡಿನ ದರೋಡೆಕಾರರ ನಿವಾಸ ಸ್ಥಳವಲ್ಲವೇ ಅದು! ಅಜಿಂಕ್ಯ ದುರ್ಗಕ್ಕೆ ದಕ್ಷಿಣ ಆರು ಮೈಲಿ ದೂರದಲ್ಲಿ ಪೂರ್ವ ಘಟ್ಟದ ಒಂದಾನೊಂದು ಬೆಟ್ಟವೇ ಸಿಂಹಗುಹೆ. ದೊಡ್ಡ ದೊಡ್ಡ ಬಂಡೆಗಳಿಂದ ಬಹಳ ಭದ್ರವಾಗಿ ಸಿಂಹದ ಗುಹೆ ಎಂಬ ಅನ್ವರ್ಥನಾಮ ಇದಕ್ಕೆ ಸಲ್ಲುವಂತಿತ್ತು. ದುರ್ಗದ ನಡುವೆ ಕಲ್ಲಿನ ಗೋಪುರ. ಈ ಗೋಪುರದ ಮೇಲೆ ಸ್ವಾತಂತ್ರ್ಯ ಸೂಚಕ ಧ್ವಜ!

ದುರ್ಗದ ಅಕ್ಕಪಕ್ಕಗಳಲ್ಲಿ ಜಲಪ್ರವಾಹಗಳಿದ್ದುವು. ಇವುಗಳನ್ನು ಕಂದಕಗಳಿಗೆ ಬದಲಾಗಿ ಉಪಯೋಗಿಸುತ್ತಿದ್ದರು. ಸಿಂಹಗುಹೆಯ ಪ್ರವೇಶ ದ್ವಾರ ಕಿರಿದಾಗಿ ಡೊಂಕುಡೊಂಕಾಗಿದ್ದುದಲ್ಲದೆ, ಸೂರ್ಯರಶ್ಮಿ ಕೆಳಗೆ ಬೀಳದಷ್ಟು ದಟ್ಟವಾದ ವೃಕ್ಷಗಳ ಮರೆಯಲ್ಲಿತ್ತು. ಪ್ರವೇಶ ದ್ವಾರದ ಬಳಿ ಆಯುಧ ಸಮೇತರಾದ ಹತ್ತು ಜನ ಯೋಧರ ಪಹರೆ!

ಪ್ರವೇಶ ದ್ವಾರವನ್ನು ಹೊಕ್ಕರೆ ಎದುರಿಗೆ ಕರಿಯ ಕಲ್ಲಿನ ದೊಡ್ಡದೊಂದು ಭವನ. ಈ ಭವನದಲ್ಲಿ ಚಿಕ್ಕ ಚಿಕ್ಕ ಕೊಠಡಿಗಳು. ಪ್ರತಿ ಕೊಠಡಿಗೂ ಕಿಟಕಿಗೆ ಬದಲಾಗಿ ಗವಾಕ್ಷ! ಈ ದೊಡ್ಡ ಭವನ ಒಂದು ಬಂದೀಖಾನೆಯಂತಿತ್ತು.

ಆ ವೃದ್ಧ ಸ್ತ್ರೀ ನೆಲಮಾಳಿಗೆಗೆ ಹೋಗುವ ದಾರಿಯಲ್ಲಿ ಹೊರಟಳು. ಮುಂದೆ ಒಂದು ಕಳ್ಳ ಬಾಗಿಲು. ಆಕೆ ಒಂದು ಕ್ಷಣ ಆ ಕಳ್ಳಬಾಗಿಲಿನ ಮುಂದೆ ನಿಂತಳು. ಒಳಗಡೆಯಿಂದ ಸರಪಳಿಯ ಶಬ್ದ ಅಸ್ಪಷ್ಟವಾಗಿ ಕೇಳಿಸಿತು. ಇಲ್ಲಿ ಯಾರೋ ಕೈದಿ ಇರಬಹುದೆಂದು ಯೋಚಿಸುತ್ತ ಮುಂದೆ ಹೊರಟಳು. ಹೀಗೆ ಬಹಳ ಕಾಲ ಆ ಸಿಂಹಗುಹೆಯ ಡೊಂಕು ದಾರಿಗಳಲ್ಲಿ ಸುತ್ತಿ ಸುತ್ತಿ ಕೊನೆಗೆ ತಾನು ಪ್ರವೇಶಿಸಿದ ಪ್ರದೇಶಕ್ಕೆ ಬಂದಳು. ಅವಳು ಪ್ರವೇಶ ದ್ವಾರಕ್ಕೆ ಬಂದಾಗ ಗುಹೆಯ ಅನುಚರರು ಸುಮಾರು ಐದು ಆರು ಮಂದಿ ಸಂತೋಷದಿಂದ ಮಾತನಾಡುತ್ತಿದ್ದರು. ಅವರ ನಡುವೆ ನಿರಾನಂದ

ನನ್ನು ಆಕೆ ಗುರುತಿಸಿ, ಅವರಿಗೆ ಕಾಣದಂತೆ ದೂರ ನಿಂತು ಅವರ ಸಂಭಾಷಣೆಯನ್ನೇ ಕಿವಿಗೊಟ್ಟು ಕೇಳುತ್ತಿದ್ದಳು. ಚಂದ್ರಸೇನ ಮತ್ತು ವೀರಧವಳ ಎಂಬ ಹೆಸರುಗಳು ಕೇಳಿಬಂದುವು. ಇದೇನಿರಬಹುದೆಂದು ಮತ್ತಷ್ಟು ಕುತೂಹಲದಿಂದ ಆಲಿಸಿದಳು ಆ ವೃದ್ಧ ಸ್ತ್ರೀ. ಚಂದ್ರಸೇನನು ಕಾಡಿಗೆ ಬಂದವನು ಊರಿಗೆ ಹೋಗದಿದ್ದುದೂ—ವೀರಧವಳನೊಬ್ಬನೇ ದುರ್ಗಕ್ಕೆ ಹೋದುದೂ—ಬಟ್ಟೆಗಳ ಮೇಲೆ ರಕ್ತದ ಕಲೆಗಳಿದ್ದುದರಿಂದ ವೀರಧವಳನ ಮೇಲೆ ಖೂನಿಯ ಆರೋಪ ಬಂದಿರುವುದೂ—ಇತ್ಯಾದಿ ನುಡಿಗಳು ಒಂದೊಂದಾಗಿ ಆಕೆಯ ಕಿವಿಗೆ ಬಿದ್ದುವು.

ಅಷ್ಟರಲ್ಲಿ ಉನ್ಮತ್ತಸಿಂಹನು ಅಲ್ಲಿಗೆ ಬಂದು ನಿರಾನಂದನ ಕೈಗೆ ಒಂದು ದೊಡ್ಡ ಬೀಗದ ಕೈಯನ್ನು ಕೊಟ್ಟು—"ಇದು ಜೋಪಾನ! ಆಗಾಗ್ಗೆ ಅಲ್ಲಿಗೆ ಹೋಗಿ ನೋಡುತ್ತಿರು." ಎಂದು ಹೇಳಿದನು. ಆಗ ವೃದ್ಧ ಸ್ತ್ರೀ ಅವನ ಮುಂದೆ ಕಾಣಿಸಿಕೊಂಡಳು. ಉನ್ಮತ್ತಸಿಂಹನು ಆಕೆಯನ್ನು ನೋಡಿ—"ಏನು? ಹೇಗಿದೆ ಮುದುಕಿ? ನಿನ್ನೆ ರಾತ್ರಿಯ ಆಯಾಸ ಹೋಯಿತೋ ಇಲ್ಲವೋ? ನಮ್ಮ ಸಿಂಹಗುಹೆಯ ಲೌಕಿಕ ನಿನಗೆ ಹೇಗೆ ಕಾಣಿಸುತ್ತದೆ? ಇಲ್ಲಿಯೇ ಇರಬೇಕೆಂದು ಕಾಣುವುದೋ?" ಎಂದು ಒಂದೇ ಉಸಿರಿನಲ್ಲಿ ಕೇಳಿದನು. "ಅದಕ್ಕಿಂತ ಹೆಚ್ಚು ಕಾಣುತ್ತಿದೆ." ಎಂದಳು ವೃದ್ಧ ಸ್ತ್ರೀ ನಗುತ್ತ. ಕೂಡಲೇ ಅಲ್ಲಿ ನಿಲ್ಲದೆ ತನ್ನ ಕೊಠಡಿಯ ಕಡೆಗೆ ಹೊರಟಳು.

ಸ್ವಲ್ಪ ಹೊತ್ತಿನಲ್ಲಿ ಕುದುರೆಯ ಗೊರಸಿನ ಶಬ್ದ ಕೇಳಿಸಿತು. ಆಕೆ ತನ್ನ ಕೊಠಡಿಯ ಬಳಿ ನಿಂತು ನೋಡಿದಳು. ಹನ್ನೆರಡು ಮಂದಿ ಶಸ್ತ್ರ ಸಮೇತರಾದ ಯೋಧರು ಗುಹೆಯ ದ್ವಾರಕ್ಕೆ ಬಂದರು. ಅವರೊಡನೆ ದುರ್ಜಾತಸಿಂಹನೂ ಇದ್ದನು. ಉನ್ಮತ್ತಸಿಂಹನೂ, ದುರ್ಜಾತಸಿಂಹನೂ ತಮ್ಮೊಳಗೆ ತಾವೇ ಗೋಪ್ಯವಾಗಿ ಒಂದೆರಡು ಕ್ಷಣ ಮಾತನಾಡಿಕೊಂಡರು. ಕೂಡಲೇ ಅವರು ಹನ್ನೆರಡು ಜನ ಸವಾರರೊಡನೆ ಸಿಂಹಗುಹೆಯನ್ನು ಬಿಟ್ಟು ಹೊರಟರು ನಡುರಾತ್ರಿಯಲ್ಲಿ.

ದುರ್ಜಾತಸಿಂಹ ಮತ್ತು ಉನ್ಮತ್ತಸಿಂಹ ಇವರುಗಳಿಗೆ ಹಗಲೇ ರಾತ್ರಿ! ರಾತ್ರಿಯೇ ಹಗಲು! ಕ್ರೂರ ಕರ್ಮಗಳ ಬಾಳು ಅವರದು. ಅಂದು ಅಜಿಂಕ್ಯ ದುರ್ಗಕ್ಕೆ ಅವರ ಪ್ರಯಾಣ. ಲಲಿತಪ್ರಭೆಯ ಅಪಹರಣವೇ ಅವರ ಗುರಿ. ಹಗಲು ಕೈತಪ್ಪಿ ಹೋದ ವಸ್ತುವನ್ನು ರಾತ್ರಿ ಕದ್ದು ತರಬೇಕೆಂದು ಹೊರಟಿದ್ದರು ಅವರು. ವೀರಧವಳನು ಇಬ್ಬರು ಸವಾರರೊಡನೆ ಅಜಿಂಕ್ಯ ದುರ್ಗದಿಂದ ಹೊರಟ ರಾತ್ರಿಯೇ ಸಿಂಹಗುಹೆಯ ಸವಾರರು ಅಜಿಂಕ್ಯ ದುರ್ಗದ ಕಡೆಗೆ ಹೊರಟಿದ್ದರು. ಇದು ಲಲಿತಪ್ರಭೆಯ ಸೌಭಾಗ್ಯವೋ ಅಥವಾ ದೌರ್ಭಾಗ್ಯವೋ ಹೇಳಲಸದಳ. ಏನು ಪ್ರತಿಸ್ಪರ್ಧೆ! ಎಂತಹ ಪ್ರತಿಸ್ಪರ್ಧಿಗಳು! ವೀರಧವಳನ ತ್ಯಾಗಕ್ಕೂ, ಚಂಡವರ್ಮನ ಮೋಹಕ್ಕೂ, ಸಿಂಹಗುಹೆಯ ಸಿಂಹಗಳ ಮಾತ್ಸರ್ಯಕ್ಕೂ ಪ್ರತಿಸ್ಪರ್ಧೆಯುಂಟಾದ ಈ ಸನ್ನಿವೇಶವಾದರೂ ದೈವಲೀಲೆ!

ಅಜಿಂಕ್ಯ ದುರ್ಗದ ಸರಹದ್ದನ್ನು ದಾಟಿ ವೀರಧವಳನೂ, ಇಬ್ಬರು ಸವಾರರೂ ಅರಣ್ಯದ ಸರಹದ್ದನ್ನು ಸೇರಿದರು. ವೀರಧವಳನಿಗೆ ಅಜ್ಞಾತ ವಾಸದ ಚಿಂತೆ! ಸವಾರರಿಗೆ ಚಂಡವರ್ಮನ ಕಟ್ಟಾಜ್ಞೆಯ ಚಿಂತೆ! ಹೀಗೆ ಉಭಯತ್ರರೂ ತಮ್ಮ ತಮ್ಮನ್ನು ತಾವು ಅರಿಯಲಾರದೆ ಅರಣ್ಯಮಾರ್ಗದಲ್ಲಿ ಹೊರಟರು. ಅಷ್ಟರಲ್ಲಿ ಇದ್ದಕ್ಕಿದ್ದಹಾಗೆ ಹನ್ನೆರಡು ಜನ ಸವಾರರು ಮುಂದೆ ಬಂದು ನಿಂತರು. "ಏನು? ವೀರಧವಳನೆ!" ಎಂದು ಆ ಸವಾರರು ಯಾರೋ ಗುರುತಿಸಿದಂತಾಯಿತು. ವೀರಧವಳನು ಆ ಕಡೆ ನೋಡಿದನು. ಎದುರಿಗೆ ದುರ್ಜಾತಸಿಂಹ! ವೀರಧವಳನನ್ನು ಅಷ್ಟು ಹೊತ್ತಿನಲ್ಲಿ ಅರಣ್ಯದಲ್ಲಿ ನೋಡಿ ಆತನಿಗೆ ಆಶ್ಚರ್ಯವಾಯಿತು. ಆದರೆ, ತನ್ನ ಪ್ರತಿಸ್ಪರ್ಧಿ ಇಷ್ಟು ಸುಲಭವಾಗಿ ತನ್ನ ಕೈಗೆ ಸಿಕ್ಕಿದುದಕ್ಕಾಗಿ ಹಿಗ್ಗಿದನು. ತಕ್ಷಣ ವೀರಧವಳನ ಮುಂದೆ ನಿಂತು—"ಈಗ ನೀನು ತಪ್ಪಿಸಿಕೊಳ್ಳಲಾರೆ. ಆ ದಿನ ನೀನು ಅಡ್ಡಬಂದು ನನ್ನ ಕೈಗೆ ಸಿಕ್ಕಿದ ಲಲಿತಪ್ರಭೆಯನ್ನು ಬಿಡಿಸಿದೆ." ಎಂದು ಹೂಂಕರಿಸಿದನು. ಮರುಗಳಿಗೆಯಲ್ಲಿಯೇ ತನ್ನ ಕುದುರೆಯನ್ನು ವೀರಧವಳನ ಮೇಲೆ ನುಗ್ಗಿಸಿ ಈಟಿಯನ್ನು ಪ್ರಯೋಗಿಸಿದನು.

ವೀರಧವಳನಿಗೆ ಸಮಯಸ್ಫೂರ್ತಿ ಮಾತ್ರ ಗತಿ. ಮಾತು ಪ್ರಯೋಜನವಲ್ಲವೆಂದು ಬಗೆದನು ವೀರಧವಳ. ಕೂಡಲೆ ತನ್ನ ಕುದುರೆಯನ್ನು ತಿರುಗಿಸಿ

ಈಟಿಯ ಗುರಿಯನ್ನು ತಪ್ಪಿಸಿಕೊಂಡು, ದುರ್ಜಾತಸಿಂಹನ ಕುದುರೆಯ ಮೂಗಿಗೆ ಬಲವಾಗಿ ಒದ್ದನು. ಆ ಕುದುರೆ ತತ್ತರಗೊಂಡು ಹಿಂದಕ್ಕೆ ಹೆಜ್ಜೆ ಇಟ್ಟಿತು. ವೀರಧವಳನು ಆವೇಶದಿಂದ ಕೂಗಿ—"ದುರ್ಜಾತ, ನಿನಗೆ ಕೈಮಾಡುವ ಇಚ್ಛೆ ಇದ್ದರೆ ಕುದುರೆಯಿಂದ ಇಳಿ. ಮುಂದೆ ಬಾ. ಖಡಾಖಡಿ ಕಾದೋಣ." ಎಂದು ನುಡಿದನು. "ಸರಿ" ಎಂದು ತನ್ನ ಸವಾರರನ್ನು ಹಿಂದೆ ನಿಲ್ಲಿಸಿ, ಕುದುರೆಯಿಂದ ಇಳಿದು ಬಂದನು ದುರ್ಜಾತಸಿಂಹ ಖಡಾಖಡಿ ಕಾಳಗಕ್ಕಾಗಿ.

ವೀರಧವಳನು ಚಂಡವರ್ಮನು ಕೊಟ್ಟಿದ್ದ ಕತ್ತಿಯನ್ನು ಒರೆಯಿಂದ ಈಚೆಗೆ ತೆಗೆದು ಸಿದ್ಧನಾದನು. ಆತನಲ್ಲಿ ಅದು ಹೊರತು ಬೇರೊಂದು ಆಯುಧವಿರಲಿಲ್ಲ. ಆದಾಗ್ಗೂ ದುರ್ಜಾತಸಿಂಹನ ಬಲಾಬಲಗಳನ್ನು ಕಂಡು ಆತನಿಗೆ ಭಯವಾಗಲಿಲ್ಲ. ಭಯಕ್ಕೆ ಬದಲಾಗಿ ಒಂದು ಬಗೆಯ ದಿವ್ಯ ಸ್ಫೂರ್ತಿಯುಂಟಾಯಿತು ವೀರಧವಳನಿಗೆ! ಲಲಿತಪ್ರಭೆಯ ವಿಚಾರದಲ್ಲಿ ಯಾವನು ನೀಚ ವರ್ತನೆ ನಡೆಸಿದ್ದನೋ ಅಂತಹ ದುರಾತ್ಮನನ್ನು ಕೊಲ್ಲಲು ಸಮಯ ಸಿಕ್ಕದುದಕ್ಕಾಗಿ ಆನಂದದಿಂದ ವೀರಧವಳನು ಮುಂದೆ ನುಗ್ಗಿದನು. ವಿದ್ಯುಲ್ಲತೆಯಂತೆ ಅವರಿಬ್ಬರ ಕತ್ತಿಗಳೂ ತಾಗಿದುವು. ವೀರಧವಳನ ಕತ್ತಿಯ ವರಸೆಯನ್ನು ನೋಡಿ ಉನ್ಮತ್ತಸಿಂಹ ಮೊದಲಾದ ಸವಾರರುಗಳು ಸ್ತಂಭೀಭೂತರಾಗಿ ನಿಂತರು. ವೀರಧವಳನ ಜೊತೆಗೆ ಬಂದಿದ್ದ ಇಬ್ಬರು ಸವಾರರೂ ವಿಸ್ಮಯಗೊಂಡರು. ಇಂತಹ ಶೂರನನ್ನು ವಿಶ್ವಾಸಘಾತುಕತನದಿಂದ ಚಂಡವರ್ಮನ ಆಜ್ಞೆಯಂತೆ ಕೊಲ್ಲುವುದಾದರೂ ಅಸಾಧ್ಯವೆಂದು ಭಾವಿಸಿದರು ಅವರು.

ವೀರಧವಳನಿಗೂ ದುರ್ಜಾತಸಿಂಹನಿಗೂ ಬಹಳ ಕಾಲ ದ್ವಂದ್ವ ಯುದ್ಧ ನಡೆಯಿತು. ಕೊನೆಗೆ ವೀರಧವಳನ ಪೆಟ್ಟಿಗೆ ದುರ್ಜಾತನ ಕತ್ತಿಯು ಕಳಚಿಬಿತ್ತು. ಶಸ್ತ್ರರಹಿತನಾದೊಡನೆ ಏನು ಮಾಡಬೇಕೆಂದು ತಿಳಿಯಲಿಲ್ಲ ದುರ್ಜಾತಸಿಂಹನಿಗೆ. ಶಸ್ತ್ರರಹಿತ ಶತ್ರು ಶರಣಾಗತನಾದಂತೆ ಯುದ್ಧಧರ್ಮ. ಉನ್ಮತ್ತಸಿಂಹನೂ ಆತನ ಸವಾರರೂ ದುರ್ಜಾತಸಿಂಹನ ಪರಾಜಯವನ್ನು ನೋಡಿ

ಸಹಿಸಲಾರದೆ, ಇದ್ದ ಕಿದ್ದ ಹಾಗೆಯೇ ಎಲ್ಲರೂ ವೀರಧವಳನ ಮೇಲೆ ಬಿದ್ದರು. ಇದು ಅನ್ಯಾಯುವೆಂದು ಭಾವಿಸಿ ವೀರಧವಳನು ತನ್ನ ಹಿಮ್ಮಡಿಯಿಂದ ಕುದುರೆಯನ್ನು ಒತ್ತಿದನು. ಕುದುರೆಯು ನಾಗಾಲೋಟದಿಂದ ಶತ್ರುಗಳ ಗುಂಪನ್ನು ಛೇದಿಸಿಕೊಂಡು ಓಡಿತು. ಸವಾರರು ಆತನನ್ನು ಹಿಂಬಾಲಿಸುತ್ತಿರುವುದನ್ನು ನೋಡಿ ದುರ್ಜಾತಸಿಂಹನು—"ನಿಲ್ಲಿ. ವೀರಧವಳನನ್ನು ಹಿಂಬಾಲಿಸಬೇಡಿ." ಎಂದು ಅವರನ್ನು ಹಿಂದಕ್ಕೆ ಕರೆದನು. ಇಷ್ಟು ಉದಾರ ಭಾವದಿಂದ ನುಡಿದುದಾದರೂ ದೈವಲೀಲೆಯಲ್ಲವೇ! ಗುಣಕ್ಕೆ ಮಾತ್ಸರ್ಯ ವಿಲ್ಲವೆಂಬುದನ್ನು ದುರ್ಜಾತಸಿಂಹನಂತಹ ದುರಾತ್ಮನೂ ಅರಿತಿದ್ದನೋ ಅಥವಾ ಅರಿತಿರಲಿಲ್ಲವೋ ಅದನ್ನು ತಿಳಿಯುವುದು ಕಷ್ಟ. ಆದರೆ, ವೀರಧವಳನ ಜೊತೆಯಲ್ಲಿ ಬಂದಿದ್ದ ಅಜಿಂಕ್ಯ ದುರ್ಗದ ಚಂಡವರ್ಮನ ಸವಾರರ ಗತಿ! ಸಿಂಹಗುಹೆಯು ಸವಾರರಿಗೆ ಆಹುತಿ! ಸತ್ಯಮಿಥ್ಯಗಳಿಗೆ ದೊರೆಯತಕ್ಕ ಗೌರವ ಏಕಕಾಲದಲ್ಲಿ ಅಲ್ಲಿ ಕಾಣುತ್ತಿತ್ತು. ವೀರಧವಳನ ಸತ್ಯಮಾರ್ಗಕ್ಕೆ ದುರ್ಜಾತಸಿಂಹನ ಗೌರವ! ಚಂಡವರ್ಮನ ಮಿಥ್ಯಮಾರ್ಗಕ್ಕೆ ಸವಾರರಿಬ್ಬರ ಸಂಹಾರ.

ವೀರಧವಳನ ಕುದುರೆಯು ಅತಿವೇಗದಿಂದ ಮನಬಂದಂತೆ ಓಡುತ್ತಿತ್ತು. ತಾನು ಯಾವ ದಿಕ್ಕಿಗೆ ಹೋಗುತ್ತಿರುವೆನೆಂಬುದು ತಿಳಿಯಲಿಲ್ಲ ವೀರಧವಳನಿಗೆ. ಕುದುರೆ ಕಾಡಿನಲ್ಲಿ ಬಹಳ ದೂರ ಹೋಗಿತ್ತು. ಕುದುರೆಯ ಲಗಾಮನ್ನು ಎಳೆಯಲು ಪ್ರಯತ್ನಪಟ್ಟನು. ಆದರೆ, ಕುದುರೆ ಆತನ ಸ್ವಾಧೀನಕ್ಕೆ ಬರಲಿಲ್ಲ. ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ಕುದುರೆ ನಿಂತುಬಿಟ್ಟಿತು. ತಕ್ಷಣ ವೀರಧವಳನು ಕುದುರೆಯಿಂದ ಇಳಿದು ಕುದುರೆಯ ಬೆನ್ನು ತಟ್ಟಿ ಸುತ್ತಲೂ ನೋಡಿದನು. ಸ್ವಲ್ಪ ದೂರದಲ್ಲಿ ಅಜಿಂಕ್ಯ ದುರ್ಗದ ಸ್ಫಟಿಕ ಸ್ತಂಭ ಕಾಣಿಸಿತು. ಈ ಸ್ಫಟಿಕ ಸ್ತಂಭವನ್ನು ಕಂಡು ಹೆದರಿ ನಿಂತುಬಿಟ್ಟಿತ್ತು ಆ ಕುದುರೆ. ಹಿಂದೆ ಈ ಸ್ಫಟಿಕ ಸ್ತಂಭದ ಎದುರಿಗೆ ಚಂದ್ರಸೇನನನ್ನೂ ದುಷ್ಟ ವರಾಹವನ್ನೂ ಕಂಡುದನ್ನು ಆತನು ಮರೆತಿರಲಿಲ್ಲ. ಮತ್ತೆ ಅದೇ ಸ್ಫಟಿಕ ಸ್ತಂಭದ ಎದುರಿಗೆ ನಿಂತಿದ್ದಾನೆ ವೀರಧವಳ. ಅಲ್ಲಿ ಸ್ವಲ್ಪ ಸುಧಾರಿಸಿಕೊಳ್ಳುತ್ತ ಅವರು ನಡುರಾತ್ರಿ ಏಕೆ ಸಂಚಾರ ಹೊರಟಿದ್ದರೆಂಬುದನ್ನು ಯೋಚಿಸಿದನು.

ದರೋಡೆಕಾರರು ಅಜಿಂಕ್ಯ ದುರ್ಗದ ಕಡೆ ಹೋಗುತ್ತಿದ್ದುದಾದರೂ ಏಕೆಂಬುದನ್ನು ತಿಳಿಯುವುದು ಕಷ್ಟವಾಗಿತ್ತು. ತಾನು ಕಾರಾಗೃಹದಿಂದ ತಪ್ಪಿಸಿಕೊಂಡು ಬಂದಿರುವುದರಿಂದ ಮತ್ತೆ ಅಜಿಂಕ್ಯ ದುರ್ಗಕ್ಕೆ ಹೋಗುವು ದಾದರೂ ಹೇಗೆಂದು ಚಿಂತಿಸಿದನು. ಅಂತು ಆತನ ಮನಸ್ಸಿನಲ್ಲಿ ಒಂದು ಬಗೆಯ ಸಂದೇಹ ಅಂಕುರಿಸಿತು. ಲಲಿತಪ್ರಭೆಯನ್ನು ಆ ರಾತ್ರಿ ಕದ್ದು ತರುವುದಕ್ಕಾಗಿ ಒಳಸಂಚು ನಡೆಯುತ್ತಿರಬಹುದೇ ಎಂದು ಯೋಚಿಸಿದನು. ಏನೇ ಇರಲಿ ತಾನು ಮತ್ತೆ ಕಾರಾಗೃಹಕ್ಕೆ ಹೋಗಿ ಸೇರುವುದು ಯುಕ್ತವಾ ಗಿದೆಯೆಂದು ನಿರ್ಧರಿಸಿದನು. ಬೆಳಕು ಹರಿಯುವುದರೊಳಗಾಗಿ ತಾನು ಅಜಿಂಕ್ಯ ದುರ್ಗದ ಕಾರಾಗೃಹವನ್ನು ಸೇರಿ ಕೊಲೆಯ ವಿಚಾರಣೆಯಲ್ಲಿ ತಾನು ತಪ್ಪಿತಸ್ಥನಲ್ಲವೆಂಬುದನ್ನು ಸ್ಥಾಪಿಸುವುದೇ ಲೇಸೆಂದು ಬಗೆದು ಮತ್ತೆ ಅಜಿಂಕ್ಯ ದುರ್ಗದ ಕಡೆ ಹೊರಟನು.

ದುರ್ಗದ ಪ್ರವೇಶ ದ್ವಾರಕ್ಕೆ ಬಂದ ತಕ್ಷಣ ಒಳಗಡೆಯಿಂದ ಯಾರೋ ಕೂಗಿಕೊಳ್ಳುವ ಧ್ವನಿ ಕೇಳಿಸಿತು. ವೀರಧವಳನು ಅತ್ಯಂತ ಆಶ್ಚರ್ಯದಿಂದ ಮುಂದೇನಾಗುವುದೋ ಎಂದು ನಿರೀಕ್ಷಿಸುತ್ತ ಮರೆಯಲ್ಲಿ ನಿಂತನು. ಅಷ್ಟರಲ್ಲಿ ದುರ್ಜಾತಸಿಂಹನು ಯಾರನ್ನೋ ಹೆಗಲಿನಲ್ಲಿ ಹೊತ್ತುಕೊಂಡು ಓಡಿಬರು ತ್ತಿದ್ದುದನ್ನು ನೋಡಿದನು. ದುರ್ಜಾತಸಿಂಹನು ತೀರಾ ಹತ್ತಿರ ಬಂದಹಾಗೆಲ್ಲ ಆತನು ಹೆಗಲಿನಲ್ಲಿ ಹೊತ್ತುಕೊಂಡಿದ್ದ ವ್ಯಕ್ತಿ ಒಬ್ಬ ಸ್ತ್ರೀ ವ್ಯಕ್ತಿಯೆಂದು ತಿಳಿಯಿತು. ಮತ್ತೆ ಹತ್ತಿರ ಬರುವ ವೇಳೆಗೆ ಆ ಸ್ತ್ರೀ ವ್ಯಕ್ತಿ ಲಲಿತಪ್ರಭೆ ಎಂದು ಗೊತ್ತಾಯಿತು! ವೀರಧವಳನು ತನ್ನನ್ನು ಅಜಿಂಕ್ಯ ದುರ್ಗಕ್ಕೆ ಮರಳಿ ಬರಮಾಡಿದ ಅಂತರಾತ್ಮನನ್ನು ಸ್ಮರಿಸಿ ದುರ್ಜಾತಸಿಂಹನಿಗೆ ಅಡ್ಡ ನಿಂತು —"ಛೀ ದುರಾತ್ಮ, ಸ್ವತಃ ಶೂರನೆಂದು ಹೇಳಿಕೊಳ್ಳುವುದೇನು! ಈ ಬಗೆಯ ನೀಚಕೃತ್ಯವೇನು!" ಎಂದು ಆವೇಶದಿಂದ ನುಡಿದನು.

ವೀರಧವಳನ ಧ್ವನಿ ಕೇಳಿದ ತಕ್ಷಣ ಬೆಚ್ಚಿಬಿದ್ದನು ದುರ್ಜಾತಸಿಂಹ! ಲಲಿತಪ್ರಭೆ ಮತ್ತೊಮ್ಮೆ ತನ್ನ ಕೈತಪ್ಪಿಹೋಗಬಹುದೆಂದು ಹೆದರಿದನು. ಆದರೆ, "ಜೋಕೆ" ಎಂದು ಹೇಳುತ್ತ ತನ್ನ ಕತ್ತಿಯನ್ನು ವೀರಧವಳನ ತಲೆಗೆ ಗುರಿಯಿಟ್ಟು ಹೊಡೆದನು. ಕತ್ತಿಯ ಗುರಿ ತಪ್ಪಿತು. ಕೂಡಲೇ

ವೀರಧವಳನು ತನ್ನ ಕತ್ತಿಯನ್ನು ಒರೆಯಿಂದ ತೆಗೆದು ಬೀಸುವಷ್ಟರಲ್ಲಿ ಮತ್ತೆ ದುರ್ಜಾತಸಿಂಹನು ಕತ್ತಿಯನ್ನು ಪ್ರಯೋಗಿಸಿದನು. ಆದರೆ, ವೀರಧವಳನು ಏಟನ್ನು ನಿವಾರಿಸಿಕೊಳ್ಳಲು ತನ್ನ ಕತ್ತಿಯನ್ನು ಅಡ್ಡವಾಗಿ ಹಿಡಿದನು. ಆ ಏಟಿಗೆ ದುರ್ಜಾತಸಿಂಹನ ಕತ್ತಿ ಕೈಯಿಂದ ಹಾರಿ ಕೆಳಗೆ ಬಿತ್ತು. ತನ್ನ ಸಹೋದರನು ಶಸ್ತ್ರಹೀನನಾದುದನ್ನು ನೋಡಿ ಉನ್ಮತ್ತಸಿಂಹನು ಮುಂದೆ ಬಂದನು. ವೀರಧವಳನು ಕೃತಾಂತನಂತೆ ಉನ್ಮತ್ತಸಿಂಹನ ಭುಜಕ್ಕೆ ಗುರಿಯಿಟ್ಟು ಹೊಡೆದನು. ಇನ್ನೊಂದು ಪೆಟ್ಟು ತಲೆಗೆ ಬಿತ್ತು. ಉನ್ಮತ್ತ ಸಿಂಹನು ಪ್ರಜ್ಞೆತಪ್ಪಿ ನೆಲದ ಮೇಲೆ ಉರುಳಿದನು. ಇಷ್ಟರಲ್ಲಿ ಸಿಂಹಗುಹೆಯ ಇಬ್ಬರು ಸವಾರರು ವೀರಧವಳನ ಮೇಲೆ ಬಿದ್ದರು. ಆದರೇನು! ಒಂದು ಕ್ಷಣದಲ್ಲಿ ಅವರ ಕಪಾಲವು ಆಕಾಶದಲ್ಲಿ ಹಾರಿತು. ಕೂಡಲೇ ವೀರ ಧವಳನು ದುರ್ಜಾತಸಿಂಹನನ್ನು ಕುರಿತು—"ಶರಣಾಗತನಾಗು. ಇಲ್ಲವೇ ತೆಗೆದುಕೋ" ಎಂದು ಮೂದಲಿಸಿದನು. ದುರ್ಜಾತಸಿಂಹನಿಗೆ ತನ್ನ ದುರ್ಗತಿ ತಿಳಿಯಲಿಲ್ಲ. **ಗರ್ವಕ್ಕೆ ದುರ್ಗತಿ ಸದ್ಗತಿಗಳ ತಾರತಮ್ಯವಿಲ್ಲ.** ಮತ್ತೆ ಕತ್ತಿಯನ್ನು ಎತ್ತಿದನು ದುರ್ಜಾತಸಿಂಹ! ವೀರಧವಳನಿಗೆ ಅಂದಿನ ಪರಿಸ್ಥಿತಿ ಯಲ್ಲಿ ಎದಿರುಂಟೆ! ದುರ್ಜಾತಸಿಂಹನೂ ಗಾಯಹೊಂದಿ ತನ್ನ ಸಹೋದರನ ಪಕ್ಕದಲ್ಲಿ ನರಳುತ್ತ ಬಿದ್ದನು.

ಈ ಕದನ ಕೋಲಾಹಲದಲ್ಲಿ ಲಲಿತಪ್ರಭೆ ಮೂರ್ಛಿತಳಾಗಿ ಒಂದುಕಡೆ ಬಿದ್ದಿದ್ದಳು. ವೀರಧವಳನು ಆಕೆಯ ಬಳಿಗೆ ಬಂದನು. ಆ ಕುಮಾರಿಯು ತನ್ನ ವಿಶಾಲ ನೇತ್ರಗಳನ್ನು ತೆರೆದು ನೋಡಿದಳು. ತಾನು ಅಪಾಯದಿಂದ ಪಾರಾದೆನೆಂದು ತಿಳಿದು ತಕ್ಷಣ ಎದ್ದು ನಿಂತು—"ವೀರ!—ನನ್ನನ್ನು ಕಷ್ಟದಿಂದ ಪಾರುಮಾಡಿದ ಪ್ರಿಯತಮ ವೀರ" ಎಂದು ಆನಂದಾತಿ ಶಯದಿಂದ ಹಿಗ್ಗುತ್ತ ಅಂದಿನ ಮಹೋಪಕಾರಕ್ಕೆ ಕೃತಜ್ಞತೆಯನ್ನು ಸೂಚಿಸಿದಳು.

ಇಷ್ಟರಲ್ಲಿ ದುರ್ಜಾತಸಿಂಹನ ಸವಾರರು ಅಜಿಂಕ್ಯ ದುರ್ಗದಿಂದ ಒಂದೇ ಸಲ ಹೊರಗೆ ನುಗ್ಗಿದರು. ದುರ್ಗದಲ್ಲೆಲ್ಲ ಕೋಲಾಹಲವುಂಟಾಯಿತು. ಈ ಸವಾರರು ತಮ್ಮ ಮುಂದೆ ಸ್ವಾಮಿಗಳಿಬ್ಬರೂ ಗಾಯಗೊಂಡು ಬಿದ್ದಿರು

ವುದನ್ನು ನೋಡಿ ಸ್ತಂಭೀಭೂತರಾದರು. ಈ ಹೊಸ ಸವಾರರನ್ನು ಕಂಡು ವೀರಧವಳನು ಲಲಿತಪ್ರಭೆಯನ್ನು ಒಂದು ಕಡೆ ನಿಲ್ಲಿಸಿ—"ಪ್ರಭೆ, ಹೆದರಬೇಡ." ಎಂದು ಮುಂದೆ ನುಗ್ಗಿದನು. ಆದರೆ, ಲಲಿತಪ್ರಭೆ ಅಷ್ಟುಮಂದಿ ಯೋಧರು ವೀರಧವಳನ ಮೇಲೆ ಬಿದ್ದರೆ ಗತಿಯೇನೆಂದು ಭಾವಿಸಿ ಕೂಗಿಕೊಂಡಳು. ಈ ಅಸಮಸಮರದಲ್ಲಿ ವೀರಧವಳನ ಕತ್ತಿ ಮುರಿಯಿತು. ಪುನಃ ಲಲಿತಪ್ರಭೆ ಗಟ್ಟಿಯಾಗಿ ಹೃದಯಭೇದಕವಾಗಿ ಕೂಗಿಕೊಂಡಳು. ವೀರಧವಳನು ಪ್ರಜ್ಞೆತಪ್ಪಿ ಕೆಳಗೆ ಬಿದ್ದನು.

ಲಲಿತಪ್ರಭೆಯ ಕೂಗನ್ನು ಕೇಳಿ ಅಜಿಂಕ್ಯ ದುರ್ಗದಿಂದ ಸತ್ಯಾಶ್ರಯನೂ, ಚಂಡವರ್ಮನೂ ಕೆಲವು ಮಂದಿ ಸವಾರರೊಡನೆ ಆ ಕಡೆ ನುಗ್ಗಿದರು. ಇವರನ್ನು ನೋಡಿದೊಡನೆ ದುರ್ಜಾತಸಿಂಹನೂ, ಉನ್ಮತ್ತಸಿಂಹನೂ ಸಿಂಹಗುಹೆಯ ಸವಾರರೂ ಪಲಾಯನ ಸೂತ್ರವನ್ನು ಜಪಿಸಿದರು.

ವೀರಧವಳನು ಮರುದಿನ ಪ್ರಜ್ಞೆ ತಿಳಿದು ಎದ್ದಾಗ ಸಾಯಂಕಾಲ. ತಾನು ಎಲ್ಲಿರುವೆನೆಂದು ಎಲ್ಲ ಕಡೆ ದಿಟ್ಟಿಸಿ ನೋಡಿದನು. ತಾನು ಮೊದಲು ಇದ್ದ ಮಹಲನಲ್ಲಿ ಹಾಸಿಗೆಯ ಮೇಲೆ ಇದ್ದುದು ಭಾಸವಾಯಿತು. ತಾನು ಅಲ್ಲಿಗೆ ಹೇಗೆ ಬಂದೆನೆಂಬುದು ಗೊತ್ತಾಗಲಿಲ್ಲ. ಮತ್ತೆ ಕಣ್ಣು ಮುಚ್ಚಿದನು. ಮರುಕ್ಷಣದಲ್ಲಿ ಹಾಸಿಗೆಯ ತೆರೆ ತೆರೆದ ಹಾಗೆ ಕಂಡಿತು ಲಲಿತಪ್ರಭೆಯ ವೃದ್ಧ ಪರಿಚಾರಿಕೆ ಹಂಸಿಕೆಯು ಹಾಸಿಗೆಯ ಪಕ್ಕದಲ್ಲಿ ನಿಂತಿದ್ದಳು. ಹಂಸಿಕೆಯು ವೀರಧವಳನಿಗೆ ಪ್ರಜ್ಞೆ ಬರುವುದನ್ನೇ ಕಾದು ನಿಂತಿದ್ದಳು. ಹಿಂದಿನ ರಾತ್ರಿಯಿಂದ ಅದುವರೆಗೂ ಪ್ರಜ್ಞೆ ತಿಳಿದಿರಲಿಲ್ಲ ವೀರಧವಳನಿಗೆ! ವೀರಧವಳನು ಕಣ್ಣು ತೆರೆದುನೋಡಿದ ತಕ್ಷಣ ಹಂಸಿಕೆಗೆ ಸಂತೋಷವಾಯಿತು. ಅವಳು ಬೇಗ ಹಿಂದಕ್ಕೆ ತಿರುಗಿ ಬಾಗಿಲ ಬಳಿ ಕುಳಿತಿದ್ದ ವೃದ್ಧ ಚಾರಣನನ್ನು ಕೂಗಿ—"ಇಲ್ಲಿ ನೋಡು, ವೀರಧವಳನಿಗೆ ಜ್ಞಾನ ಬಂದಿದೆ!" ಎಂದು ತಿಳಿಸಿದಳು. "ಸುಮ್ಮನಿರು. ಗಟ್ಟಿಯಾಗಿ ಕೂಗಬೇಡ." ಎಂದು ಹೇಳುತ್ತ ವೃದ್ಧ ಚಾರಣನು ತಾನು ಕುಳಿತಿದ್ದ ಸ್ಥಳವನ್ನು ಬಿಟ್ಟು ಎದ್ದು ವೀರಧವಳನ ಬಳಿಗೆ ಬಂದು—"ಪರಮಾತ್ಮ, ಈಗ ಕಷ್ಟ ಪರಿಹಾರವಾಯಿತು. ಇನ್ನು ಜೀವಕ್ಕೆ ಭಯವಿಲ್ಲ!" ಎಂದುಕೊಂಡನು.

" ಲಲಿತಪ್ರಭೆ, ಸುರಕ್ಷಿತವಾಗಿದ್ದಾಳೆಯೇ ? " ಎಂದು ವೀರಧವಳನು ಬಹಳ ಕ್ಷೀಣಸ್ವರದಿಂದ ಕೇಳಿದನು. ಆ ಕ್ಷೀಣಸ್ವರದಲ್ಲಿ ಆಶ್ಚರ್ಯವೂ, ಅವಸರವೂ ಕಾಣುತ್ತಿತ್ತು.

" ಹೌದು, ತಾಯಿ ಮಹಾರಾಣಿ ಸುರಕ್ಷಿತವಾಗಿದ್ದಾರೆ ನಿಮ್ಮಿಂದ. ವೀರ, ನಿಮ್ಮಿಂದ ಅವರು ಸುರಕ್ಷಿತವಾಗಿದ್ದಾರೆ. ನೀವು ಮಾಡಿದ ಉಪಕಾರವನ್ನು ಅವರ ತಂದೆಯ ಮುಂದೆ ಸ್ಮರಿಸುತ್ತಿದ್ದಾರೆ. ಆ ದುಷ್ಟರ ಕೈಯಿಂದ ಬಿಡಿಸುವಾಗ ತೋರಿದ ಶೌರ್ಯವನ್ನು ನೆನೆಯುತ್ತಿದ್ದಾರೆ. ತಾಯಿ ಮಹಾರಾಣಿಗೆ ಅಂದು ಬಿಡುಗಡೆಯಾಗದಿದ್ದರೆ ಏನುಗತಿಯಾಗುತ್ತಿತ್ತೊ! ಅಮ್ಮ—" ಎಂದು ತುಂಬ ಮಮತೆಯಿಂದ ನುಡಿದಳು ಹಂಸಿಕೆ ಒಂದೇ ಉಸಿರಿನಲ್ಲಿ !

ವೃದ್ಧ ಚಾರಣ—ನೀನು ಹೀಗೆ ಒಂದೇ ಉಸಿರಿನಲ್ಲಿ ಮಾತನಾಡಿದರೆ ವೀರಧವಳನಿಗೆ ಆಯಾಸವಾಗಬಹುದು, ಹಂಸಿಕೆ.

ಹಂಸಿಕೆ—ಏನೂ ಇಲ್ಲ. ಅವರಿಗೆ ತಿಳಿಯದೆ ಇರುವ ಸುದ್ದಿಯನ್ನು ಹೇಳಿದರೆ ಅದರಿಂದ ಸಮಾಧಾನ ಮತ್ತು ತೃಪ್ತಿ ಆಗುತ್ತದೆ, ಚಾರಣ.

ವೀರಧವಳನಿಗೆ ಇವರ ನಿಸ್ಪೃಹತೆಯನ್ನು ನೋಡಿ ಸಂತೋಷವಾಯಿತು. " ಆ ರಾತ್ರಿ ಯಾವ ಯಾವ ಸಮಾಚಾರಗಳು ಹೇಗೆ ಹೇಗೆ ನಡೆದುವೆಂಬುದು ಮಹಾರಾಜರಿಗೆ ಗೊತ್ತೊ?" ಎಂದು ಕುತೂಹಲದಿಂದ ಕೇಳಿದನು.

ಹಂಸಿಕೆ—ಎಲ್ಲಾ ಸಮಾಚಾರಗಳೂ ಗೊತ್ತು.

ವೀರಧವಳ—ಆದರೆ, ಆ ಚಂಡಾಲರು ದುರ್ಗದೊಳಗಡೆ ಹೇಗೆ ಪ್ರವೇಶಿಸಿದರು ?

" ನಾನು ಹೇಳುತ್ತೇನೆ " ಎಂದು ಮುಂದೆ ಬಂದನು ವೃದ್ಧ ಚಾರಣ.

" ಮೊದಲು ಆ ದುಷ್ಟರು ಮಹಾದ್ವಾರದ ಅಗುಳಿಯನ್ನು ಕಿತ್ತು, ಎಲ್ಲ ಪಹರೆಯವರನ್ನೂ ನಿರಸ್ತ್ರ ಮಾಡಿದರು. ಅವರ ಕೈಕಾಲುಗಳನ್ನು ಕಟ್ಟಿ ಬೆದರಿಕೆಯನ್ನುಂಟುಮಾಡಿದರು. ಒಬ್ಬ ಪಹರೆಯವನನ್ನು ಮಾತ್ರ ಮುಂದಿಟ್ಟು ಕೊಂಡು ಲಲಿತಪ್ರಭೆಯ ಮಹಲಿನ ಕಡೆ ನಡೆದರು."

" ಈಗ ನಾನು ಹೇಳುತ್ತೇನೆ" ಎಂದು ಮುಂದೆ ಬಂದಳು ಹಂಸಿಕೆ.

" ನಾನು ತಾಯಿ ಮಹಾರಾಣಿಯ ಕೊಠಡಿಯ ಪಕ್ಕದ ಕಿರುಮನೆಯಲ್ಲಿ ಮಲಗಿದ್ದೆನು. ಕೊಠಡಿಯಲ್ಲಿ ಏನೋ ಸದ್ದಾಯಿತು. ನಾನು ಗಾಬರಿಯಿಂದ ಎದ್ದು ಕೊಠಡಿಗೆ ಹೋಗಿ ನೋಡಿದಾಗ, ಪಾಷಾಣಹೃದಯದ ಇಬ್ಬರು ಪುರು ಷರು ತಾಯಿ ಮಹಾರಾಣಿಯನ್ನು ಹಾಸಿಗೆಯಿಂದ ಎತ್ತುತ್ತಿದ್ದರು. ನನಗೆ ಭಯದಿಂದ ಬಾಯಿ ಒಣಗಿತು. ಕೂಗಲು ಆಗಲಿಲ್ಲ. ಆದರೆ, ಆ ದೂರ್ತರ ಕಾಲಿಗೆ ಬಿದ್ದು ಬೇಡಿದೆನು. ತಾಯಿ ಮಹಾರಾಣಿಗೆ ಜ್ಞಾನ ತಪ್ಪಿತು. ನಾನು ಧೈರ್ಯಮಾಡಿ ಕೂಗಲೆತ್ನಿಸಿದೆನು. ಅಷ್ಟರಲ್ಲಿ ಒಬ್ಬ ಚಂಡಾಲನು ನನ್ನ ತಲೆಯ ಮೇಲೆ ಬಲವಾದ ಪೆಟ್ಟು ಹೊಡೆದನು. ನಾನೂ ಸಹ ಜ್ಞಾನತಪ್ಪಿ ಕೆಳಗೆ ಬಿದ್ದೆನು."

" ಆ ಮೇಲೆ ! "

" ಆ ಮೇಲೆ ನನಗೆ ಪ್ರಜ್ಞೆ ಬಂದಾಗ್ಗೆ ನನ್ನ ಕೂಗನ್ನು ಕೇಳಿ ದುರ್ಗದ ಸೈನಿಕರೂ, ಜನರೂ ತಾಯಿ ಮಹಾರಾಣಿಯ ಕೊಠಡಿಯಲ್ಲಿ ಸೇರಿದರು. ಚಂಡವರ್ಮ ಮಹಾರಾಜರೂ ಬಂದರು. ತಾಯಿ ಮಹಾರಾಣಿ ಅಲ್ಲಿ ಇಲ್ಲ ದುದನ್ನು ಕಂಡು ಎಲ್ಲರೂ ನನ್ನನ್ನು ಒಂದೇ ಉಸಿರಿನಲ್ಲಿ ಕೇಳಿದರು. ನಾನು ನಡೆದ ಸಮಾಚಾರವನ್ನು ಸ್ವಲ್ಪ ಸ್ವಲ್ಪವಾಗಿ ಗುಟುಕುಮಾತಿನಲ್ಲಿ ಹೇಳಿದೆನು. ಕೂಡಲೇ ಅವರೆಲ್ಲರೂ ದುರ್ಗದ ಮಹಾದ್ವಾರದ ಕಡೆಗೆ ನುಗ್ಗಿದರು."

" ಏನು, ಮಹಾದ್ವಾರದ ಕಡೆ ನುಗ್ಗಿದರೆ ? ನಾನು ಆ ದುರಾತ್ಮರೊಡನೆ ಏಕಾಕಿಯಾಗಿ ಹೋರಾಡುತ್ತಿದ್ದಾಗ ಒಬ್ಬರೂ ಅಲ್ಲಿಗೆ ನನ್ನ ಸಹಾಯಕ್ಕಾಗಿ ಬರಲಿಲ್ಲವಲ್ಲಾ ! "

"ನಿಜ, ಅವರು ಅಲ್ಲಿಗೆ ಬಂದಾಗ ನೀವು ಜ್ಞಾನತಪ್ಪಿ ಬಿದ್ದಿದ್ದಿರಿ. ತಾಯಿ ಮಹಾರಾಣಿ ನಿಮಗಾಗಿ ನಿಮ್ಮ ಬಳಿಯಲ್ಲಿ ಕುಳಿತು ರೋದಿಸುತ್ತಿದ್ದಳು. ವೃದ್ಧ ಚಾರಣನು ನಿಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ, ನಿಮ್ಮ ಪ್ರಾಣಕ್ಕೆ ಭಯವಿಲ್ಲವೆಂದು ಹೇಳಿದ ಮೇಲೆ ಅವರು ಅಲ್ಲಿಂದ ಎದ್ದರು."

"ಸತ್ಯಾಶ್ರಯ ಮಹಾರಾಜರು ಬಂದಿರಲಿಲ್ಲವೇ? ಅವರು ಏನೆಂದರು?"

"ಅವರು ಉತ್ತಮರೀತಿಯಲ್ಲಿ ನಿಮಗೆ ಶುಶ್ರೂಷೆ ನಡೆಸುವಂತೆ ತಿಳಿಸಿದ್ದಾರೆ. ಆದರೆ—"

"ಆದರೆ, ಏನು!"

"ನೀವು ಕಾರಾಗೃಹದಿಂದ ಹೇಗೆ ನಡುರಾತ್ರಿ ಈಚೆಗೆ ಬಂದಿರೆಂಬುದು ಅವರಿಗೊಬ್ಬರಿಗೂ ತಿಳಿಯಲಿಲ್ಲ."

"ಏಕೆ, ಚಂಡವರ್ಮ ಮಹಾರಾಜರಿಗೆ ಗೊತ್ತಿತ್ತು!"

"ಆದರೆ, ನಿಮ್ಮ ವಿಚಾರವಾಗಿ ಅವರು ಒಂದು ಮಾತನ್ನೂ ಆಡಲಿಲ್ಲ."

"ಸರಿ" ಎಂದನು ವೀರಧವಳ.

ಆ ಮಾತು ಮುಗಿಯುವುದರೊಳಗಾಗಿ ವೃದ್ಧ ಚಾರಣನು "ಇನ್ನೊಂದು ಹೊಸ ಸುದ್ದಿ ಬಂದಿದೆ. ನಮ್ಮ ದುರ್ಗದ ಇಬ್ಬರು ಸವಾರರನ್ನು ಯಾರೋ ದುರ್ಗದ ಕಾಡಿನಲ್ಲಿ ಕೊಲೆಮಾಡಿದ್ದಾರಂತೆ! ಚಂಡವರ್ಮಮಹಾರಾಜರಿಗೆ ಆಪ್ತರಾಗಿದ್ದ ಸವಾರರು ಅವರು."

"ಸರಿ" ಎಂದನು ವೀರಧವಳ.

ಯಾವುದು ಸರಿಯೋ ಯಾವುದು ಬೆಸೆಯೋ ಈ ವಿಚಿತ್ರ ಪ್ರಪಂಚದಲ್ಲಿ! ವೀರಧವಳನಂತೂ ಮತ್ತೆ ಚಂಡವರ್ಮನ ತಳತಂತ್ರಕ್ಕೆ ಸಿಕ್ಕಿ ನರಳುವ ಪರಿಸ್ಥಿತಿ ಉಂಟಾಯಿತು. ವೀರಧವಳನ ಮನೋಮಾರ್ಗದಲ್ಲಿ ಮುಂದಿನ ಪರಿ

ಣಾಮ ಚಲಿಸಿತು. ಚಂದ್ರಸೇನನ ಹನನ, ಕಾರಾಗೃಹದಿಂದ ಪಲಾಯನ, ಸವಾರರ ಮರ್ದನ—ಈ ಮೂರು ಅಪರಾಧಗಳನ್ನೂ ಒಟ್ಟಿಗೆ ಸೇರಿಸಿ ಬಿಗಿಯದೆ ಬಿಡುವನೆ ಚಂಡವರ್ಮ! ಈ ನಡುವೆ ಲಲಿತಪ್ರಭೆಯನ್ನು ಪ್ರಾಣಾಪಾಯ ದಿಂದ ಬಿಡುಗಡೆ ಮಾಡಿದ ಉಪಕಾರವನ್ನು ಸ್ಮರಿಸುವವರು ಯಾರು? ಯಾರು ಸ್ಮರಿಸಿದರೂ ಚಂಡವರ್ಮನು ಸ್ಮರಿಸುವಂತಿರಲಿಲ್ಲ. ಚಂಡ ವರ್ಮನ ಅಪಸ್ಮರಣೆಯ ಮುಂದೆ ಯಾರ ಶುಭಸ್ಮರಣೆಯಾಗಲಿ ಸಾಗುವಂ ತಿರಲಿಲ್ಲ. ಬಹಿರಂಗ ವಿಚಾರಣೆ ನಡೆದಲ್ಲದೆ ತೀರದು ಆತನಿಗೆ. ಮೊದಲು ಬಹಿರಂಗ ವಿಚಾರಣೆ; ಆ ಮೇಲೆ ಅಂತರಂಗ ವಿಚಾರಣೆ. ಸತ್ಯಾಶ್ರಯನಂತಹ ಧರ್ಮಾತ್ಮನನ್ನೂ ಸಹ ಮರುಳುಮಾಡಿ ತನ್ನ ಕೈಗೊಂಬೆಯಾಗಿ ಕುಣಿಸು ತ್ತಿರುವ ಚಂಡವರ್ಮನಿಗೆ ಇತರರ ಮಾತೇಕೆ? "ನೆಲ ಮುಟ್ಟಲ್ ಮುನಿ ದಪ್ಪುದೈ" ಎಂಬ ಕವಿವಚನದಂತೆ ಆಗಿತ್ತು ವೀರಧವಳನ ಪರಿಸ್ಥಿತಿ!

## ೧೭. ಮತ್ತೆ ಬಂಧಿ

### ನನ್ನ ಮಾತಿನ ಮುಂದೆ ನಿನ್ನ ಮಾತಿಗೆ ಬೆಲೆಯುಂಟೆ ?

ಹಿಂದಿನ ಪ್ರಕರಣ ನಡೆದು ಎರಡು ದಿನಗಳಾಗಿದ್ದುವು. ವೀರಧವಳನ ಆರೋಗ್ಯ ಸ್ವಲ್ಪ ಸುಧಾರಿಸಿತ್ತು. ಅಂದಿನ ಸಾಯಂಕಾಲ ಚಂಡವರ್ಮನು ವೀರಧವಳನ ಆರೋಗ್ಯವನ್ನು ವಿಚಾರಿಸುವ ನೆಪದಿಂದ ಬಂದನು. ಅವನು ಬಂದಾಗ ಹಂಸಿಕೆಯು ವೀರಧವಳನ ಶುಶ್ರೂಷೆಗಾಗಿ ಅಲ್ಲಿದ್ದಳು. ಚಂಡ ವರ್ಮನು ಹಂಸಿಕೆಯನ್ನು ಹೊರಗೆ ಹೋಗುವಂತೆ ಹೇಳಿ, ತಾನು ಅಲ್ಲಿರುವ ತನಕ ಯಾರನ್ನೂ ಒಳಗೆ ಬಿಡಕೂಡದೆಂದು ಆಜ್ಞೆ ಮಾಡಿದನು. ಹಂಸಿಕೆಗೆ ಚಂಡವರ್ಮನ ದುರ್ವಿದ್ಯೆಗಳು ಗೊತ್ತಿದ್ದರೂ ಸಹ ಆಗ ಮರುಮಾತನ್ನಾಡದೆ ಹೊರಗೆ ಹೋಗಬೇಕಾಯಿತು. ಅವಳು ಬಾಗಿಲು ಮುಚ್ಚಿದುದನ್ನು ತಿಳಿದು ಚಂಡವರ್ಮನು ವೀರಧವಳನ ಹಾಸಿಗೆಯ ಮಗ್ಗುಲಲ್ಲಿ ಕುಳಿತನು. ವೀರಧವ ಳನು ಚಂಡವರ್ಮನನ್ನು ನೋಡಿ—"ಇದೇನು, ಇಷ್ಟುಹೊತ್ತಿನಲ್ಲಿ ಸರದಾ ರರು!" ಎಂದು ನುಡಿದನು. ಸ್ವಲ್ಪ ಹೊತ್ತು ಚಂಡವರ್ಮ ವೀರಧವಳನ ಮುಖವನ್ನೇ ನೋಡುತ್ತ ಕುಳಿತನು. ಆತನನ್ನು ನೋಡಿದ ಮೇಲೆ ತಾನು ಬಂದಿದ್ದ ಕಾರ್ಯಾರ್ಥ ಮರೆತುಹೋಯಿತು ಚಂಡವರ್ಮನಿಗೆ! ನಿಜ. ಬೆಳಕಿನ ಎದುರಿಗೆ ಕತ್ತಲು ನಿಲ್ಲಲಾರದು. ಆದರೆ, ಬೆಳಕಿನ ಸತ್ತ್ವ ಕಡಮೆಯಾಗಿರುವಾಗ ಕತ್ತಲಿನ ಸತ್ತ್ವ ಕೊಂಚಮಟ್ಟಿಗೆ ನಿಲ್ಲುವುದುಂಟು. ಚಂಡವರ್ಮನ ಕತ್ತಲೆಯ ಕೋಣೆಯಂತಹ ಮನಸ್ಸು ಮತ್ತೆ ಎಚ್ಚತ್ತು ತನ್ನ ಪ್ರಭಾವವನ್ನು ಬೀರಲಾರಂಭಿಸಿತು.

ಚಂಡವರ್ಮ—ವೀರಧವಳ, ಈ ದಿನ ನಿನ್ನ ಆರೋಗ್ಯ ಚೆನ್ನಾಗಿದೆ ಯೆಂದು ಕೇಳಿ ನಾನು ನನ್ನ ಸಂತೋಷವನ್ನು ಸೂಚಿಸಲು ಬಂದಿದ್ದೇನೆ.

ವೀರಧವಳ—ಆಗಬಹುದು, ಬಹಳ ಸಂತೋಷ.

ಚಂಡ—ಅಷ್ಟೇ ಅಲ್ಲ. ಆ ದಿನ ನೀನು ಲಲಿತಪ್ರಭೆಯನ್ನು ಬಿಡುಗಡೆ ಮಾಡಿದುದಕ್ಕಾಗಿ ಸತ್ಯಾಶ್ರಯ ಮಹಾರಾಜರಿಗೂ, ನನಗೂ ಆನಂದವಾಗಿದೆ,

ವೀರ—ಆಗಬಹುದು, ಬಹಳ ಸಂತೋಷ.

ಚಂಡ—ಆದರೆ, ನಿನ್ನಲ್ಲಿ ಒಂದು ಮಹತ್ತ್ವದ ಮಾತನ್ನು ಕೇಳಿ ತಿಳಿಯಬೇಕಾಗಿದೆ.

ವೀರ—ಮಹತ್ತ್ವದ ಮಾತೇ ! ನನ್ನಲ್ಲಿ ! ಸರಿ, ಆಗಬಹುದು.

ಚಂಡ—ನೋಡು ಧವಳ, ಆ ಮಾತು ಇಷ್ಟೆ. ಆ ರಾತ್ರಿ ನೀನು ವಂಗದೇಶಕ್ಕೆ ಹೊರಟವನು ಮತ್ತೆ ಹಿಂದಕ್ಕೆ ಬಂದಿರುವೆ. ಇದಕ್ಕೆ ಕಾರಣ ವೇನು ?

ವೀರ—ಕಾರಣ ಬೇರೆ ಯಾವುದೂ ಇಲ್ಲ. ಎಲ್ಲಕ್ಕೂ ದೈವಲೀಲೆ ಮತ್ತು ದೈವಪ್ರೇರಣೆ ಅಷ್ಟೆ.

ಚಂಡ—ಅಷ್ಟೇಯೆ ! ಧವಳ, ನೀನು ದೊಡ್ಡ ತಪ್ಪು ಮಾಡಿರುವೆಯಲ್ಲವೇ ? ಲಲಿತಪ್ರಭೆಯ ಕೋರಿಕೆಯನ್ನು ನೆರವೇರಿಸಿದಂತಾಗಲಿಲ್ಲ.

ವೀರ—ಅದು ಅಷ್ಟು ದೊಡ್ಡ ತಪ್ಪಲ್ಲ, ಸರದಾರ.

ಚಂಡ—ಏನು, ಅದು ದೊಡ್ಡ ತಪ್ಪಲ್ಲವೆ ! ಇರಲಿ, ನಿನ್ನ ಬೆಂಗಾವಲಿಗಾಗಿ ಕಳುಹಿಸಿದ ಇಬ್ಬರು ಸವಾರರನ್ನು ಕೊಂದವರು ಯಾರು ?

ವೀರಧವಳನಿಗೆ ಚಂಡವರ್ಮನ ಗುರಿ ಗೊತ್ತಾಯಿತು. ಯೋಗಕ್ಷೇಮ ವಿಚಾರಣೆಗಾಗಿ ಬಂದವನು ರಾಗದ್ವೇಷ ಪ್ರಚಾರಣೆಗಾಗಿ ನಿಂತನು ಚಂಡವರ್ಮ. ವೀರಧವಳನು ಶಂಕೆಯಿಲ್ಲದೆ ಉತ್ತರ ಕೊಟ್ಟನು.

"ಏನು ! ನಿಮ್ಮ ಮಾತೇ ನನಗೆ ಅರ್ಥವಾಗಲಿಲ್ಲ."

" ಧವಳ, ನೀನು ನನ್ನನ್ನು ಹುಚ್ಚನೆಂದು ಭಾವಿಸಿರುವೆಯಾ ? ರಾಜಮಾರ್ಗದಲ್ಲಿ ನೀನು ಅವರನ್ನು ಕೊಂದು ಅರಣ್ಯದಲ್ಲಿ ಎಸೆದಿರುವೆಯಲ್ಲವೇ ? ಇದುವರೆಗೂ ನಾನು ಈ ಮಾತನ್ನು ಗುಪ್ತವಾಗಿಟ್ಟಿದ್ದೆನು. ಈಗ ನಾನು ಹೇಳುವ ಮಾತನ್ನು ನೀನು ಕೇಳಿದರೆ ಸರಿ, ಇಲ್ಲವೇ ಹೊಸದಾಗಿ ನೀನು ಮತ್ತೆ ಇಬ್ಬರ ಕೊಲೆ ಮಾಡಿರುವೆಯೆಂದು ಹೇಳಬೇಕಾದೀತು "

" ಸರದಾರ, ಆ ಇಬ್ಬರು ಸವಾರರ ಶವಗಳು ಅರಣ್ಯದಲ್ಲಿ ಸಿಕ್ಕಿರುವುದನ್ನು ನಾನು ಒಪ್ಪುತ್ತೇನೆ. ಆದರೆ, ಅವರು ನನ್ನ ರಕ್ಷಣೆಗಾಗಿ ಸಿಂಹಗುಹೆಯವರೊಡನೆ ಯುದ್ಧ ಮಾಡುತ್ತಿರುವಾಗ ಸತ್ತರೇ ವಿನಾ ಅನ್ಯಥಾ ಅಲ್ಲ."

" ಧವಳ, ನೀನು ಬಹಳ ಗಟ್ಟಿಗ. ನಿಜ, ನನ್ನ ಇಬ್ಬರು ಸವಾರರು ಸತ್ತರು; ನೀನು ಮಾತ್ರ ಬದುಕಿ ಬಂದೆ! ಇರಬಹುದು. ಎಂಥ ಚಾತುರ್ಯದ ಮಾತು! ಇದು ಅಸಂಭವನೀಯ. ನಾನು ಮಾತ್ರ ನಂಬುವುದಿಲ್ಲ."

" ಅಸಂಭವವೇಕೆ? ಇದು ಸತ್ಯ! "

" ಸರಿ, ನೀನು ಹೇಳುವುದೇ ಸತ್ಯವಾಗಲಿ. ಆದರೆ, ಇಲ್ಲಿಂದ ಹೋದವನು ಮರಳಿ ಏಕೆ ಬಂದೆ ? "

" ದೈವಲೀಲೆ ಮತ್ತು ದೈವಪ್ರೇರಣೆ ಎಂದು ಹಿಂದೆಯೇ ಹೇಳಿದೆನಲ್ಲವೇ ? "

" ಧವಳ, ನೀನು ಹುಡುಗಾಟದ ಮಾತನ್ನು ಆಡುತ್ತಿರುವೆ."

" ಅದು ಹೋಗಲಿ, ಸರದಾರ. ನೀವು ನನ್ನಲ್ಲಿ ಯಾವುದೋ ಮಹತ್ತ್ವದ ಮಾತನ್ನು ಕೇಳಿ ತಿಳಿಯಬೇಕಾಗಿದೆ ಎಂದು ಹೇಳಿದಿರಿ. ಆ ಮಾತು ಕೇಳಿ."

ವೀರಧವಳನು ಮಾತನಾಡುವಾಗ ಚಂಡವರ್ಮನು ಪೂರ್ಣ ಗಮನವಿಟ್ಟು ಕೇಳುತ್ತಿದ್ದನು. ಅವನು ಹೇಳುವುದೆಲ್ಲ ನಿಜವಿರಬಹುದೆಂದು ತೋರಿತು.

ಆದರೆ, ಹೇಗಾದರೂ ಸರಿಯೆ ತನ್ನ ಶಕ್ತಿಯಿಂದ ವೀರಧವಳನ ಮೇಲೆ ಅಧಿಕಾರ ಮಾಡಬೇಕೆಂಬ ಅಹಂಭಾವದ ಎದುರಿಗೆ ನಿಜಾಂಶಕ್ಕೆ ಉಳಿಗಾಲ ವಿರಲಿಲ್ಲ. ಮತ್ತೆ ವೀರಧವಳನನ್ನು ವಂಗದೇಶಕ್ಕೆ ಕಳುಹಿಸಿಬಿಡಬೇಕೆಂದು ಯೋಚಿಸಿದನು.

"ಧವಳ, ನೀನು ನಿಜವಾಗಿಯೂ ಬುದ್ಧಿವಂತನಾಗಿದ್ದರೆ, ಈಗ ನಾನು ಹೇಳುವ ಹಾಗೆ ಪುನಃ ವಂಗದೇಶಕ್ಕೆ ಹೊರಡು."

"ಏನು, ಪುನಃ ತಲೆತಪ್ಪಿಸಿಕೊಂಡು! ಇಲ್ಲ. ಅದು ನನ್ನಿಂದ ಖಂಡಿತ ಆಗಲಾರದು."

"ಮೂರ್ಖನಂತೆ ಮಾತನಾಡಬೇಡ. ಸರಿಯಾಗಿ ಉತ್ತರ ಕೊಡು."

"ಹೌದು, ಇದೇ ನನ್ನ ಉತ್ತರ."

"ಕಡೆಯಪಕ್ಷ ಲಲಿತಪ್ರಭೆಯ ಕೋರಿಕೆಗೂ ಗೌರವವಿಲ್ಲವೇ, ಧವಳ!"

"ಗೌರವವಿದೆ. ಆದರೆ, ಆಕೆಯ ಬಾಯಿಂದ ಕೇಳದ ಹೊರತು ನಾನು ಏನನ್ನೂ ಹೇಳುವುದಿಲ್ಲ."

"ಪ್ರಾಯಃಸಮರ್ಥಳಾದ ಲಲಿತಪ್ರಭೆಯೊಡನೆ ಏಕಾಂತದಲ್ಲಿ ಮಾತ ನಾಡಬೇಕೆಂದು ನಿನ್ನಂಥ ನವಯುವಕನು ಬಯಸುವುದು ಯೋಗ್ಯವಾದು ದಲ್ಲ."

"ಲಲಿತಪ್ರಭೆಯನ್ನು ಏಕಾಂತದಲ್ಲಿ ಪ್ರತ್ಯಕ್ಷ ನೋಡುವುದು ಅಯೋಗ್ಯ ವಾದರೆ, ಆಕೆಯ ಮಾತನ್ನು ಪರೋಕ್ಷವಾಗಿ ನಂಬುವುದೂ ಅಯೋಗ್ಯ ವಲ್ಲವೇ?"

"ಧವಳ, ನೀನು ಮರ್ಯಾದೆ ಬಿಟ್ಟು ಮಾತನಾಡುತ್ತಿರುವೆ. ಈಗ ನಾನು ಒಂದೇ ಒಂದು ಸಲ ಕೊನೆಯ ಮಾತನ್ನು ಹೇಳುತ್ತೇನೆ.

ಲಲಿತಪ್ರಭೆಯ ಮತ್ತು ನನ್ನ ಇಷ್ಟದಂತೆ ನೀನು ಒಂದು ಕ್ಷಣವೂ ತಡ ಮಾಡದೆ ಇಂದೇ ವಂಗದೇಶಕ್ಕೆ ಹೊರಡಬೇಕು. ನೀನು ಹೊರಡುವುದಿಲ್ಲ ವೆಂದು ಹಟ ಮಾಡಿದರೆ, ಮುಂದೆ ನನಗಿಂತ ಕೆಟ್ಟ ಮನುಷ್ಯರು ಯಾರೂ ಇಲ್ಲವೆಂಬುದನ್ನು ನೀನು ತಿಳಿಯಬೇಕಾದೀತು. ನಿನಗೆ ಪ್ರತಿಸ್ಪರ್ಧಿಯಾಗಿ ನಿಂತು ನಿನ್ನ ಮೇಲಣ ಸೇಡನ್ನು ಖಂಡಿತವಾಗಿ ತೀರಿಸಿಕೊಳ್ಳದೆ ಬಿಡೆನು."

"ಸರದಾರ, ಇದುವರೆಗೂ ನೀವು ಮಾಡುತ್ತಿರುವ ಕೆಲಸವಾದರೂ ಅಷ್ಟೇ ಅಲ್ಲವೇ ? "

"ಧವಳ. ನೀನು ಮತ್ತೆ ಮರ್ಯಾದೆ ಬಿಟ್ಟು ಮಾತನಾಡುತ್ತಿ ರುವೆ. ನಿನ್ನ ಮಾತಿನಲ್ಲಿ ನಂಬಿಕೆ ಯಾರಿಗಿದೆ ? ನನ್ನ ಮಾತಿನ ಮುಂದೆ ನಿನ್ನ ಮಾತಿಗೆ ಬೆಲೆಯುಂಟೆ ? ನೀನು ಚಂದ್ರಸೇನನನ್ನು ಕೊಲೆಮಾಡಿರುವು ದಾಗಿ ಎಲ್ಲರೂ ನಂಬಿದ್ದಾರೆ. ನೀನು ಸೆರೆಯಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಿರುವಾಗ, ನಿನ್ನನ್ನು ಹಿಡಿಯಲು ಇಬ್ಬರು ಸವಾರರನ್ನು ಕಳುಹಿಸಿ ದರೆ, ಅವರನ್ನೂ ನೀನು ಕೊಲೆ ಮಾಡಿದ್ದೀಯೆ. ದುರ್ಗದ ರಕ್ಷಕನಾದ ರಣ ರಾಗನು ಇದಕ್ಕೆಲ್ಲ ಸಾಕ್ಷಿ ಕೊಡುತ್ತಾನೆ. ನೋಡು, ನಾನು ಹೇಳುವುದನ್ನು ಕೇಳು. ಸುಖವಾಗಿ ಬದುಕು."

ಚಂಡವರ್ಮನೊಡನೆ ಮಾತನಾಡುವುದರಿಂದ ಫಲವಿಲ್ಲವೆಂದು ತೋರಿತು ವೀರಧವಳನಿಗೆ. ಮನಸ್ಸನ್ನು ಬಿಗಿಹಿಡಿದು, ಪರಮೇಶ್ವರನನ್ನು ನೆನೆದು,—" ಸರದಾರ, ನಿಲ್ಲಿಸಿ. ಸಾಕು, ನಿಮ್ಮ ಮಾತು. ಈ ಸೆರೆಮನೆ ಯಿಂದ ತಲೆತಪ್ಪಿಸಿಕೊಂಡು ಹೋಗುವ ಮಾತನ್ನು ಮತ್ತೆ ಎತ್ತಬೇಡಿ." ಎಂದು ನುಡಿದನು ಗಂಭೀರವಾಗಿ.

ವೀರಧವಳನ ಸ್ಪಷ್ಟೋಕ್ತಿಯನ್ನು ಕೇಳಿ ಚಂಡವರ್ಮನು ಸ್ತಬ್ಧ ನಾದನು. ಅಷ್ಟರಲ್ಲಿ ಅವನಿಗೆ ಒಂದು ಹೊಸ ಯುಕ್ತಿ ಹೊಳೆಯಿತು. ತಕ್ಷಣ ಗಟ್ಟಿಯಾಗಿ ಗಿರಿಚಿದನು. "ಛೀ ನೀಚ, ಒಬ್ಬರಾದ ಮೇಲೆ ಒಬ್ಬ ರಂತೆ ಮೂರುಮಂದಿಯನ್ನು ಕೊಲೆ ಮಾಡಲು ನಿನಗೆ ಹೇಗೆ ಮನಸ್ಸು

ಬಂತು. ಛೀ ಪಾಪಾತ್ಮ!" ಎಂದು ಅರಚಿದನು. ಹೀಗೆ ಕಿರಿಚುತ್ತ ಅರಚುತ್ತ ಕೊಠಡಿಯ ಬಾಗಿಲನ್ನು ತೆರೆದು ಹೊರಗೆ ಬಂದನು ಮಾಯಾವಿ !

ಇಷ್ಟರಲ್ಲಿ ರಣರಾಗನು ತನ್ನ ಸ್ವಾಮಿಯ ದರ್ಶನಕ್ಕಾಗಿ ಅಲ್ಲಿಗೆ ಬಂದನು. ಚಂಡವರ್ಮನು ಆತನನ್ನು ಹತ್ತಿರ ಕರೆದು—"ರಣರಾಗ, ಈಗಲೇ ಆರು ಜನ ಸಶಸ್ತ್ರ ಯೋಧರನ್ನು ವೀರಧವಳನ ಕೊಠಡಿಗೆ ಪಹರೆ ಇಡು. ವೀರಧವಳನೊಡನೆ ಯಾರೂ ಮಾತನಾಡಕೂಡದು. ಕೇವಲ ವೃದ್ಧ ಚಾರಣ ಮಾತ್ರ ಆತನಿಗೆ ಊಟ ತಿಂಡಿಗಳನ್ನು ಕೊಡುವುದು ವಿನಾ ಆತನ ಕೊಠಡಿಗೆ ಯಾರೂ ಪ್ರವೇಶ ಮಾಡಕೂಡದು. ಇಂದಿನಿಂದ ವೀರಧವಳನು ದುರ್ಗದಲ್ಲಿ ಮತ್ತೆ ಕೈದಿಯಾಗಿದ್ದಾನೆ. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಸರಿಯಾದ ಏರ್ಪಾಡನ್ನು ಮಾಡಬೇಕು. ತಿಳಿಯಿತೇ ? " ಎಂದು ಕಟ್ಟಪ್ಪಣೆಮಾಡಿ ಹೊರಟುಹೋದನು ಚಂಡವರ್ಮ. ಸ್ವಲ್ಪ ಹೊತ್ತಿಗೆ ಪಹರೆಯವರು ಬಂದರು. ಚಂಡವರ್ಮನು ಹೇಳಿದ ಒಂದೊಂದು ವಿಷಯವನ್ನೂ ಜಾರಿಗೆ ತಂದನು ರಣರಾಗ !

ತಾನು ಪುನಃ ಕೈದಿಯಾಗಿರುವುದನ್ನು ನೋಡಿ ವೀರಧವಳನು ಎದೆಗುಂದಲಿಲ್ಲ. ವೃದ್ಧ ಚಾರಣನು ಊಟ ತಂದಾಗ ಆತನ ಮೂಲಕ ಎಲ್ಲ ಸಮಾಚಾರಗಳನ್ನೂ ತಿಳಿದುಕೊಂಡನು. ರಣರಾಗನಿಗೆ ಆಜ್ಞೆಮಾಡಿದ ಮೇಲೆ ಚಂಡವರ್ಮನು ಸತ್ಯಾಶ್ರಯನ ಬಳಿಗೆ ಬಂದನು. ವೃದ್ಧ ಸರದಾರನಿಗೆ ಚಂಡವರ್ಮನ ಮುಖದಲ್ಲಿ ಸಂಶಯವೂ ಕಳವಳವೂ ಕಾಣಿಸಿದುವು. ಚಂಡವರ್ಮನು ಸರದಾರನಿಗೆ ತನ್ನ ಹೊಸ ಸಮಾಚಾರವನ್ನು ಹೆಚ್ಚು ವಿವರಣೆಯಿಲ್ಲದೆ ಬಿತ್ತರಿಸತೊಡಗಿದನು.

"ಮಹಾರಾಜ, ತಾವು ವೀರಧವಳನನ್ನು ನೋಡಿ ಬರುವಂತೆ ನನಗೆ ತಿಳಿಸಿದ್ದಿರಿ. ನಾನು ಹೋಗುವುದಕ್ಕೆ ಮುಂಚಿತವಾಗಿಯೇ ವೀರಧವಳನೇ ಹಂಸಿಕೆಯ ಮೂಲಕ ನನಗೆ ಬರುವಂತೆ ಹೇಳಿಕಳುಹಿಸಿದ್ದನು. ನನಗೆ ಆಶ್ಚರ್ಯವುಂಟಾಯಿತು. ವೀರಧವಳನು ತನ್ನ ಕೊಠಡಿಯಲ್ಲಿ ಅಸ್ವಸ್ಥಾವಸ್ಥೆಯಾಗಿ ಮಲಗಿದ್ದನು. ನನ್ನನ್ನು ನೋಡಿದ ತಕ್ಷಣ ಎದ್ದು ಮೊಳಕಾಲೂರಿ

ವಿನಯದಿಂದ " ನನಗೆ ಅಭಯ ಕೊಡಿ. ನನಗೆ ರಕ್ಷಣೆ ಕೊಡಿ." ಎಂದು ಒಂದೇ ಸಮನೆ ಬೇಡಿಕೊಂಡನು. ತನ್ನ ಪಾಪಭೂತವಾದ ಅಂತ ರಂಗವನ್ನು ಬಿಚ್ಚಿ, ಕುಮಾರ ಚಂದ್ರಸೇನನ ಕೊಲೆಗೆ ತಾನೇ ಕಾರಣನೆಂದು ಒಪ್ಪಿಕೊಂಡನು."

" ಆ ದಿನ ರಾತ್ರಿ ಆತನು ಕಾರಾಗೃಹದಿಂದ ಹೊರಗೆ ಹೇಗೆ ಬಂದ ನೆಂದು ಕೇಳಿದಿರಾ ? "

" ಕೇಳಿದೆ ಮಹಾರಾಜ. ಆಗ ಮತ್ತೊಂದು ಘೋರ ವೃತ್ತಾಂತ ನನ್ನ ಕಿವಿಗೆ ಬಿತ್ತು ! ಆ ದಿನ ರಾತ್ರಿ ಕಾರಾಗೃಹದಿಂದ ತಪ್ಪಿಸಿಕೊಂಡು ಪ್ರಾಣದಾಸೆಗಾಗಿ ಓಡುತ್ತಿದ್ದನಂತೆ. ನಮ್ಮ ಕಾವಲುಗಾರರಿಬ್ಬರು ಕೂಡಲೆ ಆತನನ್ನು ಬೆನ್ನಟ್ಟಿ ಹೋದರಂತೆ. ಅವರು ಅವನನ್ನು ಹಿಡಿದಾಗ ಅವರ ಮೇಲೆ ಬಿದ್ದು ಇಬ್ಬರನ್ನೂ ಸಂಹಾರ ಮಾಡಿದನಂತೆ. ನಾನು ಏನು ಹೇಳಲಿ ಮಹಾರಾಜ. ಮೂರು ಕೊಲೆಗಳು ! ಮೂರು ಮೂರು !

" ಅದು ನಿಜವೇ ? ರಣರಾಗನಿಗೆ ಗೊತ್ತಿದೆಯೇ ? "

" ನಿಜ, ಮಹಾರಾಜ. ರಣರಾಗನೇ ವೀರಧವಳನನ್ನು ಬೆನ್ನಟ್ಟಿ ಹೋಗುವಂತೆ ಇಬ್ಬರು ಕಾವಲುಗಾರರನ್ನು ಕಳುಹಿಸಿದುದಾಗಿ ನನಗೆ ತಿಳಿಸಿದ್ದಾನೆ."

" ಸರಿ, ಆ ಮೇಲೆ ? "

" ಅವರಿಬ್ಬರನ್ನೂ ಕೊಲೆಮಾಡಿದ ತರುವಾಯ ಪಶ್ಚಾತ್ತಾಪದಿಂದ ಮತ್ತೆ ದುರ್ಗಕ್ಕೆ ಹಿಂತಿರುಗಿದನಂತೆ."

" ಏಕೆ ? "

" ಏಕೆಂದರೆ, ನೀವು ದಯಾಳು ಸ್ವಭಾವದವರೆಂದು ಆತನಿಗೆ ಗೊತ್ತಿತ್ತು. ಆದುದರಿಂದ ಪಶ್ಚಾತ್ತಾಪದಿಂದ ನಿಮ್ಮಲ್ಲಿ ಕ್ಷಮೆಬೇಡಬೇಕೆಂದು

ಬರುತ್ತಿದ್ದನಂತೆ. ದುರ್ಗದ ಹೆಬ್ಬಾಗಿಲಿಗೆ ಬಂದಾಗ ಪ್ರಭೆಯನ್ನು ಅಪಹರಿಸಿ ಕೊಂಡು ಹೋಗುತ್ತಿದ್ದ ಸಿಂಹಗುಹೆಯ ನೀಚ ಸವಾರರನ್ನು ಕಂಡು ಅವ ರೊಡನೆ ಕಾದಿ ಪ್ರಭೆಯನ್ನು ಬಿಡಿಸಿಕೊಂಡನಂತೆ.''

'' ಪ್ರಭೆಯನ್ನು ಬಿಡಿಸಿಕೊಂಡು—''

'' ತಾನು ಬಂದ ದಾರಿ ಹಿಡಿಯುವುದಕ್ಕೆ !

'' ಓಹೋ ! ಆ ಮೇಲೆ ? ''

'' ಆ ಮೇಲೆ ಮತ್ತೇನಿದೆ. ಮೂರು ಕೊಲೆಗಳನ್ನು ನಡೆಸಿದ ಕೊಲೆ ಪಾತಕ ಯಾವ ಗಳಿಗೆಯಲ್ಲಿ ಯಾರಿಗೆ ಏನು ಮಾಡಿಬಿಡುವನೋ ಎಂದು ಹೆದರಿ, ನಾನು ಹಂಸಿಕೆಯನ್ನು ಆತನ ಕೊಠಡಿಯಿಂದ ಕಳುಹಿಸಿ, ಈಗ ಬಾಗಿಲಿನಲ್ಲಿ ಪಹರೆ ಇಟ್ಟಿದ್ದೇನೆ.''

ಸರದಾರ ಸತ್ಯಾಶ್ರಯನಿಗೆ ಚಂಡವರ್ಮನ ಮಾತನ್ನು ಕೇಳಿ ಕೋಪ ಇಮ್ಮಡಿಸಿತು. '' ಸರದಾರರೇ, ನೀವು ಮಾಡಿರುವ ಏರ್ಪಾಡು ಸರಿ. ರಾಜಧಾನಿಯಿಂದ ನ್ಯಾಯಾಧೀಶರು ಬರುವ ತನಕ ನಾವು ಬಹಳ ಎಚ್ಚರಿಕೆ ಯಿಂದ ಆತನನ್ನು ಹತೋಟಿಯಲ್ಲಿಡಬೇಕು.'' ಎಂದು ಆವೇಶದಿಂದ ನುಡಿ ದನು. ತನ್ನ ಅನುಸಂಧಾನ ಮತ್ತೊಮ್ಮೆ ಫಲಿಸಿತೆಂದು ತಿಳಿದು ವೃದ್ಧ ಸರದಾರನಿಗೆ ನಮಸ್ಕರಿಸಿ ತೆರಳಿದನು ಚಂಡವರ್ಮ ಮಹಾರಾಜ.

ಸತ್ಯಾಶ್ರಯನಿಗೆ ಚಂಡವರ್ಮನ ಹೇಳಿಕೆಯಲ್ಲಿ ಕೆಲವು ಲೋಪಗಳಿರು ವುದು ತಿಳಿಯಲಿಲ್ಲ. ಅಸ್ವಾಸ್ಥ್ಯಾವಸ್ಥೆಯಾಗಿ ಬಿದ್ದಿದ್ದವನು ಎದ್ದು ಮೊಣಕಾ ಲೂರಿ ನಮಸ್ಕಾರ ಮಾಡುವುದಾದರೂ ಹೇಗೆ ? ಅಥವಾ ತಲೆತಪ್ಪಿಸಿಕೊಂಡು ಓಡುವವನು ಇಬ್ಬರನ್ನು ಕೊಂಡು ಮತ್ತೆ ಕ್ಷಮೆ ಬೇಡಲು ಹಿಂದಕ್ಕೆ ಬರುವು ದಾದರೂ ಹೇಗೆ ? ಅಥವಾ ತನ್ನ ಪ್ರಾಣಕ್ಕೇ ಅಪಾಯ ಸಂಭವಿಸಿರುವಾಗ ಪ್ರಭೆಯೊಡನೆ ಬಂದ ದಾರಿ ಹಿಡಿಯುವುದಾದರೂ ಹೇಗೆ ? ಆದರೆ ಸತ್ಯವು

"ಲೋಪವಿದೆ" ಎಂದು ಹೇಳಿತು. ಸಂಶಯವು "ನಿಜವಿದೆ" ಎಂದು ಸಾರಿತು. ಚಂಡವರ್ಮ ಮಹಾರಾಜರ ಬಾಯಿಂದ ಬಂದ ಮೇಲೆ ನಂಬಲೇಬೇಕೆಂಬ ಕುರುಡು ನಂಬಿಕೆಯೊಂದು ಕಾಡಿತು. **ಸಂಶಯ ಕುರುಡು ನಂಬಿಕೆಗಳ ಸಮಾರಂಭದಲ್ಲಿ ಸತ್ಯದ ಸವಿಸೊಲ್ಲು ಸವೆದು ಬಿತ್ತು !**

---

## ೧೮. ವಿಚಾರಣೆ

### ಸತ್ಯಾಶ್ರಯನು ಅಭೇದ ದುರ್ಗಕ್ಕೆ

ಸುಮಾರು ಹತ್ತು ದಿನಗಳು ಕಳೆದುವು. ರಾಜಮಹೇಂದ್ರದಿಂದ ಪರಿವಾರ ಸಹಿತ ನ್ಯಾಯಾಧೀಶನು ಬಿಜಯಮಾಡಿದನು. ರಾಜಮಹೇಂದ್ರದಲ್ಲಿ ರಾಜಕಾರಣ ಆರಂಭವಾದ ಮೇಲೆ ಸತ್ಯಾಶ್ರಯನ ವಿಷಯದಲ್ಲಿ ಹೊಸ ಮಂತ್ರಿಮಂಡಲಕ್ಕೆ ನಂಬಿಕೆ ಇರಲಿಲ್ಲವೆಂಬುದನ್ನು ವಾಚಕರು ಹಿಂದೆಯೇ ತಿಳಿದಿದ್ದಾರೆ. ನ್ಯಾಯಾಧೀಶನೂ ಸಹ ಹೊಸ ಮಂತ್ರಿಮಂಡಲದವರಲ್ಲೊಬ್ಬನಾಗಿದ್ದನು. ಆದುದರಿಂದ ಸತ್ಯಾಶ್ರಯನ ವಿಷಯದಲ್ಲಿ ಆತನಿಗೆ ವಿಶ್ವಾಸವಿರಲಿಲ್ಲ. ಆದಾಗ್ಗ್ಯೂ ಸತ್ಯಾಶ್ರಯನೂ, ಚಂಡವರ್ಮನೂ ನ್ಯಾಯಾಧೀಶನಿಗಾಗಿ ಯೋಗ್ಯವಾದ ವ್ಯವಸ್ಥೆ ಮಾಡಿದ್ದರು. ನ್ಯಾಯಾಧೀಶನ ಆಗಮನ ವೀರಧವಳನಿಗೆ ಗೊತ್ತಾಯಿತು. ತನ್ನ ಮೇಲೆ ಬಂದಿರುವ ಪ್ರಾಣಹತ್ಯಾ ದೋಷವನ್ನು ನಿಗ್ರಹಿಸಿಕೊಳ್ಳಲು ಒಂದು ಸಂದರ್ಭ ಸಿಕ್ಕಿತೆಂದು ಆನಂದಪಟ್ಟನು ವೀರಧವಳ! ಪಾಪ, ನ್ಯಾಯಾಧೀಶನು ಧರ್ಮದೇವತೆಯಲ್ಲವೆಂಬುದನ್ನು ವೀರಧವಳನು ಅರಿತಿರಲಿಲ್ಲ. ನ್ಯಾಯಾಧೀಶನೂ ಒಬ್ಬ ಮನುಷ್ಯ. ಆತನು ಮನುಷ್ಯನ ನ್ಯಾಯವನ್ನು ವಿಮರ್ಶಿಸಬಲ್ಲನು. ಸಾಕ್ಷಿಗಳಂತೆ ವಿಮರ್ಶೆ. ಸಾಕ್ಷ್ಯ ಸುಳ್ಳಾದರೆ ವಿಮರ್ಶೆಯೂ ಸುಳ್ಳಾದೀತು. ವಿಮರ್ಶೆ ಸುಳ್ಳಾದ ಮೇಲೆ ತೀರ್ಮಾನವೂ ಸುಳ್ಳಾದೀತು. ನ್ಯಾಯವಾದಿಗಳ ಕೈಯಲ್ಲಿದೆ ನ್ಯಾಯಾಧೀಶನ ನ್ಯಾಯ! ಕಂಡ, ಕೇಳಿದ, ಎಲ್ಲೆಯನ್ನು ಮೀರಲು ಸಾಧ್ಯವಿಲ್ಲ ನ್ಯಾಯಾಧೀಶನಿಗೆ. **ಕಾಣದ ಕೇಳದ ಕಡೆ ಮರೆಯಲ್ಲಿದೆ ಧರ್ಮ. ಮರೆಯಲ್ಲಿರುವ ಧರ್ಮವನ್ನು ಮರೆತುಬಿಡುವುದು ಮನುಷ್ಯನ ಸ್ವಭಾವ.**

ಮೂರನೆಯ ದಿನ ನ್ಯಾಯ ಮಂಟಪವು ಸಿದ್ಧವಾಯಿತು. ನ್ಯಾಯಾಧೀಶನಿಗಾಗಿ ಒಂದು ಉಚ್ಚಾಸನ. ಉಚ್ಚಾಸನದ ಬಳಿ ರಾಜದಂಡ,

ಉಚ್ಚಾಸನದ ಮುಂದೆ ಕೆಳಭಾಗದಲ್ಲಿ ನ್ಯಾಯಾಧೀಶನ ಸಹಾಯಾರ್ಥವಾಗಿ ನಾಲ್ವರು ಪಂಡಿತರಿಗೆ ಉಚಿತಾಸನಗಳು. ಈ ಉಚಿತಾಸನಗಳ ಒಂದು ಪಕ್ಕಕ್ಕೆ ನ್ಯಾಯವಾದಿಗಳಿಗೆ ಸ್ಥಾನ. ಅದರ ಮಗ್ಗುಲಲ್ಲಿ ಸಾಕ್ಷಿಗಳಿಗೆ ಸತ್ಯದ ಕಟ್ಟೆ! ಅದರ ಮುಂಭಾಗದಲ್ಲಿಯೇ ಅಪರಾಧಿಗೆ ಸ್ಥಾನ. ನ್ಯಾಯವಾದಿಗಳಿಗೆ ಎದುರಾಗಿ ಮತ್ತೊಂದು ಪಕ್ಕದಲ್ಲಿ ಪ್ರಾಂತ ಸುಬೇದಾರರು ಮೊದಲಾದ ಆಡಳಿತಗಾರರಿಗೆ ಸ್ಥಳ. ನ್ಯಾಯಾಧೀಶನ ಎಡಭಾಗಕ್ಕೆ ಸ್ವಲ್ಪ ದೂರದಲ್ಲಿ ಸರದಾರರಿಗೆ ಪೀಠಗಳು.

ನ್ಯಾಯಾಧೀಶನು ಗಂಭೀರಭಾವದಿಂದ ರಾಜದಂಡ ಸಹಿತ ನ್ಯಾಯಮಂಟಪವನ್ನು ಪ್ರವೇಶಿಸಿದನು. ನ್ಯಾಯಮಂಟಪದಲ್ಲಿ ಸೇರಿದಿದ್ದ ಸಮಸ್ತ ಜನರೂ ಎದ್ದು ನಿಂತು ನ್ಯಾಯಾಧೀಶನಿಗೆ ಗೌರವ ಸಲ್ಲಿಸಿದರು. ನ್ಯಾಯಾಧೀಶನು ಯೋಗ್ಯರೀತಿಯಲ್ಲಿ ಗೌರವವನ್ನು ಸ್ವೀಕರಿಸಿ ಉಚ್ಚಾಸನದಲ್ಲಿ ಕುಳಿತನು. ಪ್ರತೀಹಾರಿಯು ರಾಜದಂಡವನ್ನು ನ್ಯಾಯಾಧೀಶನ ಪಕ್ಕದಲ್ಲಿರಿಸಿದನು. ಸಮಸ್ತರೂ ತಮ್ಮ ತಮ್ಮ ಪೀಠಗಳಲ್ಲಿ ಕುಳಿತರು.

ಅಂದಿನ ವಿಚಾರಣೆಗಾಗಿ ಚಂಡವರ್ಮನು ಸಕಲ ಸಲಕರಣೆಗಳನ್ನೂ ಅನುಕೂಲವಾಗಿ ಸಿದ್ಧಪಡಿಸಿದ್ದನು. ಹತ್ತು ಜನರನ್ನು ಸಾಕ್ಷ್ಯ ನುಡಿಯಲು ಸಿದ್ಧಪಡಿಸಿದ್ದನು. ತನ್ನ ಪರವಾಗಿ ವಾದಿಸಲು ತಕ್ಕ ನ್ಯಾಯವಾದಿಯನ್ನು ಗೊತ್ತುಮಾಡಿದ್ದನು. ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ನ್ಯಾಯವಿಚಾರಣೆ ಆರಂಭವಾಯಿತು. "ವೀರಧವಳ", "ವೀರಧವಳ" ಎಂದು ಕೂಗಿದನು ಪ್ರತೀಹಾರಿ. ನಾಲ್ಕು ಮಂದಿ ಸಶಸ್ತ್ರ ಯೋಧರು ವೀರಧವಳನ ಸಮೇತ ನ್ಯಾಯಮಂಟಪವನ್ನು ಪ್ರವೇಶಿಸಿದರು. ವೀರಧವಳನ ಸೊಂಟಕ್ಕೆ ಸರಪಣಿಯನ್ನು ಕಟ್ಟಿ ಒಬ್ಬ ಸಶಸ್ತ್ರ ಯೋಧನು ಹಿಡಿದಿದ್ದನು. ವೀರಧವಳನ ತಲೆಯ ಗಾಯಕ್ಕೆ ಕಟ್ಟಿದ್ದ ಬಟ್ಟೆ ಹಾಗೆಯೇ ಇತ್ತು. ವೀರಧವಳನು ಅಪರಾಧಿಯ ಸ್ಥಾನದಲ್ಲಿ ನಿಂತನು. ಆತನ ಮುಖದ ಮೇಲೆ ಒಂದು ಬಗೆಯ ಅಮರ ತೇಜಸ್ಸು ಕಂಡಿತು. ಅವನು ಒಳಗಡೆ ಬಂದ ಕೂಡಲೇ ಎಲ್ಲರೂ ಅವನನ್ನೇ ದುರದುರನೆ ನೋಡುತ್ತಿದ್ದರು.

ತರುವಾಯ ಪ್ರತೀಹಾರಿಯು ಹತ್ತು ಸಾಕ್ಷಿಗಳ ಹೆಸರುಗಳನ್ನೂ ಒಂದೊಂದಾಗಿ, ಎರಡೆರಡು ಸಲ, ಎದೆ ತಡೆಯಿಲ್ಲದೆ ಕೂಗಿದನು. ಈ ಹತ್ತು ಸಾಕ್ಷಿಗಳ ಪೈಕಿ ವೃದ್ಧ ರಣರಾಗ, ಅರಣ್ಯರಕ್ಷಕ, ಒಬ್ಬ ಪಹರೆಯವನು, ಒಬ್ಬ ಸೇವಕ—ಇವರುಗಳಿದ್ದರು. ಸಾಕ್ಷಿಗಳೆಲ್ಲರೂ ಒಬ್ಬೊಬ್ಬರಾಗಿ ನ್ಯಾಯ ಮಂಟಪಕ್ಕೆ ಬಂದು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು.

ಆಗ ಚಂಡವರ್ಮನ ಕಡೆಯ ನ್ಯಾಯವಾದಿಯು ಎದ್ದು ನ್ಯಾಯಾಧೀಶನನ್ನು ಸಂಬೋಧಿಸಿ—"ಧರ್ಮಪ್ರಭು, ವೀರಧವಳನ ಮೇಲೆ ಕೊಲೆಯ ಆಪಾದನೆ ಬಂದಿದೆ. ಈ ಆಪಾದನೆಯನ್ನು ಪುಷ್ಟೀಕರಿಸುವುದು ನನ್ನ ಕರ್ತವ್ಯ. ಕರ್ತವ್ಯಕ್ಕೆ ಲೋಪಬಾರದಂತೆ ನಾನು ಧರ್ಮ ಪ್ರಭುಗಳ ಸಮಕ್ಷ, ವೀರ ಸರದಾರರ ಸಮಕ್ಷ, ಸತ್ಯ ಪ್ರಜೆಗಳ ಸಮಕ್ಷ, ಸಾಕ್ಷಿಗಳ ಸಹಾಯದಿಂದ ನನ್ನ ಇಂದಿನ ಕಾರ್ಯವನ್ನು ನೆರವೇರಿಸಬೇಕಾಗಿದೆ." ಎಂದು ಒಕ್ಕಣಿಕೆ ಹೇಳಿ, ವೀರಧವಳನ ಮೇಲಣ ಕೊಲೆಯ ಆಪಾದನೆಯನ್ನು ಚಾಚೂ ತಪ್ಪದೆ ಬಿತ್ತರಿಸಿದನು. ಸಾಕ್ಷಿಗಳನ್ನು ಒಬ್ಬೊಬ್ಬರನ್ನಾಗಿ ನಿರ್ದೇಶಿಸಿ ಲೆಕ್ಕಣಿಕೆಯಂತೆ ಧರ್ಮಪ್ರಭುಗಳ ಮುಂದೆ ಪ್ರಶ್ನೋತ್ತರ ರೂಪದಲ್ಲಿ ರೂಪುಗೊಳಿಸಿದನು.

ನ್ಯಾಯಾಧೀಶನು ತರುವಾಯ ವೀರಧವಳನ ಕಡೆ ತಿರುಗಿ—"ವೀರಧವಳ, ನಿನ್ನ ಮೇಲೆ ಕೊಲೆಯ ಆಪಾದನೆ ಬಂದಿದೆ. ಈ ಆಪಾದನೆಯನ್ನು ನ್ಯಾಯವಾದಿಗಳು ಪುಷ್ಟೀಕರಿಸಿ ವಾದಿಸಿದ್ದಾರೆ. ಸಾಕ್ಷಿಗಳ ಸಹಾಯದಿಂದ ಆಪಾದನೆಯನ್ನು ರೂಪುಗೊಳಿಸಿದ್ದಾರೆ. ನಿನ್ನ ಪ್ರತಿವಾದವಿದ್ದರೆ ತಿಳಿಸು. ಸತ್ಯವನ್ನು ಹೇಳು." ಎಂದು ಸೂಚಿಸಿದನು.

ವೀರಧವಳನಿಗೆ ನ್ಯಾಯಮಂಟಪದ ಕಾರ್ಯಕಲಾಪ ಒಂದು ಕಪಟ ನಾಟಕದಂತೆ ತೋರಿತು. ಈ ನಾಟಕದಲ್ಲಿ ಆತನದು ಅಪರಾಧಿ ಪಾತ್ರ. ಸೂತ್ರದಾರ ಚಂಡವರ್ಮನಿಗೆ ಸರಿಯಾಗಿ ಸಮಾರಂಭ ನಡೆದಿದೆ. ಸತ್ಯಕ್ಕೆ ಸೂತ್ರದಾರನು ಯಾರು? ಈ ನಾಟಕದಲ್ಲಿ ತಾನು ಸೇರಿಲ್ಲವೆಂಬುದು ಗೊತ್ತು ವೀರಧವಳನಿಗೆ. ಆದಾಗ್ಯೂ ನಾಟಕ ನಡೆಯುತ್ತಿದೆ. ಆತನ ಪಾತ್ರಕ್ಕೆ ಹೊಣೆಯಾರು? ನಾಟಕದ ಸೂತ್ರದಾರನು ಆತನಿಗೆ ಹೊಣೆಯಲ್ಲ. ಆತನಿಗೆ

ಹೊಣೆಗಾರನು ಪರಮಾತ್ಮನೊಬ್ಬನೇ! ಪರಮಾತ್ಮನೊಬ್ಬನೇ ತನಗೆ ಸೂತ್ರ ದಾರನೆಂದು ನಿರ್ಧರಿಸಿ ನ್ಯಾಯಾಧೀಶನಿಗೆ ನಮಸ್ಕರಿಸಿದನು. "ಧರ್ಮ ರಕ್ಷಕ, ಸತ್ಯವನ್ನೇ ಹೇಳುತ್ತೇನೆ" ಎಂದು ತಿಳಿಸಿ, ಅದುವರೆಗೆ ನಡೆದ ಸತ್ಯಾಂಶಗಳನ್ನೆಲ್ಲ ಸಾವಧಾನದಿಂದ ವಿವರಿಸಿದನು. ಆದರೇನು! ಸುಳ್ಳು ಸಾಕ್ಷಿಗಳ ಹೇಳಿಕೆಯಂತೆ ಸತ್ಯವನ್ನು ಹುಡುಕುತ್ತಿರುವ ಸಮಾರಂಭದಲ್ಲಿ ವೀರ ಧವಳನ ಮಾತಿಗೆ ಬೆಲೆ ದೊರೆಯಲಿಲ್ಲ. ನ್ಯಾಯಾಧೀಶನು ನ್ಯಾಯಮಂಟಪ ದಲ್ಲಿ ಕಂಡು ಕೇಳಿದ ವೃತ್ತಾಂತಗಳನ್ನು ತೂಕ ಮಾಡಿ ವೀರಧವಳನು ಅಪ ರಾಧಿಯೆಂದು ತೀರ್ಮಾನ ಮಾಡಿದನು. "ಕೊಲೆಗೆ ಶಿಕ್ಷೆ ಮರಣದಂಡನೆ" ಎಂದು ಸಾರಿ ಉಚ್ಚಾಸನದಿಂದ ಎದ್ದು ತೆರಳಿದರು. ನ್ಯಾಯ ಮಂಟಪವು ಬರಿದಾಯಿತು.

ಚಂಡವರ್ಮನಿಗೆ—ಅಂದಿನ ನ್ಯಾಯನಾಟಕದ ಸೂತ್ರದಾರನಿಗೆ—ನಾಟಕವು ತನ್ನ ಕೋರಿಕೆಯಂತೆ ಮುಕ್ತಾಯಗೊಂಡುದಕ್ಕಾಗಿ ಮಹದಾನಂದ ವಾಯಿತೆಂದು ಹೇಳಬೇಕಾಗಿಲ್ಲ. ಆದರೆ, ಜಗಜ್ಜನಕನು ಹಿಡಿದಿರುವ ಸೂತ್ರದ ಮಹತ್ತ್ವವನ್ನು ಮರೆತನು ಚಂಡವರ್ಮ. ಅಂದಿನ ನ್ಯಾಯ ಸಮಾರಂಭಕ್ಕೆ ಸಿಂಹಗುಹೆಯ ಸಹೋದರರು ತಮ್ಮ ಗೂಢಚಾರನನ್ನು ಕಳುಹಿಸಿದ್ದರು. ಈ ನ್ಯಾಯ ಸಮಾರಂಭದಿಂದ ಸಿಂಹಗುಹೆಯ ಸಹೋದರರಿಗೆ ಆಗಬೇಕಾಗಿದ್ದ ಫಲ ವೇನು? ವೀರಧವಳನ ಮರಣದಿಂದ ಅವರಿಗೆ ಸಲ್ಲಬೇಕಾಗಿದ್ದ ಪುರುಷಾರ್ಥವಾ ದರೂ ಏನು? ಅವರಿಗೂ ಒಂದು ಫಲವಿತ್ತು. ಒಂದು ಪುರುಷಾರ್ಥವೂ ಇತ್ತು!

ಅಜಿಂಕ್ಯ ದುರ್ಗದಲ್ಲಿ ನಡೆದ ಸಮಾಚಾರವನ್ನು ಗೂಢಚಾರನಿಂದ ತಿಳಿದು ಈ ಸಹೋದರರಿಗೆ ಆನಂದವಾಯಿತು. ಎರಡು ಸಲ ತಮಗೆ ಸಿಕ್ಕಿದ ಸುಂದರವಸ್ತುವನ್ನು ಕಿತ್ತುಕೊಂಡ ಶತ್ರು ವೀರಧವಳನು ಇಷ್ಟು ಬೇಗ ನಾಶವಾಗುತ್ತಾನೆಂದು ತಿಳಿದು, ಅವರ ಕೆಟ್ಟ ಮನಸ್ಸಿಗೆ ಸ್ವಲ್ಪ ಶಾಂತಿ ಯಾಯಿತು. ಸರದಾರ ಸತ್ಯಾಶ್ರಯನ ಕುವರಿಯನ್ನು ಹೇಗಾದರೂ ಮಾಡಿ ತಾವು ತಂದುಕೊಂಡರೆ, ಆ ವಿವಾಹ ಬಾಂಧವ್ಯದಿಂದ ತಮ್ಮಿಬ್ಬರ ಘನತೆ ಹೆಚ್ಚುತ್ತದೆಂದು ಅವರು ಭಾವಿಸಿದರು. ಅವರಿಗೆ ಸಾಮದಾನಗಳ ಶಾಂತ ಮಾರ್ಗ ಬೇಕಿರಲಿಲ್ಲ. ಭೇದದಂಡಗಳ ಕ್ರೂರ ಮಾರ್ಗವನ್ನು ಅವರು ಹಿಡಿ

ದಿದ್ದುದರಿಂದ ಮತ್ತೆ ಅದೇ ಮಾರ್ಗದಲ್ಲಿ ತಮ್ಮ ಯೋಚನೆಗಳನ್ನು ಬೆಳಸಿದರು. ಲಲಿತಪ್ರಭೆಯನ್ನು ದುರ್ಜಾತಸಿಂಹನು ವರಿಸಿದ ಮೇಲೆ ತನಗೆ ಬೇರೆ ಯಾರಾದರೂ ಸರದಾರರು ಕರೆದು ಹೆಣ್ಣು ಕೊಡುತ್ತಾರೆಂದು ಭಾವಿಸಿದನು ಉನ್ಮತ್ತಸಿಂಹ! ತಮ್ಮ ಯೋಚನೆಯನ್ನು ಭೇದದಂಡಗಳ ಮಾರ್ಗದಲ್ಲಿ ಬಿಡುವುದಕ್ಕೆ ಮೊದಲು ಗೂಢಚಾರನಿಂದ ಮತ್ತೆ ಕೆಲವು ವಿವರಗಳನ್ನು ತಿಳಿಯಬೇಕೆನಿಸಿತು ಅವರಿಗೆ. ಆಗ ಗೂಢಚಾರನನ್ನು ಕರೆಯಿಸಿ "ಏನಯ್ಯಾ, ಚಂಡವರ್ಮ ಮಹಾರಾಜರ ವಿಚಾರ ನೀನು ಹೇಳಲೇ ಇಲ್ಲವಲ್ಲಾ!" ಎಂದನು ಉನ್ಮತ್ತಸಿಂಹ.

"ಸರದಾರ ಮಹಾಶಯ, ಚಂಡವರ್ಮನು ನ್ಯಾಯಾಧೀಶನ ಎದುರಿಗೆ ಶಪಥ ಮಾಡಿ ತಾನು ನುಡಿಯುವುದೆಲ್ಲವೂ ಸತ್ಯವೆಂದು ನುಡಿದನು. ಆದರೆ, ವೀರಧವಳನು ಪ್ರತಿಭಟಿಸಿ, ಆತನು ಹೇಳುವುದೆಲ್ಲ ಸುಳ್ಳು ಎಂದು ವಾದಿಸಿದನು. ಆದರೆ ನ್ಯಾಯಾಧೀಶನು ಚಂಡವರ್ಮನು ಹೇಳುವುದೆಲ್ಲ ಸುಳ್ಳು ಎಂಬ ವಾದವನ್ನು ಒಪ್ಪಲಿಲ್ಲ. ಬೆಂಕಿ ಇಲ್ಲದೆ ಹೊಗೆ ಹೊರಡುವುದಿಲ್ಲವೆಂದು ನ್ಯಾಯಾಧೀಶನು ಇತ್ಯರ್ಥ ಮಾಡಿದನು."

ಈ ಮಾತನ್ನು ಕೇಳಿದ ಮೇಲೆ ದುರ್ಜಾತಸಿಂಹನು ತಮ್ಮನನ್ನು ನೋಡಿ—"ಉನ್ಮತ್ತ, ಇದೀಗ ಸರಿ. ಇದರಿಂದ ನಮಗೆ ಬಹಳ ಪ್ರಯೋಜನವಿದೆ." ಎಂದು ತಿಳಿಸಿದನು.

ಮತ್ತೆ ಉನ್ಮತ್ತಸಿಂಹನು ಗೂಢಚಾರನನ್ನು ಉದ್ದೇಶಿಸಿ—"ಅಯ್ಯಾ, ಇನ್ನೇನು ಸಮಾಚಾರ?" ಎಂದು ಕೇಳಿದನು.

"ಇನ್ನೊಂದು ಸಮಾಚಾರ ಯಾವುದೆಂದರೆ, ಅಜಿಂಕ್ಯ ದುರ್ಗದ ರಕ್ಷಕನಾದ ರಣರಾಗನ ಸಾಕ್ಷಿ,"

ಆತನು ಹೇಳಿದುದೇನು?"

"ಆತನೊಬ್ಬ ವಿಚಿತ್ರ ಪುರುಷ. ನಾನು ಅವನನ್ನು ಅನೇಕ ಸಲ ಅರಣ್ಯದಲ್ಲಿ ನಡುರಾತ್ರಿಯಲ್ಲಿ ನೋಡಿದ್ದೇನೆ! ತುಂಬ ದಿನಗಳ ಹಿಂದೆ ಆ ಸ್ಫಟಿಕ ಸ್ತಂಭದ ಹತ್ತಿರ ನೋಡಿದ್ದೇನೆ. ಆ ಸ್ತಂಭದ ಹತ್ತಿರ ಆತನು ಬಂದು ಬಹಳ ಹೊತ್ತು ಪ್ರಾರ್ಥನೆ ಮಾಡುತ್ತಾನೆ ನಡುರಾತ್ರಿಯಲ್ಲಿ! ಆತನ ಸಾಕ್ಷಿ ಚಂಡಶರ್ಮನಿಗೆ ಅನುಕೂಲವಾಗಿಯೇ ಇತ್ತು."

"ಆ ಮೇಲೆ ?"

"ಆ ಮೇಲೆ ಅರಣ್ಯರಕ್ಷಕನ ಸಾಕ್ಷಿ. ಆತನು ರಾಜಕುಮಾರ ಚಂದ್ರಸೇನನ ಬಟ್ಟೆಗಳನ್ನು ತಂದು ನ್ಯಾಯಾಧೀಶನಿಗೆ ತೋರಿಸಿದನು. ಅಲ್ಲಿಗೆ ನ್ಯಾಯ ವಿಚಾರಣೆ ಮುಗಿದು ನ್ಯಾಯಾಧೀಶನು ತೀರ್ಮಾನ ಹೇಳಿದನು."

"ಸರದಾರ ಸತ್ಯಾಶ್ರಯನು ಯಾವ ಮಾತನ್ನೂ ಆಡಲಿಲ್ಲವೇ ?"

"ಇಲ್ಲ. ಅವರನ್ನು ಯಾರೂ ಕೇಳಲಿಲ್ಲ."

"ಸರಿ. ನ್ಯಾಯಾಧೀಶನು ಅಜಿಂಕ್ಯ ದುರ್ಗದಲ್ಲಿಯೇ ಇರುವನೇನು?"

"ಇಲ್ಲ. ಸಭೆ ಮುಗಿದ ಮೇಲೆ ಆ ಸಾಯಂಕಾಲವೇ ನ್ಯಾಯಾಧೀಶನು ಪರಿವಾರ ಸಹಿತ ರಾಜಮಹೇಂದ್ರಕ್ಕೆ ತೆರಳಿದನು. ಧರ್ಮಗುರು ಮತ್ತು ಪ್ರಾಂತ ಸುಬೇದಾರನು ಇವರಿಬ್ಬರೂ ವೀರಧವಳನ ಶಿಕ್ಷೆಯನ್ನು ನೆರವೇರಿಸುವ ತನಕ ದುರ್ಗದಲ್ಲಿಯೇ ಇರುತ್ತಾರೆ. ಮತ್ತೊಂದು ವಿಚಾರ ತಮಗೆ ಹೇಳಬೇಕಾಗಿದೆ. ಸತ್ಯಾಶ್ರಯ ಸರದಾರರು ಲಲಿತಪ್ರಭೆ ಮತ್ತು ತಮ್ಮ ಪರಿವಾರ ಸಹಿತ ಅಭೇದ ದುರ್ಗಕ್ಕೆ ಹೋದರು."

"ಅಭೇದ ದುರ್ಗಕ್ಕೆ !"

"ಹೌದು. ಸರದಾರ ವೀರರಾಜರು ಅವರನ್ನು ಕರೆದುಕೊಂಡು ಹೋದರು."

ಈ ವಿಚಾರಗಳನ್ನು ಒಂದೊಂದಾಗಿ ಗೂಢಚಾರನಿಂದ ತಿಳಿದ ಮೇಲೆ ಗೂಢಚಾರನನ್ನು ಕಳುಹಿಸಿ ಸಿಂಹಗುಹೆಯ ಸಹೋದರರು ತಮ್ಮಲ್ಲಿ ತಾವೇ ಯೋಚಿಸತೊಡಗಿದರು. ಬಹಳ ಹೊತ್ತು ಯೋಚಿಸಿದ ಮೇಲೆ ಉನ್ಮತ್ತ ಸಿಂಹನು ಅಣ್ಣನನ್ನು ಕುರಿತು "ಅಣ್ಣ, ನಾವು ಮಾಡುವುದೇನಿದ್ದರೂ ಈ ಮಧ್ಯರಾತ್ರಿಯೊಳಗಾಗಿ ಮಾಡಿ ಮುಗಿಸಬೇಕು. ಅಜಿಂಕ್ಯ ದುರ್ಗದ ರಕ್ಷಕನಾದ ರಣರಾಗನನ್ನು ನಮ್ಮ ಕೈವಶ ಮಾಡಿಕೊಂಡರೆ ಸರದಾರ ಚಂಡ ವರ್ಮನೂ ನಮಗೆ ಸುಲಭವಾಗಿ ಸಿಕ್ಕುತ್ತಾನೆ." ಎಂದು ಸೂಚಿಸಿದನು.

ದುರ್ಜಾತಸಿಂಹನು ತಮ್ಮನ ಸೂಚನೆಯನ್ನು ಒಪ್ಪಿದನು. ಒಂದು ಕ್ಷಣವೂ ತಡಮಾಡದೆ ಗೂಢಚಾರನನ್ನು ಮತ್ತೆ ಕರೆಯಿಸಿ ರಣರಾಗನನ್ನು ಮಧ್ಯರಾತ್ರಿಯೊಳಗಾಗಿ ಹಿಡಿದುತರಬೇಕೆಂದು ಆಜ್ಞಾಪಿಸಿದನು. ಹತ್ತು ಜನ ಶಸ್ತ್ರಧಾರಿಗಳಾದ ಸವಾರರೊಡನೆ ಗೂಢಚಾರನು ಹೊರಟನು ಸ್ಫಟಿಕ ಸ್ತಂಭದ ಅರಣ್ಯ ಮಾರ್ಗವಾಗಿ!

ರಣರಾಗನನ್ನು ಹಿಡಿದುತರುವುದು ಗೂಢಚಾರನಿಗೆ ಕಷ್ಟವಾಗಲಿಲ್ಲ. ಸ್ಫಟಿಕ ಸ್ತಂಭದ ಮುಂದೆ ಯಥಾಪ್ರಕಾರ ನಡುರಾತ್ರಿ ವ್ಯಾಕುಲನಾಗಿ ಕುಳಿತು ಪ್ರಾಯಶ್ಚಿತ್ತಕ್ಕಾಗಿ ಪ್ರಣಾಮಗಳನ್ನು ಅರ್ಪಿಸುತ್ತಿರುವಾಗಲೇ ಸವಾರರು ಆತನನ್ನು ಹಿಡಿದರು. ರಣರಾಗನ ಪರಿಸ್ಥಿತಿಯಂತೂ ಕನಿಕರ ಹುಟ್ಟಿಸಿತು. ಮರುಮಾತನ್ನಾಡದೆ ಸಿಂಹಗುಹೆಗೆ ಸವಾರರೊಡನೆ ನಡೆತಂದನು ದುರ್ಗ ರಕ್ಷಕ ವೃದ್ಧ ರಣರಾಗ! ಸಿಂಹಗುಹೆಯಲ್ಲಿ ದುರ್ಜಾತಸಿಂಹನನ್ನೂ ಉನ್ಮತ್ತ ಸಿಂಹನನ್ನೂ ಕಂಡು ವ್ಯಾಕುಲವಾಯಿತು ದುರ್ಗರಕ್ಷಕನಿಗೆ! ಒಂದು ಗಂಟೆಯ ಕಾಲ ಅವನೊಡನೆ ಸಿಂಹಗುಹೆಯ ಸರದಾರರು ಮಾತನಾಡಿದರು. ತರು ವಾಯ ಗೂಢಚಾರನು ಸವಾರರೊಡನೆ ಹೊರಟು, ರಣರಾಗನನ್ನು ಅದೇ ಸ್ಫಟಿಕ ಸ್ತಂಭದ ಬಳಿ ಬಿಟ್ಟು ಹೋದನು.

## ೧೯. ಆಳು, ಅರಸು

### ಇಷ್ಟು ಸಾಹಸ ಮಾಡಿಯೂ ನನಗೆ ಏನು ಫಲ ?

ರಣರಾಗ ಪ್ರಾತಃಕಾಲ ಹಾಸಿಗೆಯಿಂದ ಎದ್ದನು. ನಡುರಾತ್ರಿ ನಡೆದ ಪ್ರಸಂಗವನ್ನು ನೆನೆದುಕೊಂಡರೆ ನಡುಕ ಬರುತ್ತಿತ್ತು ಆತನಿಗೆ ! ಯಾವ ಗಳಿಗೆಯಲ್ಲಿ ಯಾವ ಪ್ರಾರಬ್ಧವೋ ಎಂಬುದು ಆತನಿಗೆ ಚೆನ್ನಾಗಿ ಅರಿವಾಗಿತ್ತು. ನಿನ್ನೆ ಇದ್ದ ಬಲ ಇಂದು ಇರಲಿಲ್ಲ. ನ್ಯಾಯದಲ್ಲಿ ತನ್ನ ಸ್ವಾಮಿಯು ಗೆದ್ದರೂ ಫಲವಿಲ್ಲವೆಂಬುದನ್ನು ತಿಳಿದನು ರಣರಾಗ. ಕೂಡಲೇ ವಿಜ್ಜಲನನ್ನು ಕರೆದು—" ವಿಜ್ಜಲ, ಬೇಗ ಹೋಗಿ ಚಂಡವರ್ಮ ಮಹಾರಾಜರನ್ನು ಕರೆದುಕೊಂಡು ಬಾ." ಎಂದನು. ವಿಜ್ಜಲನಿಗೆ ಇದನ್ನು ಕೇಳಿ ಆಶ್ಚರ್ಯವುಂಟಾಯಿತು. " ಏನು, ತಮಗೆ ಮೈ ಸ್ವಸ್ಥವಿಲ್ಲವೇ ?" ಎಂದು ವಿಚಾರಿಸಿದನು ವಿಜ್ಜಲ. " ಅದೆಲ್ಲ ನಿನಗೇಕೆ ! ಮೈಗೆ ಸ್ವಸ್ಥವಿಲ್ಲವೋ, ಮನಸ್ಸಿಗೆ ಸ್ವಸ್ಥವಿಲ್ಲವೋ, ಹೋಗು. ಹೇಳಿದ ಕೆಲಸವನ್ನು ಮಾಡು." ಎಂದು ಅಬ್ಬರಿಸಿದನು ರಣರಾಗ. ವಿಜ್ಜಲನು ಕೂಡಲೇ ಹೋಗಿ ಚಂಡವರ್ಮನನ್ನು ಕಂಡು ರಣರಾಗನ ಕೋರಿಕೆಯನ್ನು ತಿಳಿಸಿದನು. ಚಂಡವರ್ಮನಿಗೂ ಸಹ ರಣರಾಗನು ಹೇಳಿಕಳುಹಿಸಿದುದನ್ನು ತಿಳಿದು ಆಶ್ಚರ್ಯವುಂಟಾಯಿತು. ಆದಾಗ್ಗೂ ಏನು ಪ್ರಮಾದವೋ ತಿಳಿಯಬೇಕೆಂದು ಬಗೆದು ಚಂಡವರ್ಮನು ಬರುವುದಾಗಿ ತಿಳಿಸಿದನು. ಏನು ಪ್ರಮಾದವೋ ತಿಳಿಯಬೇಕೆನ್ನಿಸಿತು ವಿಜ್ಜಲನಿಗೂ ಸಹ !

ವಿಜ್ಜಲನು ರಣರಾಗನ ಬಳಿಗೆ ಬಂದು ಚಂಡವರ್ಮ ಮಹಾರಾಜರು ಬರುವರೆಂದು ತಿಳಿಸಿದನು. " ಏನಾದರೂ ಕೆಲಸವಿದ್ದರೆ ಹೇಳಿ ; ಮಾಡುತ್ತೇನೆ." ಎಂದು ಕೇಳಿದನು. ರಣರಾಗನಿಗೆ ವಿಜ್ಜಲನು ಅಲ್ಲಿರುವುದು ಬೇಕಾಗಿರಲಿಲ್ಲ.. " ಇನ್ನು ನೀನು ಹೋಗಬಾರದೆ ! ಮಹಾರಾಯ, ಹೋಗು." ಎಂದು ರಣರಾಗನು ಬೇಸರದಿಂದ ಹೇಳಿದುದನ್ನು ನೋಡಿ

ವಿಜ್ಜಲನ ಕುತೂಹಲದ ಜೊತೆಗೆ ಸಂಶಯವೂ ಸೇರಿಕೊಂಡಿತು. ಹೋಗು ತ್ತೇನೆಂದು ರಣರಂಗನಿಗೆ ತಿಳಿಸಿ, ಬಾಗಿಲ ಬಳಿಗೆ ಬಂದು, ಬಾಗಿಲು ಮುಚ್ಚಿ, ಹೊರಗೆ ಹೋಗುವುದಕ್ಕೆ ಬದಲಾಗಿ ಮೆಲ್ಲಗೆ ಅಂಬೆಗಾಲಿಡುತ್ತ ರಣರಾಗನ ಮಂಚದ ಕೆಳಗಡೆ ಬಂದು ಸೇರಿದನು. ಯೋಚನೆಯ ವಾಹಿನಿಯಲ್ಲಿ ತೇಲುತ್ತಿದ್ದ ರಣರಾಗನು ಆತನು ಹೋದುದನ್ನಾಗಲಿ, ಬಂದುದನ್ನಾಗಿ ಗಮನಿಸಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ಸರದಾರ ಚಂಡವರ್ಮನು ರಣರಾಗನ ಕೊಠಡಿಗೆ ಬಂದನು. ರಣರಾಗನ ಪರಿಸ್ಥಿತಿಯನ್ನು ನೋಡಿ ಬೆಚ್ಚಿದನು ಚಂಡವರ್ಮ. ಕಾಂತಿಹೀನನಾಗಿ ಜೀವಶವದಂತೆ ಕಂಡನು ರಣರಾಗ. ಚಂಡವರ್ಮನು ಬಂದು ಮುಂದೆ ನಿಂತಾಗಲೂ ರಣರಾಗನಲ್ಲಿ ಹಿಂದಿನ ಚೇತನ ಬರಲಿಲ್ಲ. ಮೊದಲು ಬಾಗಿಲ ಕಡೆ ನೋಡಿ ಕ್ಷೀಣಸ್ವರದಿಂದ— "ಪ್ರಭು, ವೀರಧವಳನ ವಿಚಾರವಾಗಿ ಮಾತನಾಡಬೇಕಾಗಿದೆ." ಎಂದನು.

"ಏನು, ವೀರಧವಳನ ವಿಚಾರವೇ! ಇನ್ನೆಲ್ಲಿಯ ವೀರಧವಳ; ಆತನ ಜೀವಮಾನ ಮುಗಿದಂತೆಯೇ!"

"ಇಲ್ಲ, ಮಹಾರಾಜ, ಇಲ್ಲ. ಬಹು ವಿಚಿತ್ರ ಸಮಾಚಾರವನ್ನು ನಾನು ಈಗ ತಮಗೆ ತಿಳಿಸಬೇಕಾಗಿದೆ."

"ಏನಾಯಿತು! ಬೇಗ ಹೇಳು." ಎಂದು ಭಯಚಕಿತನಾಗಿ ನುಡಿ ದನು ಚಂಡವರ್ಮ.

"ಮಹಾರಾಜ, ನಾನು ನಿದ್ರೆಯಲ್ಲಿ ನಡುರಾತ್ರಿಯಲ್ಲಿ ನನ್ನ ಕೊಠಡಿಯ ಬಾಗಿಲನ್ನು ತೆರೆದು ಗೊತ್ತುಗುರಿಯಿಲ್ಲದೆ ನಡೆದು ಹೋಗುವುದುಂಟಷ್ಟೆ. ಈ ಕೆಟ್ಟ ಜಾಡ್ಯ ನನಗೆ ತಪ್ಪಲಿಲ್ಲ. ನಿನ್ನೆ ರಾತ್ರಿ ಎಂದಿನಂತೆ ನಿದ್ರೆಯಲ್ಲಿ ಬಾಗಿಲು ತೆರೆದು ಪ್ರಜ್ಞೆಯಿಲ್ಲದೆ ಹೊರಟೆನು. ಸ್ಫಟಿಕ ಸ್ತಂಭದ ಬಳಿಗೆ ನನ್ನ ದಾರಿ ತಂದು ಬಿಟ್ಟಿತು. ಅಲ್ಲಿಗೆ ಹೋಗಿ ಎಚ್ಚೆತ್ತು ನೋಡಿದಾಗ ನನ್ನ ಸುತ್ತಲೂ ಶಸ್ತ್ರಧಾರಿಗಳಾದ ಸವಾರರು ನಿಂತಿದ್ದರು. ನನಗೆ ಭಯ

ವಾಯಿತು. ನನ್ನನ್ನು ಕುದುರೆಯ ಮೇಲೆ ಕುಳ್ಳಿರಿಸಿ ಸಿಂಹಗುಹೆಗೆ ಕರೆದು ಕೊಂಡು ಹೋದರು ಅವರು !

" ಏನು, ಸಿಂಹಗುಹೆಗೆ ! "

" ಹೌದು, ಮಹಾರಾಜ, ಸಿಂಹಗುಹೆಗೆ ! ಸಿಂಹಸಹೋದರರ ಸಮಕ್ಷಕ್ಕೆ."

" ಕಾರಣ ? "

" ಒಂದು ದೊಡ್ಡ ಕಾರಣ, ಮಹಾರಾಜ, ದೊಡ್ಡ ಕಾರಣ ! ನಿನ್ನೆ ನಮ್ಮ ದುರ್ಗದಲ್ಲಿ ನಡೆದ ನ್ಯಾಯ ಮಂಟಪದ ವರ್ತಮಾನಗಳೆಲ್ಲ ಆ ಸಿಂಹ ಸಹೋದರರಿಗೆ ಗೊತ್ತಿದೆ. ನನ್ನ ಸಾಕ್ಷಿ ಮತ್ತು ನಿಮ್ಮ ಸಾಕ್ಷಿ ಎಲ್ಲವೂ ಗೊತ್ತಿದೆ ಅವರಿಗೆ. ಇದೆಲ್ಲ ಸುಳ್ಳು ಎಂದು ಹೇಳಲು ಅವರು ಸಿದ್ಧರಾಗಿದ್ದಾರೆ. ದುರ್ಜಾತಸಿಂಹನು ಲಲಿತಪ್ರಭೆಯನ್ನು ಲಗ್ನವಾಗಲು ಶಪಥ ಮಾಡಿದ್ದಾನೆ."

" ಏನು, ಇಷ್ಟು ಪ್ರಯತ್ನ ಮಾಡಿಯೂ ಕೂಡ ಲಲಿತಪ್ರಭೆ—"

"—ನಿಮಗೆ ಪ್ರಾಪ್ತವಾಗುವಂತಿಲ್ಲ, ಮಹಾರಾಜ ! ಅಷ್ಟೇ ಅಲ್ಲ. ಲಲಿತ ಪ್ರಭೆಯನ್ನು ದುರ್ಜಾತಸಿಂಹನಿಗೆ ಕೊಡುವಂತೆ ನೀವು ಶಿಫಾರಸು ಮಾಡ ಬೇಕಂತೆ ! "

" ಅದಕ್ಕೆ ನಾನು ಒಪ್ಪದಿದ್ದರೆ ? "

" ಒಪ್ಪದಿದ್ದರೆ, ಆ ಸಹೋದರರಿಬ್ಬರೂ ಇಲ್ಲಿಗೆ ಬಂದು ನಿನ್ನೆ ಆಗಿರುವ ನ್ಯಾಯ ನಿರ್ಣಯಗಳೆಲ್ಲವೂ ಶುದ್ಧ ಸುಳ್ಳೆಂದು ಪ್ರಚಾರ ಮಾಡುತ್ತಾರಂತೆ. ಚಂದ್ರಸೇನನನ್ನು ತಂದು ತೋರಿಸುತ್ತಾರಂತೆ. ತಮ್ಮ ಹತ್ತಿರ ಇರುವ ಸಾಧನ ಗಳನ್ನು ಉಪಯೋಗಿಸಿಕೊಂಡು ನಿಮ್ಮನ್ನು ಅವಮಾನಕ್ಕೆ ಗುರಿಮಾಡುತ್ತಾ ರಂತೆ. " ಲಲಿತಪ್ರಭೆ ನಿನ್ನ ಪತ್ನಿಯಾಗುತ್ತಾಳೆ." ಎಂದು ನೀವು ನಿಮ್ಮ ಸ್ವಂತ ಬರವಣಿಗೆಯಿಂದ ಇಂದು ಸೂರ್ಯಾಸ್ತಮಯವಾದ ತಕ್ಷಣ ಒಂದು

ವಾಗ್ದಾನ ಪತ್ರ ಬರೆದು ಕಳುಹಿಸಬೇಕಂತೆ. ಮುಂದೆ ಇಪ್ಪತ್ತೊಂದು ದಿನಗಳ ತರುವಾಯ ಲಲಿತಪ್ರಭೆಯನ್ನು ಅವರ ಸ್ವಾಧೀನ ಮಾಡಬೇಕಂತೆ."

"ಇಷ್ಟು ಸಾಹಸ ಮಾಡಿಯೂ ನನಗೆ ಏನು ಫಲ ?"

"ಮಹಾರಾಜ, ನೀವು ಹೀಗೆ ನಿರಾಶರಾಗಬೇಡಿ. ಇಪ್ಪತ್ತೊಂದು ದಿನಗಳ ಅವಧಿಯಲ್ಲಿ ಎಷ್ಟೊಂದು ವ್ಯತ್ಯಾಸವಾಗಬಹುದು!"

"ರಣರಾಗ, ನೀನು ಹೇಳುವುದೆಲ್ಲ ಸರಿ. ಆ ದುಷ್ಟರು ಹೇಗೆ ಮೋಸ ಮಾಡಿ ಲಾಭ ಪಡೆಯುತ್ತಿದ್ದಾರೆ ನೋಡಿದೆಯಾ! ಇರಲಿ, ನೀನು ಹೇಳಿದ ಹಾಗೆ ಮಾಡೋಣ. ಈ ದಿನದವರೆಗೆ ಆಯಾ ಪ್ರಸಂಗಕ್ಕೆ ಅನುಸಾರವಾಗಿ ನಾವಿಬ್ಬರೂ ಏಕೀಭವಿಸಿ ನಡೆದುಕೊಂಡಿದ್ದೇವೆ. ಮುಂದೂ ಹಾಗೆಯೇ ಮಾಡಬೇಕು. ಸಿಂಹಗುಹೆಗೆ ಕಳುಹಿಸುವಂಥ ವಿಶ್ವಾಸಪಾತ್ರರಾದ ಸೇವಕ ನೀನಲ್ಲದೆ ಬೇರೆ ಯಾರಿದ್ದಾರೆ ?"

"ನನಗಂತೂ ಏಳಲೂ ಸಹ ಸಾಧ್ಯವಿಲ್ಲ, ಮಹಾರಾಜ. ನಿಮ್ಮ ವಾಗ್ದಾನ ಲೇಖನವನ್ನು ತೆಗೆದುಕೊಂಡು ಹೋಗಲು ಆ ಸಿಂಹಸಹೋದರರು ತಮ್ಮ ಗೂಢಚಾರನನ್ನು ಸೂರ್ಯಾಸ್ತಮಯವಾದ ಮೇಲೆ ಇಲ್ಲಿಗೆ ಕಳುಹಿಸಬಹುದು."

ಇಲ್ಲಿಗೆ ಆಳಿನ—ಅರಸಿನ—ಸಂಭಾಷಣೆ ಮುಗಿಯಿತು. ಸರದಾರ ಚಂಡವರ್ಮನು ದುರ್ಗರಕ್ಷಕನ ಕೊಠಡಿಯಿಂದ ಹೊರಟು ಹೋದನು. ಮಂಚದ ಕೆಳಗೆ ಅವಿತುಕೊಂಡಿದ್ದ ವಿಜ್ಜಲನೂ ಸಹ ಮೆಲ್ಲಗೆ ಮೆತ್ತಗೆ ಕೊಠಡಿಯಿಂದ ಈಚೆಗೆ ಬಂದನು. ವಿಜ್ಜಲನ ಆನಂದಕ್ಕೆ ಪಾರವಿರಲಿಲ್ಲ. ವೀರಧವಳನು ನಿರ್ದೋಷಿ; ಚಂದ್ರಸೇನನು ಸಿಂಹಗುಹೆಯಲ್ಲಿ ಸೆರೆಯಲ್ಲಿದ್ದಾನೆ ಎಂಬ ಮಾತು ಅಮೃತಪ್ರಾಯವಾಗಿದ್ದುವು ವಿಜ್ಜಲನಿಗೆ! ಈ ನಡುರಾತ್ರಿಯೊಳಗಾಗಿ ಏನಾದರೂ ಸಾಹಸ ಮಾಡಿದರೆ ಸರಿ ; ಇಲ್ಲವಾದರೆ ವೀರಧವಳನನ್ನು ಉಳಿಸುವಹಾಗಿಲ್ಲವೆಂದು ನಿರ್ಧರಿಸಿ, ತನ್ನ ಕೊಠಡಿಗೆ ಬಂದು ಬಹಳ ಹೊತ್ತು ಯೋಚಿಸಿದನು.

ತಾನು ಕೇಳಿದುದನ್ನೆಲ್ಲ ಧರ್ಮಗುರು ಮತ್ತು ಸುಬೇದಾರ ಇವರುಗಳಿಗೆ ಹೇಳಿ, ನಿಜಾಂಶವು ಹೊರಪಡುವ ತನಕ ವೀರಧವಳನನ್ನು ಶೂಲಕ್ಕೇರಿಸದೆ ತಡೆದಿರುವಂತೆ ಬೇಡೋಣವೇ ಎನ್ನಿಸಿತು ಮೊದಲು. ಆದರೆ, ಅವರು ಚಂಡವರ್ಮನ ಮಾತಿನಂತೆ ನಡೆಯುವರೇ ವಿನಾ ತನ್ನ ಮಾತಿಗೆ ಬೆಲೆ ಕೊಡ ಲಾರರೆಂದು ಭಾವಿಸಿದನು ; ಅಥವಾ, ಅಭೇದ ದುರ್ಗದಲ್ಲಿರುವ ಸತ್ಯಾಶ್ರಯ ನಿಗೆ ತಿಳಿಸೋಣವೇ ಎನ್ನಿಸಿತು. ಆದರೆ, ಹಾಗೆ ಮಾಡಲು ಕಾಲವಿಲ್ಲ. ಹೀಗೆ ತುಂಬ ಯೋಚನೆ ಮಾಡುತ್ತಿರುವಲ್ಲಿ, ವೃದ್ಧ ಚಾರಣನು ಅಲ್ಲಿಗೆ ಬಂದನು. ವಿಜ್ಜಲನು ತಾನು ಕೇಳಿರುವ ಸಮಾಚಾರಗಳನ್ನೆಲ್ಲ ಆತನಿಗೆ ತಿಳಿಸಿದನು. ವೀರಧವಳನ ವಿಚಾರದಲ್ಲಿ ವೃದ್ಧ ಚಾರಣನಿಗೆ ಸಂಪೂರ್ಣ ಸಹಾನುಭೂತಿಯಿತ್ತು. ವೀರಧವಳನು ಗಾಯಗೊಂಡು ಚಿಕಿತ್ಸೆ ಪಡೆಯು ತ್ತಿದ್ದಾಗ, ಈತನು ಎಷ್ಟು ಆಸಕ್ತಿಯಿಂದ ಆತನ ಶುಶ್ರೂಷೆ ಮಾಡಿದ್ದನೆಂಬು ದನ್ನು ವಾಚಕರು ಬಲ್ಲರು. ಇಂದು ಈ ಇಬ್ಬರು ಆಪ್ತರೂ ಒಂದು ಕಡೆ ಸೇರಿ ವೀರಧವಳನ ಹಾನಿವೃದ್ಧಿಗಳ ಸಮಾಲೋಚನೆಯಲ್ಲಿ ತೊಡಗಿದ್ದಾರೆ. ವೀರಧವಳನನ್ನು ರಕ್ಷಿಸುವ ಬಗೆ ಹೇಗೆಂದು ಅವರು ಬಹಳ ಕಾಲ ಚಿಂತಿಸಿ ದರು. ಸಾಮಾನ್ಯರಾದ ಅರಮನೆಯ ಪರಿವಾರದವರಿಗೆ ಸರದಾರರ ಆಗು ಹೋಗುಗಳ ಚಿಂತನೆಯೇಕೆ? ಸುಖದುಃಖಗಳು ಎಲ್ಲರಿಗೂ ಒಂದೆ. ಅಧಿಕಾರದಲ್ಲಿ ಕೀಳು, ಮೇಲು ಇರಬಹುದು. ಪ್ರಾಪಂಚಿಕ ವ್ಯವಹಾರದಲ್ಲಿ ಹಿಂದು, ಮುಂದು ಇರಬಹುದು. ಆದರೆ, ಸಾವುನೋವುಗಳಾಗಲಿ, ಹಸಿವು ತೃಷೆಗಳಾಗಲಿ, ಕಷ್ಟ ಕಾರ್ಪಣ್ಯಗಳಾಗಲಿ ಎಲ್ಲರಿಗೂ ಒಂದೆ. ವಾಸದ ಮನೆ ಅರಮನೆಯಾಗಿರಲಿ ಅಥವಾ ಹುಲ್ಲು ಗುಡಿಸಲಾಗಿರಲಿ, ಗಾಳಿ ಬೆಳಕು ಮಾತ್ರ ಎಲ್ಲರಿಗೂ ಒಂದೆ. ಆದುದರಿಂದ ಪರಿವಾರದವರಿಗೆ ಸರದಾರರ ಆಗುಹೋಗುಗಳನ್ನು ತಿಳಿಯಲು ಅರ್ಹತೆಯಿಲ್ಲವೇ ?

ವೃದ್ಧ ಚಾರಣನೂ, ವಿಜ್ಜಲನೂ ಬಹಳ ದೂರ ಯೋಚಿಸಿದರು. ವೃದ್ಧ ಚಾರಣನು ಗಾಯನ ಮತ್ತು ವಾದನಗಳಲ್ಲಿ ತುಂಬ ಚತುರ. ಸಾರಂಗಿ ವಾದ್ಯ ಬಾರಿಸುವುದರಲ್ಲಿ ಅವನಿಗೆ ಹೆಚ್ಚು ನೈಪುಣ್ಯತೆ. ವಯೋ ವೃದ್ಧನೂ, ಜ್ಞಾನವೃದ್ಧನೂ ಆದ ಚಾರಣನಿಗೆ ಒಂದು ಉಪಾಯ ತೋರಿತು.

ಆದನ್ನು ವಿಜ್ಜಲನಿಗೆ ತಿಳಿಸಿ ದುರ್ಗದ ದಕ್ಷಿಣ ದ್ವಾರದಲ್ಲಿ ಕಾದಿರುವಂತೆ ಹೇಳಿ ತನ್ನ ಕೊಠಡಿಗೆ ಬಂದನು. ತನ್ನ ಪೆಟ್ಟಿಗೆಯನ್ನು ತೆಗೆದು ಒಂದು ಸಣ್ಣ ಸೀಸೆಯನ್ನೂ, ಕೆಲವು ಬಟ್ಟೆಗಳನ್ನೂ ತೆಗೆದುಕೊಂಡನು. ಗೂಟಕ್ಕೆ ನೇತು ಹಾಕಿದ್ದ ತನಗೆ ಬಹಳ ಇಷ್ಟವಾದ ಸಾರಂಗಿಯನ್ನು ಎತ್ತಿಕೊಂಡನು. ಅಲ್ಲಿಂದ ಶಸ್ತ್ರಾಗಾರಕ್ಕೆ ಬಂದು ಒಂದು ಉದ್ದವಾದ ಹಗ್ಗವನ್ನೂ, ಎರಡು ಚಿಕ್ಕ ಕಠಾರಿಗಳನ್ನೂ ತೆಗೆದುಕೊಂಡನು. ಸಾಮಗ್ರಿಗಳನ್ನೆಲ್ಲ ಸರಿಯಾಗಿ ಜೋಡಿಸಿ ಕಟ್ಟಿಕೊಂಡು ದಕ್ಷಿಣ ದ್ವಾರಕ್ಕೆ ಬಂದನು. ವಿಜ್ಜಲನು ಅಲ್ಲಿ ಆತನಿಗಾಗಿ ಕಾದಿದ್ದನು. ವೃದ್ಧ ಚಾರಣನೂ ವಿಜ್ಜಲನೂ ಮಧುವನದ ಶ್ರೀಮನ್ನಾರಾಯಣನ ಸನ್ನಿಧಿಗೆ ತೆರಳಿ ಪರಮಾತ್ಮನ ಕೃಪೆಯನ್ನು ಬೇಡಿದರು. “ ಹೇ, ಚಿತ್ತಸಾಕ್ಷಿ, ನಮ್ಮ ಕರ್ತವ್ಯ ಅಗಾಧವಾಗಿದೆ. ನಮ್ಮಂಥ ಬರಡು ಮಾನವರಿಗೆ ಅಂತ್ಯವೇನೆಂಬುದನ್ನು ತಿಳಿಯಲಸಾಧ್ಯ. ದಾರಿತೋರು.” ಎಂದು ಪ್ರಾರ್ಥಿಸಿ, ಅಲ್ಲಿಂದ ಅರಣ್ಯ ಮಾರ್ಗವಾಗಿ ಸಿಂಹಗುಹೆಯ ಕಡೆಗೆ ಹೊರಟರು ದೇವರನ್ನು ನಂಬಿ !

ಅರಣ್ಯದಲ್ಲಿ ಸ್ವಲ್ಪ ದೂರ ಹೋದ ಮೇಲೆ ವೃದ್ಧ ಚಾರಣನು ತಾನು ತಂದಿದ್ದ ವಸ್ತುಗಳನ್ನು ಕೆಳಗೆ ಇಟ್ಟು, ವಿಜ್ಜಲನನ್ನು ನೋಡಿ—“ ತಮ್ಮ, ನಿನ್ನ ಬಟ್ಟೆಗಳನ್ನು ಬದಲಾಯಿಸಿಕೊ. ಈ ಬಟ್ಟೆಗಳನ್ನು ಹಾಕಿಕೊ. ಈ ಸೀಸೆಯಲ್ಲಿ ಬಣ್ಣವಿದೆ. ಇದನ್ನು ಮುಖಕ್ಕೂ, ಕೈಗಳಿಗೂ ಬಳಿದುಕೊ. ” ಎಂದನು. ವಿಜ್ಜಲನಿಗೆ ವೃದ್ಧ ಚಾರಣನ ಉದ್ದೇಶ ಗೊತ್ತಿಲ್ಲದೆ—“ಅಣ್ಣ, ಇದೇನು ? ” ಎಂದು ಕುತೂಹಲದಿಂದ ಕೇಳಿದನು. “ ಮುಂದೆ ಹೇಳುತ್ತೇನೆ. ಮೊದಲು ವೇಷ ಆಗಲಿ.” ಎಂದು ನಕ್ಕನು ವೃದ್ಧ ಚಾರಣ. ಇಬ್ಬರೂ ವೇಷ ಧರಿಸಿ, ಹಳೆಯ ವೇಷಗಳನ್ನು ಒಂದು ಸಣ್ಣ ಗಂಟುಮಾಡಿ ಯಾರಿಗೂ ಕಾಣಿಸದ ಹಾಗೆ ಒಂದು ಮರದ ಮೇಲೆ ಬಚ್ಚಿಟ್ಟರು. ಸಾರಂಗಿ ವಾದಗಾರರಾಗಿ ನಿಂತರು ಚಾರಣ ಮತ್ತು ವಿಜ್ಜಲ. “ ಜೈ ಭಗವಾನ್ ” ಎಂದು ಹೇಳಿ ಮುಂದಡಿಯಿಟ್ಟರು ಅವರು. ದಾರಿಯಲ್ಲಿ ಹೋಗುತ್ತ ವೃದ್ಧ ಚಾರಣನು ವಿಜ್ಜಲನಿಗೆ ತನ್ನ ಉದ್ದೇಶವನ್ನು ವಿವರಿಸಿದನು. “ ನೋಡು, ವಿಜ್ಜಲ, ಈ ಸಾರಂಗಿ ಸಿಂಹಗುಹೆಯ ಬೀಗದ ಕೈ. ಈ ವಾದ್ಯವನ್ನು ನಾನು ಬಾರಿಸಿದರೆ ಕಲ್ಲೆದೆಯ ಕಟುಕನ ಮನಸ್ಸಾದರೂ ಕರಗುತ್ತದೆ. ಸಿಂಹಗುಹೆಯೊಳ

ಗಡೆ ಪ್ರವೇಶ ಮಾಡಿದ ಮೇಲೆ ಯಾರಾದರೂ ಕೇಳಿದರೆ, ನಾವು ಮಾಳವದೇಶ ದವರೆಂದೂ, ಸಾರಂಗಿಯೇ ನಮ್ಮ ಜೀವನವೆಂದೂ ಹೇಳಬೇಕು. ತಿಳಿಯಿತೆ ?" ಎಂದು ವಿವರಿಸಿದನು. "ಆ ಮೇಲೆ" ಎಂದನು ವಿಜ್ಜಲ. "ಆ ಮೇಲೆ ನಿನ್ನ ಬುದ್ಧಿವಂತಿಕೆ ನಡೆಯಲಿ." ಎಂದನು ವೃದ್ಧ ಚಾರಣ. ಹೀಗೆ ತಮ್ಮಿಬ್ಬರ ಕಾರ್ಯಭಾರವನ್ನು ಪ್ರಸ್ತಾವಿಸುತ್ತ ರಾತ್ರಿ ಸುಮಾರು ಒಂಭತ್ತು ಗಂಟೆಯ ಸಮಯಕ್ಕೆ ಸಿಂಹಗುಹೆಯನ್ನು ಮುಟ್ಟಿದರು.

ಸಿಂಹಗುಹೆಯ ಪ್ರವೇಶ ದ್ವಾರದಲ್ಲಿ ಕಾವಲುಗಾರರು ಪಹರೆ ಇದ್ದು ದನ್ನು ದೂರದಿಂದಲೇ ಗಮನಿಸಿ ವೃದ್ಧ ಚಾರಣನು ತನ್ನ ಸಾರಂಗಿಯನ್ನು ಕೈಗೆ ತೆಗೆದುಕೊಂಡು ಅತ್ಯಂತ ಮಧುರವಾಗಿ ವಾದನ ಮಾಡಿದನು. ಆ ಮಂಜುಳ ಧ್ವನಿ ಪಹರೆಯವರನ್ನು ಆಕರ್ಷಿಸಿತು. ಅವರು ಇಬ್ಬರನ್ನೂ ಹತ್ತಿರ ಕರೆದು ವಿಚಾರಿಸಿದರು. ತಾವು ಮಾಳವದೇಶದವರೆಂದೂ, ಸಾರಂಗಿ ವಾದ್ಯವೇ ತಮ್ಮ ಜೀವನದ ಜೀವಾಳವೆಂದೂ ಬಗೆಬಗೆಯಾಗಿ ಮನಕರಗು ವಂತೆ ಮಾತನಾಡಿದರು. ಹೊತ್ತು ಮುಳುಗಿದುದರಿಂದ ಸಿಂಹಗುಹೆಯಲ್ಲಿ ರಾತ್ರಿಯನ್ನು ಕಳೆದು ಮುಂದೆ ಹೋಗಬೇಕೆಂದಿದ್ದೇವೆಂದು ಹೇಳಿದರು. ವೃದ್ಧ ಚಾರಣನು ಮತ್ತೆ ಸಾರಂಗಿಯನ್ನು ಮಿಡಿದು ಮೊದಲಿಗಿಂತ ಚೆನ್ನಾಗಿ ಬಾರಿಸಿದನು. ಪಹರೆಯವರು ಆ ಸಾರಂಗಿ ವಾದ್ಯಗಾರರನ್ನು ಶ್ಲಾಘಿಸುತ್ತ, ತಮ್ಮ ಸರದಾರರ ಬಳಿಗೆ ಕರೆದುಕೊಂಡು ಹೋಗಿ, ಈ ವಾದ್ಯವಾದನದ ಸವಿ ಯನ್ನು ಅವರಿಗೂ ತೋರಬೇಕೆಂದು ಗೊತ್ತುಮಾಡಿದರು. ಸಾರಂಗಿ ವಾದ್ಯ ಗಾರರಿಗೂ ಅದೇ ಬೇಕಾಗಿತ್ತು !

ವೃದ್ಧ ಚಾರಣನೂ ವಿಜ್ಜಲನೂ ತಮ್ಮ ವಾದನ ಮತ್ತು ಗಾಯನಗಳ ಚಾತುರ್ಯದಿಂದ ಸಿಂಹಗುಹೆಯ ಯಜಮಾನರನ್ನೂ ಆನಂದಪಡಿಸಿದರು. ರಾತ್ರಿ ಅವರು ಗುಹೆಯಲ್ಲಿಯೇ ಇರಬಹುದೆಂದು ಅನುಮತಿಯೂ ದೊರೆಯಿತು. ರಾತ್ರಿ ಊಟವಾದ ಮೇಲೆ ಸಂಗೀತ ಕಛೇರಿ. ವೃದ್ಧ ಚಾರಣನು ತನ್ನ ಶೃಂಗಾರರಸಪ್ರಧಾನವಾದ ಹಾಡುಗಳಿಂದ ಸಿಂಹಸಹೋದರರನ್ನು ಮೈ ಮರೆಯುವಂತೆ ಮಾಡಿದನು. ಅವರು ಮದ್ಯಪಾನದ ಅಮಲಿನಲ್ಲಿ, ಸಂಗೀತ ವಾಹಿನಿಯಲ್ಲಿ, ನಿದ್ರಾಯಾನಪಾತ್ರದಲ್ಲಿ, ಸುಖವಾಗಿ ಕಣ್ಣು

ಮುಚ್ಚಿದರು ಹಾಸಿಗೆಯ ಮೇಲೆ. ಆ ಸಮಯದಲ್ಲಿ ದುರ್ಜಾತಮಣಿಯ ಹತ್ತಿರ ಬಿದ್ದಿದ್ದ ಲಕೋಟೆಯನ್ನು ವಿಜ್ಜಲನು ಎತ್ತಿಕೊಂಡು ಓದಿನೋಡಿದನು. ಅದು ಸರದಾರ ಚಂಡವರ್ಮನು ಬರೆದು ಕಳುಹಿಸಿದ್ದ ಪ್ರತಿಜ್ಞಾ ಪತ್ರವಾಗಿತ್ತು. ಆ ಪತ್ರವನ್ನು ಇಟ್ಟುಕೊಂಡು, ದೀಪವನ್ನು ಕೈಲಿ ಹಿಡಿದು ಸೆರೆಮನೆಯ ಕಡೆಗೆ ಹೊರಟರು. ಸಿಂಹ ಸಹೋದರರಿಗೆ ಗಾಢ ನಿದ್ರೆಯಲ್ಲಿ ಬಾಹ್ಯ ಪ್ರಪಂಚದ ಅರಿವು ಆಗುವಂತಿರಲಿಲ್ಲ. ಈ ಸುವರ್ಣ ಸಂಧಿಯಲ್ಲಿ ಸುಲಭವಾಗಿ ವಿಜ್ಜಲನೂ, ವೃದ್ಧ ಚಾರಣನೂ ಸಾಗಿದರು ಸತ್ಯಶೋಧನೆಗಾಗಿ ! ನೆಲಮಾಳಿಗೆಯ ಗುಪ್ತದ್ವಾರದ ಬಳಿಗೆ ಬಂದರು. ಗುಪ್ತದ್ವಾರದಲ್ಲಿ ಮೆಲ್ಲಗೆ ಇಳಿದು ಮುಂದೆ ಹೋಗುತ್ತ ಸಾಲಾಗಿ ಕಟ್ಟಿರುವ ಚಿಕ್ಕ ಚಿಕ್ಕ ಕೊಠಡಿಗಳನ್ನು ಕಂಡರು. ಎರಡು ಬಾಗಿಲುಗಳಿಗೆ ಮಾತ್ರ ಬೀಗ ಹಾಕಿತ್ತು. ಸಮೀಪದಲ್ಲಿ ಕಾವಲುಗಾರನ ದಂಡವೂ, ಅಂಗಿಯೂ ಇದ್ದುವು. ಬೀಗದ ಕೈಗೊಂಚಲು ಹತ್ತಿರದ ಗೂಡಿನಲ್ಲಿದ್ದುದನ್ನು ನೋಡಿದರು. ಕಾವಲುಗಾರನು ಬಹುಶಃ ನೆಲಮಾಳಿಗೆಯಲ್ಲಿ ಸೆರೆಮನೆಗಳ ಮುಂದೆ ತನ್ನ ದಂಡವನ್ನೂ, ಅಂಗಿಯನ್ನೂ ಇರಿಸಿ, ದುರ್ಗದ ಕಾವಲಿನ ಗೆಳೆಯರ ಗುಂಪಿನಲ್ಲಿ ಕುಡಿತ ಕುಣಿತಗಳಲ್ಲಿ ಜಾಗರಣೆ ಮಾಡುತ್ತಿದ್ದನೆಂದು ತೋರುತ್ತದೆ ಏಕೆಂದರೆ, ಕುಡಿತ ಕುಣಿತಗಳ ತೌರೂರಾಗಿತ್ತು ಸಿಂಹಗುಹೆ. "ಯಥಾರಾಜ ತಥಾಪ್ರಜಾ" ಎಂಬ ನಾಣ್ಣುಡಿ ಸಿಂಹಗುಹೆಗೆ ಒಪ್ಪುತ್ತಿತ್ತು. ರಾಜರು ಪರನಾರೀಕುಲಕುಠಾರರಾದರೆ ರಾಜರ ಬಳಗವೂ ಅದೇ ದಾರಿ ಹಿಡಿಯುವುದರಲ್ಲಿ ಆಶ್ಚರ್ಯವೇನಿದೆ? ಅಂತು, ಕಾವಲುಗಾರನು ಅಲ್ಲಿರಲಿಲ್ಲ. ಬೀಗದ ಗೊಂಚಲನ್ನು ಗೂಡಿನಲ್ಲಿಡುವುದು ಹಿಂದಿನಿಂದ ನಡೆದುಬಂದ ವಾಡಿಕೆಯಾಗಿತ್ತು. ಅದಕ್ಕೆ ಕಾರಣವೂ ಇತ್ತು. ದುರ್ಜಾತಸಿಂಹನಾಗಲಿ, ಉನ್ಮತ್ತಸಿಂಹನಾಗಲಿ ಹೊತ್ತುಗೊತ್ತು ಅರಿಯದೆ ನೆಲಮಾಳಿಗೆಗೆ ಬರುತ್ತಿದ್ದರು. ಕಾವಲುಗಾರನು ಬೀಗದ ಗೊಂಚಲನ್ನು ತನ್ನಲ್ಲಿ ಇಟ್ಟುಕೊಂಡು ಕುಡಿತ ಕುಣಿತಗಳಿಗೆ ಹೋಗಿದ್ದರೆ, ಅವರ ದುಷ್ಟ ಪ್ರಯತ್ನಗಳಿಗೆ ಅಡ್ಡಿಯಾದೀತೆಂದು ಹಿಂದಿನಿಂದಲೂ ನಡೆದುಬಂದಿದ್ದ ವಾಡಿಕೆ ಅದು. ಹಿಂದಿನ ವಾಡಿಕೆಯಿಂದ ಇಂದಿನ ಕಾರ್ಯಕ್ಕೆ ಸೌಲಭ್ಯವುಂಟಾಯಿತು.

ವಿಜ್ಜಲನು ಕ್ಷಣಮಾತ್ರದಲ್ಲಿ ಬೀಗದ ಗೊಂಚಲನ್ನು ತೆಗೆದುಕೊಂಡು ಎರಡು ಬಾಗಿಲುಗಳನ್ನೂ ತೆರೆದನು. ಒಳಗೆ ಬಂದರಲ್ಲಿ ಚಂದ್ರಸೇನ!

ಇನ್ನೊಂದರಲ್ಲಿ ವೃದ್ಧ ಸ್ತ್ರೀ! ವಿಜ್ಜಲನೂ, ವೃದ್ಧ ಚಾರಣನೂ ಪರಮಾತ್ಮ ನನ್ನು ನೆನೆದರು ತಮ್ಮ ಕಾರ್ಯ ಇಷ್ಟು ಸುಲಭವಾಗಿ ಮುಗಿದುದಕ್ಕಾಗಿ! ಅವರಿಬ್ಬರಿಗೂ ಕಟ್ಟಿದ ಸಂಕೋಲೆಗಳನ್ನು ಕೂಡಲೇ ಬಿಚ್ಚಿದರು. ಯಾರೂ ತುಟಿ ಆಡಿಸಲಿಲ್ಲ. ಸದ್ದುಗದ್ದಲಗಳಿಗೆ ಸಮಯವೂ ಇರಲಿಲ್ಲ. ನಾಲ್ವರೂ ನೆಲಮಾಳಿಗೆಯಿಂದ ಗುಪ್ತ ದ್ವಾರದ ಮೂಲಕ ಹೊರಗೆ ಬಂದರು. ಸಿಂಹ ಗುಹೆಯ ಕೋಟೆ ಬಲವಾಗಿತ್ತು. ಮಹಾದ್ವಾರದ ಮೂಲಕ ಹೋಗಲು ಪಹರೆಯವರಿದ್ದರು. ದೇವರನ್ನು ನಂಬಿ ದಕ್ಷಿಣ ಪಾರ್ಶ್ವದ ಕೋಟೆಯ ಗೋಡೆಯ ಬಳಿಗೆ ಬಂದರು. ಏಕೆಂದರೆ ಅದು ಸ್ಮಶಾನ ಕ್ಷೇತ್ರ. ಜನಸಂಚಾರ ಕಡಮೆ. ಅಲ್ಲಿ ದಕ್ಷಿಣಾಗ್ರ ಗೋಪುರವಿತ್ತು. ಆ ಗೋಪುರಕ್ಕೆ ಹತ್ತಿ ಅದರ ಒಂದು ಕಂಭಕ್ಕೆ ತಾವು ತಂದಿದ್ದ ಹಗ್ಗವನ್ನು ಬಿಗಿದು, ಅದರ ಸಹಾಯದಿಂದ ನಾಲ್ವರೂ ಕೋಟೆಯ ಗೋಡೆಯನ್ನು ಸುಲಭವಾಗಿ ದಾಟಿದರು.

ನಡುರಾತ್ರಿಯೊಳಗಾಗಿ ಚಂದ್ರಸೇನನನ್ನು ಅಜಿಂಕ್ಯ ದುರ್ಗದ ವಧಾ ಸ್ಥಾನಕ್ಕೆತಂದು ತೋರಿಸಿ, ವೀರಧವಳನನ್ನು ಬಿಡುಗಡೆ ಮಾಡಬೇಕೆಂಬ ಆತುರ ದಿಂದ ಅವರು ಹೊರಟರು. ಕಾಡಿನಲ್ಲಿ ಕಲ್ಲು ಮುಳ್ಳುಗಳ ಅಥವಾ ಕ್ರಿಮಿ ಕೀಟಗಳ ಅಥವಾ ಜೀವಜಂತುಗಳ ಹಾವಳಿಯನ್ನು ಗಮನಿಸದೆ ನುಗ್ಗಿದರು ಅವರು.

ಅಜಿಂಕ್ಯ ದುರ್ಗದ ಬೆಳಕು ದೂರಕ್ಕೆ ಕಾಣುತ್ತಿತ್ತು. ಕೀರ್ತಿವರ್ಮ ವಸುಮತಿದೇವಿಯರ ಸ್ಮಾರಕ ಸ್ತಂಭದ ಬಳಿಗೆ ಬಂದರು. ಅಷ್ಟರಲ್ಲಿ ಹಿಂದಿ ನಿಂದ ಕುದುರೆ ಸವಾರರು ಬೆನ್ನಟ್ಟಿ ಬರುತ್ತಿರುವುದನ್ನು ನೋಡಿದರು. ಸಿಂಹ ಗುಹೆಯ ದುರ್ಜಾತಸಿಂಹನೂ, ಉನ್ಮತ್ತಸಿಂಹನೂ ಸೆರೆಮನೆಯ ಘಟನೆ ಯನ್ನು ಕಾವಲುಗಾರನಿಂದ ತಿಳಿದು ಹಿಂಬಾಲಿಸಿ ಬಂದಿದ್ದರು. ಪ್ರತಿಜ್ಞಾ ಪತ್ರವೂ ಸಹ ಇಲ್ಲದುದನ್ನು ತಿಳಿದು ದುರ್ಜಾತಸಿಂಹನಿಗೆ ದಿಕ್ಕುತೋಚ ದಂತಾಗಿತ್ತು. ಹಿಂದಟ್ಟಿ ಬರುತ್ತಿರುವವರು ಸಿಂಹ ಸಹೋದರರೆಂದು ತಿಳಿ ಯಿತು. ವಿಜ್ಜಲನು ತನ್ನ ಆಸೆ ಮಣ್ಣುಗೂಡಿತೆಂದು ನಿರ್ಧರಿಸಿದನು. ವೃದ್ಧ ವನಚರಿ ಗಟ್ಟಿಯಾಗಿ ಕೂಗಿಕೊಂಡು ನೆಲದ ಮೇಲೆ ಬಿದ್ದಳು. ಆಗ ಮಹ ದಾಶ್ಚರ್ಯವನ್ನುಂಟುಮಾಡುವ ಪ್ರಸಂಗವು ಜರುಗಿತು ವನಚರಿಯ

ಕೂಗು ವನಪ್ರದೇಶದಲ್ಲಿ ಮೊಳಗಿತು. ವನಚರಿಯ ಕೂಗನ್ನು ಕೇಳಿ ಅಲ್ಲಿಗೆ ಧಾವಿಸಿತೋ ಎಂಬಂತೆ ಸ್ಫಟಿಕ ಶಿಲಾಸ್ತಂಭದ ಎದುರಿಗೆ ವಿದ್ಯುಲ್ಲತೆಯ ಪ್ರಕಾರ ಒಂದು ಪ್ರಕಾಶವು ಕಾಣಿಸಿಕೊಂಡಿತು. ಆ ಪ್ರಕಾಶದಲ್ಲಿ ಒಬ್ಬ ಯೋಧನು ನಿಂತಿದ್ದಂತೆ ತೋರಿತು. ತಕ್ಷಣ ದುರ್ಜಾತಸಿಂಹನೂ ಉನ್ಮತ್ತಸಿಂಹನೂ ಜ್ಞಾನ ತಪ್ಪಿ ಕುದುರೆಯಿಂದ ಕೆಳಗೆ ಉರುಳಿದರು. ವೃದ್ಧ ವನಚರಿಯು ಅಷ್ಟುಹೊತ್ತಿಗೆ ಚೇತರಿಸಿಕೊಂಡು ಎದ್ದು ನಿಂತು—"ಓಡಿ, ಓಡಿ! ಇನ್ನು ಭಯವಿಲ್ಲ!" ಎಂದು ಹೇಳಿ ವನದಲ್ಲಿ ಕಣ್ಮರೆಯಾದಳು. ಅನಂತರ ವಿಜ್ಜಲನೂ, ವೃದ್ಧ ಚಾರಣನೂ ಚಂದ್ರಸೇನನೊಡನೆ ಒಂದೇ ಉಸಿರಿನಲ್ಲಿ ವಧಾಸ್ಥಾನಕ್ಕೆ ಬಂದರು. ಅಲ್ಲಿ ವಧೆಗೆ ತಕ್ಕ ಸಲಕರಣೆಗಳು ಸಿದ್ಧವಾಗಿರುವುದನ್ನೂ ಕಂಡರು. ಆದರೆ, ಯಾರೂ ದುರ್ಗದಿಂದ ಬಂದಿರ ಲಿಲ್ಲ. ಆದುದರಿಂದ, ದೂರದ ವೃಕ್ಷಸಮೂಹದಲ್ಲಿ ಒಂದು ಕಡೆ ಮರೆಯಾಗಿ ನಿಂತರು.

ಚಂದ್ರಸೇನನು ಈ ಅಘಟನಘಟನಾವಳಿಗಳಿಂದ ದಿಗ್ಭ್ರಾಂತನಾಗಿದ್ದನು. ಒಮ್ಮೆ ವಿಜ್ಜಲನ ಕಡೆ ನೋಡಿ ಸುಮ್ಮನೆ ನಿಂತನು. ಏನು ಕೇಳಬೇಕೆಂಬುದು ಅವನಿಗೆ ತಿಳಿಯಲಿಲ್ಲ. ಸಿಂಹಗುಹೆಯ ಕಾರಾಗೃಹದಲ್ಲಿ ನರಳಿ ನಾಲಗೆಯೇ ನಿಂತುಹೋಗಿತ್ತು ಆತನಿಗೆ. ಹೀಗೆ ಚಂದ್ರಸೇನನು ಮೂಕನಂತೆ ನಿಂತಿರುವುದನ್ನು ನೋಡಿ ವೃದ್ಧ ಚಾರಣನು ಹತ್ತಿರ ಬಂದು ನಮಸ್ಕರಿಸಿ ಅದುವರೆಗೆ ನಡೆದಿರುವ ಪ್ರಸಂಗಗಳನ್ನು ಸೂಕ್ಷ್ಮವಾಗಿ ವಿವರಿಸಿದನು. ಆಗ ಚಂದ್ರಸೇನನಿಗೆ ವೀರಧವಳ ಮತ್ತು ಚಂಡವರ್ಮ ಇವರುಗಳ ಕಾರ್ಯ ಕಲಾಪಗಳಲ್ಲಿ ಅಡಗಿದ್ದ ಉದ್ದೇಶ ತಿಳಿಯಿತು. ತಾನು ವೀರಧವಳನ ಮೇಲೆ ಸೇಡುಮಾಡುವುದು ತರವಲ್ಲವೆನಿಸಿತು. ವಧಾಕಾರ್ಯವನ್ನು ತಪ್ಪಿಸ ಬೇಕಾದುದು ಅಗತ್ಯವೆಂದು ನಿರ್ಧರಿಸಿದನು. ತಂದೆಯನ್ನು ನೋಡೋಣ ವೆನಿಸಿತು. ಆದರೆ ಆತುರಪಡುವಂತಿರಲಿಲ್ಲ. ತನ್ನ ಕೆಲಸ ಕಣ್ಣಮುಂದಿದೆ ಯೆಂದು ಅರಿತನು. ಈ ಕಾರ್ಯದಲ್ಲಿ ತನ್ನನ್ನು ಅಲ್ಲಿಗೆ ಕರೆದುತರುವಂತೆ ಚಾರಣನಿಗೂ, ವಿಜ್ಜಲನಿಗೂ ಪ್ರೇರೇಪಿಸಿದ ಪರಮಾತ್ಮನನ್ನು ಸ್ಮರಿಸಿದನು ಚಂದ್ರಸೇನ.

---

## ೨೦ ಸತ್ಯಪ್ರಕಾಶ

### ಮತ್ತೊಂದು ಕಾರ್ಯವೂ ನಿನ್ನ ಪಾಲಿಗೆ ಉಂಟು.

ಮಧ್ಯರಾತ್ರಿಯಾಯಿತು. ನ್ಯಾಯಾಧೀಶನು ಗೊತ್ತುಮಾಡಿದ್ದ ಕಾಲವು ಸಮೀಪಿಸಿತು. ವಧಾ ಸ್ತಂಭದ ಹತ್ತಿರ ತಲೆಯಿಂದ ಕಾಲಿನವರೆಗೂ ಕಪ್ಪು ಉಡುಪನ್ನು ಧರಿಸಿ, ಕೈಯಲ್ಲಿ ಉದ್ದವಾಗಿ ಬಿಗಿದ ನೇಣು ಹಿಡಿದು ನಿಂತನು ನೇಣುಗಾರ! ವೀರಧವಳನನ್ನು ನೇಣುಹಾಕುವ ವಿಚಾರ ಅಜಿಂಕ್ಯ ದುರ್ಗದ ಮನೆಮಾತಾಗಿತ್ತು. ಎಲ್ಲರಿಗೂ ಇದರಿಂದ ಅಪಾರ ದುಃಖವುಂಟಾಗಿತ್ತು. ಕೆಲವರು ಅವನ ಶೌರ್ಯವನ್ನೂ, ಕೆಲವರು ಅವನ ರೂಪನ್ನೂ, ಕೆಲವರು ಅವನ ಪ್ರೇಮವನ್ನೂ ಕುರಿತು ಮಾತನಾಡುತ್ತಿದ್ದರು. ವೀರಧವಳನಿಗೆ ಅಕಾಲಮೃತ್ಯು ಸಂಭವಿಸಿದುದಕ್ಕಾಗಿ ಎಲ್ಲರೂ ಚಿಂತಾಮಗ್ನರಾಗಿದ್ದರು. ಆದರೆ, ಒಬ್ಬನಿಗೆ ಮಾತ್ರ ಎಳ್ಳಷ್ಟೂ ಎದೆ ಕರಗಲಿಲ್ಲ — ಆತನೇ ಚಂಡವರ್ಮ!

ವಧಾಸ್ತಂಭದ ಸುತ್ತಲೂ ಜನ ಕಿಕ್ಕಿರಿದು ಸೇರಿದರು. ಧರ್ಮಗುರುವೂ, ಪ್ರಾಂತ ಸುಬೇದಾರನೂ ಬಂದು ನಿಂತರು. ಎಲ್ಲರ ಮುಖಗಳೂ ನಿಸ್ತೇಜಗೊಂಡಿದ್ದುವು. ಅಷ್ಟರಲ್ಲಿ ಚಂಡವರ್ಮನು ಮುಂದೆ ಬಂದು— "ಇನ್ನೇಕೆ ತಡ! ನ್ಯಾಯಾಧೀಶನು ಹೇಳಿದ ಕಾಲ ಮುಗಿಯುತ್ತ ಬರುತ್ತಿದೆ." ಎಂದು ಧರ್ಮಗುರುಗಳಿಗೆ ತಿಳಿಸಿದನು. ಪ್ರಾಂತ ಸುಬೇದಾರರ ಕಡೆ ನೋಡಿ—"ನೀವೂ ಸುಮ್ಮನೆ ನಿಂತಿದ್ದೀರಿ! ಕೆಲಸ ಆಗಲಿ." ಎಂದು ಎಚ್ಚರಿಸಿದನು. ಸ್ತಂಭಕ್ಕೆ ಹತ್ತಿ ಯಮಪಾಶವನ್ನು ಆ ಸ್ತಂಭಕ್ಕೆ ಕಟ್ಟುವಂತೆ ನೇಣುಗಾರನಿಗೆ ಆಜ್ಞಾಪಿಸಿದನು.

ಇನ್ನು ತಡಮಾಡುವಂತಿರಲಿಲ್ಲ. ಧರ್ಮಗುರುವಿನ ಕೊನೆಯ ಪ್ರಾರ್ಥನೆ ಪ್ರಾರಂಭವಾಯಿತು. ನೇಣುಗಾರನು ಕೆಂಪು ಹೂವಿನಮಾಲೆಯನ್ನು ವೀರ

ಧವಳನ ಕೊರಳಿಗೆ ಹಾಕಿದನು. ವೀರಧವಳನು ಎದೆಗುಂದದೆ ಕ್ಷಣಕಾಲ ದೇವರನ್ನು ಸ್ಮರಿಸಿ ನೆರೆದ ಜನಸಂಕುಲಕ್ಕೆ ತನ್ನ ಅಂತಿಮ ಪ್ರಾರ್ಥನೆಯನ್ನು ಘನ ಗಂಭೀರವಾಣಿಯಿಂದ ನುಡಿದನು.—" ಧರ್ಮಗುರುವೇ, ಧರ್ಮಪ್ರಿಯ ರಾದ ಮಹಾಜನರೇ, ನಾನು ಈಗ ಸಾಯಲು ಸಿದ್ಧನಾಗಿದ್ದೇನೆ. ಅದಕ್ಕೆ ಮುಂಚೆ ಎರಡು ವಾಕ್ಯಗಳನ್ನು ಹೇಳಬೇಕಾಗಿದೆ. ನಾನು ನಿಜವಾಗಿಯೂ ನಿರ್ದೋಷಿ. 'ಕಾಯಾ ವಾಚಾ ಮನಸಾ ನಾನು ಪರಿಶುದ್ಧನಾಗಿದ್ದೇನೆ. ದೀನದಯಾಳುವೂ ಅವಾಙ್ಮಾನಸಗೋಚರನೂ ಆದ ಭಗವಂತನಲ್ಲಿ ನನಗೆ ಭರವಸೆ ಇದೆ. ಅವನ ಇಚ್ಛೆ ಇದ್ದಂತಾಗಲಿ. ಒಂದು ವೇಳೆ ನಿಮ್ಮಲ್ಲಿ ಯಾರಿಗಾದರೂ ತಿಳಿಯದೆ ನನ್ನಿಂದ ಅಪರಾಧವಾಗಿದ್ದರೆ ಕ್ಷಮಿಸಿ, ಕ್ಷಮಿಸಿ !" ಎಂದು ಪ್ರಾರ್ಥಿಸಿದನು. "ಅಯ್ಯೋ ಅಯ್ಯೋ !" ಎಂದು ಸಭೆಯಲ್ಲೆಲ್ಲ ಹಾಹಾಕಾರವು ಎದ್ದಿತು. ನೇಣುಗಾರನು ಮೃತ್ಯುಪಾಶವನ್ನು ಹಿಡಿದು ನಿಂತನು ವೀರಧವಳನ ಮುಂದೆ.

ಅಷ್ಟರಲ್ಲಿ ದಕ್ಷಿಣ ದಿಕ್ಕಿನಿಂದ " ಸ್ವಲ್ಪ ನಿಲ್ಲಿ, ನಿಲ್ಲಿ ! " ಎಂದು ಅಸ್ಪಷ್ಟ ಧ್ವನಿ ಕೇಳಿಸಿತು. ಆಸೆಯಿಂದ ಎಲ್ಲರೂ ಆ ಕಡೆ ನೋಡಿದರು. ನೋಡುತ್ತಿದ್ದ ಹಾಗೆಯೇ ಮೂವರು ವ್ಯಕ್ತಿಗಳು ಹತ್ತಿರದ ವೃಕ್ಷಸಮೂಹದಿಂದ ಹೊರಟರು. ವೃದ್ಧ ಚಾರಣ, ತರುಣ ವಿಜ್ಜಲ ಮತ್ತು ಕುಮಾರ ಚಂದ್ರಸೇನ—ಇವರುಗಳನ್ನು ನೋಡಿ ಎಲ್ಲರೂ ಆನಂದದಿಂದ ಕೂಗಿದರು. ಎಲ್ಲರ ಕಣ್ಣಿನಲ್ಲಿಯೂ ವೀರಧವಳನ ಹೆಸರು ಮೊಳಗಿತು. ಕುಮಾರ ಚಂದ್ರಸೇನನು ತನ್ನ ಪೂರ್ವದ ವೈರವನ್ನು ಮರೆತು ವೀರಧವಳನನ್ನು ಆಲಿಂಗನ ಮಾಡಿದನು. ಅದನ್ನು ಕಂಡು ಎಲ್ಲರೂ ಆನಂದಾಶ್ರುಗಳನ್ನು ಸುರಿಸಿದರು. **ಉತ್ತಮರ ಆನಂದಾಶ್ರು ಅಮರರ ಅಲರ್ಮಳೆ!** ವಧಾಸ್ಥಾನವು ಕ್ಷಣಮಾತ್ರದಲ್ಲಿ ವೈಭವ ಸ್ಥಾನವಾಯಿತು.

ಚಂಡವರ್ಮನ ಕೈಕಾಲು ಬಿದ್ದುಹೋದುವು. ಹೇಗೋ ಗುಂಪಿನಿಂದ ತಪ್ಪಿಸಿಕೊಂಡು ರಣರಾಗನ ಮನೆಗೆ ಓಡಿದನು ಚಂಡವರ್ಮ! ರಣರಾಗನಿಗೆ ವಧಾ ಸ್ಥಾನದಲ್ಲಿ ನಡೆದ ಸಮಾಚಾರಗಳನ್ನು ಒಂದೊಂದಾಗಿ ತಿಳಿಸಿದನು ಚಂಡವರ್ಮನ ಹೀನ ದೀನ ಸ್ಥಿತಿಯನ್ನು ನೋಡಿ ಮರುಗಿದನು ರಣರಾಗ.

ನಿಜ. ಚಂಡವರ್ಮನಿಗಾಗಿ ಮರುಗತಕ್ಕವನು ರಣರಾಗನಲ್ಲದೆ ಬೇರೊಬ್ಬ ನಿರಲಿಲ್ಲ !

ವೀರಧವಳನು ಈಗ ಸ್ವತಂತ್ರನಾದನು. ಮುಂದೆ ಏನು ಮಾಡ ಬೇಕೆಂಬುದನ್ನು ಯೋಚಿಸಿದನು. ಅಜಿಂಕ್ಯ ದುರ್ಗವು ತನ್ನ ಪ್ರಬಲವೈರಿ ಯಾದ ಚಂಡವರ್ಮನದು. ಆದುದರಿಂದ ಒಂದು ಕ್ಷಣವೂ ಅಲ್ಲಿರುವುದು ಸರಿಯಲ್ಲವೆನಿಸಿತು. ಸರದಾರ ವೀರರಾಜರ ಅಭೇದ ದುರ್ಗಕ್ಕೆ ಹೋಗ ಬೇಕೆಂದು ಯೋಚಿಸಿದನು. ಆದರೆ, ಲಲಿತಪ್ರಭೆ ಅಲ್ಲಿಯೇ ಇರುವುದರಿಂದ ಅಲ್ಲಿಗೂ ಹೋಗುವುದು ತರವಲ್ಲವೆನಿಸಿತು. ಹೀಗೆ ಉಭಯಸಂಕಟದಲ್ಲಿ ಮುಂದುಗಾಣದೆ ನಿಂತಿದ್ದ ವೀರಧವಳನನ್ನು ಧರ್ಮಗುರುವು ನೋಡಿ,— "ಮಗು, ನಿನ್ನ ಮನಸ್ಸಿನಲ್ಲಿ ಈಗ ಸಂದೇಹ ಭಾವವಿದೆ. ನೀನು ಯೋಚಿಸು ತ್ತಿರುವುದು ಸರಿ. ನಿನಗೆ ಸಂಕೋಚವಿಲ್ಲದಿದ್ದರೆ ನನ್ನ ಜೊತೆಯಲ್ಲಿ ಆಶ್ರ ಮಕ್ಕೆ ನಡೆ. ನಾನು ನಾಳೆ ಇಲ್ಲಿಂದ ನನ್ನ ಶಿಷ್ಯರೊಡನೆ ಹೊರಡುತ್ತೇನೆ." ಎಂದನು. ತಾತ್ಕಾಲಿಕವಾಗಿ ಆಶ್ರಮದಲ್ಲಿರುವುದು ಲೇಸೆಂದು ಬಗೆದು ಧರ್ಮಗುರುವಿನ ಇಷ್ಟಂತೆ ಆಗಲೆಂದು ಒಪ್ಪಿದನು ವೀರಧವಳ.

ವಿಜ್ಜಲನು ಸಿಂಹಗುಹೆಯಿಂದ ಚಂದ್ರಸೇನನನ್ನು ಬಿಡುಗಡೆ ಮಾಡಿದ ಸಾಹಸ ಚಮತ್ಕಾರಗಳನ್ನು ಸಂಕ್ಷೇಪವಾಗಿ ವೀರಧವಳನಿಗೆ ತಿಳಿಸಿದನು. ಚಂಡವರ್ಮನ ಪ್ರತಿಜ್ಞಾಪತ್ರವನ್ನು ವೀರಧವಳನಿಗೆ ಕೊಟ್ಟನು. ಆಗ ವೀರಧವಳನು ಚಂದ್ರಸೇನನನ್ನು ನೋಡಿ—"ಕುಮಾರ, ಚಂಡವರ್ಮನು ನನ್ನ ಮೇಲೆ ಅನೇಕ ಅಪರಾಧಗಳನ್ನು ಮಾಡಿದ್ದಾನೆ. ಲಲಿತಪ್ರಭೆಯನ್ನು ದುರ್ಜಾತಸಿಂಹನಿಗೆ ವಿಕ್ರಯಿಸಲು ಹೊರಟಿದ್ದಾನೆ. ನಾವಂತೂ ಆತನಿಗೆ ಪ್ರಾಯಶ್ಚಿತ್ತವನ್ನು ಮಾಡಬೇಕು." ಎಂದು ತಿಳಿಸಿದನು. ಚಂದ್ರಸೇನ ನಿಗೂ ಸಹ ಈಗ ಸತ್ಯಾಂಶ ತಿಳಿದಂತಾಯಿತು. ಚಂಡವರ್ಮನು ಇಷ್ಟು ದುಷ್ಟನೆಂಬ ಭಾವನೆ ಆತನಿಗಿರಲಿಲ್ಲ. ವೀರಧವಳನು ಎಷ್ಟು ಗುಣಶಾಲಿ ಎಂಬುದನ್ನು ಅರಿತು—"ಧವಳ, ಇಂಥ ಚಂಡವರ್ಮನೊಡನೆ ಲಲಿತಪ್ರಭೆಯ ವಿವಾಹಕ್ಕೆ ನಾನು ಅನುಮತಿ ಕೊಟ್ಟಿದ್ದೆ. ಛೀ ! ನಾನು ಹೇಗೆ ಚಂಡವರ್ಮ ನಿಗೆ ಶಿಕ್ಷೆ ಕೊಡುತ್ತೇನೆ ಬಲ್ಲೆಯಾ !" ಎಂದು ಆವೇಶದಿಂದ ನುಡಿದನು.

ಅನಂತರ ವೀರಧವಳನು ತನ್ನ ಮುಂದಿನ ಕಾರ್ಯವನ್ನು ಸೂಚಿಸಿ—
"ಕುಮಾರ, ಈಗ ನಾನು ದುರ್ಗದಲ್ಲಿ ಕಾಲಿಡುವುದಿಲ್ಲ. ಅದಕ್ಕೆ ಕಾರಣ ನಿನಗೆ ಗೊತ್ತು. ನಾನು ಧರ್ಮಗುರುಗಳ ಜೊತೆ ಅವರ ಆಶ್ರಮಕ್ಕೆ ಹೋಗುತ್ತೇನೆ. ನೀನು ಸತ್ಯಾಶ್ರಯ ಮಹಾರಾಜರಿಗೆ ನನ್ನ ಸಪ್ರೇಮ ಸಾಷ್ಟಾಂಗ ನಮಸ್ಕಾರಗಳನ್ನು ಹೇಳು. ಅವರ ಆಜ್ಞೆಯಂತೆ ನಡೆಯಲು ಈಗಲೂ ಸಿದ್ಧನಾಗಿದ್ದೇನೆ. ನಾನು ಸಾಯುವ ಪರ್ಯಂತರ ಅವರಿಗೆ ಚಿರ ಋಣಿ ಎಂದು ಹೇಳು. ಯಾವುದೋ ಕಾರಣದಿಂದ ಈಗ ನಾನು ದೂರ ಇರಬೇಕೆಂದಿದ್ದೇನೆ. ನಾನು ನಾಳೆ ಧರ್ಮಗುರುಗಳ ಆಶ್ರಮಕ್ಕೆ ಹೋಗಿ, ಅಲ್ಲಿ ಒಂದು ದಿನವಿದ್ದು ರಾಜಧಾನಿಯಾದ ರಾಜಮಹೇಂದ್ರಕ್ಕೆ ತೆರಳುತ್ತೇನೆ. ಅಲ್ಲಿ ನೂತನ ಮಂಡಲಿಯವರನ್ನು ಕಂಡು ಇಲ್ಲಿ ನಡೆದ ದುರಾಚಾರಗಳನ್ನೆಲ್ಲ ಅವರಿಗೆ ತಿಳಿಸಿ ನ್ಯಾಯರೀತಿ ಚಂಡವರ್ಮನಿಗೆ ತಕ್ಕ ಶಿಕ್ಷೆಯುಂಟಾಗುವಂತೆ ಮಾಡುತ್ತೇನೆ. ಕುಮಾರ ನನ್ನದೊಂದು ವಿನಂತಿ."

"ಏನದು ವೀರಧವಳ?"

"ಏನೂ ಇಲ್ಲ. ನಾನು ಕೇಳುವುದು ಇಷ್ಟೆ. ಈ ಎರಡು ಮೂರು ದಿನಗಳ ಪ್ರವಾಸದಲ್ಲಿ ವಿಜ್ಜಲನು ನನ್ನ ಜೊತೆಯಲ್ಲಿರಬೇಕು."

"ಓಹೋ ಅಷ್ಟೆತಾನೆ! ಅದಕ್ಕೆ ವಿನಂತಿ ಏಕೆ? ವಿಜ್ಜಲನು ನನ್ನ ತಂದೆಯವರನ್ನು ಕಂಡು, ಏನಾದರೂ ಸಮಾಚಾರವಿದ್ದರೆ ತಿಳಿದು, ನಾಳೆ ಆಶ್ರಮದಲ್ಲಿ ನಿಮ್ಮನ್ನು ಸೇರುತ್ತಾನೆ. ಆಗಬಹುದೆ?"

"ಆಗಬಹುದು."

"ಅದೂ ಅಲ್ಲದೆ ಪ್ರವಾಸದಲ್ಲಿ ನಿನಗೆ ಯಾರಾದರೂ ಅನುಚರರು ಆವಶ್ಯಕವಾಗಿ ಬೇಕು."

"ನಿಜ ಕುಮಾರ, ಚಂಡವರ್ಮನ ಈ ಪ್ರತಿಜ್ಞಾ ಪತ್ರವನ್ನು ಜೋಪಾನವಾಗಿಡು. ಮುಂದೆ ನ್ಯಾಯಾಧೀಶನಿಗೆ ಅದನ್ನು ತೋರಿಸ ಬೇಕಾಗುತ್ತದೆ. ನಮಸ್ತೆ."

" ನಮಸ್ತೆ."

ಹೀಗೆ ಬಾಲ್ಯದಿಂದ ಒಡನಾಡಿ ಬೆಳೆದ ಯುವಕರು ಮುಂದಿನ ಕಥಾ ವಿಸ್ತರಣದಲ್ಲಿ ಒಂದೇ ಮನದಿಂದ ಮುಂದೆ ನುಗ್ಗಿದರು. ನವಯುಗದ ಪ್ರಾರಂಭಕ್ಕೆ ಇದೊಂದು ಶುಭಸೂಚನೆಯಾಯಿತು.

ಇತ್ತ ಚಂಡವರ್ಮನೂ, ರಣರಾಗನೂ ಒಂದು ಕಡೆ ಸೇರಿದರು. ಮುಂದೆ ಒದಗಬಹುದಾದ ಕಠಿಣ ಪ್ರಸಂಗಗಳನ್ನು ನಿಗ್ರಹಿಸುವ ಮಾರ್ಗ ಗಳನ್ನು ಒಂದೊಂದಾಗಿ ತೂಕ ಮಾಡಿದರು. ಕೊನೆಗೆ ಚಂಡವರ್ಮನು ರಣರಾಗನನ್ನು ನೋಡಿ—" ರಣರಾಗ, ಈ ದಿನದಿಂದ ಸತ್ಯಾಶ್ರಯನು ನನಗೆ ಪರಮ ಶತ್ರುವಾದನು. ನಮ್ಮ ಮೇಲೆ ಮುಂದೆ ಕಠಿಣ ಪ್ರಸಂಗಗಳು ಒದಗುವುದು ಖಂಡಿತ. ಆದರೆ ಭಯಪಡಬೇಕಾಗಿಲ್ಲ. ನನ್ನ ದುರ್ಗ ಬಲ ವಾಗಿದೆ. ಹತ್ತಿರ ಜನಸಂಖ್ಯೆಯೂ ಬೇಕಾದಷ್ಟಿದೆ." ಎಂದು ಸಮಾಧಾನ ಹೇಳಿದನು. ರಣರಾಗನಿಗೆ ಮುಂದಿನ ಕಷ್ಟದೆಸೆಯ ಭೀಕರ ದೃಶ್ಯ ಗೊತ್ತಾಗ ದಿರಲಿಲ್ಲ. ಆದರೆ, ದಣಿಯ ದುಃಖದಂತೆ ದುಃಖ; ದಣಿಯ ಧೈರ್ಯದಂತೆ ಧೈರ್ಯ. **ಜನರನ್ನು ನಂಬಿರುವ ದಣಿಗೆ ಮನವನ್ನು ನಂಬಿರುವ ಸೇವಕನಿದ್ದರೆ ಫಲವಿಲ್ಲ.** ರಣರಾಗ ಮನಸ್ಸಿನಲ್ಲಿದ್ದುದನ್ನು ಚಂಡವರ್ಮನಿಗೆ ಹೇಳುವ ಹಾಗಿರಲಿಲ್ಲ. ಹೇಳಿದರೂ ಸಹ ಚಂಡವರ್ಮನು ಕೇಳುವ ಹಾಗೂ ಇರಲಿಲ್ಲ.

ಚಂದ್ರಸೇನನು ಪ್ರತ್ಯಕ್ಷ ಕಾಣಿಸಿಕೊಂಡುದರಿಂದ ವೀರಧವಳನ ಬಿಡು ಗಡೆಯಾದ ಪ್ರಸಂಗವು ಅಭೇದ ದುರ್ಗಕ್ಕೆ ಮುಟ್ಟಿತು. ಸತ್ಯಾಶ್ರಯನು ಮಗನ ಆಗಮನವನ್ನೇ ನಿರೀಕ್ಷಿಸುತ್ತ ದಾರಿ ನೋಡುತ್ತಿದ್ದನು. ಸತ್ಯಾಶ್ರಯ ನಿಗೆ ಚಂದ್ರಸೇನನನ್ನು ನೋಡಿದಲ್ಲದೆ ಯಾವುದನ್ನಾಗಲಿ ನಂಬುವುದು ತರ ವಲ್ಲವೆಂದು ಭಾವಿಸಿದನು. ಸತ್ತನೆಂದು ತಿಳಿದಿದ್ದ ಮಗನು ಬದುಕಿದ್ದಾ ನೆಂದು ತಿಳಿಯುವುದು ಸುಲಭವಲ್ಲ. ತಿಳಿದರೂ ನೋಡಿದಲ್ಲದೆ ನಂಬುವುದೂ ಕಷ್ಟ. ಹೀಗೆ ನಂಬಿಯೂ ನಂಬದೆ ಅಥವಾ ನಂಬದೆಯೂ ನಂಬಿ ನಡೆ ಯುವಷ್ಟು ಸುಲಭವಾಗಿರಲಿಲ್ಲ ಚಂದ್ರಸೇನನ ಪುನರಾಗಮನ. ಅಷ್ಟ ರಲ್ಲಿ ಸತ್ಯಾಶ್ರಯನ ಕೊಠಡಿಯ ಬಾಗಿಲು ತೆರೆಯಿತು. " ತಂದೆ " ಎಂದನು

ಪುತ್ರ. "ಮಗು" ಎಂದನು ಪಿತ. ತಂದೆಮಕ್ಕಳು ಒಂದೇ ಉಸಿರಿನಲ್ಲಿ ಪರಸ್ಪರ ಆಲಿಂಗನ ಮಾಡಿದರು. ಸರದಾರ ಸತ್ಯಾಶ್ರಯನಿಗೆ ಕುಲೋದ್ಧಾರಕನಾದ ಮಗನು ಬಿಡುಗಡೆಯಾದುದಕ್ಕಿಂತ ವೀರಧವಳನು ನಿರಪರಾಧಿಯೆಂಬುದು ಪ್ರತ್ಯಕ್ಷ ಪ್ರಮಾಣವಾಗಿ ಗೊತ್ತಾದುದು ಹೆಚ್ಚು ಆನಂದವನ್ನುಂಟು ಮಾಡಿತು. ವೃದ್ಧ ಚಾರಣನನ್ನೂ, ವಿಜ್ಜಲನನ್ನೂ ಬರಮಾಡಿಕೊಂಡು ಅವರ ಉಪಕಾರವನ್ನು ಸ್ಮರಿಸಿ, ಅವರನ್ನು ಸೇವಕತನದಿಂದ ಸಮಾನ ಸ್ಥಾನಕ್ಕೆ ತಂದು ಸಹಪಂಜ್ತಿ ಭೋಜನವನ್ನು ಕೊಟ್ಟನು. ಸತ್ಯಾಶ್ರಯನ ಪ್ರೇಮಪೂರಿತ ವಚನಗಳನ್ನು ಕೇಳಿ ಅವರಿಬ್ಬರೂ ಆನಂದಪಟ್ಟರು.

ಸತ್ಯಾಶ್ರಯನು ಕುಮಾರ ಚಂದ್ರಸೇನನನ್ನು ನೋಡಿ—ಮಗು, ನಮ್ಮ ವಿಷಯದಲ್ಲಿ ಚಂಡವರ್ಮನು ಯಾವಾಗಲೂ ಬಹಳ ನೀಚತನದಿಂದ ವರ್ತಿಸಿದ್ದಾನೆ. ಲಲಿತಪ್ರಭೆಯ ಮೇಲಣ ವ್ಯಾಮೋಹದಿಂದ ವೀರಧವಳನ ಮೇಲೆ ಕೊಲೆಯ ಆಪಾದನೆಯನ್ನು ಒಡ್ಡಿದನು. ಆದರೆ, ನೀನು ಸಿಂಹಗುಹೆಯಲ್ಲಿ ಸುರಕ್ಷಿತವಾಗಿರುವುದನ್ನು ತಿಳಿದ ಮೇಲೆ, ಆತನು ತನಗೆ ಅವಮಾನವಾಗದಂತೆ ನಿನ್ನನ್ನು ಸಿಂಹಗುಹೆಯಲ್ಲಿಯೇ ಬಂಧನಲ್ಲಿಡಬೇಕೆಂಬ ಆಸೆಗಾಗಿ ದುರ್ಜಾತಸಿಂಹನಿಗೆ ಲಲಿತಪ್ರಭೆಯನ್ನು ಕೊಡುವುದಾಗಿ ಪ್ರತಿಜ್ಞಾ ಪತ್ರ ಬರೆದಿದ್ದಾನೆ. ಕೊನೆಗೆ ಆ ದುಷ್ಟನಿಂದ ನಿನ್ನ ಸಂಹಾರವೂ ನಡೆಯುತ್ತಿತ್ತೆಂಬುದರಲ್ಲಿ ಸಂದೇಹವೇ ಇಲ್ಲ." ಎಂದು ಹಿಂದಿನ ಪ್ರಸಂಗಗಳನ್ನು ನೆನೆದು ಚಿಂತಿಸಿದನು. ಚಂದ್ರಸೇನನು ಎಂದಿನಂತೆ ಆವೇಶಗೊಂಡು— "ಅಪ್ಪಾ, ಈ ಅವಮಾನಕ್ಕೋಸ್ಕರ ನಾವು ಚಂಡವರ್ಮನೊಡನೆ ಯುದ್ಧ ಮಾಡಬೇಕು" ಎಂದು ತಿಳಿಸಿದನು. ಸತ್ಯಾಶ್ರಯನು ಸದ್ಯದಲ್ಲಿ ಸರಿಯಾದ ಮಾರ್ಗ ಯಾವುದೆಂಬುದನ್ನು ಸೂಚಿಸಿದನು.

"ಕುಮಾರ, ಮೊದಲು ನನಗೂ ಹಾಗೆಯೇ ತೋರಿತು. ಆದರೆ ಚಂಡವರ್ಮನಿಗೆ ತಕ್ಕ ಪ್ರಾಯಶ್ಚಿತ್ತ ಕೊಡುವ ಕಾರ್ಯ ನಮ್ಮದಲ್ಲ. ಅದು ನ್ಯಾಯಾಧೀಶರ ಕೈಯಲ್ಲಿದೆ. ಈ ವಿಷಯದಲ್ಲಿ ನ್ಯಾಯರೀತಿ ಸಹಾಯಗಳನ್ನು ಪಡೆದು ನಮ್ಮ ಕರ್ತವ್ಯವನ್ನು ನಡೆಸಬೇಕಾಗಿದೆ. ಈ ವಿಷಯದಲ್ಲಿ ನೂತನ ಮಂತ್ರಿಮಂಡಲವು ಯುಕ್ತರೀತಿಯಲ್ಲಿ ನಡೆದುಕೊಂಡರೆ ಸರಿ. ಇಲ್ಲ

ದಿದ್ದರೆ ನಾವೇ ಎಲ್ಲ ಪ್ರಯತ್ನಗಳನ್ನೂ ನಡೆಸಬೇಕಾದೀತು. ಈಗ ರಾಜಧಾನಿಗೆ ಹೋಗುವುದಕ್ಕೂ ಅಧಿಕಾರವಿಲ್ಲ ನಮಗೆ."

"ತಂದೆ, ವೀರಧವಳನು ರಾಜಧಾನಿಗೆ ಹೋಗಿ ಅಲ್ಲಿ ನ್ಯಾಯರಕ್ಷಣೆಯನ್ನು ಪಡೆದು ಚಂಡವರ್ಮನಿಗೆ ತಕ್ಕ ಪ್ರಾಯಶ್ಚಿತ್ತ ಮಾಡುತ್ತೇನೆಂದು ಹೇಳಿದ್ದಾನೆ."

"ಸರಿ. ಆತನು ನಡೆಸತಕ್ಕ ಪ್ರಯತ್ನಗಳಿಗೆ ನಾವು ಬೆಂಬಲ ಕೊಡೋಣ. ಚಂಡವರ್ಮನ ನೀಚಕೃತ್ಯಗಳಿಗೆ ಸಾಕ್ಷಿ ಹೇಳೋಣ. ಈಗ ವೀರಧವಳನು ಎಲ್ಲಿದ್ದಾನೆ?"

"ವೀರಧವಳನು ಒಂದು ದಿನದಮಟ್ಟಿಗೆ ಧರ್ಮಗುರುಗಳ ಆಶ್ರಮ ದಲ್ಲಿ ಇದ್ದು ಅಲ್ಲಿಂದ ರಾಜಧಾನಿಗೆ ತೆರಳುವುದಾಗಿ ಹೇಳಿದ್ದಾನೆ."

"ವೀರಧವಳ ನಿರ್ದೋಷಿ. ನಾನು ಆತನ ವಿಚಾರದಲ್ಲಿ ನಿರ್ದಯನಾಗಿ ವರ್ತಿಸಬೇಕಾಯಿತು. ಆತನನ್ನು ಕಠೋರವಾಗಿ ನಿಂದಿಸಬೇಕಾಯಿತು. ನಾನು ಅಪರಾಧಿ. ಆತನ ಕ್ಷಮೆ ಕೇಳಬೇಕಾಗಿದೆ."

"ತಂದೆ, ಹಿರಿಯರಾದ ನೀವು ಕಿರಿಯರಲ್ಲಿ ಕ್ಷಮೆ ಬೇಡುವುದು ಯುಕ್ತವೆಂದು ತೋರಲಾರದು."

"ಏಕೆ? ಚಂದ್ರಸೇನ, ತಪ್ಪು ವಯಸ್ಸಿಗೆ ಸಂಬಂಧಪಡುವುದಿಲ್ಲ. ಕ್ಷಮೆಯೂ ವಯಸ್ಸಿಗೆ ಸೇರಿದುದಲ್ಲ. ತಪ್ಪು ಮಾಡಿದವನು ಕ್ಷಮೆ ಕೇಳಲೇಬೇಕು. ದೊಡ್ಡವರಾಗಲಿ, ಚಿಕ್ಕವರಾಗಲಿ ಮನೆಗೆ ಬೆಂಕಿ ಹಚ್ಚಿದರೆ ತಪ್ಪಲ್ಲವೇ ಅದು? ದೊಡ್ಡವರಾಗಲಿ, ಚಿಕ್ಕವರಾಗಲಿ ಆ ಬೆಂಕಿಯ ಮೇಲೆ ನೀರು ಸುರಿದರೆ ಆರುವುದಿಲ್ಲವೇ ಬೆಂಕಿ? ಬೆಂಕಿ ಹಚ್ಚಿ ಆರಿಸುವುದರಲ್ಲಿ ದೊಡ್ಡವರೂ ಚಿಕ್ಕವರೂ ಎಂಬ ವಯೋಭೇದವಿಲ್ಲದಿರುವಂತೆ ತಪ್ಪು ಮಾಡಿ ಕ್ಷಮೆ ಬೇಡುವುದರಲ್ಲಿಯೂ ವಯೋಭೇದವಿಲ್ಲ."

"ಅಪ್ಪಾ, ವೀರಧವಳನು ವಿಜ್ಜಲನನ್ನು ಒಂದೆರಡು ದಿನ ತನ್ನ ಜತೆಯಲ್ಲಿ ಬಿಡುವಂತೆ ವಿನಂತಿ ಮಾಡಿದ್ದಾನೆ."

"ಆಗಬಹುದು. ವೃದ್ಧ ಚಾರಣನನ್ನೂ ಕಳುಹಿಸಿಕೊಡೋಣ. ಈ ಇಬ್ಬರ ಸಾಕ್ಷ್ಯವೂ ಮಹತ್ತಿನದಾಗಿದೆ. ನಾನು ಈಗಲೇ ಅವರಿಬ್ಬರ ಸಮೇತ ಧರ್ಮಗುರುಗಳ ಆಶ್ರಮಕ್ಕೆ ಹೋಗಿಬರುತ್ತೇನೆ."

ವೀರರಾಜನ ಅಭೇದ ದುರ್ಗದಲ್ಲಿ ತಂದೆಮಕ್ಕಳು ಹೀಗೆ ಸತ್ಯಾಂಶಗಳನ್ನು ತುಲನಮಾಡಿ ವೀರಧವಳನ ಸಹಾಯಕ್ಕಾಗಿ ನಿಲ್ಲಲು ಸಿದ್ಧರಾದರು. ಸರದಾರ ಸತ್ಯಾಶ್ರಯನು ವಿಜ್ಜಲ ಮತ್ತು ವೃದ್ಧ ಚಾರಣರೊಡನೆ ವೀರಧವಳನನ್ನು ನೋಡಲು ಆಶ್ರಮಕ್ಕೆ ತೆರಳಿದನು.

ಆಶ್ರಮಕ್ಕೆ ತಲುಪಿದ ಕೂಡಲೇ ಸತ್ಯಾಶ್ರಯನು ವೀರಧವಳನ ಬಳಿಗೆ ಬಂದು, ಪಿತೃವಾತ್ಸಲ್ಯದಿಂದ ಆತನನ್ನು ತಬ್ಬಿಕೊಂಡನು. "ಧವಳ, ನನ್ನನ್ನು ಕ್ಷಮಿಸು. ನನ್ನಿಂದ ನಿನಗೆ ಬಹಳ ಅನ್ಯಾಯವಾಯಿತು" ಎಂದು ಪ್ರಲಾಪಿಸಿದನು. ವೀರಧವಳನಿಗೆ ಸತ್ಯಾಶ್ರಯನ ವಾತ್ಸಲ್ಯವನ್ನೂ, ಸತ್ಯಶೀಲತೆಯನ್ನೂ ನೋಡಿ ಪ್ರೇಮಾಶ್ರುಗಳು ಸುರಿದುವು. ಕಣ್ಣೀರನ್ನು ಒತ್ತಿಕೊಂಡು ಸತ್ಯಾಶ್ರಯನ ಪಾದಗಳನ್ನು ಮುಟ್ಟಿ ನಮಸ್ಕರಿಸಿ—"ಮಹಾರಾಜ, ನನ್ನ ನಿರ್ಜೀವ ದೇಹಕ್ಕೆ ಈ ದಿನ ಜೀವ ಬಂದಂತಾಗಿದೆ. ನನ್ನ ಮೇಲೆ ಅಮೃತ ವೃಷ್ಟಿ ಕರೆದಂತಾಗಿದೆ." ಎಂದು ಆಸಕ್ತಿಯಿಂದ ನುಡಿದನು.

"ಪ್ರಿಯ ಧವಳ, ನಿರ್ಜೀವನಾಗಿರುವ ನಾನು ನಿನಗೆ ಜೀವಕೊಡುವುದೆಂದರೇನು? ಮುದುಕನಿಂದ ಹುಡುಗರಿಗೆ ಪ್ರಾಯ ಬರುವುದಾದರೂ ಸಾಧ್ಯವಲ್ಲ."

"ಹಾಗಲ್ಲ, ಮಹಾರಾಜ. **ಹಿರಿಯರು ಮುದುಕರಾದರೂ ಹಿರಿಯರ ಸಾಹಸಕ್ಕೆ ಮುದಿತನವಿಲ್ಲ.** ಹಿರಿಯರ ಸಾಹಸವೇ ಕಿರಿಯರಿಗೆ ಮೇಲ್ಪಂಕ್ತಿ. ಇಂದಿನ ಯುವಕರು ಮುಂದೆ ಮುದುಕರಾದಾಗ, ಅವರ ಈಗಿನ ಸಾಹಸ ಮುಂದಿನ ಕಿರಿಯರಿಗೆ ಮೇಲ್ಪಂಕ್ತಿ. **ಹಿರಿಯರ ಆಶೀರ್ವಾದದಲ್ಲಿ**

ಒಂದು ದಿವ್ಯ ಶಕ್ತಿಯುಂಟು. ಆ ಶಕ್ತಿಯೇನೆಂಬುದನ್ನು ಅನುಭವ ದಿಂದ ತಿಳಿಯಬೇಕೇ ವಿನಾ ಹೇಳಿ ಕೇಳಿ ಸಾಧ್ಯವಿಲ್ಲ."

ವೀರಧವಳನ ಅನುಭವ ವಾಣಿಯನ್ನು ಕೇಳಿ ಸತ್ಯಾಶ್ರಯನಿಗೆ ಬಹಳ ಆನಂದವಾಯಿತು. "ಪ್ರಿಯ ಧವಳ, ನಿನ್ನ ಅನುಭವ, ನಿನ್ನ ಶೌರ್ಯ ಇವುಗಳು ಹಿರಿಯರಿಗೂ ಮೇಲ್ಪಂಕ್ತಿಯಾಗಿವೆ. ಈಗ ನೀನು ರಾಜಧಾನಿಗೆ ಹೋಗಿ ಎರಡು ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿದೆ. ವಿಜ್ಜಲನೂ, ವೃದ್ಧ ಚಾರಣನೂ ನಿನ್ನ ಜೊತೆಯಲ್ಲಿರುತ್ತಾರೆ." ಎಂದು ತಿಳಿಸಿದನು.

"ಎರಡು ಕಾರ್ಯಗಳು ಯಾವುವು, ಮಹಾರಾಜ ?"

"ಒಂದು ಚಂಡವರ್ಮನಿಗೆ ಪ್ರಾಯಶ್ಚಿತ್ತ. ಮತ್ತೊಂದು ರಾಜ ಕುಮಾರನಿಗೆ ಪಟ್ಟಾಭಿಷೇಕ. ಒಂದು ನಮ್ಮಿಬ್ಬರ ಸ್ವಂತ ವಿಚಾರ.' ಮತ್ತೊಂದು ಪೂರ್ವಚಾಳುಕ್ಯ ವಂಶೋದ್ಧಾರ."

ವೀರಧವಳನು ಸತ್ಯಾಶ್ರಯನ ದೃಢಸಂಕಲ್ಪವನ್ನು ತಿಳಿದು ಹಿಗ್ಗಿದನು. ಕರ್ತವ್ಯನಿಷ್ಠೆಗೆ ಕಾಲಭೇದ ಸಲ್ಲತಕ್ಕುದಲ್ಲವೆಂದು ಅರಿತನು. ಬಹಳ ಹಿಂದಿನ ವಿಚಾರವಾಗಲಿ, ಹೊಸ ವಿಚಾರವಾಗಲಿ ಕರ್ತವ್ಯದ ಗರ್ಭದಲ್ಲಿ ಕೆಡದಂತೆ ಇರುತ್ತದೆ. ಸಮಯ ಬಂದಾಗ ಕರ್ತವ್ಯವನ್ನು ಎಸಗಲೇಬೇಕು. ಸತ್ಯಾಶ್ರಯನು ಅದುವರೆಗೆ ಹಲವು ಬಗೆಯ ಎಡರುಗಳಿಗೆ ಸಿಕ್ಕಿ ಬೇಸತ್ತು ಬಳಲಿದ್ದರೂ ಸಹ ಬಹಳ ಹಿಂದಿನ ರಾಜಕಾರ್ಯವನ್ನೂ ಅಂದಿನ ಸ್ವಕಾರ್ಯವನ್ನೂ ತದೈಕ ಚಿತ್ತದಿಂದ ಗಮನಿಸಿದನು. ವೀರಧವನಿಗೆ ಇದಕ್ಕಿಂತ ಹಿರಿದಾದ ಮೇಲ್ಪಂಗ್ತಿ ಬೇಕೇ ? ಕರ್ತವ್ಯಕ್ಕೆ ಕಷ್ಟದ ಹೆದರಿಕೆ ಇಲ್ಲ; ಕಾಲದ ಕೋಟಲೆಯೂ ಇಲ್ಲ. ವೀರಧವಳನು ಸತ್ಯಾಶ್ರಯನನ್ನು ನೋಡಿ—"ಮಹಾರಾಜ, ಈ ಕೆಲಸಗಳನ್ನು ನಾನು ಸಂತೋಷದಿಂದ ಮಾಡುತ್ತೇನೆ." ಎಂದನು ಗಂಭೀರವಾಗಿ. ಸತ್ಯಾಶ್ರಯನು ವೀರಧವಳನ ಧೈರ್ಯ ಗಾಂಭೀರ್ಯಗಳನ್ನು ತಿಳಿದು ಸಂತೋಷದಿಂದ ಆತನ ಮೈದಡವಿ— "ಹೋಗು. ರಾಜಧಾನಿಯಲ್ಲಿ ವಿಶೇಷ ಕೀರ್ತಿ ಸಂಪಾದಿಸು. ಮತ್ತೊಂದು ಕಾರ್ಯವೂ ನಿನ್ನ ಪಾಲಿಗೆ ಉಂಟು."

" ಅದಾವುದು ಮಹಾರಾಜ, ಮೂರನೆಯ ಕಾರ್ಯ " ?

" ರಾಜಧಾನಿಯಲ್ಲಿ ವಿಶೇಷ ಕೀರ್ತಿ ಸಂಪಾದಿಸುವುದಕ್ಕಿಂತ ಶ್ರೇಷ್ಠವಾದ ಕಾರ್ಯ ಅದು. ಲಲಿತಪ್ರಭೆಯೊಡನೆ ನಿನ್ನ ವಿವಾಹ."

ವೀರಧವಳನು ನಾಚಿಕೆಯಿಂದ ತಲೆಬಾಗಿ—" ಮಹಾರಾಜ, ನಾನ ಇದಕ್ಕೆ ಉತ್ತರ ಕೊಡಬೇಕೇ ? " ಎಂದುಕೊಂಡನು.

ಸತ್ಯಾಶ್ರಯನಿಗೂ ಆ ಪ್ರಶ್ನೆಗೆ ಉತ್ತರ ಬೇಕಿರಲಿಲ್ಲ. ಅದೊಂದು ಕೋರಿಕೆ. ನಾಚಿಕೆಯೇ ಅದಕ್ಕೆ ಒಪ್ಪಿಗೆ. ಸತ್ಯಾಶ್ರಯನು ವೀರಧವಳನನ್ನು ಆಶೀರ್ವದಿಸಿ ಧರ್ಮಗುರುಗಳ ದರ್ಶನ ಪಡೆದು ಅಭೇದ ದುರ್ಗಕ್ಕೆ ತೆರಳಿದನು.

## ೨೧. ಸಾವುನೋವು

### ಇಬ್ಬರೂ ಏಕವಾಗಬೇಕು.

**ಚಂಡವರ್ಮನಿಗೆ** ತಲೆನೋವು! ವೃದ್ಧ ರಣರಾಗನಿಗೆ ಚಳಿಜ್ವರ! ದಣಿಯೂ, ದೂತನೂ ಬಹಳ ಹೊತ್ತು ಏಕಾಂತದಲ್ಲಿ ಮಾತನಾಡುತ್ತಿದ್ದರು. ತಲೆನೋವು ಚಳಿಜ್ವರಗಳಿಗೆ ಕಾರಣ ವಾಚಕರಿಗೆ ಗೊತ್ತು. ಅದಕ್ಕೆ ಔಷಧಿ? ಶರೀರದಿಂದ ಹುಟ್ಟಿದ ವ್ಯಾಧಿಗಳಿಗೆ ಔಷಧಿ ವೈದ್ಯರಿಗೆ ಗೊತ್ತು. ಮನಸ್ಸಿನಲ್ಲಿ ಹುಟ್ಟಿದ ವ್ಯಾಧಿಗಳಿಗೆ ಔಷಧಿ ರೋಗಿಗಳಿಗೇ ಗೊತ್ತು! **ಚಿಂತೆಗೆ ಸಂತೋಷ ಔಷಧಿ.** ಆದರೆ ಚಿಂತೆ ಚಿತೆಯಾದರೆ ಸಂತೋಷಕ್ಕೆ ಅವಕಾಶ ವಿಲ್ಲ. ಮಾನವನು ''ಮನದೊಳಗನ್ಯರಿಗಹಿತವ ನೆನೆದರೆ ತಾಂ ಮುನ್ನ ಕೆಡುವಂ" ಎಂಬ ಕವಿ ವಚನದಂತೆ ಚಂಡವರ್ಮ ರಣರಾಗರ ಪರಿಸ್ಥಿತಿ ಕೆಡುತ್ತಿತ್ತು. ಚಿಂತೆ ಚಿತೆಯಾಗಿತ್ತು. ಇನ್ನು ಸಂತೋಷವೆಲ್ಲಿಯದು! ಅಂತೂ ದಣಿಯೂ, ದೂತನೂ ಬಹಳ ಹೊತ್ತು ಏಕಾಂತದಲ್ಲಿ ಮಾತನಾಡುತ್ತಿದ್ದರು. ತಮ್ಮ ಮೇಲೆ ಬರುವ ಕಠಿಣ ಪ್ರಸಂಗದಲ್ಲಿ ಏನು ಮಾಡಬೇಕೆಂಬುದೇ ಅವರ ಮಾತು. ಆ ಸಮಯದಲ್ಲಿ ಬಾಗಿಲಿನ ಗೊಲ್ಲನು ಒಳಗೆ ಬಂದು—"ಪ್ರಭು, ಸಿಂಹಗುಹೆಯಿಂದ ಯಾರೋ ಬಂದಿದ್ದಾನೆ. ಅಪ್ಪಣೆ." ಎಂದು ತಿಳಿಸಿದನು. ಅದನ್ನು ಕೇಳಿದ ತಕ್ಷಣ ಚಂಡವರ್ಮನು ಸಭಾ ಮಂದಿರಕ್ಕೆ ಬಂದು, ''ಆತನನ್ನು ಒಳಗೆ ಬರಹೇಳು" ಎಂದು ಅಪ್ಪಣೆ ಮಾಡಿದನು.

ಸಿಂಹಗುಹೆಯ ಗೂಢಚಾರನು ಒಳಗೆ ಬಂದು ದುರ್ಜಾತಸಿಂಹನ ಮತ್ತು ಉನ್ಮತ್ತಸಿಂಹನ ಗೌರವದ ಕಾಣಿಕೆಯನ್ನು ಒಪ್ಪಿಸಿದನು. ಚಂಡವರ್ಮನಿಗೆ ಇದೊಂದು ಕುಚೋದ್ಯವೋ ಅಥವಾ ಕಲೆಯೋ ಎಂದು ಸಂಶಯವುಂಟಾಯಿತು. ಸಿಂಹಗುಹೆಯ ಚೋರ ಸರದಾರರು ನನಗೆ ಗೌರವದ ಕಾಣಿಕೆಯನ್ನು ಸಲ್ಲಿಸುವುದರಲ್ಲಿ ಅರ್ಥವಿರಲ್ಲೇಬೇಕೆಂದು ನಿರ್ಧರಿಸಿ—

" ಅಯ್ಯಾ, ನಿಮ್ಮ ಸರದಾರರೀರ್ವರೂ ಕ್ಷೇಮವೇ ? " ಎಂದು ಯೋಗ ಕ್ಷೇಮವನ್ನು ವಿಚಾರಿಸಿದನು.

" ಪ್ರಭು, ಯಜಮಾನರಿಬ್ಬರೂ ಕ್ಷೇಮದಿಂದಿದ್ದಾರೆ. ನಿಮಗೆ ಸಿಂಹ ಗುಹೆಯಲ್ಲಿ ಇದುವರೆಗೆ ನಡೆದ ಪ್ರಸಂಗಗಳನ್ನು ತಿಳಿಸುವಂತೆ ನನಗೆ ಹೇಳಿದ್ದಾರೆ."

" ನಡೆದುಹೋದ ಕೆಲಸಕ್ಕೆ ನುಡಿದು ಫಲವೇನು ? "

" ಹಾಗಲ್ಲ ಪ್ರಭು. ನುಡಿದರೆ ಫಲವುಂಟು."

ಹೀಗೆಂದು ತಿಳಿಸಿ, ಗೂಢಚಾರನು ಕುಮಾರ ಚಂದ್ರಸೇನನನ್ನು ಅರಣ್ಯದಲ್ಲಿ ಸ್ಫಟಿಕ ಶಿಲಾಸ್ತಂಭದ ಬಳಿ ಸೆರೆ ಹಿಡಿದುದು ಮೊದಲಾಗಿ ಮತ್ತೆ ಕುಮಾರ ಚಂದ್ರಸೇನನು ತಪ್ಪಿಸಿಕೊಂಡು ಸ್ಫಟಿಕ ಶಿಲಾಸ್ತಂಭದ ಬಳಿ ಸ್ವತಂತ್ರನಾದುದರವರೆಗೆ ಎಲ್ಲವನ್ನೂ ಸವಿಸ್ತಾರವಾಗಿ ಶೃತಪಡಿಸಿದನು. ಚಂಡವರ್ಮನಿಗೆ ಈ ಕಥೆ ಬೇಕಿರಲಿಲ್ಲ. ವೀರಧವಳನ ಕಥೆ ತುಂಬಿತ್ತು ಆತನ ತಲೆಯಲ್ಲಿ !

" ಅಯ್ಯಾ, ನಡೆದುಹೋದ ಕೆಲಸಕ್ಕೆ ನುಡಿದು ಫಲವೇನು ? "

" ಫಲವುಂಟು, ಪ್ರಭು. ದುರ್ಜಾತಸಿಂಹ ಮತ್ತು ಉನ್ಮತ್ತಸಿಂಹ ಇವರುಗಳು ನಿಮ್ಮ ಮೇಲೆ ಬಂದಿರುವ ಕಠಿಣ ಪ್ರಸಂಗದಲ್ಲಿ—"

"—ಏನು ? ಕಠಿಣ ಪ್ರಸಂಗದಲ್ಲಿ ಸಹಾಯ ಮಾಡುತ್ತಾರೆಂಯೋ ? "

" ಹೌದು, ಅಷ್ಟೇ ಅಲ್ಲ. ಅಜಿಂಕ್ಯ-ದುರ್ಗಕ್ಕೂ ಸಿಂಹಗುಹೆಗೂ ಇದುವರೆಗೂ ಇದ್ದ ವೈರಭಾವವು ತೊಲಗಿತೆಂದು ತಿಳಿದಿದ್ದಾರೆ. ಏಕೆಂದರೆ, ಅಜಿಂಕ್ಯ ದುರ್ಗದ ಮೇಲೆ ಬಂದಿರುವ ದೂಷಣೆಯು ಸಿಂಹಗುಹೆಯ ಮೇಲೂ ಬರಬಹುದೆಂದು ಅವರು ಭಾವಿಸಿದ್ದಾರೆ."

ಗೂಢಚಾರನ ಮಾತನ್ನು ಕೇಳಿ ಚಂಡವರ್ಮನು ಸ್ವಾಭಿಮಾನದ ಮೇರುಪರ್ವತವಾದನು. "ಇನ್ನೇನು ಗತಿ." ಎಂದು ಚಿಂತಿಸುತ್ತಿದ್ದ ಚಂಡವರ್ಮನು "ನನಗೇನು ಭಯ." ಎಂಬ ಸ್ವಾಭಿಮಾನಕ್ಕೆ ತುತ್ತಾದನು. ಸತ್ಯ ಹಿಂದಾಯಿತು; ಸ್ವಾಭಿಮಾನ ಮುಂದಾಯಿತು. ಸೋತಾಗ ಸೋತೆನೆಂದು ಒಪ್ಪಿಕೊಳ್ಳುವುದು ಸ್ವಾಭಿಮಾನದ ಲಕ್ಷಣ. "ಇನ್ನೇನು ಗತಿ." ಎಂದು ದಿಕ್ಕುಗಾಣದಿದ್ದ ಚಂಡವರ್ಮನಿಗೆ ಸಿಂಹಗುಹೆಯಲ್ಲಿ "ಗತಿ" ಕಾಣಿಸಿತು. ಆ "ಗತಿ" ಏನೇ ಆಗಿರಲಿ ಚಂಡವರ್ಮನಿಗೆ ಗೂಢಚಾರನ ಮಾತಿನಲ್ಲಿ ಅಭಿಮಾನ ಹುಟ್ಟಿತು.

"ಅಯ್ಯಾ, ನಿಮ್ಮ ಸರದಾರರ ಸಲಹೆಗಾಗಿ ಬಹಳ ಸಂತೋಷ. ಈ ದಿನ ಸಾಯಂಕಾಲ ಸ್ಫಟಿಕ ಸ್ತಂಭದ ಹತ್ತಿರ ಸೇರಿ ಶಪಥ ಮಾಡೋಣವೆಂದು ಅವರಿಗೆ ತಿಳಿಸು. ಇಬ್ಬರೂ ಏಕವಾಗಬೇಕು."

ಗೂಢಚಾರನು ಬಂದ ದಾರಿ ಹಿಡಿದು ತೆರಳಿದನು. ಚಂಡವರ್ಮನು ರಣರಾಗನ ಬಳಿಗೆ ಬಂದು ವಿಚಾರವನ್ನು ತಿಳಿಸಿದನು. ರಣರಾಗನಿಗೂ ಅದು ಒಪ್ಪಿಗೆಯಾಗಿತ್ತು. ದಾತನಿಗೆ ಸರಿಯಾದ ದೂತನಲ್ಲವೇ ರಣರಾಗ? ಆ ಸಾಯಂಕಾಲ ಸ್ಫಟಿಕ ಶಿಲಾಸ್ತಂಭದೆದುರಿಗೆ ಅಗ್ನಿ ಸಾಕ್ಷಿಯಾಗಿ ಅಜಿಂಕ್ಯ ದುರ್ಗವೂ ಸಿಂಹಗುಹೆಯೂ ಏಕವಾದುವು.

ವೀರಧವಳನು ರಾಜಮಹೇಂದ್ರಕ್ಕೆ ಬಂದು ನೇರವಾಗಿ ತನ್ನ ವಿದ್ಯಾಗುರುವಾದ ಸಲ್ಲಾಣನ ಮನೆಗೆ ಹೋದನು. ಸಲ್ಲಾಣನಿಂದಲೇ ವೀರಧವಳನಿಗೆ ಶಸ್ತ್ರ ವಿದ್ಯಾಶಿಕ್ಷಣ ದೊರೆತಿತ್ತು ಬಾಲ್ಯದಲ್ಲಿ. ವೀರಧವಳನೆಂದರೆ ಸಲ್ಲಾಣನಿಗೆ ಪಂಚಪ್ರಾಣ. ಗುರುಶಿಷ್ಯ ಭಾವವು ಕಾಲಕ್ರಮದಲ್ಲಿ ಸ್ನೇಹ ಭಾವದಲ್ಲಿ ಪರ್ಯವಸಾನ ಹೊಂದಿ ಪರಸ್ಪರ ಹಿತಚಿಂತಕರಾಗಿದ್ದರು ಅವರು. ವೀರಧವಳನು ರಾಜಮಹೇಂದ್ರಕ್ಕೆ ಬಂದ ಮೇಲೆ ಬರಿದಾಗಿದ್ದ ಸತ್ಯಾಶ್ರಯನ ಅರಮನೆಯಲ್ಲಿ ಬಿಡಾರ ಮಾಡುವುದಕ್ಕೆ ಬದಲಾಗಿ ಸಲ್ಲಾಣನ ಮನೆಗೆ ಬಂದುದರಿಂದ ಸಲ್ಲಾಣನಿಗೆ ಬಹಳ ಗೌರವ ಕೊಟ್ಟಂತಾಗಿತ್ತು. ಸತ್ಯಾ

ಶ್ರಯನ ಅರಮನೆಯಲ್ಲಿ ಬಿಡಾರ ಮಾಡುವುದು ರಾಜಕೀಯ ಕಾರಣಗಳಿಂದ ಯುಕ್ತವೂ ಆಗಿರಲಿಲ್ಲ.

ರಾಜಮಹೇಂದ್ರದಲ್ಲಿ ರಾಜಪ್ರತಿನಿಧಿ ಸರ್ಕಾರ ಸ್ಥಾಪಿತವಾಗಿತ್ತು. ರಾಜಕುಮಾರನು ಪ್ರಾಪ್ತ ವಯಸ್ಕನಾಗುವವರೆಗೆ ಆಡಳಿತ ನಡೆಸತಕ್ಕ ವ್ಯವಸ್ಥೆಗೆ ರಾಜಪ್ರತಿನಿಧಿ ಸರ್ಕಾರವೆಂದು ಹೆಸರು. ಚಂದ್ರಚೂಡನೆಂಬ ಸರದಾರನು ರಾಜಪ್ರತಿನಿಧಿಯಾಗಿದ್ದನು. ಒಂದು ಸಾಯಂಕಾಲ ವೀರಧವಳನು ರಾಜ ಪ್ರತಿನಿಧಿಯನ್ನು ಕಂಡು ಬರಬೇಕೆಂದು ಅರಮನೆಯ ಕಡೆ ಹೊರಟನು. ಅರಮನೆಯ ಬಳಿ ಬಹಳ ಹೊತ್ತು ಕಾದಿದ್ದರೂ ಪ್ರವೇಶ ದೊರೆಯಲಿಲ್ಲ. ರಾಜಪ್ರತಿನಿಧಿಯು ತುಂಬ ಕೆಲಸದಲ್ಲಿದ್ದಾರೆಂದು ಅಲ್ಲಿಯೇ ಸ್ವಲ್ಪಕಾಲ ಕುಳಿತನು. ಕತ್ತಲಾಗುತ್ತ ಬಂದಿತು. ಮಾರನೆಯ ದಿನ ಬರೋಣವೆಂದು ಭಾವಿಸಿ, ವೀರಧವಳನು ಹಿಂದಕ್ಕೆ ಬರುವ ವೇಳೆಗೆ ರಾತ್ರಿ ಹತ್ತು ಗಂಟೆಯ ಸಮಯವಾಗಿತ್ತು. ಸಲ್ಲಾಣನು ಬಾಗಿಲು ಮುಚ್ಚಿ ವೀರಧವಳನು ಬರುವುದನ್ನೇ ನಿರೀಕ್ಷಿಸುತ್ತ ಕುಳಿತನು. ಬಾಗಿಲು ತಟ್ಟಿದಂತೆ ಶಬ್ದವುಂಟಾಯಿತು. ಬಾಗಿಲು ತೆರೆದು ನೋಡಿದಾಗ ಅಲ್ಲಿ ವೀರಧವಳನಿಗೆ ಬದಲಾಗಿ ಅಪರಿಚಯಸ್ಥನು ನಿಂತಿದ್ದನು. ತಾವು ಯಾರೆಂದು ಸಲ್ಲಾಣನು ಕೇಳಲಾಗಿ ಆತನು ವೀರಧವಳನನ್ನು ನೋಡಲು ಬಂದಿರುವುದಾಗಿ ತಿಳಿಸಿದನು. ವೀರಧವಳನು ಮನೆಯಲ್ಲಿಲ್ಲವೆಂದು ಹೇಳಿ ಬಾಗಿಲು ಮುಚ್ಚಿದನು ಸಲ್ಲಾಣ. ಒಂದು ಗಂಟೆಯ ತರುವಾಯ ಮತ್ತೆ ಬಾಗಿಲು ತಟ್ಟಿದಂತಾಯಿತು. ಸಲ್ಲಾಣನು ಬಾಗಿಲು ತೆರೆಯದೆ ತಾವು ಯಾರೆಂದು ಕೇಳಿದನು. ವೀರಧವಳನು ತಾನು ಬಂದಿರುವುದಾಗಿ ತಿಳಿಸಿದ ಮೇಲೆ ಸಲ್ಲಾಣನು ಬಾಗಿಲನ್ನು ತೆಗೆದು—"ವೀರಧವಳ, ಇದೇಕೆ ಇಷ್ಟು ಹೊತ್ತು! ಹೋಗಲಿ, ಮನೆಗೆ ಸುರಕ್ಷಿತವಾಗಿ ಬಂದೆಯಲ್ಲಪ್ಪ. ನಿನ್ನನ್ನು ನೋಡಬೇಕೆಂದು ಯಾರೋ ಬಂದಿದ್ದರು." ಎಂದನು.

"ಯಾರು?" ಎಂದು ಕೇಳಿದನು ವೀರಧವಳ.

"ನಾನು" ಎಂದು ಯಾರೋ ಹಿಂದೆ ಹೇಳಿದಂತಾಗಲು ವೀರಧವಳನು ಹಿಂದಕ್ಕೆ ತಿರುಗುವಷ್ಟರಲ್ಲಿ ಒಂದು ಚೂಪಾದ ಕತ್ತಿ ವೀರಧವಳನ

ಪಕ್ಕೆಗೆ ನಾಟಿತು. ಸಲ್ಲಾಣನು "ವಿಲಾಸಿ, ವಿಲಾಸಿ, ದೀಪ ತೆಗೆದುಕೊಂಡು ಬಾ." ಎಂದು ಕೂಗಿದನು. ದೀಪ ಬಂತು. ವಿಜ್ಜಲನೂ, ವೃದ್ಧ ಚಾರಣನೂ ಬಂದರು. ವೀರಧವಳನು ಪ್ರಜ್ಞೆ ತಪ್ಪಿ ಬಿದ್ದಿದ್ದನು. ವೀರಧವಳನನ್ನು ಎತ್ತಿಕೊಂಡು ಒಳಗಡೆ ಬಂದರು. ವೃದ್ಧ ಚಾರಣನು ವೀರಧವಳನ ಗಾಯಕ್ಕೆ ತಕ್ಕ ಔಷಧಿಗಳನ್ನು ಹಚ್ಚಿ, ಬಟ್ಟೆ ಕಟ್ಟಿ ಶುಶ್ರೂಷೆ ಮಾಡಿದನು. ಬಹಳ ಹೊತ್ತಿನ ಮೇಲೆ ವೀರಧವಳನಿಗೆ ಪ್ರಜ್ಞೆ ಬಂತು. ವಿಜ್ಜಲನ ಸಂತೋಷಕ್ಕೆ ಪಾರವೇ ಇರಲಿಲ್ಲ. ಈ ಸಂತೋಷದಲ್ಲಿ ಸಮಭಾಗಿಯಾಗಿದ್ದಳು ಸಲ್ಲಾಣನ ಮುದ್ದು ಮಗಳು ವಿಲಾಸಿ. ಸಲ್ಲಾಣನ ಏಕಮಾತ್ರ ಪುತ್ರಿ ಈಕೆ. ಈಕೆಯ ಹುಟ್ಟು ಹೆಸರು ವಿಲಾಸವತಿ. ಸಲ್ಲಾಣನು ವಾತ್ಸಲ್ಯದಿಂದ "ವಿಲಾಸಿ" ಎಂದು ಕರೆಯುತ್ತಿದ್ದನು. ಸಲ್ಲಾಣನ ಸಂಸಾರದಲ್ಲಿ ಜೀವಜ್ಯೋತಿಯಂತಿದ್ದಳು ಈ ಬಾಲೆ.

ಸುಮಾರು ಒಂದು ತಿಂಗಳು ವೀರಧವಳನು ಹಾಸಿಗೆ ಹಿಡಿದು ಮಲಗಿದ್ದನು. ಗಾಯವು ಸಂಪೂರ್ಣವಾಗಿ ಗುಣವಾಯಿತು. ಆದರೆ, ಅಂದಿನ ಪ್ರಕರಣದಿಂದ ತನ್ನ ಬೆನ್ನಟ್ಟಿ ಬಂದಿರುವ ಚೋರ ಪಡೆಯೊಂದಿದೆಯೆಂಬುದನ್ನು ಅರಿತನು ವೀರಧವಳ.

# ೨೨. ರಾಜಪ್ರತಿನಿಧಿ

## "ಸತ್ಯಾತ್ರಯ" ಸಂಕೇತದ ಪ್ರಭಾವ

ರಾಜಧಾನಿಯ ಪ್ರಜೆಗಳು ದುಃಖದಲ್ಲಿ ಮುಳುಗಿದ್ದರು. ಕುಮಾರನನ್ನು ಯಾರೋ ಅರಮನೆಯಿಂದ ಅಪಹರಿಸಿಕೊಂಡು ಹೋಗಿದ್ದಾರೆಂಬ ಸುದ್ದಿ ಸಿಡಿಲಿನಂತೆ ಎಲ್ಲರನ್ನೂ ಭಯ ವಿಸ್ಮಯಗಳಲ್ಲಿ ಮುಳುಗಿಸಿತ್ತು. ಸಲ್ಲಾಣನ ಮನೆಗೂ ವ್ಯಾಪಿಸಿತ್ತು ಈ ದುಃಖ! ವಿಜ್ಜಲ, ವೃದ್ಧ ಚಾರಣ, ಸಲ್ಲಾಣ ಮತ್ತು ವಿಲಾಸಿ—ಎಲ್ಲರೂ ಚಿಂತಾಸಕ್ತರಾಗಿದ್ದರು. ಆದರೆ, ಇವರ ಚಿಂತೆಗೆ ಎರಡು ಕಾರಣಗಳಿದ್ದುವು. ಒಂದು ರಾಜಕುಮಾರನ ಅಪಹರಣ! ಮತ್ತೊಂದು ವೀರಧವಳನ ಅಂತರ್ಧಾನ! ರಾಜಕುಮಾರನ ಅಪಹರಣವಾದ ದಿನವೇ ವೀರಧವಳನೂ ಅದೃಶ್ಯವಾಗಿದ್ದನು!

ವೀರಧವಳನು ಅದೃಶ್ಯವಾಗಿ ಆರು ದಿನಗಳಾಗಿದ್ದುವು. ರಾತ್ರಿ ಭೋಜನ ಮುಗಿದ ತರುವಾಯ ಸಲ್ಲಾಣ, ವಿಜ್ಜಲ, ಚಾರಣ ಮತ್ತು ವಿಲಾಸಿ—ಇವರುಗಳು ವೀರಧವಳನ ವಿಚಾರದಲ್ಲಿ ಬಗೆಬಗೆಯಾಗಿ ಮಾತನಾಡುತ್ತಿದ್ದರು. ಸಲ್ಲಾಣನು ತನ್ನ ಹಣೆಯನ್ನು ಕೈಗಳಿಂದ ಹಿಡಿದುಕೊಂಡು—"ಯೋಚನೆ ಮಾಡಿದಷ್ಟೂ ವಿಲಕ್ಷಣವಾಗಿ ಕಾಣುತ್ತಿದೆ ಈ ಪ್ರಸಂಗ. ವೀರಧವಳನೂ ಸಹ ರಾಜಕೀಯ ತಳತಂತ್ರಕ್ಕೆ ಸಿಕ್ಕಿ—"

ವಿಜ್ಜಲನು ನಡುವೆ ಬಾಯಿಹಾಕಿ—"ಏನು, ರಾಜಕುಮಾರನನ್ನು ವೀರಧವಳನು ಅಪಹರಣ ಮಾಡಿರುವನೆಂದು ಹೇಳುವಿರಾ? ಛೇ, ವೀರಧವಳನು ಅಂಥ ಪ್ರಸಂಗಕ್ಕೆ ಹೋಗತಕ್ಕವನಲ್ಲ." ಎಂದನು.

"ವೀರಧವಳನು ರಾಜಕೀಯ ತಳತಂತ್ರಕ್ಕೆ ಸಿಕ್ಕಿಲ್ಲವೆಂದು ಹೇಳಬೇಡ. ರಾಜಕುಮಾರನನ್ನು ಅಪಹರಣ ಮಾಡಿದ್ದಾನೆಂದು ನಾನು ಹೇಳುತ್ತಿಲ್ಲ. ಆ ದಿನದ ಪ್ರಸಂಗವೇ ಹಾಗಿತ್ತು. ಆಗ ವೀರಧವಳನು

ಅಲ್ಲಿಯೇ ಇದ್ದನಲ್ಲವೇ ? ಆ ಸಮಯಕ್ಕೆ ಆ ವಿಷಯದಲ್ಲಿ ಕಠಿಣ ಪ್ರಸಂಗ ಒದಗಿದ್ದರೂ ಇರಬಹುದು." ಎಂದು ಸಲ್ಲಾಣನು ಸಮಾಧಾನ ಪಡಿಸಿದನು.

ಅಷ್ಟರಲ್ಲಿ ಬಾಗಿಲು ತಟ್ಟಿದ ಹಾಗಾಯಿತು. ವಿಲಾಸಿಯು ದೀಪ ಹಿಡಿದು ಕೊಂಡು ತನ್ನ ತಂದೆಯ ಜತೆಯಲ್ಲಿ ಹೊರಟಳು. ವಿಜ್ಜಲನೂ, ಚಾರಣನೂ ಹಿಂದೆ ಬಂದರು. ವಿಲಾಸಿಯ ಕೈಯಲ್ಲಿದ್ದ ದೀಪದ ಬೆಳಕಿನಲ್ಲಿ ಬಾಗಿಲನ್ನು ತೆರೆದರು. ವೀರಧವಳನು ಒಳಗೆ ಬಂದನು. ವಿಜ್ಜಲನು ವೀರಧವಳನನ್ನು ತಬ್ಬಿ—"ಕೊನೆಗೆ ಸುರಕ್ಷಿತವಾಗಿ ಬಂದಿರಿ, ಸಾಕು." ಎಂದು ಹಿಗ್ಗಿದನು. ಎಲ್ಲರೂ ತಮ್ಮ ಚಿಂತೆಯನ್ನು ಮರೆತರು.

ಮಾರನೆಯ ದಿನ ಮಧ್ಯಾಹ್ನ ಎಲ್ಲರೂ ಊಟ ಮಾಡಿದ ಮೇಲೆ ವೀರ ಧವಳನು ಅವರನ್ನು ಕುರಿತು—"ಈ ಆರು ದಿನಗಳ ಅಂತರ್ಧಾನವನ್ನು ಕೇಳಲು ಅವಸನವೇನೋ ತಮಗೆಲ್ಲ ?" ಎಂದನು.

"ನಿಮಗೆ ಇಷ್ಟವಿದ್ದಂತೆ." ಎಂದಳು ನಗುತ್ತ ವಿಲಾಸಿ.

ವೀರಧವಳ—ವಿಲಾಸಿ, ನನಗೋಸ್ಕರ ಅಹೋರಾತ್ರಿ ಶ್ರಮಪಡು ತ್ತಿದ್ದೀಯೆ. ಭಗವಂತನು ನಿನ್ನನ್ನು ಕಾಪಾಡಲಿ.

ವಿಲಾಸಿ—ನಾನು ಶ್ರಮಪಟ್ಟುದು ಇರಲಿ. ನಿಜವಾದ ಶ್ರಮವೆಂದರೆ (ವಿಜ್ಜಲನ ಕಡೆ ತೋರಿಸಿ) ಇವರದು.

ವೀರ—ನಿಮ್ಮೆಲ್ಲರ ಉಪಕಾರವನ್ನೂ ನಾನು ಮರೆಯಲಾರೆನು.

ವಿಲಾಸಿ—ಆ ವಿಷಯ ಆ ಮೇಲೆ. ಮೊದಲು ನಿಮ್ಮ ಆರು ದಿನಗಳ ಅಂತರ್ಧಾನ.

ವೀರಧವಳನು ಸಲ್ಲಾಣನ ಕಡೆ ನೋಡಿ, ತನ್ನ ಅಂತರ್ಧಾನದ ಕಥೆ ಯನ್ನು ವಿಸ್ತರಿಸಿದನು.

" ಇಲ್ಲಿಗೆ ಆರು ದಿನಗಳಿಗೆ ಸರಿಯಾಗಿ ಒಂದು ಸಾಯಂಕಾಲ ನಾನು ರಾಜಬೀದಿಯಲ್ಲಿ ಬರುತ್ತಿದ್ದೆನು. ಅರಮನೆಯ ಬತ್ತಿರ ಬಂದಾಗ ಅರಮನೆಯ ಮಹಾದ್ವಾರವನ್ನು ತೆರೆದು—ಶಸ್ತ್ರ ಸಜ್ಜಿತರಾದ ಸವಾರರು ಹೊರಗೆ ಬರುತ್ತಿರುವುದನ್ನು ಕಂಡೆನು. ಅಷ್ಟರಲ್ಲಿ ಅರಮನೆಯ ಗುಪ್ತದ್ವಾರವನ್ನು ತೆರೆದು, ಒಬ್ಬ ಮನುಷ್ಯನು ಈಚೆಗೆ ಬಂದುದನ್ನು ನೋಡಿ, ಆ ಕಡೆ ನುಗ್ಗಿದೆನು. ಆತನ ಕೈಯ್ಯಲ್ಲಿ ಬಟ್ಟೆಯಲ್ಲಿ ಸುತ್ತಿದ್ದ ಒಂದು ವಸ್ತುವಿದ್ದಂತೆ ತೋರಿತು. ಆತನು ಅವಸರದಿಂದ ನನ್ನ ಮುಂದೆ ನಿಂತು—"ನೀನು ಯಾರು?" ಎಂದನು. ''ನಾನು ಸತ್ಯಾಶ್ರಯ ಮಹಾರಾಜರ ಆಶ್ರಿತ'' ಎಂದು ತಿಳಿಸಿದೆನು. ನನ್ನ ಬಾಯಲ್ಲಿ '' ಸತ್ಯಾಶ್ರಯ " ಎಂಬ ಮಾತು ಬಂದ ತಕ್ಷಣ ಆತನ ಮುಖದಲ್ಲಿ ಆನಂದ ಉಕ್ಕಿತು. ಆತನು ತನ್ನ ಕೈಯಲ್ಲಿದ್ದ ಹೊರೆಯನ್ನು ನನಗೆ ಕೊಟ್ಟು "ಬಲಗಡೆಯಿಂದ ಓಡು." ಎಂದನು. ನಾನು ಮರುಮಾತನ್ನಾಡದೆ ಆತನು ಹೇಳಿದಂತೆ ಹೆಬ್ಬಾಗಿಲಿನವರೆಗೆ ಒಂದೇ ಸಮನಾಗಿ ಓಡಿದೆನು. ಅಲ್ಲಿಗೆ ಬಂದ ಕೂಡಲೇ ನನ್ನ ಕೈಯಲ್ಲಿರುವುದೇನೆಂದು ನೋಡಿಕೊಂಡೆನು. ರಾಜಕುಮಾರನು ನನ್ನ ಕೈಯಲ್ಲಿದ್ದನು. ಆಗ ನಾನು ಮಾಡುತ್ತಿರುವುದು ಶುದ್ಧ ಕಳ್ಳತನವೆನಿಸಿತು. ಹಿಂದಕ್ಕೆ ಅರಮನೆಗೆ ಹೋಗೋಣವೆಂದು ಯೋಚಿಸಿದೆನು. ಆದರೆ, ಆ ಮನುಷ್ಯ " ಸತ್ಯಾಶ್ರಯ " ಎಂಬ ಹೆಸರನ್ನು ಕೇಳಿದೊಡನೆಯೇ ಬಾಲಕನನ್ನು ನನ್ನ ಕೈಗೆ ಕೊಟ್ಟುದಾದರೂ ಏಕೆಂಬುದನ್ನು ತರ್ಕಿಸುತ್ತ ಸ್ವಲ್ಪ ಕಾಲ ನಿಂತೆನು. ಸತ್ಯಾಶ್ರಯನ ಹೆಸರಿನಲ್ಲಿ ಯಾರೂ ಕೇಡು ಮಾಡಲಾರರೆಂದು ತೋರಿತು. ಬಹುಶಃ ರಾಜಕುಮಾರನಿಗೆ ಒದಗಿರಬಹುದಾದ ತೊಂದರೆಯಿಂದ ಪಾರುಮಾಡಲು ಈ ರೀತಿ ಮಾಡಿರಬಹುದೆಂದು ಭಾವಿಸಿದೆನು. " ಸತ್ಯಾಶ್ರಯ " ಎಂಬ ಸಂಕೇತದ ಪ್ರಭಾವದಲ್ಲಿ ರಾಜಕುಮಾರನ ರಕ್ಷಣೆಯಾಗುವುದಾದರೆ ಆಗಲೆಂದು ನಿರ್ಧರಿಸಿ ಮುಂದೆ ಹೋದೆನು.

'' ಸ್ವಲ್ಪ ಕಾಲದಲ್ಲಿ ಒಂದು ಪೊದೆಯ ಹತ್ತಿರ ಕೆಲವರು ಶಸ್ತ್ರ ಸಜ್ಜಿತರಾದ ಸವಾರರು ನಿಂತಿದ್ದರು. ಅವರೂ ಸಹ ಸಂಕೇತ ನಾಮವನ್ನು ಕೇಳಿದರು. " ಸತ್ಯಾಶ್ರಯ " ಎಂದಕೂಡಲೇ ರಾಜಕುಮಾರನನ್ನು ತಮ್ಮ

ಕೈಗೆ ತೆಗೆದುಕೊಂಡು ಒಂದು ಕುದುರೆ ಹತ್ತುವಂತೆ ನನಗೆ ಹೇಳಿದರು. ಅವರೆಲ್ಲರೂ ಒಟ್ಟು ಹನ್ನೆರಡು ಜನರಿದ್ದರು. ಎಲ್ಲರೂ ಹೊರಟೆವು. ಸ್ವಲ್ಪ ದೂರ ಹೋದ ಮೇಲೆ ಅವರು ಯಾರೆಂಬುದು ಗೊತ್ತಾಯಿತು. ಸರದಾರ ಸುಮಿತ್ರಸೇನ, ಸರದಾರ ಕಾಂತಿಮತಿ ಅವರಿಬ್ಬರೂ ನನಗೆ ಗೊತ್ತಿದ್ದವರು. ಅವರು ಸತ್ಯಾಶ್ರಯನ ಶತ್ರುಪಕ್ಷದವರೆಂದು ನಾನು ಮೊದಲೇ ತಿಳಿದಿದ್ದುದರಿಂದ ನನ್ನಿಂದ ಪ್ರಮಾದವಾಯಿತೆಂದು ಪಶ್ಚಾತ್ತಾಪದಿಂದ ಮರುಗಿದನು. ಉಳಿದವರು ಪಶ್ಚಿಮ ಚಾಳುಕ್ಯ ಸರದಾರರು. ರಾಜಕುಮಾರನನ್ನು ಕದ್ದುಕೊಂಡು ಕಲ್ಯಾಣಿಗೆ ಹೋಗುತ್ತಿದ್ದರು. ಅವರೆಲ್ಲರಿಗೂ ಮುಖಂಡನಾಗಿ ಸರದಾರ ಚಂದ್ರಚೂಡನಿದ್ದನು."

"ಬಹಳ ದೂರ ಹೋದ ಮೇಲೆ ಅವರು ಚಂದ್ರಚೂಡನ ವಿಚಾರವಾಗಿ ಮಾತನಾಡುತ್ತಿದ್ದರು. ಹಿಂದೆ ಅರಮನೆಯ ಗುಪ್ತದ್ವಾರದ ಬಳಿ ನನ್ನ ಕೈಗೆ ರಾಜಕುಮಾರನನ್ನು ಕೊಟ್ಟವನೇ ಚಂದ್ರಚೂಡನೆಂದು ಆಗ ನನಗೆ ಗೊತ್ತಾಯಿತು. ಸರದಾರ ಸುಮಿತ್ರಸೇನ ಮತ್ತು ಸರದಾರ ಕಾಂತಿಮತಿ ಇವರುಗಳು ಚಂದ್ರಚೂಡನ ಕಿರುಕುಳವನ್ನು ತಡೆಯಲಾರದೆ ಶತ್ರುಪಕ್ಷವನ್ನು ಸೇರಿದ್ದುದಾಗಿ ತಿಳಿಸಿದರು. ಸಮಯವರಿತು ರಾಜಕುಮಾರನನ್ನು ಬಿಡುಗಡೆ ಮಾಡುವುದೇ ಅವರ ಉದ್ದೇಶವಾಗಿತ್ತು. ನನ್ನ ಉದ್ದೇಶವೂ ಅದೇ ಆಗಿದ್ದುದನ್ನು ತಿಳಿದು ಅವರಿಗೆ ಸಂತೋಷವಾಯಿತು."

ಸಲ್ಲಾಣನು ವೀರಧವಳನ ಮಾತನ್ನು ಕೇಳಿ—"ಚಂಡಾಲ ಚಂದ್ರಚೂಡನ ಕೃತ್ಯವೋ ಇದು!" ಎಂದು ರೋಷದಿಂದ ನುಡಿದನು.

ವೀರಧವಳನು ತನ್ನ ಕಥೆಯನ್ನು ಮುಂದುವರಿಸಿದನು.

"ಹೊತ್ತು ಮೂಡುವ ವೇಳೆಗೆ ನಾವೆಲ್ಲರೂ ಪ್ರಸಾದ ದುರ್ಗಕ್ಕೆ ಬಂದೆವು. ಅಲ್ಲಿಯ ಸುಬೇದಾರನು ನಮಗೆ ತನ್ನ ಆರನೆಯ ಮಹಲಿನಲ್ಲಿ ಬಿಡಾರ ಮಾಡಿಕೊಟ್ಟನು. ಐದನೆಯ ಮಹಲಿನಲ್ಲಿ ಆತನ ವಾಸ. ಸುಬೇದಾರನ ಆರು ತಿಂಗಳ ಮಗು ನಾವು ಬಂದ ದಿನವೇ ಮೃತಪಟ್ಟಿತ್ತು. ಆದರೆ,

ರಾಜಕುಮಾರನು ತನ್ನ ರಾಜ್ಯಕ್ಕೆ ಬಂದಿರುವ ಸಮಯದಲ್ಲಿ ತನ್ನ ದುಃಖವನ್ನು ಮರೆತು ಆತನು ನಮ್ಮ ಉಪಚಾರದಲ್ಲಿ ನಿಂತನು. ಮೃತಬಾಲಕನಿಗೆ ರಾತ್ರಿ ನಮಗೆ ಗೊತ್ತಾಗದಂತೆ ಶವಸಂಸ್ಕಾರ ನಡೆಸಬೇಕೆಂದು ಗೊತ್ತುಮಾಡಿಕೊಂಡಿರುವುದಾಗಿ ತಿಳಿಯಿತು."

"ಸರದಾರ ಸುಮಿತ್ರಸೇನನು ರಾತ್ರಿ ಊಟವಾದ ಮೇಲೆ ನನ್ನನ್ನು ಕಂಡು ಮಧ್ಯರಾತ್ರಿ ತನ್ನನ್ನು ನೋಡೆಂದು ಹೇಳಿ ಹೊರಟುಹೋದನು. ನಾನು ಅಶ್ವಶಾಲೆಗೆ ಹೋಗಿ ಎರಡು ಅಶ್ವಗಳನ್ನು ಸಿದ್ಧಮಾಡಿ ದುರ್ಗಕ್ಕೆ ಬಂದೆನು. ಸರದಾರ ಸುಮಿತ್ರಸೇನನು ಹೇಳಿದ್ದಂತೆ ನಡುರಾತ್ರಿಗೆ ಸರಿಯಾಗಿ ನಾವಿದ್ದ ಮಹಲಿಗೆ ಬಂದೆನು. ಆದರೆ, ನನ್ನಿಂದ ಒಂದು ತಪ್ಪಾಯಿತು. ಆರನೆಯ ಮಹಲಿಗೆ ಹೋಗುವುದಕ್ಕೆ ಬದಲು ಐದನೆಯ ಮಹಲಿಗೆ ಹೋದೆನು. ನಾನು ಒಳಗಡೆ ಹೋದ ಕೂಡಲೇ ಸುಬೇದಾರನು—"ಸಿದ್ಧವಾಗಿದೆಯೇ?" ಎಂದನು. ನಾನು "ಹೌದು" ಎಂದು ಹೇಳಿದೆನು. ಅವನು ಬಟ್ಟೆ ಸುತ್ತಿದ ಒಂದು ವಸ್ತುವನ್ನು ನನ್ನ ಕೈಗೆ ಕೊಟ್ಟನು. ಮರುಮಾತನ್ನಾಡದೆ ಇಬ್ಬರೂ ಮಹಲಿನಿಂದ ಕೆಳಗಿಳಿದು ಅಶ್ವಶಾಲೆಯ ಹತ್ತಿರ ಬಂದೆವು. ಸುಬೇದಾರನ್ನು ಕುದುರೆಗಳನ್ನು ನೋಡಿ ಕುದುರೆಗಳೇಕೆಂದು ಕೇಳಿದರೂ ಸಹ ಆತನಿಗೆ ಉತ್ತರ ಕೊಡದೆ ಕುದುರೆಯನ್ನು ಹತ್ತಿ ಬಾಲಕನನ್ನು ಎಡದ ಕೈಯಲ್ಲಿ ಭದ್ರವಾಗಿ ಹಿಡಿದು, ದೇವರನ್ನು ಸ್ಮರಿಸಿ, ಕುದುರೆಯನ್ನು ಓಡಿಸಿದೆನು. ಒಬ್ಬ ಸವಾರನು ಹಿಂದಟ್ಟಿ ಬಂದನು. ಆದರೆ, ಕುದುರೆ ವಾಯುವೇಗದಿಂದ ದುರ್ಗವನ್ನು ಬಿಟ್ಟು ಬಹಳ ದೂರ ಓಡಿತು. ಕುದುರೆಗೆ ವಿಶ್ರಾಂತಿ ಕೊಡಲು ಇಳಿದೆನು. ಅಷ್ಟರಲ್ಲಿ ಸವಾರನೂ ಬಂದನು. ಆತನು ಸುಮಿತ್ರಸೇನನೆಂದು ಭಾವಿಸಿ ಇಷ್ಟು ಓಟದಲ್ಲಿಯೂ ರಾಜಕುಮಾರನು ಏಕೆ ಎಚ್ಚರಗೊಳ್ಳಲಿಲ್ಲವೆಂದು ಕೇಳಿದೆನು. "ಬಾಲಕನು ಮೃತನಾಗಿರುವನು." ಎಂದನು ಸವಾರ. ಆ ಮಾತು ಕಿವಿಗೆ ಬಿದ್ದ ಕೂಡಲೇ ನಾನು ಮೂರ್ಛೆಹೋದೆನು."

"ನನಗೆ ಪ್ರಜ್ಞೆ ಬಂದಾಗ ನಾನು ಒಂದು ಗುಡಿಸಿನಲ್ಲಿದ್ದೆನು. ಒಬ್ಬ ವೃದ್ಧ ವನಚರಿ ನನ್ನನ್ನು ಉಪಚರಿಸುತ್ತಿದ್ದಳು. ನಾನು ಎಚ್ಚರಗೊಂಡ

ಮೇಲೆ ರಾಜಕುಮಾರನು ಸುರಕ್ಷಿತವಾಗಿರುವನೆಂದೂ, ನಾನು ತಂದಿದ್ದ ಬಾಲಕನು ಸುಬೇದಾರನ ಮೃತಪುತ್ರನೆಂದೂ ತಿಳಿಸಿದಳು. ಅದನ್ನು ಕೇಳಿ ನನಗೆ ಬಹಳ ಆನಂದವಾಯಿತು. ಆದರೆ, " ಸುಮಿತ್ರಸೇನನ ಗತಿ " ಎಂದು ನಾನು ಒಂದೇ ಉಸಿರಿನಲ್ಲಿ ಕೇಳಿದೆನು."

" ಸುಮಿತ್ರಸೇನನು ಚಂದ್ರಚೂಡನ ಮಂಡಲಿಯನ್ನು ಬಿಟ್ಟು ಅಭೇದ ದುರ್ಗಕ್ಕೆ ಹೋಗಿದ್ದಾನೆಂದು ತಿಳಿಸಿದಳು ವೃದ್ಧ ವನಚರಿ. ಇದನ್ನು ತಿಳಿದು ನನ್ನ ಉತ್ಸಾಹವು ಇಮ್ಮಡಿಸಿತು."

" ಸತ್ಯಾಶ್ರಯ ಮಹಾರಾಜರಿಗೆ ರಾಜಪ್ರತಿನಿಧಿಯ ನಡೆವಳಿಕೆಯನ್ನು ತಿಳಿಸಲು ಹೋಗಿರಬಹುದೇ?" ಎಂದು ಸಲ್ಲಾಣನು ಕೇಳಿದನು.

" ಹೌದು !" ಎಂದನು ವೀರಧವಳ.

ವೃದ್ಧ ವನಚರಿಯು ನೆನಪಾದ ಕೂಡಲೇ ವೀರಧವಳನು " ವಿಲಾಸಿ, ವೃದ್ಧ ವನಚರಿ ಇಲ್ಲಿಗೆ ಬಂದಿರಲಿಲ್ಲವೇ ? ಎಂದು ಕೇಳಿದನು.

" ಇಲ್ಲ."

" ಆಕೆಗೆ ಇಲ್ಲಿಗೆ ಬಂದು ಎಲ್ಲ ವಿಚಾರಗಳನ್ನೂ ಹೇಳುವಂತೆ ತಿಳಿಸಿದ್ದೆನು. ಒಂದುವೇಳೆ ಆಕೆಗೂ ಕಠಿಣ ಪ್ರಸಂಗ ಒದಗಿರಬಹುದು."

ವೃದ್ಧ ಚಾರಣನು ವನಚರಿಯನ್ನು ಹಿಂದೆ ಅಜಿಂಕ್ಯ ದುರ್ಗದಲ್ಲಿ ನೋಡಿದ್ದನು. ಆತನು ವೀರಧವಳನ ಮಾತನ್ನು ಲಾಲಿಸುತ್ತ—" ವೀರಧವಳ, ನಿನ್ನ ಮೇಲೆ ಆಕೆಗೆ ಅತ್ಯಂತ ಪ್ರೀತಿ. ನಿನಗೋಸ್ಕರ ಆಕೆ ಬೇಕಾದ ಸಾಹಸ ಮಾಡಲು ಸಿದ್ಧಳಾಗಿದ್ದಾಳೆ." ಎಂದು ಸಂತೋಷದಿಂದ ನುಡಿದನು. " ಆರು ತಿಂಗಳ ಅಂತರ್ಧಾನದ ಕಥೆ ಚೆನ್ನಾಗಿದೆ " ಎಂದಳು ವಿಲಾಸಿ. ವೀರಧವಳನು ಕಥೆ ಇನ್ನೂ ಮುಗಿದಿಲ್ಲವೆಂದು ಹೇಳಿ—"ನಾನು ಈಗ ರಾಜದ್ರೋಹಿಯಾಗಿದ್ದೇನೆ." ಎಂದು ತಿಳಿಸಿದನು.

ವೀರಧವಳನು ಹೇಗೆ ರಾಜದ್ರೋಹಿಯಾದನೆಂಬುದು ಸಲ್ಲಾಣ ಮುಂತಾದ ಸಾಮಾನ್ಯ ಜನರಿಗೆ ಅರ್ಥವಾಗಲಿಲ್ಲ. ರಾಜಕುಮಾರನನ್ನು ರಕ್ಷಿಸಬೇಕೆಂದು ಬಗೆದು ಮೃತಪಟ್ಟ ಬಾಲಕನೇ ರಾಜಕುಮಾರನೆಂದು ಭಾವಿಸಿ ಮೂರ್ಛೆ ಹೋದ ವೀರಧವಳನು ಇಂದು ರಾಜದ್ರೋಹಿಯಾಗಿದ್ದನು. ಈತನಂತೆಯೇ ಸರದಾರ ಸುಮಿತ್ರಸೇನನೂ ಒಬ್ಬ ರಾಜದ್ರೋಹಿಯಾಗಿದ್ದನು. ಹೇಗೆ ? ರಾಜಪ್ರತಿನಿಧಿಯ ದೃಷ್ಟಿಯಲ್ಲಿ. ಚಂದ್ರಚೂಡನು ರಾಜಪ್ರತಿನಿಧಿಯಾಗಿ ರಾಜಕುಮಾರನನ್ನು ಒಳಸಂಚಿನಿಂದ ಶತ್ರುಪಕ್ಷದವರಿಗೆ ಒಪ್ಪಿಸಿದರೂ ರಾಜದ್ರೋಹಿಯಾಗಲಿಲ್ಲ. ವೀರಧವಳನೂ ಸುಮಿತ್ರಸೇನನೂ ಮಾತ್ರ ರಾಜದ್ರೋಹಿಗಳು. ಅವರನ್ನು ಹಿಡಿದುಕೊಟ್ಟವರಿಗೆ ನೂರು ವರಹ ಬಹುಮಾನ ಕೊಡುವುದಾಗಿ ಸಾರಿದ್ದನು ರಾಜಪ್ರತಿನಿಧಿ ಚಂದ್ರಚೂಡ.

ರಾತ್ರಿ ಎರಡು ಗಂಟೆಯ ಸಮಯ. ಸಲ್ಲಾಣನು ನಗರ ಸಂಚಾರವನ್ನು ಮುಗಿಸಿಕೊಂಡು ಮನೆಗೆ ಬಂದನು. ವೀರಧವಳನು ಸಲ್ಲಾಣನನ್ನು ಕಂಡು "ನಗರದ ವಿಚಾರವೇನಾದರೂ ಇದೆಯೇ ?" ಎಂದು ಉತ್ಸುಕತೆಯಿಂದ ಕೇಳಿದನು. ಸಲ್ಲಾಣನು "ಇದೆ." ಎಂದು ತಿಳಿಸಿ, ಅಂದಿನ ಗೂಢವಾರ್ತೆಯನ್ನು ವಿವರಿಸಿದನು.

"ವೀರಧವಳ, ರಾಜಕುಮಾರನು ಪ್ರಸಾದ ದುರ್ಗದಲ್ಲಿಯೇ ಇದ್ದಾನಂತೆ. ಅಸ್ವಸ್ಥತೆಯ ದೆಸೆಯಿಂದ ಶತ್ರುಪಕ್ಷದವರು ಆತನನ್ನು ಕಲ್ಯಾಣಿಗೆ ಕರೆದುಕೊಂಡು ಹೋಗಿಲ್ಲವಂತೆ. ಆದರೆ ರಾಜಪ್ರತಿನಿಧಿಯ ವಿಚಾರದಲ್ಲಿ ಜನರಿಗೆ ಬೇಸರ ಹುಟ್ಟಿ ಅವರು ಸತ್ಯಾಶ್ರಯ ಮಹಾರಾಜನನ್ನು ಅಭೇದ ದುರ್ಗದಿಂದ ಕರೆಯಿಸಿಕೊಳ್ಳಬೇಕೆಂದಿದ್ದಾರೆ. ಈ ಕೆಲಸವು ಹೊಸ ಮಂತ್ರಿಮಂಡಲಿಗೆ ತಿಳಿಯದಂತೆ ಯಾರಿಗೆ ಹೇಳಬೇಕೆಂದು ಯೋಚಿಸುತ್ತಿದ್ದಾರೆ. ಸತ್ಯಾಶ್ರಯ ಮಹಾರಾಜನ ಬಳಿಗೆ ಹೋಗಬಲ್ಲ ವಿಶ್ವಾಸಪಾತ್ರರು ಯಾರಿದ್ದಾರೆಂದು ತಿಳಿಯದೆ ಕಾತುರರಾಗಿದ್ದಾರೆ ಪ್ರಜೆಗಳು."

"ನಾನೇ ಆ ಕೆಲಸವನ್ನು ಮಾಡಿದರೆ !" ಎಂದು ಉತ್ಸಾಹದಿಂದ ನುಡಿದನು ವೀರಧವಳ.

"ಆಗಬಹುದು." ಎಂದು ಸಲ್ಲಾಣನು ಒಪ್ಪಿದನು. ಆದರೆ, ಮತ್ತೊಂದು ವಿಚಾರವನ್ನು ನಿನಗೆ ಹೇಳಬೇಕಾಗಿದೆ." ಎಂದು ಹೇಳಲಾರಂಭಿಸಿದನು.

"ವೀರಧವಳ, ಸರದಾರ ಚಂಡವರ್ಮನನ್ನೂ ಆತನ ಜೊತೆಯಲ್ಲಿ ದೀರ್ಘಕಾಯನಾದ ಮತ್ತೊಬ್ಬ ಮನುಷ್ಯನನ್ನೂ ರಾಜಮಾರ್ಗದಲ್ಲಿ ನೋಡಿದಂತಾಯಿತು. ನಾನು ಅವರ ಹಿಂದೆಯೇ ಹೋದೆನು. ಅವರು ಅರಮನೆಯನ್ನು ಪ್ರವೇಶಿಸಿದರು. ರಾಜಪ್ರತಿನಿಧಿಯಾದ ಚಂದ್ರಚೂಡನನ್ನು ನೋಡಿದ್ದರೂ ಇರಬಹುದು. ಅವರು ಅರಮನೆಯಿಂದ ಹೊರಗೆ ಬಂದ ಮೇಲೆ ಊರ ಹೊರಗಡೆ ಶಿಥಿಲವಾಗಿರುವ ಒಂದು ಗುಡಿಸಿಲಿಗೆ ಹೋದರು.

ವೀರಧವಳನು ಸಲ್ಲಾಣನಿಂದ ತಿಳಿದುಬಂದ ಎರಡು ಗೂಢವಾರ್ತೆಗಳನ್ನು ಬಹು ಮುಖ್ಯವೆಂದೆಣಿಸಿ—"ಈಗ ವ್ಯರ್ಥವಾಗಿ ಕಾಲ ಕಳೆಯಲು ಸಮಯವಲ್ಲ. ಲೇಖನ ಸಾಮಗ್ರಿಗಳನ್ನು ತಂದು ಕೊಡಿ. ಸತ್ಯಾಶ್ರಯ ಮಹಾರಾಜರಿಗೆ ಈ ಎಲ್ಲ ಸಮಾಚಾರಗಳನ್ನು ಸಂಗ್ರಹಿಸಿ ಒಂದು ಕಾಗದವನ್ನು ಬರೆದು ಅಭೇದ ದುರ್ಗಕ್ಕೆ ಕೂಡಲೇ ಕಳುಹಿಸಬೇಕು." ಎಂದು ಸೂಚಿಸಿದನು. ಸಲ್ಲಾಣನು ಕೊಟ್ಟ ಲೇಖನ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಒಂದು ಪತ್ರವನ್ನು ಬರೆದು ವಿಜ್ಜಲನನ್ನು ಕರೆದು—"ವಿಜ್ಜಲ, ನೀನು ಈಗ ಒಂದು ಮಹತ್ಕಾರ್ಯವನ್ನು ಮಾಡಬೇಕಾಗಿದೆ. ಈ ಕಾಗದವನ್ನು ಅಭೇದ ದುರ್ಗದಲ್ಲಿರುವ ಸತ್ಯಾಶ್ರಯ ಮಹಾರಾಜರಿಗೆ ತಲಪಿಸಬೇಕು. ಕೂಡಲೇ ಹೊರಡು." ಎಂದು ವೀರಧವಳನು ತಿಳಿಸಿದನು.

ವಿಜ್ಜಲನು ಪತ್ರವನ್ನು ಭದ್ರವಾಗಿಟ್ಟುಕೊಂಡು ಅಶ್ವಶಾಲೆಗೆ ಹೋದನು. ಒಂದು ಉತ್ತಮಾಶ್ವವನ್ನು ಸಿದ್ಧಪಡಿಸಿ ತ್ವರೆಯಿಂದ ಕುದುರೆಯನ್ನು ಹತ್ತಿ ಅಭೇದ ದುರ್ಗದ ಕಡೆಗೆ ಹೊರಟನು ಅರುಣೋದಯಕ್ಕೆ ಮುಂಚೆ.

ವೀರಧವಳನೇ ಆ ಕೆಲಸವನ್ನು ಮಾಡಿದ್ದರೆ ಚೆನ್ನಾಗಿತ್ತು. ಆದರೆ ರಾಜಧಾನಿಯಲ್ಲಿದ್ದುಕೊಂಡು ಚಂಡವರ್ಮನ ಕುತಂತ್ರವನ್ನು ಗಮನಿಸಬೇಕೆಂದು

ಯೋಚಿಸಿದನು ವೀರಧವಳ. ಅಲ್ಲದೆ, ವಿಜ್ಜಲನೂ ಸಹ ಸತ್ಯಾಶ್ರಯ ಮಹಾರಾಜರಿಗೆ ಆಪ್ತ ಸೇವಕನಾದುದರಿಂದ ತನ್ನಷ್ಟೇ ಸೂಕ್ತವಾಗಿ ಕೆಲಸವನ್ನು ನೆರವೇರಿಸಬಲ್ಲನೆಂದು ವೀರಧವಳನು ತಿಳಿದಿದ್ದನು. ಆದರೆ, ನಡುದಾರಿಯಲ್ಲಿ ಯಾರಾದರೂ ಅಡ್ಡಗಟ್ಟಿದರೆ ಅವರೊಡನೆ ಕಾದುವಷ್ಟು ಬಲಾಢ್ಯನಾಗಿರಲಿಲ್ಲ ವಿಜ್ಜಲ. ತನ್ನ ಕಾರ್ಯವನ್ನು ಗುರುತರವಾಗಿ ನೆರವೇರಿಸುವುದೊಂದೇ ಆತನ ಗುರಿಯಾಗಿತ್ತು.

ಅಂತು, ವೀರಧವಳನ ಉದ್ದೇಶವಾಗಲಿ ವಿಜ್ಜಲನ ಪ್ರವಾಸವಾಗಲಿ ಅನುಚಿತವಾಗಿರಲಿಲ್ಲ. ದೈವೇಚ್ಛೆಗೆ ಅದು ಅನುಚಿತವಾಗಿತ್ತು. **ತನ್ನನ್ನು ತಾನು ಅರಿಯದ ಮಾನವನು ದೈವೇಚ್ಛೆಯನ್ನು ಅರಿಯುವುದುಂಟೆ? ವಿವೇಕಿಯಾಗಲಿ, ಅವಿವೇಕಿಯಾಗಲಿ ಎಲ್ಲರೂ ದೈವೇಚ್ಛೆಗೆ ಮಣಿಯಲೇಬೇಕು.**

# ೨೩. ಗುಪ್ತ ಚಳವಳಿ

## ರಣರಾಗನ ಮಹೋಪಕಾರ

ವಿಜ್ಜಲನು ರಾಜಮಹೇಂದ್ರದ ಮಹಾದ್ವಾರವನ್ನು ಸೇರುವ ವೇಳೆಗೆ ಕುಕ್ಕುಟಗಳು ಕೂಗಿದುವು. ಅರುಣೋದಯ ಸಮಯವೆಂದು ತಿಳಿದು ಕುದುರೆಯನ್ನು ವೇಗವಾಗಿ ಬಿಡಲು ಯತ್ನಿಸಿದನು. ನಗರದ ಎಲ್ಲೆಯನ್ನು ಬಿಟ್ಟು ಸ್ವಲ್ಪ ದೂರ ಹೋಗುವುದರಲ್ಲಿ ಹಿಂದಿನಿಂದ ಯಾರೋ ಸವಾರನು ಬರುತ್ತಿರುವುದನ್ನು ಕಂಡನು. ಸವಾರನು ಮಿಂಚಿನ ವೇಗದಿಂದ ಹಿಂದೆ ಬಂದು ವಿಜ್ಜಲನನ್ನು ಬಲವಾಗಿ ಗುದ್ದಿದನು. ವಿಜ್ಜಲನು ಆ ಪೆಟ್ಟಿಗೆ ಕುದುರೆಯಿಂದ ಉರುಳಿ ಮೂರ್ಛೆ ಹೋದನು. ಮೂರ್ಛೆ ತಿಳಿದು ಎದ್ದು ನೋಡಿದಾಗ ಸೂರ್ಯೋದಯವಾಗಿತ್ತು. ಆದರೆ, ತಾನು ಭದ್ರವಾಗಿಟ್ಟಿದ್ದ ಪತ್ರ ಇರಲಿಲ್ಲ. ಕೂಡಲೇ ಸಲ್ಲಾಣನ ಮನೆಗೆ ಓಡಿದನು. ವೀರಧವಳನನ್ನು ಕೂಗಿ, ಎಲ್ಲರನ್ನೂ ಹತ್ತಿರ ಕರೆದು ನಡೆದ ಪ್ರಸಂಗವನ್ನು ತಿಳಿಸಿದನು. ಇದು ಚಂಡವರ್ಮನು ನಡೆಸುತ್ತಿರುವ ಗುಪ್ತ ಚಳವಳಿಯೆಂದು ವೀರಧವಳನು ನಿರ್ಧರಿಸಿದನು. ಆದುದರಿಂದ ತಾನು ಕೂಡಲೇ ಅಭೇದ ದುರ್ಗಕ್ಕೆ ಹೋಗಿ ಸತ್ಯಾಶ್ರಯನನ್ನು ಅಲ್ಲಿಗೆ ಬರಮಾಡುವುದೇ ಇದಕ್ಕೆ ನಿವಾರಣೋಪಾಯವೆಂದು ಯೋಚಿಸಿ, ಸಲ್ಲಾಣ ಮೊದಲಾದವರಿಗೆ ಎಚ್ಚರಿಕೆಯಿಂದಿರುವಂತೆ ಹೇಳಿ, ಕೂಡಲೇ ಅಭೇದ ದುರ್ಗಕ್ಕೆ ಪ್ರಯಾಣ ಮಾಡಿದನು.

ರಾಜಕುಮಾರನ ಅಪಹರಣದ ಸುದ್ದಿ ದೇಶದಲ್ಲೆಲ್ಲ ಹರಡಿತು. ಅಜಿಂಕ್ಯ ದುರ್ಗದ ರಕ್ಷಕ ರಣರಾಗನಿಗೂ ವರ್ತಮಾನ ಬಂತು. ಈ ಅಪಹರಣ ಸಂಬಂಧದಲ್ಲಿ ವೀರಧವಳನೂ ರಾಜದ್ರೋಹದ ಆಪಾದನೆಗೆ ಸಿಕ್ಕಿರುವುದಾಗಿಯೂ, ಆತನನ್ನು ಹಿಡಿದುಕೊಟ್ಟವರಿಗೆ ಒಂದು ಸಾವಿರ ವರಹಗಳನ್ನು ಕೊಡುವುದಾಗಿಯೂ ತಿಳಿಯಿತು ರಣರಾಗನಿಗೆ. ಚಂಡವರ್ಮನ ಅಪ್ಪಣೆಯಂತೆ ಇಪ್ಪತ್ತೈದು ಸಾವಿರ ಜನರನ್ನು ಸೇರಿಸಿ ರಾಜಧಾನಿಯ ಕಡೆಗೆ

ಹೊರಟನು ರಣರಾಗ. ರಾಜಧಾನಿಗೆ ಬರುವಾಗ ಕಾಡಿನಲ್ಲಿ ವೃದ್ಧ ವನಚರಿಯನ್ನು ಕಂಡನು. ಆಕೆಯು ಹಿಂದೆ ನಡೆಸಿದ್ದ ಮಾಯಾಜಾಲಗಳನ್ನು ರಣರಾಗನು ಮರೆತಿರಲಿಲ್ಲ! ಆಕೆಯನ್ನು ಸೆರೆಯಲ್ಲಿಡದಿದ್ದರೆ ಚಂಡವರ್ಮ ಉಳಿಯುವುದಿಲ್ಲವೆನಿಸಿತು ಆತನಿಗೆ. ಆದುದರಿಂದ ಪ್ರಯಾಸಪಟ್ಟು ಆಕೆಯನ್ನು ಹಿಡಿದು, ಆಪ್ತ ಸವಾರರ ಮೂಲಕ ಅಜಿಂಕ್ಯ ದುರ್ಗದ ಸೆರೆಮನೆಗೆ ಕಳುಹಿಸಿಕೊಟ್ಟನು.

ಮುಂದೆ ಅಭೇದ ದುರ್ಗದ ಮಾರ್ಗವಾಗಿ ಬರುತ್ತಿರುವ ಸಮಯದಲ್ಲಿ ವೀರಧವಳನು ಕುದುರೆಯ ಮೇಲೆ ನಾಗಾಲೋಟದಲ್ಲಿ ಹೋಗುತ್ತಿರುವುದು ಕಂಡುಬಂತು. ಆತನನ್ನು ಸಹ ಕೈಸೆರೆ ಹಿಡಿಸಿ ಅಜಿಂಕ್ಯ ದುರ್ಗದ ಸೆರೆಮನೆಗೆ ರವಾನೆ ಮಾಡಿದನು ರಣರಾಗ!

ಇಬ್ಬರು ಶತ್ರುಗಳೂ ಹೀಗೆ ಆಕಸ್ಮಿಕವಾಗಿ ಸುಲಭದಲ್ಲಿ ಕೈಸೆರೆ ಸಿಕ್ಕಿದುದಕ್ಕಾಗಿ ರಣರಾಗನು ತಾನೇ ಪುಣ್ಯಶಾಲಿ ಎಂದುಕೊಂಡನು. ಚಂಡವರ್ಮನಿಗೆ ಇನ್ನು ಮುಂದೆ ತೊಂದರೆಯಿಲ್ಲವೆಂದು ಆನಂದಪಟ್ಟನು. ಲಲಿತಪ್ರಭೆ ಚಂಡವರ್ಮನ ಧರ್ಮಪತ್ನಿಯಾಗುವುದು ದಿಟವೆನಿಸಿತು ಆತನಿಗೆ. ಹತ್ತಿರದಲ್ಲಿ ಕಾಣುತ್ತಿದ್ದ ಅಭೇದ ದುರ್ಗಕ್ಕೆ ಹೋಗಿ ಸತ್ಯಾಶ್ರಯನಿಗೆ ಬುದ್ಧಿ ಹೇಳಬೇಕೆನ್ನುವಷ್ಟು ದೂರ ಯೋಚಿಸಿದನು ರಣರಾಗ ಆಗಿನ ಪುಣ್ಯಪ್ರಭಾವದಲ್ಲಿ! **ಪುಣ್ಯಕ್ಕೆ ನಾಣ್ಯಬೇಕು; ನಾಣ್ಯವಿಲ್ಲದ ಪುಣ್ಯಕ್ಕೆ ಪಾಪವೇ ಮೂಲ.** ಆರೋಗ್ಯಕ್ಕೆ ಶುಚಿಯಿಂದ ಪ್ರಭಾವವುಂಟಾಗುವಂತೆ ಯಾವ ಪುಣ್ಯಪುರುಷಾರ್ಥವಾಗಲಿ ನಾಣ್ಯದಿಂದ ನಡೆದಲ್ಲದೆ ಶೋಭಿಸಲಾರದು. ರಣರಾಗ ನಾಣ್ಯವರಿಯದ ಮೂಢ. ಸತ್ಯಾಶ್ರಯನಿಗೆ ಈತನು ಹೇಳಬೇಕಾದ ಬುದ್ಧಿ ಎಲ್ಲಿಯದು? ಚಂಡವರ್ಮನಿಗೆ ಬೇಕಲ್ಲವೇ ಈತನ ನಾಣ್ಯವಿಲ್ಲದ ಬುದ್ಧಿ!

ರಣರಾಗನು ತನಗೆ ಸಂಭವಿಸಿದ ಜಯ ವಿಜಯಗಳನ್ನು ಮೊದಲು ಚಂಡವರ್ಮನಿಗೆ ಅರಿಕೆಮಾಡಬೇಕೆಂದು ನಿರ್ಧರಿಸಿ ಒಂದೇ ಉಸಿರಿನಲ್ಲಿ ರಾಜಧಾನಿಗೆ ಬಂದು, ಚಂಡವರ್ಮನನ್ನು ಕಂಡನು. ಚಂಡವರ್ಮನಿಗೆ ಬಹಳ

ಸಂತೋಷವಾಯಿತು ತನ್ನ ವಿಶ್ವಾಸಪಾತ್ರನಾದ ಸೇವಕನನ್ನು ನೋಡಿ ಆತನನ್ನು ಒಳಗೆ ಕರೆದು ಬಾಗಿಲನ್ನು ಮುಚ್ಚಿ, ಆತುರದಿಂದ ಒಂದಾದ ಮೇಲೆ ಒಂದು ಪ್ರಶ್ನೆ ಕೇಳಲಾರಂಭಿಸಿದನು ಚಂಡವರ್ಮ !

"ಇರಿ, ಮಹಾರಾಜ, ಇರಿ. ನನಗೆ ಬಹಳ ಶ್ರಮವಾಗಿದೆ. ಎಂಟು ದಿನಗಳಲ್ಲಿ ಸುಮಾರು ನೂರಿಪ್ಪತ್ತೈದು ಮೈಲಿ ಪ್ರಯಾಣ ಮಾಡಿದ್ದೇನೆ. ಮೊದಲಿನ ಹಾಗೆ ಬೇಗ ಬೇಗ ಪ್ರಯಾಣ ಮಾಡಲು ಆಗುವುದಿಲ್ಲ ನನಗೆ." ಎಂದನು ರಣರಾಗ. ರಣರಾಗನ ನುಡಿಯಲ್ಲಿ ಆಯಾಸಕ್ಕಿಂತ ಹೆಮ್ಮೆ ಅಡಗಿತ್ತು. ಚಂಡವರ್ಮನಿಗೂ ಸಹ ರಣರಾಗನ ವರ್ತನೆ ವಿಚಿತ್ರವೆಂದು ತೋರಿತು.

"ರಣರಾಗ, ನಿನ್ನ ಆಯಾಸದಲ್ಲಿ ಉಲ್ಲಾಸವೇನೂ ಇಲ್ಲವೆ?" ಎಂದು ಚಮತ್ಕಾರದಿಂದ ಕೇಳಿದನು ಚಂಡವರ್ಮ !

"ಇದೆ, ಮಹಾರಾಜ, ಇದೆ"

"ಏನು ! ಏನು !!"

"ವೃದ್ಧ ವನಚರಿಯನ್ನೂ ವೀರಧವಳನನ್ನೂ ಕಾಡಿನಲ್ಲಿ ಸೆರೆ ಹಿಡಿದು—"

"ಏನು ? ಸೆರೆ ಹಿಡಿದು !"

"ಹೌದು ಮಹಾರಾಜ. ಸೆರೆ ಹಿಡಿದು ಅಜಿಂಕ್ಯ ದುರ್ಗದ ಸೆರೆಮನೆಯಲ್ಲಿ ಸುಖವಾಗಿಟ್ಟಿದ್ದೇನೆ." ಎಂದು ತಿಳಿಸಿ, ನಡೆದ ವೃತ್ತಾಂತವನ್ನು ವಿಶದಪಡಿಸಿದನು ರಣರಾಗ ದಣಿಯ ಸಮ್ಮುಖದಲ್ಲಿ !

ಚಂಡವರ್ಮನು ತಾನು ಎಲ್ಲಿದ್ದೇನೆಂಬುದನ್ನು ಮರೆತನು. "ಭಲೆ, ಭಲೆ, ರಣರಾಗ, ಕೊನೆಗೆ ಇಬ್ಬರು ಶತ್ರುಗಳೂ ನಮ್ಮ ವಶವಾದರು. ನಮ್ಮ

ಕೆಲಸ ಮುಕ್ಕಾಲು ಮುಗಿದಂತಾಯಿತು.'' ಎಂದು ದುರ್ಗರಕ್ಷಕ ಶಿಖಾಮಣಿ ಯನ್ನು ಬಿಗಿದಪ್ಪಿದನು ಚಂಡವರ್ಮ.

'' ಮಹಾರಾಜ, ಈ ವಿಚಾರವನ್ನು ತಾವು ಯಾರಿಗೂ ಹೇಳಬಾರದು. ಇಲ್ಲಿಯ ವರ್ತಮಾನವೇನು?"

" ಇಲ್ಲಿಯ ವರ್ತಮಾನ ಇನ್ನೇನಿದೆ! ದುರ್ಜಾತಸಿಂಹನು ಒಂದು ರಾತ್ರಿ ವೀರಧವಳನ ಮೇಲೆ ಕತ್ತಿಯನ್ನು ಪ್ರಯೋಗಿಸಿದನು. ಆದರೆ, ಅದು ಗುರಿ ತಪ್ಪಿದುದರಿಂದ ವೀರಧವಳನಿಗೆ ಪ್ರಾಣಾಪಾಯವಾಗಲಿಲ್ಲ."

" ಛೀ, ಅದೆಂತಹ ಕೆಲಸ! ವೀರಧವಳನನ್ನು ನಾವೇ ಕೊಲ್ಲುವುದ ಕ್ಕಿಂತ ಜೀವಂತವಾಗಿ ಹಿಡಿದು ಮಂತ್ರಿಮಂಡಲಿಯವರಿಂದ ಕೊಲ್ಲಿಸುವುದು ಲೇಸಲ್ಲವೇ, ಮಹಾರಾಜ?''

'' ಹೌದು. ಆದರೆ, ಆಗ ವೀರಧವಳನು ರಾಜದ್ರೋಹಿಯಾಗಿರಲಿಲ್ಲ. ರಾಜಕುಮಾರನ ಅಪಹರಣ ಇನ್ನೂ ನಡೆದಿರಲಿಲ್ಲ."

" ಆದಿರಲಿ. ದುರ್ಜಾತಸಿಂಹನಿಗೂ ಸಹ ನೀವು ಈಗ ನಮಗೆ ಸಂಭವಿ ಸಿರುವ ಜಯ ವಿಜಯಗಳನ್ನು ತಿಳಿಸಲಾಗದು, ಮಹಾರಾಜ."

'' ಆಗಲಿ. ಇದುವರೆಗೆ ಎಲ್ಲವೂ ನಮಗೆ ಅನುಕೂಲವಾಗಿಯೇ ನಡೆ ದಿದೆ. ಇನ್ನು ಲಲಿತಪ್ರಭೆಯನ್ನು ವಿವಾಹ ಮಾಡಿಕೊಂಡು ಸಮಾಧಾನದಿಂದ ಬದುಕಬೇಕೆಂದು ನಿಶ್ಚಯಿಸಿದ್ದೇನೆ."

'' ಆದರೆ, ಲಲಿತಪ್ರಭೆಯನ್ನು ದುರ್ಜಾತಸಿಂಹನಿಗೆ ತಂದುಕೊಡುವು ದಾಗಿ ಹಿಂದೆ ವಾಗ್ದಾನ ಮಾಡಿಲ್ಲವೇ?"

'' ಮಾಡಿದ್ದೇನೆ ಸರಿ. ಆದರೆ, ಲಲಿತಪ್ರಭೆಯಂತಹ ಸ್ತ್ರೀ ರತ್ನವನ್ನು ಆ ದಾಂಡಿಗನಿಗೆ ತಂದುಕೊಡಲು ನಾನು ಮೂರ್ಖನಲ್ಲ. ಆಗ ಕಠಿಣ ಪ್ರಸಂಗ ಒದಗಿದುದರಿಂದ ವಾಗ್ದಾನ ಮಾಡಬೇಕಾಯಿತಷ್ಟೆ. ನಮ್ಮ ಮೇಲೆ

ಬಂದಿರುವ ಸುಳ್ಳುಸಾಕ್ಷಿಯು ಆರೋಪವು ತೊಲಗಲಿ. ಆಗ ನೋಡು ; ಆ ದಾಂಡಿಗರಿಬ್ಬರಿಗೂ ತಕ್ಕ ಮರ್ಯಾದೆ ಮಾಡುತ್ತೇನೆ."

ಈ ಮಾತು ನಡೆಯುತ್ತಿರುವ ಸಮಯಕ್ಕೆ ಸರಿಯಾಗಿ ಬಾಗಿಲು ತಟ್ಟಿದಂತಾಯಿತು. ರಣರಾಗನು ಚಂಡವರ್ಮನ ಅಪ್ಪಣೆಯಂತೆ ಬಾಗಿಲು ತೆರೆದನು. ದುರ್ಜಾತಸಿಂಹನು ಒಳಗೆ ಬಂದು " ಆನಂದದ ಮಾತು " ಎಂದು ಹೇಳಿ ಚಂಡವರ್ಮನ ಹತ್ತಿರ ಕುಳಿತನು. ಚಂಡವರ್ಮನು ಪೆಚ್ಚಾಗಿ ದುರ್ಜಾತಸಿಂಹನನ್ನು ನೋಡಿದನು. ತಾನು ಆಡಿದ ಮಾತುಗಳನ್ನು ಈತನು ಕೇಳಿಸಿಕೊಂಡಿರಬಹುದೆಂದು ಭಾವಿಸಿದನು ಚಂಡವರ್ಮ. ದುರ್ಜಾತಸಿಂಹನು ಕೈಯಲ್ಲಿದ್ದ ಒಂದು ಪತ್ರವನ್ನು ಚಂಡವರ್ಮನಿಗೆ ಕೊಟ್ಟು '' ಇದು ಸರದಾರ ಸತ್ಯಾಶ್ರಯನಿಗೆ ಬರೆದ ಪತ್ರ." ಎಂದನು.

" ಯಾರು ಬರೆದ ಪತ್ರ ? "

" ವೀರಧವಳ !''

ಚಂಡವರ್ಮನಿಗೆ ಕಳೆದುಹೋಗಿದ್ದ ಪ್ರಾಣ ಮರಳಿ ಬಂದಂತಾಯಿತು. ತನ್ನ ಸ್ಥಳದಿಂದ ಎದ್ದು ಸಂತೋಷದಿಂದ—'' ಈ ಕಾಗದ ನಿಮಗೆ ಸಿಕ್ಕಿದ ಬಗೆ ? " ಎಂದು ಕೇಳಿದನು.

'' ನಾನು ಕೆಲವು ದಿನಗಳ ಹಿಂದೆ ಅರುಣೋದಯಕ್ಕೆ ಮುಂಚೆ ಅಶ್ವಶಾಲೆಯ ಬಳಿ ಸುಳಿದಾಡುತ್ತಿದ್ದೆನು. ಅಲ್ಲಿಗೆ ವಿಜ್ಜಲನು ಬಂದುದನ್ನು ನೋಡಿ ಅಷ್ಟು ಹೊತ್ತಿನಲ್ಲಿ ಆತನು ಏಕೆ ಬಂದಿರಬಹುದೆಂದು ತಿಳಿಯಬೇಕೆಂದು ಆತನ ಹಿಂದೆಯೇ ಹೋದೆನು. ಆತನು ಅಶ್ವಶಾಲೆಯಿಂದ ಒಂದು ಕುದುರೆಯನ್ನು ಕೇಳಿ ತೆಗೆದುಕೊಂಡು ರಾಜಧಾನಿಯಿಂದ ಹೊರಟನು. ಅಲ್ಲಿಂದ ಅಭೇದ ದುರ್ಗದ ಕಡೆಗೆ ತಿರುಗಿದನು. ಆಗ ನನಗೆ ಸಂಶಯವುಂಟಾಯಿತು. ಸತ್ಯಾಶ್ರಯನಿಗೆ ಗುಪ್ತ ಸಮಾಚಾರವನ್ನು ತಿಳಿಸಲು ಆತನು ಹೊರಟಿರಬಹುದೆಂದು ಭಾವಿಸಿ, ಆತನನ್ನು ಗುದ್ದಿ ಕೆಡವಿದೆನು. ಈ ಕಾಗದವು ಸಿಕ್ಕಿತು."

ಚಂಡವರ್ಮನು ಆ ಕಾಗದವನ್ನು ಓದಿಕೊಂಡು "ಕೆಲಸ ಆಯಿತು" ಎಂದು ಹಿಗ್ಗಿದನು. ವೀರಧವಳನು ಆ ಕಾಗದದಲ್ಲಿ ನೂತನ ಮಂತ್ರಿಮಂಡಲಿಯ ಮೇಲೂ, ರಾಜಪ್ರತಿನಿಧಿಯ ಮೇಲೂ ಆರೋಪಣೆ ಮಾಡಿದ್ದನು. ಪ್ರಜೆಗಳ ಇಷ್ಟದಂತೆ ರಾಜಧಾನಿಗೆ ಬಂದು ಪೂರ್ವ ಚಾಳುಕ್ಯ ವಂಶ ಪ್ರತಿಷ್ಠಾಪನೆಯಲ್ಲಿ ತೊಡಗಬೇಕೆಂದು ಸತ್ಯಾಶ್ರಯನಿಗೆ ಮೊರೆಯಿಟ್ಟು ಬೇಡಿಕೊಂಡಿದ್ದನು.

ರಣರಾಗನು ಇದನ್ನು ತಿಳಿದು—"ಮಹಾರಾಜ, ನೂತನ ಮಂತ್ರಿಮಂಡಲಿಗೆ ವಿರುದ್ಧವಾಗಿ ಪಿತೂರಿ ನಡೆಸಿರುವುದೇ ಒಂದು ಅಪರಾಧ. ಜೊತೆಗೆ ರಾಜ್ಯಭ್ರಷ್ಟನಾದ ಸತ್ಯಾಶ್ರಯನನ್ನು ಬರಮಾಡಿಕೊಳ್ಳಲು ಒಳಸಂಚು ನಡೆಸುತ್ತಿರುವುದು ಎರಡನೆಯ ಅಪರಾಧ. ಮೂರನೆಯದು, ರಾಜದ್ರೋಹದ ಅಪರಾಧ ಹಿಂದೆಯೇ ಆಗಿದೆ. ಇನ್ನು ಭಯವಿಲ್ಲ." ಎಂದು ನ್ಯಾಯವಿಮರ್ಶೆ ಮಾಡಿದನು.

ಚಂಡವರ್ಮನು ಸತ್ಯಾಶ್ರಯನನ್ನೂ, ಚಂದ್ರಸೇನನನ್ನೂ ರಾಜದ್ರೋಹಿಗಳೆಂದು ಸೆರೆ ಹಿಡಿಯುವುದಕ್ಕೆ ಈ ಪತ್ರ ಅನುಕೂಲವಾಗಿದೆಯೆಂದು ಭಾವಿಸಿದನು. ಈ ಪತ್ರವನ್ನು ಹೊಸ ಮಂತ್ರಿಮಂಡಲಿಗೆ ತೋರಿಸಿ ಸತ್ಯಾಶ್ರಯನನ್ನೂ, ಚಂದ್ರಸೇನನನ್ನೂ ಸೆರೆ ಹಿಡಿಯಲು ಅಪ್ಪಣೆ ಪಡೆಯುತ್ತೇನೆಂದು ತಿಳಿಸಿದನು. ಪಿತೂರಿಯ ಪತ್ರದಲ್ಲಿ ಅವರ ಹೆಸರಿರುವುದರಿಂದ ಅವರೂ ರಾಜದ್ರೋಹಿಗಳೆಂದು ನಿರ್ಧರಿಸುವುದು ಸುಲಭವಾಗಿತ್ತು. ಚಂಡವರ್ಮನ ಸೂಚನೆಯನ್ನು ಎಲ್ಲರೂ ಒಪ್ಪಿದರು.

ರಣರಾಗ ಚಂಡವರ್ಮನ ಅಪ್ಪಣೆಯಂತೆ ಅಜಿಂಕ್ಯ ದುರ್ಗಕ್ಕೆ ಬಂದನು.

ರಾತ್ರಿ ಹನ್ನೆರಡು ಗಂಟೆ. ಅಜಿಂಕ್ಯ ದುರ್ಗದ ಸೆರೆಮನೆಯ ಠಾಣೆಯಲ್ಲಿ ಪಹರೆಯವನು ಹನ್ನೆರಡು ಗಂಟೆಗಳನ್ನು ಬಾರಿಸಿದನು. ಸೆರೆಮನೆಯ ಠಾಣೆಯ ಗಂಟಾನಿನಾದ ದೇವಮಂದಿರ ಪೂಜೆಯ ಮಂಗಳನಾದದಂತೆ ಕೇಳಿಸಿತು ವೀರಧವಳನಿಗೆ. ನಿದ್ರೆಯಿಂದ ಎದ್ದು ಭಗ

ವಂತನನ್ನು ನೆನೆದು ತನ್ನನ್ನು ಪಾರುಗಾಣಿಸೆಂದು ಬೇಡಿದನು. ವೀರಧವಳನ ಸುತ್ತಲೂ ಅಂಧಕಾರವೇ ಮುಸುಕಿತ್ತು. ಅಂಧಕಾರ ಮುಸುಕಿದ್ದರೂ ಸಹ ಆತನ ಅಂತರಾತ್ಮನ ಕಿರಣ ಬೆಳಗುತ್ತಿತ್ತು. ಸ್ವಲ್ಪ ಹೊತ್ತಿಗೆ ಸೆರೆಮನೆಯ ಬಾಗಿಲು ತೆರೆಯಿತು. ಬಾಗಿಲ ಬಳಿ ರಣರಾಗ! ಮಾತಿಲ್ಲ! ಅತ್ತಿತ್ತ ಚಲಿಸದ ಎದುರುನೋಟ! ಆತನು ನಿದ್ರೆಯಲ್ಲಿ ನಡೆದುಬರುತ್ತಿದ್ದಂತೆ ಭಾಸವಾಯಿತು ವೀರಧವಳನಿಗೆ. ಆತನು ಮುಂದೇನು ಮಾಡುವನೋ ನೋಡಬೇಕೆಂದು ಸುಮ್ಮನೆ ಕುಳಿತನು ವೀರಧವಳ. ರಣರಾಗನು ವೀರಧವಳನ ಬಳಿಗೆ ಬಂದು ಕೈಯಲ್ಲಿದ್ದ ಬೀಗದ ಕೈಗಳಿಂದ ವೀರಧವಳನ ಕೈಕಾಲುಗಳ ಕೋಳಗಳನ್ನು ಕಳಚಿದನು. ವೀರಧವಳನಿಗೆ ಇದ್ದ ಸಂಶಯ ತೊಲಗಿತು. ರಣರಾಗನಿಗೆ ನಿದ್ರೆಯಲ್ಲಿ ನಡೆಯತಕ್ಕ ನಿದ್ರಾಭ್ರಮಣೆಯ ವ್ಯಾಧಿ ಇರಬೇಕೆಂದು ನಿರ್ಧರಿಸಿದನು. ಆಪದ್ಬಾಂಧವನೂ ಅನಾಥರಕ್ಷಕನೂ ಆದ ಪರಮಾತ್ಮನ ಲೀಲೆಗಾಗಿ ಬೆರಗಾದನು. ತನ್ನನ್ನು ಬಂಧಿಸಿದ ರಣರಾಗನನ್ನೇ ತನ್ನ ಬಿಡುಗಡೆಯ ಸಾಧನ ಮಾಡಿಸಿದ ಕಾರ್ಯಕಾರಣಸಮರ್ಥನನ್ನು ಮನದಲ್ಲಿ ಸ್ಮರಿಸಿದನು.

ವೀರಧವಳನ ಬೇಡಿಯ ಸರಪಣಿಗಳು ಕೆಳಗೆ ಬಿದ್ದಾಗ ರಣರಾಗನು ನಿದ್ರೆಯಿಂದ ಎಚ್ಚರಗೊಂಡನು. ತಾನು ಮಾಡಿರುವ ಕೆಲಸದ ಸ್ಮರಣೆಯುಂಟಾಯಿತು ಆತನಿಗೆ. ಕೋಪದಿಂದ ಉದ್ರೇಕಗೊಂಡು ವೀರಧವಳನ ಮೇಲೆ ಹಾರಿದನು ರಣರಾಗ! ಆಹಾ! ವೀರಧವಳನನ್ನು ಆಗ ವರ್ಣಿಸಲಸದಳವಾಗಿತ್ತು. ಆತನ ಮುಖದಲ್ಲಿ ದಿವ್ಯ ತೇಜಸ್ಸು ಮಿನುಗಿತು. ಭುಜಗಳು ಒದರಿದುವು. ಕಣ್ಣುಗಳು ಅರಳಿದುವು. ನರನಾಡಿಗಳಲ್ಲಿ ಶಕ್ತಿ ಹರಿಯಿತು. "ಜೈ ಭಗವಾನ್" ಎಂದು ಕೂಗಿ ಒಂದೇ ಹಿಡಿತದಲ್ಲಿ ರಣರಾಗನನ್ನು ಕೆಳಗುರುಳಿಸಿ ಆತನ ಕೈಕಾಲುಗಳನ್ನು ಸರಪಣಿಗಳಿಂದ ಬಿಗಿದನು.

ರಣರಾಗನು ಕೆಳಗೆ ಬಿದ್ದು ಹೊರಳುತ್ತ "ದುಷ್ಟಾ, ಬಿಡು. ಬಿಡು!" ಎಂದು ಅಬ್ಬರಿಸಿದನು. "ಸುಮ್ಮನಿರು. ಬಾಯಿ ಮುಚ್ಚು." ಎಂದನು ವೀರಧವಳ.

“ಬಾಯಿ ಮುಚ್ಚದಿದ್ದರೆ ಏನುಮಾಡುತ್ತೀಯೆ. ನನ್ನನ್ನು ಕೊಲ್ಲುವೆಯೇನು ?”

“ನಿನ್ನನ್ನು ನಾನು ಕೊಲ್ಲುವುದೇ ! ಛೀ ನಿನ್ನಂಥ ಪಾಪಿಯನ್ನು ಕೊಲ್ಲಲು ಬೇರೆ ಇದ್ದಾರೆ.” ಎಂದು ಮೂದಲಿಸಿ ವೀರಧವಳನು ರಣರಾಗನನ್ನು ಸೆರೆಮನೆಯಲ್ಲಿ ಬಿಟ್ಟು ಬೀಗ ಹಾಕಿ ಹೊರಗೆ ಬಂದನು. ಆ ಕೊಠಡಿಯ ಎಡಗಡೆ ಇನ್ನೊಂದು ಕೊಠಡಿಯಲ್ಲಿ ಯಾರೋ ನರಳುತ್ತಿರುವಂತೆ ಕೇಳಿಸಿತು. ಬೀಗದ ಕೈಯಿಂದ ಅದರ ಬಾಗಿಲನ್ನು ತೆರೆದನು. ವೃದ್ಧ ವನಚರಿ ಇದ್ದಳು ಅಲ್ಲಿ ! ವೀರಧವಳನನ್ನು ನೋಡಿ ನಂಬಲಾಗಲಿಲ್ಲ ಆಕೆಗೆ. “ಯಾರು ! ವೀರಧವಳನೇ ?” ಎಂದಳು ಆಶ್ಚರ್ಯದಿಂದ. ವೀರಧವಳನು ಆಕೆಗೆ ನಡೆದ ಸಮಾಚಾರಗಳನ್ನು ಸೂಕ್ಷ್ಮವಾಗಿ ತಿಳಿಸಿದನು. ಹೊಸ ಉತ್ಸಾಹದಿಂದ ಇಬ್ಬರೂ ಸೆರೆಮನೆಯನ್ನು ಬಿಟ್ಟರು. ರಣರಾಗನ ಮಹೋಪಕಾರ ಮರೆಯುವಂತಿರಲಿಲ್ಲ.

ವೃದ್ಧ ವನಚರಿಯೊಡನೆ ವೀರಧವಳನು ಶ್ರೀಮನ್ನಾರಾಯಣನ ದೇವಾಲಯಕ್ಕೆ ಬಂದನು. ದೇವರ ದರ್ಶನವಾದ ಮೇಲೆ ಹತ್ತಿರದಲ್ಲಿದ್ದ ಅಶ್ವಶಾಲೆಯಿಂದ ಒಂದು ಉತ್ತಮಾಶ್ವವನ್ನು ಉಪಾಯದಿಂದ ಪಡೆದು, ವೃದ್ಧ ವನಚರಿಯನ್ನು ತನ್ನ ಹಿಂದೆ ಕುದುರೆಯ ಮೇಲೆ ಕುಳ್ಳಿರಿಸಿ, ಅಭೇದ ದುರ್ಗದ ಕಡೆಗೆ ತೆರಳಿದನು.

---

## ೨೪. ಸತ್ಯಾಶ್ರಯನ ಸ್ಮರಣೆ

### ವೃದ್ಧ ವನಚರಿಯ ಮಾತೃವಚನ

ಅಜಿಂಕ್ಯ ದುರ್ಗಕ್ಕೂ ಅಭೇದ ದುರ್ಗಕ್ಕೂ ಎಂಟು ಮೈಲಿ ಮಾತ್ರ. ಕುದುರೆ ಮೆಲ್ಲನೆ ಸಾಗುತ್ತಿತ್ತು. ಅಜಿಂಕ್ಯ ದುರ್ಗದಿಂದ ಯಾರೂ ಹಿಂಬಾಲಿಸುವಂತಿರಲಿಲ್ಲ. ದುರ್ಗರಕ್ಷಕನೇ ಸೆರೆಮನೆಯಲ್ಲಿರುವಾಗ ಹಿಂಬಾಲಿಸುವವರು ಯಾರೂ ಇರಲಿಲ್ಲ. ದಾರಿಯಲ್ಲಿ ವೃದ್ಧ ವನಚರಿಯು ಅನಿರೀಕ್ಷಿತವಾಗಿ—"ಮಗು" ಎಂದು ಕೂಗಿದಳು. ವೀರಧವಳನಿಗೆ ಅರ್ಥವಾಗಲಿಲ್ಲ. "ಇಲ್ಲಿ ಯಾರು ಮಗು ?" ಎಂದು ಕೇಳಿದನು. "ನೀನು" ಎಂದಳು ವೃದ್ಧ ವನಚರಿ ! ವೀರಧವಳನಿಗೆ ಆಶ್ಚರ್ಯವಾಯಿತು. ವೃದ್ಧ ವನಚರಿಗೆ ಚಿತ್ತ ಪಲ್ಲಟವಾಗಿರಬೇಕೆಂದು ಭಾವಿಸಿ,—"ನಾನು ಯಾರ ಮಗು ? ನಿನ್ನ ಮಗುವೇನು ?" ಎಂದು ಹಾಸ್ಯದಿಂದ ನುಡಿದನು.

ಮಗು, ಹಾಸ್ಯ ಮಾಡಬೇಡ. ಹೆತ್ತು ಸಾಕಿದ ಮಗನಲ್ಲದಿರಬಹುದು ; ಆದರೆ ನಾನು ಹೊತ್ತು ಸಾಕಿದ ಕಂದ ನೀನು. ಇದು ಬಹಳ ಗೂಢ ವಿಚಾರ. ನಿನಗೆ ತಿಳಿಸಲು ಇದುವರೆಗೂ ನನಗೆ ಸಮಯ ದೊರೆಯಲಿಲ್ಲ. ನನ್ನ ಈಗಿನ ಭೀಕರ ರೂಪನ್ನು ನೋಡಿ ನನ್ನನ್ನು ಹುಚ್ಚಿಯೆಂದು ತಿಳಿಯಬೇಡ. ನಾನು ಹುಚ್ಚಿಯೂ ಅಲ್ಲ. ನನ್ನ ರೂಪು ಭೀಕರವಾಗಿಯೂ ಇರಲಿಲ್ಲ. ನನ್ನ ಸೌಂದರ‍್ಯಕ್ಕೆ ಚಂಡವರ್ಮನಿಂದ ವಿಘಾತವುಂಟಾಯಿತು, ಕಂದ !"

"ಏನು ? ಸೌಂದರ್ಯಕ್ಕೆ ವಿಘಾತವೇ ! ಚಂಡವರ್ಮನಿಂದಲೇ !"

"ಹೌದು, ಚಂಡವರ್ಮನಿಂದಲೇ. ನಿನ್ನ ಚಿಕ್ಕಪ್ಪನಾದ ಚಂಡವರ್ಮನಿಂದಲೇ ನನ್ನ ಸೌಂದರ್ಯಕ್ಕೆ ವಿಘಾತ !"

"ಚಂಡವರ್ಮ ನನ್ನ ಚಿಕ್ಕಪ್ಪನೇ ! ನನಗೆ ಇದು ಅರ್ಥವಾಗುವುದಿಲ್ಲ."

"ಅದರ ಅರ್ಥವನ್ನೇ ನಾನು ಈಗ ಹೇಳುತ್ತಿದ್ದೇನೆ. ಲಾಲಿಸು ಮಗು. ಆಗ ನನಗೆ ಇಪ್ಪತ್ತೈದು ವರ್ಷ. ನನ್ನ ರೂಪವನ್ನು ಮೆಚ್ಚಿದ ಚಂಡವರ್ಮನು ನನ್ನನ್ನು ವಿವಾಹವಾಗುವುದಾಗಿ ತಿಳಿಸಿದನು. ನಾನು ಆತನ ಮಾತನ್ನು ನಂಬಿ ಅರಮನೆಯಲ್ಲಿ ಸೇರಿದೆನು. ಆದರೆ, ನನ್ನ ಗುಣ ಆತನಿಗೆ ಸರಿಬೀಳಲಿಲ್ಲ."

"ಹಾಗೆಂದರೇನು ? ನಿನ್ನ ಗುಣ ಅಷ್ಟು ಕೆಟ್ಟುದಾಗಿತ್ತೇನು "

"ಕೆಟ್ಟುದಾಗಿದ್ದರೆ ಚೆನ್ನಾಗಿತ್ತು. ಕೆಟ್ಟ ಚಂಡವರ್ಮನಿಗೆ ಕೆಟ್ಟ ಗುಣ ಬೇಕಾಗಿತ್ತು. ಆದರೆ, ನಾನು ಆತನ ಇಷ್ಟದಂತೆ ನಿನಗೆ ವಿಷಪಾನ ನೀಡಲು ಒಪ್ಪಲಿಲ್ಲ."

"ಏನು, ತೊಟ್ಟಿಲಲ್ಲಿಯೇ ನನ್ನನ್ನು ಮುಗಿಸಿಬಿಡಬೇಕೆಂದಿದ್ದನೇನು ? "

"ಹೌದು, ಕಂದ. ಅಷ್ಟೇ ಅಲ್ಲ. ನಿಮ್ಮ ತಂದೆ ಸರದಾರ ಕೀರ್ತಿವರ್ಮನು ನಿಮ್ಮ ತಾಯಿ ವಸುಮತೀದೇವಿಯೊಡನೆ ಕನಕದುರ್ಗಕ್ಕೆ ಆರೋಗ್ಯ ನಿಮಿತ್ತವಾಗಿ ಹೋದಾಗ ನಿನ್ನನ್ನು ಅರಮನೆಯಲ್ಲಿಯೇ ಬಿಟ್ಟು ನಿನ್ನ ಪಾಲನೆಯ ಸಲುವಾಗಿ ನನ್ನನ್ನು ಉಪಮಾತೆಯಾಗಿ ನೇಮಿಸಿ ಹೋದರು. ಹೋದವರಿಬ್ಬರೂ ಮತ್ತೆ ಜೀವಸಹಿತ ಬರಲಿಲ್ಲ. ಚಂಡವರ್ಮನು ರಣರಾಗನ ಸಹಾಯದಿಂದ ನಿಮ್ಮ ತಾಯಿತಂದೆಗಳನ್ನು ಕೊಲೆ ಮಾಡಿಸಿದನು."

ವೀರಧವಳನಿಗೆ ಈ ಮಾತು ಕೇಳಿ ಕೋಪವೂ, ದುಃಖವೂ ಒಂದೇ ಸಲ ಉಕ್ಕಿಬಂದು, ಗದ್ಗದ ಸ್ವರದಿಂದ—"ಚಂಡವರ್ಮ! ರಣರಾಗ! ದೇವರಿಲ್ಲವೇ ? " ಎಂದು ಪ್ರಲಾಪಿಸಿದನು.

"ದೇವರಿದ್ದಾನೆ, ಮಗು. ಭಯವಿಲ್ಲ. ಚಂಡವರ್ಮನು ತನ್ನ ಮೋಸವನ್ನು ಮುಚ್ಚಲು ಅಣ್ಣನ ಮತ್ತು ಅತ್ತಿಗೆಯ ಹೆಸರಿನಲ್ಲಿ ಸ್ಫಟಿಕ ಶಿಲಾಸ್ತಂಭವನ್ನು ಕಟ್ಟಿಸಿದನು. ಈಗಲೂ ರಣರಾಗನು ತನ್ನ ಪಾಪಕೃತ್ಯವನ್ನು ನೆನೆದು

ಆ ಸ್ಫಟಿಕ ಶಿಲಾಸ್ತಂಭದ ಬಳಿ ಪ್ರತಿದಿನ ನಡುರಾತ್ರಿ ಒಬ್ಬನೇ ಹೋಗಿ ತಲೆ ಚಚ್ಚಿಕೊಂಡು ಪ್ರಾಯಶ್ಚಿತ್ತವನ್ನು ಕೋರುವುದುಂಟು.''

ವೀರಧವಳನಿಗೆ ವೃದ್ಧ ವನಚರಿಯ ಮಾತಿನಲ್ಲಿ ನಂಬಿಕೆ ಹುಟ್ಟಿ— "ನಿನ್ನ ಗತಿ ಏನಾಯಿತು ? " ಎಂದು ಅವಸರದಿಂದ ಕೇಳಿದನು.

"ನನ್ನ ಗತಿ ! ದೇವರು ದೊಡ್ಡವನು, ಕಂದ. ಚಂಡವರ್ಮನ ನೀಚ ಕೃತ್ಯಕ್ಕೆ ತಕ್ಕ ಪ್ರತೀಕಾರ ನಡೆಸುವಂತೆ ನುಡಿಯಿತು ನನ್ನ ಅಂತರ್ವಾಣಿ ! ಕೂಡಲೇ ನಿನ್ನನ್ನು ರಾಜಮಹೇಂದ್ರದ ಸತ್ಯಶೀಲ ಸರದಾರನಾದ ಸತ್ಯ ವರ್ಮನ ವಶಕ್ಕೆ ಕೊಡಬೇಕೆನಿಸಿತು. ಆಗ ನೀನು ಎರಡು ತಿಂಗಳ ಕೂಸು. ನಾನು ರಾಜಮಹೇಂದ್ರಕ್ಕೆ ಹೋಗುವುದಾದರೂ ಹೇಗೆ ? ಸತ್ಯವರ್ಮನಿಗೆ ನಿನ್ನನ್ನು ಒಪ್ಪಿಸುವುದಾದರೂ ಹೇಗೆ ? ಸತ್ಯವರ್ಮನಿಗೆ ಲಲಿತಗೌರಿಯನ್ನು ಕೊಟ್ಟು ವಿವಾಹ ನಡೆಯುವುದಾಗಿ ಅಜಿಂಕ್ಯ ದುರ್ಗದ ಸರದಾರನಿಗೆ ಆಹ್ವಾನ ಬಂದಿತ್ತು. ಒಂದು ಸಂಜೆ ಕತ್ತಲಾದ ಮೇಲೆ ನಿನ್ನನ್ನು ಎತ್ತಿಕೊಂಡು ಅಜಿಂಕ್ಯ ದುರ್ಗದಿಂದ ಹೊರಟು ಅರಣ್ಯ ಪ್ರಾಂತವನ್ನು ಸೇರಿದೆನು. ಅರಣ್ಯ ರಕ್ಷಕನು ನನ್ನನ್ನು ಗುರುತಿಸಿ ಆ ರಾತ್ರಿ ತನ್ನ ಮನೆಯಲ್ಲಿಟ್ಟುಕೊಂಡನು. ಚಂಡವರ್ಮನು ಕೀರ್ತಿವರ್ಮ ವಸುಮತಿದೇವಿಯರ ಕೊಲೆಗೆ ಕಾರಣ ನೆಂಬುದನ್ನು ತಿಳಿಸಿದೆನು ಆತನಿಗೆ. ಕೀರ್ತಿವರ್ಮನು ಪ್ರಜಾರಂಜಕನಾದ ದೊರೆಯಾಗಿದ್ದುದರಿಂದ ಅರಣ್ಯರಕ್ಷಕನು ನನ್ನ ಕಾರ್ಯದಲ್ಲಿ ಸಹಕರಿಸಲು ಒಪ್ಪಿ, ಮಾರನೆಯ ದಿನ ರಾಜಮಹೇಂದ್ರಕ್ಕೆ ನನ್ನೊಡನೆ ಗುಪ್ತ ಮಾರ್ಗದಲ್ಲಿ ಬಂದು, ರಾತ್ರಿ ಒಂಭತ್ತು ಗಂಟೆ ಹೊತ್ತಿಗೆ ರಾಜಮಹೇಂದ್ರದ ಹೊರವಳಯದಲ್ಲಿ ನನ್ನನ್ನು ಬಿಟ್ಟು ಹೊರಟುಹೋದನು. ನಾನು ಗೋದಾವರಿ ತೀರಕ್ಕೆ ಬಂದು, ನದಿಯ ಎದುರಿಗೆ ರಾಜಧಾನಿಯ ಬೆಳಕನ್ನು ಕಂಡು ಬಹಳ ಕಷ್ಟದಿಂದ ಅರ ಮನೆಯ ಪ್ರದೇಶಕ್ಕೆ ಬಂದೆನು.''

"ಅಂದು ಅರಮನೆಯಲ್ಲಿ ದೊಡ್ಡ ಸಮಾರಂಭ. ನವವಿವಾಹಿತ ದಂಪತಿಗಳು ಅಲಂಕೃತರಾಗಿ ಮಂಡಿಸಿದ್ದರು ಮಂಗಳ ಪೀಠದ ಮೇಲೆ. ನಾನು ಮೆಲ್ಲನೆ ಸಭಾ ಮಂದಿರವನ್ನು ಹೊಕ್ಕು, ಶಯನಗೃಹದ ಬಾಗಿಲಿನಲ್ಲಿ

ನಿನ್ನನ್ನಿರಿಸಿ, ನೀನು ರಾಜಕುಮಾರನೆಂಬುದಕ್ಕೆ ಕುರುಹಾಗಿ ಪಕ್ಕದಲ್ಲಿ ಬಿಲ್ಲು ಬಾಣಗಳನ್ನು ಹಾಕಿ ಬಂದ ದಾರಿ ಹಿಡಿದು ಹೊರಟುಬಂದೆನು."

ಈ ಮಾತನ್ನು ಹೇಳುತ್ತ ವೃದ್ಧ ವನಚರಿಯು ಅಳುತ್ತಿದ್ದುದನ್ನು ನೋಡಿ ವೀರಧವಳನು—"ಅಮ್ಮಾ, ನಿನ್ನ ಕರ್ತವ್ಯವನ್ನು ನೀನು ನಡೆಸಿರುವುದರಿಂದ ದೇವರು ನಿನ್ನನ್ನು ಮೆಚ್ಚುತ್ತಾನೆ. ದುಃಖಿಸಬೇಡ." ಎಂದು ಸಮಾಧಾನಪಡಿಸಿ, "ಆದರೆ, ನೀನು ನನ್ನನ್ನು ಅಜಿಂಕ್ಯ ದುರ್ಗದಲ್ಲಿಯೇ ಎಲ್ಲಿಯಾದರೂ ಸಾಕಬಹುದಾಗಿತ್ತಲ್ಲವೇ ?" ಎಂದು ಕೇಳಿದನು.

"ಅದು ಸಾಧ್ಯವಾಗಿರಲಿಲ್ಲ. ರಣರಾಗನು ದುರ್ಗರಕ್ಷಕನಾಗಿ ಚಂಡವರ್ಮನಿಗೆ ಶತ್ರುಗಳೇ ಇಲ್ಲದಂತೆ ಮಾಡುವಷ್ಟು ಆಸಕ್ತಿಯಿಂದ ಕೂಡಿದ್ದನು. ಆದರೆ, ರಾಜಮಹೇಂದ್ರದಲ್ಲಿ ಸತ್ಯ, ಶೀಲ, ಧೈರ್ಯ, ಸ್ಥೈರ್ಯಗಳಿಗೆ ಪ್ರಸಿದ್ಧಿಪಡೆದ ಸರದಾರ ಸತ್ಯಾಶ್ರಯನು ದಿಕ್ಕಿಲ್ಲದ ಕಂದಗಳನ್ನು ಹೇಗಾದರೂ ರಕ್ಷಿಸಬಲ್ಲನೆಂದು ನಾನು ನಂಬಿ ಹಾಗೆ ಮಾಡಿದೆನು. ನನ್ನ ನಂಬಿಕೆ ಸರಿಯಾದುದೆಂಬುದಕ್ಕೆ ನೀನಿರುವುದೇ ಸಾಕ್ಷಿ."

ಹೀಗೆ ಮಾತನಾಡುತ್ತ ವೀರಧವಳನು ರಾತ್ರಿ ಮೂರು ಗಂಟೆಯ ವೇಳೆಗೆ ಅಭೇದ ದುರ್ಗವನ್ನು ತಲಪಿದನು. ದುರ್ಗದ ದ್ವಾರಪಾಲಕನು ಅಷ್ಟು ಹೊತ್ತಿನಲ್ಲಿ ಕುದುರೆಯ ಕಾಲಿನ ಶಬ್ದವನ್ನು ಕೇಳಿ ಬೆಚ್ಚಿ ಎದ್ದು ದುರ್ಗದ ಸುಬೇದಾರನನ್ನು ಕರೆದನು. ಸುಬೇದಾರನು ಮಹಾದ್ವಾರವನ್ನು ತೆರೆದು ನೋಡಿ ತಕ್ಷಣ ಆಶ್ಚರ್ಯದಿಂದ—"ವೀರಧವಳ, ಬಂದೆಯಾ !" ಎಂದು ಹೇಳುತ್ತ ವೃದ್ಧ ಸ್ತ್ರೀಯನ್ನು ನೋಡಿ—"ಈಕೆ ಯಾರು ?" ಎಂದು ವಿಚಾರಿಸಿದನು. ವೀರಧವಳನು ವೃದ್ಧ ವನಚರಿಯನ್ನು ತೋರಿಸುತ್ತ—"ಈಕೆ ಒಬ್ಬಳು ಪರೋಪಕಾರಿಣಿ. ಈಕೆಯನ್ನೂ ಸಹ ಚಂಡವರ್ಮ ಸೆರೆಹಿಡಿಸಿ ಕಾರಾಗೃಹದಲ್ಲಿ ಬಂಧಿಸಿದ್ದನು. ಮೊದಲು ಆಕೆಗೆ ಬಟ್ಟೆ ಬದಲಾಯಿಸಿ, ಆಹಾರವನ್ನು ಕೊಡಿ. ಮಿಕ್ಕ ವಿಚಾರವನ್ನು ಮುಂದೆ ಹೇಳುತ್ತೇನೆ." ಎಂದು ತಿಳಿಸಿದನು. ಸುಬೇದಾರನು ಅದರಂತೆ ಒಬ್ಬ ಸೇವಕನನ್ನು ಕರೆದು ವೃದ್ಧ ವನಚರಿಯ ಸುಖೋಪಚಾರಗಳಿಗೆ ತಕ್ಕ ವ್ಯವಸ್ಥೆ ಮಾಡಿದನು.

ವೀರಧವಳನಿಗೆ ಊಟ ಬೇಕಿರಲಿಲ್ಲ. ವೃದ್ಧ ವನಚರಿಯ ತ್ಯಾಗ ಮತ್ತು ಭಕ್ತಿಗಾಗಿ ವೀರಧವಳನ ಮನವು ಕೃತಜ್ಞತೆಯಿಂದ ತುಂಬಿತ್ತು. **ಮನ ತುಂಬಿದ ಮೇಲೆ ಹೊಟ್ಟೆಯೂ ತುಂಬಿದಂತೆಯೇ.** ಕೃತಜ್ಞತೆಯ ಸವಿಯೂಟದಲ್ಲಿ ತಣಿದ ವೀರಧವಳನಿಗೆ ಗಾಢನಿದ್ರೆ ಬಂತು.

ಪ್ರಾತಃಕಾಲ ಎದ್ದು ಯಥಾವಿಧಿಗಳನ್ನು ಮುಗಿಸಿ, ಉಚಿತ ವಸ್ತ್ರಗಳನ್ನು ಧರಿಸಿ, ವೀರಧವಳನು ದುರ್ಗದ ಸುಬೇದಾರನನ್ನು ಕಂಡನು. "ಸತ್ಯಾಶ್ರಯ ಮಹಾರಾಜರನ್ನು ನೋಡೋಣ ನಡೆಯಿರಿ." ಎಂದು ಹೇಳಲು ಸುಬೇದಾರನು—"ವೀರಧವಳ, ಅವರು ಲಲಿತ ದುರ್ಗಕ್ಕೆ ಹೋದರು· ಜತೆಯಲ್ಲಿ ಲಲಿತಪ್ರಭೆ, ಚಂದ್ರಸೇನ, ಹಂಸಿಕೆ—ಇವರುಗಳೂ ಹೋದರು." ಎಂದು ತಿಳಿಸಿದನು. ವೀರಧವಳನಿಗೆ ಅದು ಗೊತ್ತಿರಲಿಲ್ಲ. ಅಂತು, ಸತ್ಯಾಶ್ರಯನು ರಾಜಮಹೇಂದ್ರಕ್ಕೆ ಅದಷ್ಟು ಸಮೀಪದಲ್ಲಿರುವ ಲಲಿತದುರ್ಗಕ್ಕೆ ಹೋದುದನ್ನು ತಿಳಿದು ಸಂತೋಷವಾಯಿತು. "ಹೊಸ ಸಮಾಚಾರವೇನಾದರೂ ಇದೆಯೇ ? " ಎಂದು ವೀರಧವಳನು ಕೇಳಿದನು.

"ಇದೆ. ನಿನ್ನೆಯ ದಿನ ರಾಜಮಹೇಂದ್ರದಿಂದ ಸಲ್ಲಾಣನೂ, ವಿಜ್ಜಲನೂ ಬಂದರು."

"ಏಕೆ ? "

"ಸತ್ಯಾಶ್ರಯ ಮಹಾರಾಜನ ದರ್ಶನಕ್ಕಾಗಿ."

"ದರ್ಶನಕ್ಕಾಗಿ ! "

"ಹೌದು. ರಾಜಮಹೇಂದ್ರದಲ್ಲಿ ರಾಜಪ್ರತಿನಿಧಿಯೂ, ಚಂಡವರ್ಮನೂ ಒಂದುಗೂಡಿ, ಅವರಿಗೆ ಕಿರುಕುಳ ಕೊಟ್ಟರಂತೆ. ಅವರು ಬರುವುದರೊಳಗಾಗಿ ಮಹಾರಾಜರು ಲಲಿತದುರ್ಗಕ್ಕೆ ಪ್ರಯಾಣ ಬೆಳಸಿದ್ದರು." ತಾನು ಮಾಡಬೇಕಾದ ಕೆಲಸವನ್ನು ಅವರು ಮುಂದರಿತು ಮಾಡಲೆತ್ನಿಸಿರುವು

ದಾಗಿ ಭಾವಿಸಿ, ವೀರಧವಳನು ಅವರನ್ನು ಬರಮಾಡುವಂತೆ ಸುಬೇದಾರನಿಗೆ ತಿಳಿಸಿದನು ಸುಬೇದಾರನು ಅವರನ್ನು ಕರೆಯಿಸಿದನು.

ವಿಜ್ಜಲನನ್ನೂ, ಸಲ್ಲಾಣನನ್ನೂ ನೋಡಿ ಸಂತೋಷದಿಂದ ವೀರಧವಳನು ರಾಜಮಹೇಂದ್ರದ ಸಕಲ ವಿಚಾರಗಳನ್ನೂ ತಿಳಿದುಕೊಂಡನು. ಸರದಾರ ಸತ್ಯಾಶ್ರಯನನ್ನೂ, ಚಂದ್ರಸೇನನನ್ನೂ ಸೆರೆಹಿಡಿಯಲು ರಾಜಪ್ರತಿನಿಧಿಯಿಂದ ಅವರು ಅಪ್ಪಣೆ ಪಡೆದಿರುವುದಾಗಿ ಗೊತ್ತಾಯಿತು. ವೀರಧವಳನು ಅವರನ್ನು ಕೂಡಲೇ ಲಲಿತದುರ್ಗಕ್ಕೆ ಹೊರಡುವಂತೆ ತಿಳಿಸಿದನು. ಚಂಡವರ್ಮನು ಮಾಡಿರುವ ಕಪಟವನ್ನೂ, ಅಜಿಂಕ್ಯ ದುರ್ಗದ ಸೈನ್ಯವೂ ಸಿಂಹಗುಹೆಯ ಸೈನ್ಯವೂ ಒಂದೆರಡು ದಿನಗಳಲ್ಲಿಯೇ ಸತ್ಯಾಶ್ರಯನನ್ನೂ, ಚಂದ್ರಸೇನನನ್ನೂ ಸೆರೆ ಹಿಡಿಯಲು ಬರುವರೆಂಬುದನ್ನೂ ಸತ್ಯಾಶ್ರಯ ಮಹಾರಾಜರಿಗೆ ಬಿನ್ನಹ ಮಾಡುವಂತೆ ಹೇಳಿದನು. ಫಲಹಾರ ಮುಗಿಸಿಕೊಂಡು ವಿಜ್ಜಲನೂ, ಸಲ್ಲಾಣನೂ ಲಲಿತದುರ್ಗಕ್ಕೆ ಹೊರಟರು.

ಸುಮಾರು ಮಧ್ಯಾಹ್ನ ಒಂದು ಗಂಟೆ. ವೀರಧವಳನೂ, ಸುಬೇದಾರನೂ ಬಹಳ ಹೊತ್ತು ಪರಸ್ಪರ ಆಲೋಚಿಸಿ, ಸುತ್ತಮುತ್ತಲಿನ ಮಿತ್ರ ಸರದಾರರುಗಳಿಗೆ ಹೇಳಿಕಳುಹಿಸಿದರು. ಸರದಾರ ವಿಶ್ವಜಿತ್, ಸರದಾರ ಕರ್ಮಮಣಿ ಮೊದಲಾದ ಹಲವು ಸರದಾರರೂ, ಸಣ್ಣ ಸಣ್ಣ ಪಾಳೆಯಗಾರರೂ ವೀರಧವಳನ ಆಹ್ವಾನವನ್ನು ಮನ್ನಿಸಿ ಸಂಜೆಯ ವೇಳೆಗೆ ಅಬೇಧ ದುರ್ಗಕ್ಕೆ ಬಂದರು. ಅಬೇಧ ದುರ್ಗದ ಸರದಾರ ವೀರರಾಜರ ಅಧ್ಯಕ್ಷತೆಯಲ್ಲಿ ಸರದಾರರ ಸಭೆ ಸೇರಿತು. ವೀರಧವಳನು ಅದುವರೆಗೆ ನಡೆದ ತನ್ನ ಮತ್ತು ಇತರ ವಿಚಾರಗಳನ್ನು ಸರದಾರರ ಮನಕರಗುವಂತೆ ವಿವರಿಸಿದನು. ಸರದಾರ ಸತ್ಯಾಶ್ರಯನು ನಿಸ್ಪೃಹನೆಂದೂ, ಸತ್ಯಶೀಲನೆಂದೂ ಸಾರಿದನು. ಈಗ ಅವರಿಗೆ ಕಠಿಣ ಪ್ರಸಂಗ ಒದಗಿದೆಯೆಂದೂ, ಪೂರ್ವ ಚಾಳುಕ್ಯ ರಾಜಕುಮಾರನು ಪಶ್ಚಿಮ ಚಾಳುಕ್ಯರ ವಶದಲ್ಲಿದ್ದಾನೆಂದೂ, ಪೂರ್ವ ಚಾಳುಕ್ಯ ರಾಜ್ಯವೆಲ್ಲವೂ ಪಶ್ಚಿಮ ಚಾಳುಕ್ಯರಿಂದ ನೇಮಿತರಾದ ಮಂತ್ರಿಮಂಡಲಿಯವರ ದೆಸೆಯಿಂದ ದೆಸೆಗೆಟ್ಟಂತಾಗಿದೆಯೆಂದೂ, ಸತ್ಯಾಶ್ರಯನಿಗೆ ಅವರೆಲ್ಲರೂ ಒತ್ತಾಸೆ ಮಾಡಿದರೆ, ಆತನು ತನ್ನ ಸತ್ಯಬಲದಿಂದ ರಾಜಕುಮಾರನನ್ನು

ಶತ್ರುಪಕ್ಷದವರಿಂದ ಬಿಡುಗಡೆ ಮಾಡಿ ಪೂರ್ವ ಚಾಳುಕ್ಯ ಸಿಂಹಾಸನವನ್ನು ಪುನರುತ್ಥಾನಗೊಳಿಸಬಲ್ಲನೆಂದೂ ಆವೇಶಪೂರಿತವಾದ ಭಾಷಣ ಮಾಡಿದನು. ಅಲ್ಲಿ ಸೇರಿದ್ದ ಸರದಾರರ ಹೃದಯದಲ್ಲಿ ರಾಜಭಕ್ತಿ ದೇಶಭಕ್ತಿಗಳನ್ನು ಉಕ್ಕಿಸಿದನು ವೀರಧವಳ! ಎಲ್ಲ ವಿಚಾರಗಳಿಗಿಂತ ವೀರಧವಳನು ಅಜಿಂಕ್ಯ ದುರ್ಗದ ಕೀರ್ತಿವರ್ಮನ ಪುತ್ರನೆಂದು ತಿಳಿದು ಸರದಾರರಿಗೆ ಮನ ಮರುಗಿತು. ಆತನಿಗೆ ಚಂಡವರ್ಮನಿಂದ ಒದಗಿದ ಕೋಟಲೆಗಳನ್ನು ಅವರು ಮೊದಲೇ ತಿಳಿದಿದ್ದರು. ಎಲ್ಲರೂ ಜಯಘೋಷಣೆ ಮಾಡಿ, ಸರದಾರ ಸತ್ಯಾಶ್ರಯನ ಪರವಾಗಿ ನಿಂತು ಯುದ್ಧ ಮಾಡುವುದಾಗಿ ಶಪಥ ಮಾಡಿದರು. ತಮ್ಮ ತಮ್ಮ ಸೈನ್ಯಗಳನ್ನು ಅಬೇಧ ದುರ್ಗದಲ್ಲಿ ಸೇರಿಸಿ ಸಕಲ ಸೈನ್ಯಾಧಿಕಾರವನ್ನೂ ಸರದಾರ ವೀರರಾಜರಿಗೆ ಕೊಡತಕ್ಕುದೆಂದು ನಿರ್ಧರಿಸಿದರು.

ಸರದಾರ ವೀರರಾಜನು ಎಲ್ಲರಿಗೂ ಯೋಗ್ಯರೀತಿಯಲ್ಲಿ ಸತ್ಕಾರ ಕೂಟವನ್ನು ಏರ್ಪಡಿಸಿದನು. ಸತ್ಕಾರ ಕೂಟ ಮುಗಿದ ಮೇಲೆ ಮತ್ತೆ ಸಭೆ ಸೇರಿದರು. ಆಗ ಸರದಾರ ವೀರರಾಜನು ವೀರಧವಳನನ್ನು ಕರೆದು—“ ನೀನು ಅಜಿಂಕ್ಯ ದುರ್ಗದ ಸರದಾರ ವಂಶೋದ್ಭವನೆಂದು ನನಗೆ ತಿಳಿದಿರಲಿಲ್ಲ. ಇದೋ ಈ ಸರ್ವಾಂಗ ಕವಚ, ಈ ಶೀರ್ಷಕ, ಈ ವಜ್ರಾಯುಧ—ಇವುಗಳನ್ನು ಇಲ್ಲಿ ನೆರೆದಿರುವ ಸಕಲ ಸರದಾರ ಸಮೂಹದಲ್ಲಿ ರಾಜಮರ್ಯಾದೆಯಾಗಿ ನಿನಗೆ ಅರ್ಪಿಸಿದ್ದೇನೆ. ನೀನು ಇವುಗಳನ್ನು ಧರಿಸಿ ಲೋಕೈಕವೀರನಾಗಿ ವಿರಾಜಿಸು.” ಎಂದು ಆಶೀರ್ವದಿಸಿದನು. ವೀರಧವಳನು ಸ್ವಲ್ಪ ಹೊತ್ತಿನಲ್ಲಿ ಅವುಗಳನ್ನು ಧರಿಸಿಕೊಂಡು, ಸಭಾಸದರ ಮುಂದೆ ನಿಂತು ನಮಸ್ಕರಿಸಿದನು. ಸಭೆಯಲ್ಲಿ “ ಸರದಾರ ಸತ್ಯಾಶ್ರಯಕೀ ಜೈ ” “ ಸರದಾರ ವೀರಧವಳಕೀ ಜೈ ” ಎಂದು ಜಯಕಾರ ಮೊಳಗಿತು. ಎಲ್ಲರೂ ತಮ್ಮ ತಮ್ಮ ದುರ್ಗಗಳಿಗೆ ತೆರಳಿದರು.

## ೨೫. ರಣಭೇರಿ

### ಹೃದಯಮಂದಿರದ ಪ್ರಣಯ ದೀಪ

ರಣರಾಗನು ತನ್ನ ಅಚಾತುರ್ಯದಿಂದ ವೀರಧವಳನನ್ನು ಬಿಡುಗಡೆ ಮಾಡಿದ ಮೇಲೆ ಚಂಡವರ್ಮನ ಮುಂದೆ ಮುಖವೆತ್ತಿ ತಿರುಗುವುದಾದರೂ ಕಷ್ಟವಾಗಿತ್ತು. ರಾಜಮಹೇಂದ್ರದಿಂದ ಅಜಿಂಕ್ಯ ದುರ್ಗಕ್ಕೆ ಚಂಡವರ್ಮನೂ ಸಿಂಹಗುಹೆಗೆ ದುರ್ಜಾತಸಿಂಹನೂ ಬಂದಿದ್ದರು. ಚಂಡವರ್ಮನಿಗೆ ಅಜಿಂಕ್ಯ ದುರ್ಗದಲ್ಲಿ ರಣರಾಗನಿಂದಲೇ ಹಾಗೆ ಅಚಾತುರ್ಯ ನಡೆಯುವುದೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ ಚಂಡವರ್ಮ. ವಿಧಿನಿಯಮವನ್ನು ಮೀರಲು ಯಾರಿಗೂ ಅಳವಲ್ಲವೆಂಬುದನ್ನು ಚಂಡವರ್ಮನು ಅರಿತನು. ಆದರೆ, ಕೊನೆಯ ಆಸೆಯೊಂದು ಆತನನ್ನು ಮುಂದಕ್ಕೆ ನೂಕುತ್ತಿತ್ತು. ಸತ್ಯಾಶ್ರಯ ನನ್ನೂ, ಚಂದ್ರಸೇನನನ್ನೂ ಸೆರೆ ಹಿಡಿದರೆ ಮಿಕ್ಕ ಸಂದರ್ಭಗಳೆಲ್ಲವೂ ತಾವಾ ಗಿಯೇ ಸಿದ್ಧಿಸುತ್ತವೆಯೆಂದು ಆತನು ಬಗೆದನು.

ಅಜಿಂಕ್ಯ ದುರ್ಗದ ವಿಶಾಲವಾದ ಮೈದಾನದಲ್ಲಿ ಎರಡು ಸಾವಿರ ಸವಾ ರರೂ, ಆರುನೂರು ಶಸ್ತ್ರಧಾರಿಗಳಾದ ಕಾಲಾಳುಗಳೂ ನಿಂತರು. ಚಂಡ ವರ್ಮನು ಮುಂದೆ ನಿಂತು ಸೈನ್ಯವನ್ನು ಹೊರಡುವಂತೆ ಅಪ್ಪಣೆ ಮಾಡಿದನು. ಒಂದೆರಡು ಹೆಜ್ಜೆ ಇಡುವಷ್ಟರಲ್ಲಿ ಶಸ್ತ್ರಾಗಾರದಲ್ಲಿದ್ದ ಶೀರ್ಷಕವೂ, ಸರ್ವಾಂಗ ಕವಚವೂ ಕೆಳಗೆ ಬಿದ್ದುವು. ಸರದಾರ ಚಂಡವರ್ಮನ ಮುಖ ಕಾಂತಿ ಹೀನವಾಯಿತು. ಆದರೆ ಸರದಾರನು ಅದನ್ನು ಲಕ್ಷಿಸದೆ ಮುಂದೆ ಹೊರಟನು. ಎರಡು ಮೈಲಿ ಹೋದ ಮೇಲೆ ಸಿಂಹಗುಹೆಯ ಸರ- ದಾರರು ಒಂಭೈನೂರು ಸವಾರರೊಡನೆ ಬಂದು ಸೇರಿದರು. ಸಾಯಂಕಾಲದ ವರೆಗೆ ಸೈನ್ಯವು ಸಾಗಿತು. ಒಂದು ಹಳ್ಳಿಯ ಸಮೀಪದಲ್ಲಿ ರಾತ್ರಿ ಬಿಡಾರ ಮಾಡಿದರು.

ಚಂಡವರ್ಮನೂ, ಸಿಂಹಸಹೋದರರೂ ಪ್ರಾತಃಕಾಲ ಎದ್ದು ಅಂದಿನ ಸೈನ್ಯದ ಚಲನವಲನಗಳನ್ನು ನಿರ್ಧರಿಸಿದರು. ಲಲಿತದುರ್ಗಕ್ಕೆ ಹೋಗುವ ಮಾರ್ಗದಲ್ಲಿಯೇ ವಿಮಲದುರ್ಗವಿತ್ತು. ಸುಮಿತ್ರಸೇನ ವಿಮಲದುರ್ಗದ ಸರದಾರ. ಸತ್ಯಾಶ್ರಯನ ಮಿತ್ರನಿವನು. ರಾಜಪ್ರತಿನಿಧಿಯ ಅಪ್ಪಣೆಯಿಂದ ಈತನೂ ವೀರಧವಳನಂತೆಯೇ ರಾಜದ್ರೋಹಿಯಾಗಿದ್ದನು. ಈತನನ್ನು ಮೊದಲು ಕೈವಶ ಮಾಡಿಕೊಳ್ಳುವುದು ಯುಕ್ತವೆಂದು ತಿಳಿದು ಸೈನ್ಯವನ್ನು ವಿಮಲದುರ್ಗದ ಕಡೆಗೆ ನಡೆಸಿದರು. ಆದರೆ, ಭೇದೋಪಾಯದಿಂದ ಸುಮಿತ್ರಸೇನನನ್ನು ಹಿಡಿಯಬೇಕೆಂದು ಗೊತ್ತುಮಾಡಿಕೊಂಡರು. ಕೂಡಲೇ ಒಬ್ಬ ಸವಾರನನ್ನು ಕರೆದು—“ನೀನು ಹೋಗಿ ಸುಮಿತ್ರಸೇನನನ್ನು ಕಾಣು. ಸರದಾರ ಸತ್ಯಾಶ್ರಯನ ಕಡೆಯವನೆಂದು ಹೇಳು. ಕೂಡಲೇ ಸೈನ್ಯಸಮೇತ ಬರಬೇಕೆಂದು ಸತ್ಯಾಶ್ರಯನು ತಿಳಿಸಿದ್ದಾನೆಂದು ನುಡಿದು ಬೇಗ ಬಾ.” ಎಂದು ತಿಳಿಸಿದನು.

ಸವಾರನು ವಿಮಲದುರ್ಗವನ್ನು ಹೊಕ್ಕು ಸುಮಿತ್ರಸೇನನನ್ನು ಕಂಡನು, ತಾನು ಸತ್ಯಾಶ್ರಯನ ಕಡೆಯವನೆಂದೂ, ಸೈನ್ಯಸಮೇತ ಸಹಾಯಕ್ಕೆ ಬರುವಂತೆ ಹೇಳಿದ್ದಾನೆಂದೂ ತಿಳಿಸಿ ಹೊರಟುಹೋದನು. ಸಮಯ ಬಂದರೆ ಸಹಾಯ ಮಾಡುವಂತೆ ಹಿಂದಿನ ದಿನ ಸತ್ಯಾಶ್ರಯನು ಹೇಳಿ ಕಳುಹಿಸಿದ್ದುದರಿಂದ ಸವಾರನು ಹೇಳಿದುದಕ್ಕಾಗಿ ಸಂಶಯಪಡದೆ ರಣಭೇರಿಯನ್ನು ಹೊಡೆಯಿಸಿದನು ಸುಮಿತ್ರಸೇನ. ಕೂಡಲೇ ಐದುನೂರು ಸೈನ್ಯ ಸಿದ್ಧವಾಯಿತು. ವಿಮಲದುರ್ಗದ ಪತಾಕೆಯನ್ನು ಮುಂದಿಟ್ಟುಕೊಂಡು ಸುಮಿತ್ರಸೇನನು ಸೈನ್ಯಸಮೇತ ಹೊರಟನು.

ಸರದಾರ ಸುಮಿತ್ರಸೇನನು ಸೈನ್ಯಸಮೇತ ದಟ್ಟವಾದ ಕಾಡಿನ ಮಾರ್ಗವಾಗಿ ಹೋಗಬೇಕಾಗಿತ್ತು. ಕಾಡಿನಲ್ಲಿ ಸ್ವಲ್ಪ ದೂರ ಹೋಗುವುದರೊಳಗಾಗಿ ಹಟಾತ್ತಾಗಿ ನಾಲ್ಕು ಕಡೆಗಳಿಂದಲೂ ಶತ್ರುಗಳು ಮುತ್ತಿದರು. ಸುಮಿತ್ರಸೇನನ ಸೈನಿಕರು ಬೆರಗಾದರು. ಒರೆಯಿಂದ ಕತ್ತಿಯನ್ನು ಬಿಚ್ಚುವುದಕ್ಕೂ ಸಮಯವಿರಲಿಲ್ಲ. “ಶಸ್ತ್ರಗಳನ್ನು ಕೆಳಗಿಡಿರಿ ! ಶರಣಾಗತರಾಗಿ!” ಎಂದು ಗರ್ಜಿಸುತ್ತ ಸುಮಿತ್ರಸೇನನ ಮುಂದೆ ನಿಂತನು ದುರ್ಜಾತಸಿಂಹ.

ಸುಮಿತ್ರಸೇನನ ಅಲ್ಪಸೈನ್ಯ ಆಷ್ಟು ಅಪಾರ ಸೈನ್ಯದೊಡನೆ ಯುದ್ಧ ಮಾಡುವು ದಾದರೂ ಸಾಧ್ಯವಾಗಿರಲಿಲ್ಲ. ಆದುದರಿಂಧ ಸುಮಿತ್ರಸೇನನು ಬೇರೆ ಮಾರ್ಗ ವಿಲ್ಲದೆ ಸೈನ್ಯಸಮೇತ ಶರಣಾಗತನಾಗಬೇಕಾಯಿತು.

ದುರ್ಜಾತಸಿಂಹನು ಸುಮಿತ್ರಸೇನನನ್ನು ಬಂಧನದಲ್ಲಿಡಿಸಿ, ವಿಮಲ ದುರ್ಗದ ಪತಾಕೆಯನ್ನು ಮುಂದಿರಿಸಿಕೊಂಡು ನಡೆದನು ಮೋಸದ ದಾರಿಯಲ್ಲಿ. ವಿಮಲದುರ್ಗದ ಪತಾಕೆಯನ್ನು ನೋಡಿದರೆ ಲಲಿತದುರ್ಗದವರು ಮಿತ್ರಸೈನ ವೆಂದು ಭಾವಿಸಿ ಯುದ್ಧಸನ್ನದ್ಧರಾಗುವುದಿಲ್ಲವೆಂದು ದುರ್ಜಾತಸಿಂಹನು ಹಾಗೆ ಮಾಡಿದನು.

ಲಲಿತದುರ್ಗದ ಗೋಪುರಗಳು ಸ್ಪಷ್ಟವಾಗಿ ಕಾಣುತ್ತಿದ್ದುವು. ಲಲಿತಪ್ರಭೆ ಒಂದು ಗೋಪುರದ ಮೇಲೆ ನಿಂತು ನೋಡುತ್ತಿದ್ದಳು. ದೂರದಲ್ಲಿ ಬರುತ್ತಿದ್ದ ಸೈನ್ಯವನ್ನು ಹಂಸಿಕೆಗೆ ತೋರಿಸಿ—"ಇದು ಯಾರ ಸೈನ್ಯ?" ಎಂದು ಕೇಳಿ ದಳು. ಹಂಸಿಕೆಯು ವಿಮಲದುರ್ಗದ ಪತಾಕೆಯನ್ನು ನೋಡಿ "ಅದು ನಮ್ಮ ಸರದಾರರ ಮಿತ್ರನಾದ ಸುಮಿತ್ರಸೇನನ ಸೇನೆ. ಚಂಡವರ್ಮನು ಲಲಿತ ದುರ್ಗಕ್ಕೆ ಮುತ್ತಿಗೆ ಹಾಕಬಹುದೆಂದು ತಿಳಿದು ಸರದಾರರು ಸಹಾಯಕ್ಕಾಗಿ ಕರೆಯಿಸಿಕೊಂಡಿದ್ದಾರೆ.''

"ಚಂಡವರ್ಮನು ಲಲಿತದುರ್ಗಕ್ಕೆ ಮುತ್ತಿಗೆ ಹಾಕುವನೇನು?"

"ಹೌದು ತಾಯಿ. ಸರದಾರರನ್ನೂ, ಚಂದ್ರಸೇನನನ್ನೂ ಸೆರೆಹಿಡಿಯ ಬೇಕೆಂದು ಬರುತ್ತಾನಂತೆ."

ಈ ಮಾತು ಮುಗಿಯುವಷ್ಟರಲ್ಲಿ ಸೈನ್ಯವು ದುರ್ಗದ ಸಮೀಪಕ್ಕೆ ಬಂದಿತ್ತು. ಲಲಿತದುರ್ಗದ ಸೈನಿಕರು ವಿಮಲದುರ್ಗದಿಂದ ಸೈನ್ಯ ಬರುತ್ತಿದೆ ಯೆಂದು ನಂಬಿ ನೋಡುತ್ತ ನಿಂತರು. ಇದ್ದಕ್ಕಿದ್ದ ಹಾಗೆ ವಿಮಲದುರ್ಗದ ಪತಾಕೆ ಕೆಳಗೆ ಬಿತ್ತು. ಅದರ ಸ್ಥಾನದಲ್ಲಿ ಅಜಿಂಕ್ಯ ದುರ್ಗದ ಮತ್ತು ಸಿಂಹಗುಹೆಯ ಪತಾಕೆಗಳು ಕಾಣಿಸಿದುವು.

ಲಲಿತದುರ್ಗದ ಸೈನಿಕರು ಇದನ್ನು ಕಂಡು ಕೂಡಲೇ ರಣಭೇರಿಯನ್ನು ಹೊಡೆದು- ಯುದ್ಧಕ್ಕೆ ಸಿದ್ಧರಾದರು. ದುರ್ಜಾತಸಿಂಹನ ಮೋಸವನ್ನು ಮೊದಲೇ ಅರಿತಿದ್ದರೆ ಪರಿಸ್ಥಿತಿಯೇ ಬದಲಾಯಿಸುತ್ತಿತ್ತು. ಆದರೆ, ಸೈನಿಕರೆಲ್ಲರೂ ಅವಸರದಿಂದ ಸಮರ ಭೂಮಿಯಲ್ಲಿ ಸೇರಿದರು. ಸತ್ಯಾಶ್ರಯನು ರಣಭೇರಿಯ ಶಬ್ದವನ್ನು ಕೇಳಿ ಯುದ್ಧಕವಚ ಕುಂಡಲ ಮಣಿಕರೀಟಗಳನ್ನು ತೊಟ್ಟು ಹೊರಟನು. ಚಂದ್ರಸೇನನೂ ತಂದೆಯನ್ನು ಹಿಂಬಾಲಿಸಿದನು. ಸ್ವಲ್ಪ ಹೊತ್ತಿನಲ್ಲಿ ಉಭಯ ಸೈನ್ಯಗಳಿಗೂ ಖಡಾಖಡಿ ಯುದ್ಧ ಆರಂಭವಾಯಿತು.

ಎರಡು ಕಡೆಯೂ ರಕ್ತ ಕೋಡಿ ಹರಿಯಿತು. ಸರದಾರ ಸತ್ಯಾಶ್ರಯನೂ, ಚಂದ್ರಸೇನನೂ ವೀರಾವೇಶದಿಂದ ಕಾದಿದರು. ಯುದ್ಧವು ಕ್ಷಣಕ್ಷಣಕ್ಕೂ ಭಯಂಕರವಾಗುತ್ತಿತ್ತು. ಲಲಿತಪ್ರಭೆಯೂ ಹಂಸಿಕೆಯೂ ಗೋಪುರದಲ್ಲಿ ನೋಡುತ್ತ ದೀನದಯಾಳುವಾದ ಪರಮಾತ್ಮನನ್ನು ಧ್ಯಾನಿಸಿದರು. ಸ್ವಲ್ಪ ಹೊತ್ತಿಗೆ ಯುದ್ಧದ ಕೋಲಾಹಲವು ನಿಂತಿತು. ಮತ್ತೆ ಲಲಿತಪ್ರಭೆಯೂ, ಹಂಸಿಕೆಯೂ ಆ ಕಡೆ ನೋಡಿದರು. ಸತ್ಯಾಶ್ರಯನೂ, ಚಂದ್ರಸೇನನೂ ಬಂಧಿತರಾಗಿ ನಿಂತುದನ್ನು ಕಂಡರು ಅವರು !

ಲಲಿತಪ್ರಭೆ ತನ್ನ ಕಣ್ಣುಗಳನ್ನು ತಾನೇ ನಂಬಲಿಲ್ಲ. ನಿಜ. ತಂದೆಯೂ, ಅಣ್ಣನೂ ಸೆರೆ ಸಿಕ್ಕಿದ್ದರು. ವಿಸ್ಮಯದಿಂದಲೂ, ಭೀತಿಯಿಂದಲೂ ಲಲಿತಪ್ರಭೆ ದಿಕ್ಕುಕಾಣದೆ ಗೋಳಿಟ್ಟಳು. ಚಂಡವರ್ಮ, ದುರ್ಜಾತಸಿಂಹ, ಉನ್ಮತ್ತಸಿಂಹ—ಇವರುಗಳು ಪ್ರಥಮ ವಿಜಯದ ಉತ್ಕರ್ಷದಲ್ಲಿ ಲಲಿತದುರ್ಗದ ಕಡೆಗೆ ಬರುತ್ತಿದ್ದರು. ಅಷ್ಟರಲ್ಲಿ ದುರ್ಜಾತಸಿಂಹನು ದೂರದಲ್ಲಿ ರಣಭೇರಿಯ ಶಬ್ದವನ್ನು ಕೇಳಿ ಬೆರಗಾದನು.

ಕ್ಷಣಮಾತ್ರದಲ್ಲಿ ಎರಡು ಸೈನ್ಯಗಳೂ ಎದುರುಬದುರಾದುವು. ಯುದ್ಧ ಮತ್ತೆ ಪ್ರಾರಂಭವಾಯಿತು. ಹೊಸ ಸೈನ್ಯದ ಬಲಾಬಲಗಳು ಎಷ್ಟೆಂಬುದಾಗಲಿ, ಆ ಸೈನ್ಯಕ್ಕೆ ಅಧಿಪತಿ ಯಾರೆಂಬುದಾಗಲಿ ತಿಳಿಯದೆ ಚಂಡವರ್ಮನೂ ದುರ್ಜಾತಸಿಂಹನೂ ಸ್ವಲ್ಪ ಕಾಲ ಯೋಚಿಸುತ್ತ ನಿಂತರು. ವೀರಧವಳನು

ಆಗ ಯುದ್ಧ ಕವಚ ಕುಂಡಲ ಮಣಿಕಿರೀಟಗಳನ್ನು ಧರಿಸಿದ್ದುದರಿಂದ ಅವರಿಗೆ ಗುರುತಿಸಲು ಸಾಧ್ಯವಾಗಲಿಲ್ಲ. ಅಂತು ತರುಣ ಯೋಧನೊಬ್ಬನು ತನ್ನ ಸೈನ್ಯಕ್ಕೆ ಉತ್ತೇಜನ ಕೊಡುತ್ತಿದ್ದುದನ್ನು ಕಂಡರು. ಆತನನ್ನು ಸೆರೆ ಹಿಡಿಯಬೇಕೆಂದು ವಿಶ್ವಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಆತನು ಮಿಂಚಿನ ವೇಗದಿಂದ ನಿಂತಲ್ಲಿ ನಿಲ್ಲದೆ ಯುದ್ಧ ಮಾಡುತ್ತಿದ್ದನು. ದುರ್ಜಾತ ಸಿಂಹನೂ, ಉನ್ಮತ್ತಸಿಂಹನೂ ಏಕಕಾಲದಲ್ಲಿ ಆ ತರುಣ ಯೋಧನ ಮೇಲೆ ಎರಗಿದರು. ಬಹಳ ಕಾಲ ಅವರೊಡನೆ ಯುದ್ಧ ಮಾಡಿದನು ತರುಣ ವೀರ. ಆ ಘನ ಘೋರ ಸಂಗ್ರಾಮವು ಭಯಂಕರವಾಗಿತ್ತು. ಅವರೊಡನೆ ಯುದ್ಧ ಮಾಡುತ್ತಿರುವ ವೇಳೆಗೆ ಲಲಿತದುರ್ಗದ ಗೋಪುರದ ಮೇಲೆ ನಿಂತು ಯುದ್ಧರಂಗದ ಕಡೆಗೆ ನೋಡುತ್ತಿದ್ದ ಲಲಿತಪ್ರಭೆಯನ್ನು ಕಂಡನು. ತನ್ನ ಹೃದಯದ ಆರಾಧ್ಯ ದೇವತೆಯ ದರ್ಶನವಾದ ತಕ್ಷಣ ಸ್ಫೂರ್ತಿಯುಂಟಾಗಿ, ವೀರಧವಳನ ಬಾಹುಗಳಲ್ಲಿ ಅಸಾಧಾರಣ ಶಕ್ತಿಯುಂಟಾಯಿತು. ಒಂದೇ ಏಟಿಗೆ ದುರ್ಜಾತಸಿಂಹನನ್ನು ಕೆಳಗುರುಳಿಸಿ, ಉನ್ಮತ್ತಸಿಂಹನ ಮೇಲೆ ಹಾಯ್ದು ಆತನನ್ನು ತನ್ನ ವಜ್ರಾಗಾಧದಿಂದ ಕೆಡಹಿದನು.

ತಮ್ಮ ನಾಯಕರಿಬ್ಬರೂ ಕೆಳಗುರುಳಿದುದನ್ನು ನೋಡಿ ಸಿಂಹಗುಹೆಯ ಸೈನ್ಯದ ಧೈರ್ಯ ತಪ್ಪಿತು. ಜಯಘೋಷ ಮಾಡುತ್ತ ವೀರಧವಳನ ಸೈನ್ಯವು ನುಗ್ಗುತ್ತಿರುವುದನ್ನು ಕಂಡು ಅಜಿಂಕ್ಯ ದುರ್ಗದ ಸೈನಿಕರು ಹಿಮ್ಮೆಟ್ಟಿದರು. ಇದನ್ನು ತಿಳಿದು ಚಂಡವರ್ಮನು ಕಾಲಿಗೆ ಬುದ್ಧಿ ಹೇಳಿದನು. ವೀರಧವಳನು ಓಡಿಹೋಗುತ್ತಿದ್ದ ಚಂಡವರ್ಮನನ್ನು ನೋಡಿ, ತನ್ನ ಸೈನಿಕರನ್ನು ಕರೆದು– "ಹೋಗಿ, ಬೆನ್ನಟ್ಟಿ ಹೋಗಿ. ಪ್ರಾಣಸಹಿತ ಸೆರೆ ಹಿಡಿಯಿರಿ. ಗಾಯ ಮಾಡಬೇಡಿ." ಎಂದು ಆಜ್ಞಾಪಿಸಿದನು.

ಹೀಗೆ ಆಜ್ಞಾಪಿಸಿ, ವೀರಧವಳನು ಸತ್ಯಾಶ್ರಯನು ನಿಂತಿದ್ದ ಕಡೆಗೆ ಬಂದನು. ಕುದುರೆಯಿಂದ ಇಳಿದು ಯುದ್ಧ ಕಿರೀಟವನ್ನು ಕೈಲಿ ಹಿಡಿದು ಸತ್ಯಾಶ್ರಯನ ಪಾದಗಳನ್ನು ಮುಟ್ಟಿ ನಮಸ್ಕರಿಸಿದನು. ಎಲ್ಲರೂ ಆಶ್ಚರ್ಯ ದಿಂದ ನೋಡುತ್ತಿದ್ದರು. ತನಗೆ ಸ್ವಾತಂತ್ರ್ಯವನ್ನು ಕೊಟ್ಟ ಆ ಬಾಲ ವೀರ ನನ್ನು ಸತ್ಯಾಶ್ರಯನು ಎರಡು ಕೈಗಳಿಂದಲೂ ಹಿಡಿದೆತ್ತಿದನು. ಸತ್ಯಾಶ್ರ

ಯನ ಕಣ್ಣಿನಲ್ಲಿ ಆನಂದ ಭಾಷ್ಪಗಳು ತುಂಬಿದುವು. ಒಮ್ಮೆ ಪಿತೃವಾತ್ಸಲ ದಿಂದ ಆಲಿಂಗನ ಮಾಡಿ ತಲೆಯ ಮೇಲೆ ಕೈಯಿಟ್ಟು ಹರಸಿದನು ಸತ್ಯಾಶ್ರಯ.

ಸರದಾರ ಸುಮಿತ್ರಸೇನನೂ ಸಹ ತನ್ನ ಪ್ರಾಣದಾತನನ್ನು ಆಲಿಂಗಿಸಿ ಕೊಂಡು ಆನಂದ ಬಾಷ್ಪಗಳನ್ನು ಸುರಿಸಿದನು. ತರುವಾಯ ವೀರಧವಳನು ಚಂದ್ರಸೇನನ ಬಳಿಗೆ ಬಂದು " ತಮ್ಮಾ", ಎಂದು ಕರೆದು ಆಲಿಂಗನ ಮಾಡಿ ದನು. ವೀರಧವಳನ ಸಾಹಸಕ್ಕೂ ಭ್ರಾತೃವಾತ್ಸಲ್ಯಕ್ಕೂ ಬೆರಗಾದನು ಚಂದ್ರಸೇನ !

ಸತ್ಯಾಶ್ರಯನು ವೀರಧವಳನೊಡನೆ ಲಲಿತದುರ್ಗಕ್ಕೆ ಬಂದನು. ಚಂದ್ರ ಸೇನನು ಮುಂದಾಗಿ ಮಹಲಿಗೆ ತೆರಳಿ ವೀರಧವಳನ ಆಗಮನವನ್ನು ತಿಳಿಸಿದನು. ವೀರಧವಳನ ವಿಚಾರದಲ್ಲಿ ಒಂದು ಒಳ್ಳೆಯ ಮಾತನ್ನು ಅಣ್ಣನ ಬಾಯಿಂದ ಕೇಳಿ ಹಿಗ್ಗಿದಳು ಲಲಿತಪ್ರಭೆ. ಪಂಚಾರತಿಯನ್ನು ಹಿಡಿದು ಪ್ರವೇಶ ದ್ವಾರದಲ್ಲಿ ನಿಂತಳು ವೀರಧವಳನ ಹೃದಯಮಂದಿರದ ಪ್ರಣಯ ದೀಪವಾಗಿ ! ಪಂಚಾರತಿಯನ್ನು ಬೆಳಗಿ ವೀರಧವಳನ ಭವ್ಯವಾದ ಹಣೆಗೆ ವಿಜಯ ತಿಲಕವನ್ನು ಹಚ್ಚಿ ಕೊರಳಿಗೆ ವಿಜಯ ಮಾಲೆಯನ್ನು ಹಾಕಿದಳು. ಮಂಗಳ ವಾದ್ಯಗಳು ಮೊಳಗಿದುವು.

# ೨೬. ಜಯಭೇರಿ

## ಸತ್ಯಶ್ರೀಯ ವಿಜಯಮಾಲೆ

ಚಂಡವರ್ಮನು ತನ್ನನ್ನು ಬೆನ್ನಟ್ಟಿ ಬಂದ ಸರದಾರರಿಗೆ ಸಿಕ್ಕಲಿಲ್ಲ. ಮೂರನೆಯ ದಿನ ರಾಜಮಹೇಂದ್ರವನ್ನು ತಲಪಿ ಹೊಸ ಮಂತ್ರಿಮಂಡಲಿಯನ್ನೂ, ರಾಜಪ್ರತಿನಿಧಿಯನ್ನೂ ಕಂಡನು. ತನಗೂ ಸತ್ಯಾಶ್ರಯನಿಗೂ ನಡೆದ ಯುದ್ಧದಲ್ಲಿ ತನಗೆ ಪರಾಜಯವುಂಟಾದರೂ ರಾಜ್ಯಾಡಳಿತದ ದೃಷ್ಟಿಯಿಂದ ಮತ್ತೊಂದು ಯುದ್ಧವನ್ನು ಹೂಡಲೇಬೇಕೆಂದು ಒತ್ತಾಯಪಡಿಸಿದನು. ಕಾಲವಿಳಂಬ ಮಾಡಿದರೆ, ಸತ್ಯಾಶ್ರಯನು ಸಮಸ್ತ ಸರದಾರರ ಸಹಾಯದಿಂದ ರಾಜಮಹೇಂದ್ರವನ್ನು ಮುತ್ತಿಗೆಹಾಕಿ ಮಂತ್ರಿಮಂಡಲಿಯನ್ನು ಖಂಡಿತವಾಗಿ ಮಣ್ಣುಗೂಡಿಸುವನೆಂದು ತಿಳಿಸಿದನು. ಮಂತ್ರಿಮಂಡಲಿಯು ಚಂಡವರ್ಮನ ಸಲಹೆಯನ್ನು ಒಪ್ಪಿತು. ಸೈನ್ಯವನ್ನು ಸಿದ್ಧಗೊಳಿಸಲು ಸಾಕಾದಷ್ಟು ಹಣವಿಲ್ಲದಿರುವುದರಿಂದ ಪ್ರಜೆಗಳಿಂದ ಹೆಚ್ಚಿನ ಸುಂಕ, ತೆರಿಗೆ, ಕಂದಾಯಗಳನ್ನು ಸುಲಿಗೆ ಮಾಡಿದರು. ಇದರಿಂದ ಪ್ರಜೆಗಳಿಗೆ ಹೊಸ ಮಂತ್ರಿಮಂಡಲಿಯ ಆಡಳಿತದಲ್ಲಿ ಮತ್ತಷ್ಟು ಜುಗುಪ್ಸೆ ಹೆಚ್ಚಿತು ತುಂಬ ಶ್ರಮವಹಿಸಿ ಆರು ತಿಂಗಳಿನಲ್ಲಿ ಹದಿನಾರುಸಾವಿರ ಸೈನ್ಯವನ್ನು ಕಟ್ಟಿದರು. ಪಶ್ಚಿಮ ಚಾಳುಕ್ಯದ ಕಲ್ಯಾಣಾಧಿಪತಿ ಮಂತ್ರಿಮಂಡಲಿಯ ಸಹಾಯಕ್ಕೆ ಹತ್ತು ಸಾವಿರ ಸೈನಿಕರನ್ನು ಕಳುಹಿಸಿದನು. ಒಟ್ಟು ಇಪ್ಪತ್ತಾರುಸಾವಿರ ಸೈನಿಕರಿಗೆ ಚಂಡವರ್ಮನನ್ನು ಅಧಿಪತಿಯಾಗಿ ನೇಮಿಸಿದನು ರಾಜಪ್ರತಿನಿಧಿ ಚಂದ್ರಚೂಡ.

ಇತ್ತ ಲಲಿತದುರ್ಗದಲ್ಲಿ ಸತ್ಯಾಶ್ರಯನು ಗಾಯಗೊಂಡ ಸೈನಿಕರಿಗೆ ತಕ್ಕ ಶುಶ್ರೂಷೆಯನ್ನು ಏರ್ಪಡಿಸಿದನು. ಕೈದಿಗಳಾಗಿದ್ದ ಶತ್ರುಸೈನಿಕರನ್ನು ಬಿಡುಗಡೆ ಮಾಡಿದನು. ಸತ್ಯಾಶ್ರಯನ ಪ್ರೇಮ ಮತ್ತು ಉದಾತ್ತ ಭಾವನೆಗಳನ್ನು ಕಂಡು ಶತ್ರು ಸೈನಿಕರು ಸತ್ಯಾಶ್ರಯನ ಪರವಾಗಿ ನಿಂತು ಯುದ್ಧ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ಹೊಸ ಮಂತ್ರಿಮಂಡಲಿಯ

ಅಡಳಿತದಲ್ಲಿ ಜುಗುಪ್ಸೆ ಹೊಂದಿದ್ದ ರಾಜಧಾನಿಯ ಜನರೂ ಸಹ ಲಲಿತ ದುರ್ಗಕ್ಕೆ ಬಂದು ಸತ್ಯಾಶ್ರಯನ ಸಹಾಯಕ್ಕೆ ನಿಂತರು. ವೀರಧವಳನಿಗೆ ಕೊಟ್ಟಿದ್ದ ವಚನದಂತೆ ಸಮಸ್ತ ಸರದಾರರೂ ತಮ್ಮ ತಮ್ಮ ಸೈನ್ಯಗಳನ್ನು ಒಡಗೊಂಡು ಲಲಿತದುರ್ಗಕ್ಕೆ ಬಂದರು. ಒಟ್ಟು ಹದಿನೈದು ಸಾವಿರ ಸೈನ್ಯವು ಸಿದ್ಧವಾಯಿತು. ಸಮಸ್ತ ಸೈನ್ಯದ ನಾಯಕತ್ವವನ್ನು ಸತ್ಯಾಶ್ರಯ ನಿಗೆ ವಹಿಸಿದರು. ಅಭೇದ ದುರ್ಗದ ವೀರರಾಜನನ್ನು ಉಪನಾಯಕ ನನ್ನಾಗಿ ನೇಮಿಸಿದರು.

ವೀರರಾಜನ ಅಭೇದ ದುರ್ಗದಲ್ಲಿ ವೃದ್ಧ ವನಚರಿಯನ್ನು ಬಿಟ್ಟ ಮೇಲೆ ವೀರಧವಳನು ಯುದ್ಧೋದ್ಯುಕ್ತನಾಗಿ ನಿಂತುದು ವಾಚಕರಿಗೆ ಗೊತ್ತಿದೆ. ಆಕೆಯು ಈಗ ವನಚರಿಯಲ್ಲ; ಶೀಲವತಿ. ವೀರಧವಳನ ಉಪ ಮಾತೆ. ತನ್ನ ಉಪಮಾತೆಯು ನುಡಿದ ವಿಚಾರಗಳನ್ನು ಸತ್ಯಾಶ್ರಯನಿಗೆ ತಿಳಿಸಬೇಕೆಂದು ಬಗೆದನು ವೀರಧವಳ. ಆದರೆ, ಯಾರಿಗೂ ಹೇಳಕೂಡ ದೆಂದು ತಿಳಿಸಿದ್ದಳಲ್ಲವೇ ಶೀಲವತಿ. ಸತ್ಯಾಶ್ರಯನಿಗೆ ಈ ವಿಚಾರ ತಿಳಿದಿರು ವುದು ಯೋಗ್ಯವೆಂದು ಭಾವಿಸಿ ವೀರಧವಳನು ಒಂದು ದಿನ ಸತ್ಯಾಶ್ರಯ ನನ್ನು ಏಕಾಂತದಲ್ಲಿ ಕಂಡು ತನ್ನ ಪೂರ್ವ ವೃತ್ತಾಂತವನ್ನು ಬಣ್ಣಿಸಿದನು. ಸತ್ಯಾಶ್ರಯನಿಗೆ ಒಂದು ಅದ್ಭುತ ನಾಟಕದಂತೆ ತೋರಿತು ಈ ವಾರ್ತೆ. ನಿಜ, ಜೀವನದ ಸಮಸ್ಯೆಗಳು ನಾಟಕದ ಕ್ರಿಯೆಗಳಂತೆ ಕೆಲವು ವಿನೋದವಾಗಿಯೂ ಕೆಲವು ವಿಷಾದಾಂತವಾಗಿಯೂ ಪರ್ಯವಸಾನ ಹೊಂದುತ್ತವೆ. ರಾಜಮಹೇಂ ದ್ರದ ನಾಟಕದಲ್ಲಿ ಅಜಿಂಕ್ಯ ದುರ್ಗದ ನಾಟಕವು ಸೇರಿದೆಯೆಂಬುದು ಈಗ ಪ್ರಕಟವಾಯಿತು. ಎರಡೂ ವಿಷಾದದಲ್ಲಿ ಹುಟ್ಟಿಕೊಂಡುವು. ಇನ್ನು ಅವು ಗಳ ಮುಕ್ತಾಯ ಪ್ರಕರಣ ಮಾತ್ರ ಉಳಿದಿತ್ತು. ಸತ್ಯಾಶ್ರಯನು ಕಾಣದೆ ಸಲಹಿದ ಕೂಸು ಅಜಿಂಕ್ಯ ದುರ್ಗದ ಕೀರ್ತಿಶೇಷ ಸರದಾರ ಕೀರ್ತಿವರ್ಮನ ಪುತ್ರನೆಂಬುದೂ, ವೃದ್ಧ ವನಚರಿಯು ಆತನನ್ನು ಸಲಹಿದ ಉಪಮಾತೆ ಯಾದ ಶೀಲವತಿ ಎಂಬುದೂ, ಉಭಯ ನಾಟಕಗಳ ಪ್ರಚಂಡ ಸೂತ್ರ ದಾರನಾದ ಚಂಡವರ್ಮನು ವೀರಧವಳನ ಚಿಕ್ಕಪ್ಪನೆಂಬುದೂ ನರನಾಟಕದ ಒಂದೊಂದು ಅದ್ಭುತ ದೃಶ್ಯಗಳಂತೆ ಇದ್ದುವಲ್ಲವೇ ?

ಸತ್ಯಾಶ್ರಯನು ವಾತ್ಸಲ್ಯದಿಂದ ವೀರಧವಳನ ಬೆನ್ನು ತಟ್ಟಿ—“ಧವಳ, ನಿನ್ನನ್ನು ಇನ್ನುಮುಂದೆ ಅಜಿಂಕ್ಯ ದುರ್ಗದ ಸರದಾರನೆಂದೇ ನಾನು ಗಣನೆ ಮಾಡುತ್ತೇನೆ. ಆದರೆ, ಕೆಲವು ಕಾಲ ಈ ವಿಚಾರವು ಗೋಪ್ಯವಾಗಿರುವುದೇ ಲೇಸು. ಮುಂದಿನ ಯುದ್ಧದಲ್ಲಿ ಚಂಡವರ್ಮನ ಜಯಾಪಜಯಗಳನ್ನು ನೋಡಿಕೊಂಡು ಆ ತರುವಾಯ ನಿನ್ನ ಪೂರ್ವ ವೃತಾಂತವನ್ನು ಬಯಲಿಗೆ ತರುವುದರಲ್ಲಿ ಗುಣವಿದೆ.”

“ಆ ವೃದ್ಧ ವನಚರಿ, ಶೀಲವತಿ, ಸುಖವಾಗಿರುವಳೇ ?”

“ಇರುವಳು. ಅಭೇದ ದುರ್ಗದಲ್ಲಿ”

“ಅಲ್ಲಿಯೇ ಇರಲಿ. ಮುಂದೆ ಸಮಯಬಂದಾಗ ಬರಮಾಡಿಕೊಂಡು ನಮ್ಮ ಕುಟುಂಬ ವರ್ಗದಲ್ಲಿ ಆಕೆಯೂ ಒಬ್ಬಳೆಂದು ಪರಿಗಣಿಸೋಣ.”

“ಆಗಲಿ” ಎಂದು ಹೇಳಿ ವೀರಧವಳನು ತೆರಳಿದನು. ವೀರಧವಳನಿಗೆ ಆತನ ತಲೆಯ ಮೇಲಿನ ಒಂದು ಹೊರೆ ಇಳಿದಂತಾಯಿತು. ತನಗೆ ಇಷ್ಟು ಉಪಕಾರ ಮಾಡಿ ತನ್ನನ್ನು ಮಗನಿಗಿಂತ ಮಿಗಿಲಾಗಿ ಸಾಕಿ ಸಲಹಿದ ಸತ್ಯಾಶ್ರಯನಿಗೆ ತನ್ನ ವಂಶಚರಿತ್ರೆಯನ್ನು ಮುಂದಾಗಿ ಹೇಳಬೇಕಾದುದು ತನ್ನ ಕರ್ತವ್ಯವೆಂದು ಭಾವಿಸಿದನು ವೀರಧವಳ. ಸರದಾರ ಸತ್ಯಾಶ್ರಯನ ಕುಟುಂಬದಲ್ಲಿ ಆತನ ಆತ್ಮಕಥೆ ಮತ್ತಾರಿಗೂ ಆಂದು ಅಗತ್ಯವಾಗಿರಲಿಲ್ಲ. ಲಲಿತಪ್ರಭೆಗೂ ಸಹ ಆತನ ಆತ್ಮಕಥೆಯಿಂದ ಸದ್ಯದಲ್ಲಿ ಆಗಬೇಕಾದ ಮಹತ್ಕಾರ್ಯವಾವುದೂ ಇರಲಿಲ್ಲ. ಮುಂಗೈ ಕಂಕಣ ನೋಡಲು ಕನ್ನಡಿ ಬೇಕೇ ಲಲಿತಪ್ರಭೆಗೆ !

ಪ್ರಾತಃಕಾಲ ಚಂಡವರ್ಮನು ರಾಜಧಾನಿಯಿಂದ ಪ್ರಚಂಡ ಸೇನಾಸಮೇತನಾಗಿ ಹೊರಟು ಲಲಿತದುರ್ಗಕ್ಕೆ ಸಮೀಪದಲ್ಲಿ ಬಿಡಾರ ಮಾಡಿದನು. ಇದನ್ನು ತಿಳಿದು ಕೂಡಲೇ ಲಲಿತದುರ್ಗದವರು ರಣಕಹಳೆಯನ್ನು ಊದಿದರು. ಯುದ್ಧೋನ್ಮುಖರಾದ ಹದಿನೈದು ಸಾವಿರ ಸೈನಿಕರು ಲಲಿತದುರ್ಗದ ಬಯಲಿನಲ್ಲಿ ಸೇರಿದರು ರಣಕಹಳೆಯನ್ನು ಕೇಳಿ. ಸತ್ಯಾಶ್ರಯನೂ ವೀರ

ಧವಳನೂ ತಮ್ಮ ಮಹಲಿನಿಂದ ಹೊರಟರು. ಲಲಿತಪ್ರಭೆ ಅವರಿಬ್ಬರಿಗೂ ಪಂಚಾರತಿಯನ್ನು ಬೆಳಗಿ, ಅಂದಿನ ಯುದ್ಧದಲ್ಲಿ ಜಯವುಂಟಾಗಲೆಂದು ಹಾರೈಸಿದಳು. ಲಲಿತದುರ್ಗದ ಸೈನ್ಯವು ರಣಘೋಷಣೆಗಳನ್ನು ಮಾಡಿ ಹೊರಟಿತು ಸತ್ಯಾಶ್ರಯನ ನಾಯಕತ್ವದಲ್ಲಿ.

ಎರಡು ಸೈನ್ಯಗಳೂ ಸ್ವಲ್ಪ ಹೊತ್ತಿನಲ್ಲಿ ಕಲೆತು ಯುದ್ಧವನ್ನು ಆರಂಭಿಸಿದುವು. ವೀರಧವಳನ ಉತ್ತೇಜನದಿಂದ ಲಲಿತದುರ್ಗದ ಸೈನ್ಯವು ಜಗ್ಗದೆ ಹೋರಾಡಿತು. ಚಂಡವರ್ಮನು ಪ್ರಾಣದ ಮೇಲೆ ಆಸೆಯನ್ನು ತೊರೆದು ಕಾದಿದನು. ಆದರೆ, ಚಂಡವರ್ಮನ ಸೈನಿಕರು ವೀರಧವಳನ ತೇಜಸ್ಸಿಗೆ ಹೆದರಿ ಹಿಂದಕ್ಕೆ ಓಡುತ್ತಿದ್ದರು. ಅವರೆಲ್ಲರೂ ಕೇವಲ ಸಂಬಳಕ್ಕಾಗಿ ಶೇಖರಿಸಿದ್ದ ಸೈನಿಕರು. ದೇಶಾಭಿಮಾನವಿಲ್ಲದ ಮೇಲೆ ಸೈನಿಕರಿಂದ ಎಳ್ಳಷ್ಟೂ ಕೆಲಸ ನಡೆಯಲಾರದು. ಚಂಡವರ್ಮನು ವೀರಧವಳನ ಮೇಲೆ ನುಗ್ಗಿದನು. ಇಬ್ಬರಿಗೂ ಖಡಾಖಡಿ ಯುದ್ಧ ನಡೆಯಿತು. ವೀರಧವಳನ ಪ್ರಹಾರಕ್ಕೆ ಚಂಡವರ್ಮನ ಕತ್ತಿ ತುಂಡಾಗಿ ಕೆಳಗೆ ಬಿತ್ತು. ತಮ್ಮ ನಾಯಕನು ಆಯುಧವಿಲ್ಲದೆ ಶತ್ರು ಸೈನಿಕರ ನಡುವೆ ಸಿಕ್ಕಿಕೊಂಡುದನ್ನು ನೋಡಿ ರಾಜಮಹೇಂದ್ರದ ಸೈನಿಕರು ದಿಕ್ಕುತೋರದೆ ಓಡಿದರು. ವೀರಧವಳನು ಶತ್ರು ಸೈನ್ಯದ ಪತಾಕೆಯನ್ನು ಕಿತ್ತು, ಅದರ ಮೇಲೆ ನಿಂತು ಜಯಘೋಷ ಮಾಡಿದನು. ಸತ್ಯಶ್ರೀಯ ವಿಜಯಮಾಲೆ ವೀರಧವಳನಿಗೆ ಲಭಿಸಿತು. ಚಂಡವರ್ಮನು ಲಲಿತದುರ್ಗದ ಸೆರೆಮನೆಯಲ್ಲಿ ಬಂಧಿತನಾದನು.

ಯುದ್ಧ ಮುಗಿದ ಮಾರನೆಯ ದಿನವೇ ವೀರಧವಳನು ರಾಜಕುಮಾರನನ್ನು ಬಿಡುಗಡೆ ಮಾಡುವುದಕ್ಕಾಗಿ ಪ್ರಸಾದ ದುರ್ಗಕ್ಕೆ ಸೈನ್ಯಸಮೇತ ಹೊರಟನು. ಪ್ರಸಾದ ದುರ್ಗದ ಸುಬೇದಾರನನ್ನು ವೀರಧವಳನು ಕಂಡು ರಾಜಕುಮಾರನು ಎಲ್ಲಿರುವನೆಂದು ವಿಚಾರಿಸಿದನು. ಮಂತ್ರಿಮಂಡಲಿಯ ಜನರು ಹಿಂದಿನ ರಾತ್ರಿ ರಾಜಕುಮಾರನನ್ನು ಕಲ್ಯಾಣಿಗೆ ಗೋಪ್ಯವಾಗಿ ಕರೆದುಕೊಂಡು ಹೋದರೆಂದು ತಿಳಿಸಿದನು. ಸುಬೇದಾರ ಮಾತನ್ನು ಕೇಳಿ ವೀರಧವಳನು ಸ್ತಂಭಿತನಾದನು. ಸುಲಭದಲ್ಲಿ ಆಗತಕ್ಕ ಕೆಲಸವು ಈಗ ಕಷ್ಟಸಾಧ್ಯವಾಗಿ ಪರಿಣಮಿಸಿತೆಂದು ಆತನು ಚಿಂತಿಸಿದನು. ಹಿಂದಿನ ಯುದ್ಧ

ದಲ್ಲಿ ರಾಜಮಹೇಂದ್ರದ ಸೈನ್ಯಕ್ಕೆ ಪರಾಜಯವುಂಟಾಯಿತೆಂದು ತಿಳಿದ ಕೂಡಲೇ ಮಂತ್ರಿಮಂಡಲಿಯವರು ರಾಜಕುಮಾರನೊಡನೆ ಪಶ್ಚಿಮ ಚಾಳುಕ್ಯ ರಾಜ್ಯಕ್ಕೆ ಪಲಾಯನ ಮಾಡಿದ್ದರು.

ವೀರಧವಳನ ಸೈನಿಕರು ಯುದ್ಧದಲ್ಲಿ ಬಳಲಿದ್ದುದರಿಂದ ಎರಡು ದಿನಗಳ ಮಟ್ಟಿಗೆ ಪ್ರಸಾದ ದುರ್ಗದಲ್ಲಿಯೇ ವಿಶ್ರಾಂತಿ ಪಡೆಯುವಂತೆ ಅವಕಾಶ ದೊರೆಯಿತು. ಸತ್ಯಾಶ್ರಯನಿಗೆ ಆಗಿನ ಪ್ರಸಂಗವನ್ನು ಬೇಹುಗಾರರ ಮೂಲಕ ತಿಳಿಯಪಡಿಸಿದನು ವೀರಧವಳ. ಸತ್ಯಾಶ್ರಯನು ಈ ವರ್ತಮಾನವನ್ನು ತಿಳಿದು ಲಲಿತದುರ್ಗದಿಂದ ನೇರವಾಗಿ ಕಲ್ಯಾಣಿಗೆ ಕೂಡಲೇ ಸೈನ್ಯದೊಡನೆ ಹೊರಟನು. ವೀರಧವಳನ ಸೈನ್ಯವೂ ಸತ್ಯಾಶ್ರಯನ ಸೈನ್ಯವೂ ಬೇಗ ದಾರಿ ನಡೆದು ಮಂತ್ರಿಮಂಡಲಿಯವರನ್ನು ನಡುದಾರಿಯಲ್ಲಿಯೇ ಅಡ್ಡಗಟ್ಟಿತು. ರಾಜಕುಮಾರನನ್ನು ಸತ್ಯಾಶ್ರಯನಿಗೆ ಒಪ್ಪಿಸಿ ಅವರೆಲ್ಲರೂ ಶರಣಾಗತರಾದರು.

ರಾಜಕುಮಾರ ಅಮರಕೇತುವನ್ನು ಎತ್ತಿಕೊಂಡು ಸತ್ಯಾಶ್ರಯನು ರಾಜಮಹೇಂದ್ರಕ್ಕೆ ಬಂದನು. ಬಲಭಾಗದಲ್ಲಿ ವೀರಧವಳನೂ, ಎಡಭಾಗದಲ್ಲಿ ಚಂದ್ರಸೇನನೂ, ಹಿಂದುಗಡೆ ವಿಜಯವಾಹಿನಿಯೂ ವಿಜಯ ಪತಾಕೆಯೊಡನೆ ರಾಜಮಹೇಂದ್ರದ ರಾಜಬೀದಿಯಲ್ಲಿ ಬರುತ್ತಿರುವುದನ್ನು ಕಂಡು ಸತ್ಪ್ರಜೆಗಳು ಜಯಘೋಷ ಮಾಡಿ ಪುಷ್ಪವೃಷ್ಟಿಯನ್ನು ಸುರಿಸಿದರು.

---

# ೨೭. ರಾಜಮಹೇಂದ್ರ - ಅಜಿಂಕ್ಯದುರ್ಗ

## ನವಜೀವನ ಮತ್ತು ನವಚೇತನ

ಸರದಾರ ಸತ್ಯಾಶ್ರಯನು ರಾಜಕುಮಾರನನ್ನು ಮಹಾರಾಣಿಗೆ ಒಪ್ಪಿಸಲು ಬಂದನು. ಎರಡು ತಿಂಗಳಿನಿಂದ ಮಗನನ್ನು ಕಾಣದೆ ದುಃಖಿಸುತ್ತಿದ್ದ ಮಹಾರಾಣಿ ತನ್ನ ಮುದ್ದು ಮಗನನ್ನು ಎದೆಗೆ ಅಪ್ಪಿಕೊಂಡಳು. ತರುವಾಯ ಮಹಾರಾಣಿಯು ಸತ್ಯಾಶ್ರಯನನ್ನು ನೋಡಿ—"ಸರದಾರ, ನಿಮ್ಮಿಂದ ಪೂರ್ವ ಚಾಳುಕ್ಯ ಸಿಂಹಾಸನದ ಭದ್ರತೆಗೆ ಬಹಳ ಸಹಾಯವಾಗಿದೆ. ತಮ್ಮಂಥ ಕರ್ತವ್ಯಪರಾಯಣರು ಇದ್ದ ಕಡೆ ಧರ್ಮ ಸಂಸ್ಥಾಪನೆಯಾಗಲೇ ಬೇಕು." ಎಂದು ಶ್ಲಾಘಿಸಿದಳು. ಆಗ ಸತ್ಯಾಶ್ರಯನು ಮಹಾರಾಣಿಗೆ ನಮಸ್ಕರಿಸಿ—"ಮಹಾರಾಣಿ, ಕ್ಷಮಿಸಬೇಕು." ಎಂದು ಹೇಳಿ, ವೀರಧವಳನ ಕಡೆ ತೋರಿಸಿ—"ನಿಮ್ಮ ಪವಿತ್ರ ಸಿಂಹಾಸನಕ್ಕೆ ಕಿಂಚಿತ್ತು ಉಪಕಾರವಾಗಿದ್ದರೆ ಅದು ಈ ತರುಣ ವೀರನ ಸಹಾಯದಿಂದ." ಎಂದು ಗಂಭೀರವಾಣಿಯಿಂದ ನುಡಿದನು. "ಸರದಾರ, ನಾವು ಈ ತರುಣ ವೀರನಿಗೆ ತಕ್ಕ ಸಂಭಾವನೆ ಮಾಡುತ್ತೇವೆ." ಎಂದು ತಿಳಿಸಿ, ಮಹಾರಾಣಿಯು ರಾಜಕುಮಾರನೊಡನೆ ಅಂತಃಪುರಕ್ಕೆ ತೆರಳಿದಳು. ಸರದಾರರು ತಮ್ಮ ತಮ್ಮ ಬಿಡಾರಗಳಿಗೆ ಬಂದರು.

ಮಧ್ಯಾಹ್ನ ಅರಮನೆಯ ಸಭಾಮಂಟಪದಲ್ಲಿ ದರ್ಬಾರು ನಡೆಯಿತು. ವೀರಧವಳನನ್ನು ರಾಜಪ್ರತಿನಿಧಿಯಾಗಿ ನೇಮಿಸಿರುವುದಾಗಿ ಮಹಾರಾಣಿಯವ ಅನುಜ್ಞೆಯಾಗಿತ್ತು. ರಾಜ ಸಿಂಹಾಸನದ ಮೇಲೆ ಬಾಲರಾಜನಾದ ಅಮರಕೇತು. ಪಕ್ಕದಲ್ಲಿ ರಾಜಪ್ರತಿನಿಧಿಯಾದ ಸರದಾರ ವೀರಧವಳ. ಬಲಭಾಗದಲ್ಲಿ ಸತ್ಯಾಶ್ರಯ ಮೊದಲಾದ ಪ್ರಮುಖ ಸರದಾರರು ಉಚಿತ ಸ್ಥಾನಗಳಲ್ಲಿ ಕುಳಿತಿದ್ದರು. ಎಡಭಾಗದಲ್ಲಿ ಜಹಗೀರುದಾರರೂ, ಶ್ರೀಮಂತರೂ ಕುಳಿತಿದ್ದರು. ವೃದ್ಧ ಚಾರಣ, ಸಲ್ಲಾಣ, ವಿಜ್ಜಲ, ವಿಲಾಸವತಿ—ಇವರುಗಳೂ

ಒಂದು ಕಡೆ ಕುಳಿತಿದ್ದರು. ಸಭಾ ಕಾರ್ಯವು ಸಂಗೀತದೊಡನೆ ಪ್ರಾರಂಭವಾಯಿತು. ಮೊದಲು ಯುದ್ಧ ಕೈದಿಗಳ ವಿಚಾರಣೆ. ಹಿಂದೆ ರಾಜಪ್ರತಿನಿಧಿಯಾಗಿದ್ದ ಚಂದ್ರಚೂಡ ಮುಂತಾದ ಮಂತ್ರಿಮಂಡಲಿಗೆ ರಾಜದ್ರೋಹದ ಆಪಾದನೆ ಮೇಲೆ ಜೀವಾವಧಿ ಕಾರಾಗೃಹ ವಾಸ ಅಪ್ಪಣೆ ಆಯಿತು. ತರುವಾಯ ಚಂಡವರ್ಮನ ವಿಚಾರಣೆ ನಡೆಯಿತು. ವೀರಧವಳನು ಸತ್ಯಾಶ್ರಯನನ್ನು ಬಳಿಗೆ ಕರೆದು ತನ್ನ ವೃತ್ತಾಂತವನ್ನು ಹೇಳಲು ಅನುಮತಿ ಕೋರಿದರು. ಸತ್ಯಾಶ್ರಯನು ಆಗಲೆಂದು ಒಪ್ಪಿದ ಕೂಡಲೇ ವೀರಧವಳನು ಬಾಲರಾಜನಿಗೂ ಸಭಾಸದರಿಗೂ ನಮಸ್ಕರಿಸಿ ಈ ರೀತಿ ನುಡಿದನು :—

"ಚಂಡವರ್ಮ ಮಹಾರಾಜನು ಸ್ವಂತ ಅಣ್ಣನನ್ನು ಕೊಲ್ಲಿಸಿದ್ದಾನೆ. ಅಣ್ಣನ ಮಗನಾದ ನನ್ನನ್ನು ಬಗೆಬಗೆಯಾಗಿ ಹಿಂಸಿಸಿದ್ದಾನೆ."

ಈ ಮಾತುಗಳನ್ನು ಕೇಳಿ ಸಭಿಕರೆಲ್ಲರೂ ಬೆರಗಾದರು. ಚಂಡವರ್ಮನು ವೀರಧವಳನ ಮಾತನ್ನು ಸುಳ್ಳೆಂದು ಪ್ರತಿಭಟಿಸಿ, "ಇದಕ್ಕೆ ಸಾಕ್ಷಿಗಳು ಇದ್ದಾರೆಯೋ ?" ಎಂದು ಕೇಳಿದನು.

"ಇದ್ದಾರೆ. ನಿನ್ನಿಂದ ಪ್ರೇಮಭಂಗ ಹೊಂದಿ, ನನಗಾಗಿ ಸರ್ವ ಸುಖ ತ್ಯಾಗಮಾಡಿ, ವೃದ್ಧ ವನಚರಿಯಾಗಿ, ನನ್ನ ಹಾನಿವೃದ್ಧಿಗಳಿಗೆ ಕಾರಣಭೂತಳಾದ ನಿನ್ನ ಪ್ರೇಯಸೀ ಶೀಲವತಿ ಇದ್ದಾಳೆ. ನನ್ನನ್ನು ಮಹಾರಾಜನ ಮಡಲಿಗೆ ಹಾಕಲು ಏಕಾಕಿಯಾಗಿ ಆ ನನ್ನ ಉಪಮಾತೆ ಶೀಲವತಿಯು ಅರಣ್ಯ ಮಾರ್ಗವಾಗಿ ಹೊರಟಾಗ ಸಹಾಯ ಮಾಡಿದ ಅರಣ್ಯ ರಕ್ಷಕನಿದ್ದಾನೆ. ಈ ಮೋಸವನ್ನು ಮುಚ್ಚಲು ಅಣ್ಣಅತ್ತಿಗೆಯರ ಹೆಸರಿನಲ್ಲಿ ನೀನು ಕಟ್ಟಿಸಿದ ಸ್ಫಟಿಕ ಶಿಲಾಸ್ತಂಭವಿದೆ."

ಚಂಡವರ್ಮನಿಗೆ ವೀರಧವಳನು ಯಾರೆಂಬುದು ಗೊತ್ತಿರಲಿಲ್ಲ. ತಾನು ಎಂತಹ ಕರ್ಮಚಂಡಾಲನೆಂದು ತಿಳಿದು ಗಟ್ಟಿಯಾಗಿ ಅಳಲಾರಂಭಿಸಿದನು ರಾಜಸಭೆಯಲ್ಲಿ ! ಆತನ ರೋದನವನ್ನು ತಾಳಲಾರದೆ ಹತ್ತಿರದಲ್ಲಿದ್ದ ಅಧಿಕಾರಿಗಳು ಆತನ ವಿಚಾರಣೆ ಮಾರನೆಯ ದಿನ ನಡೆಯುವಂತೆ ಗೊತ್ತು ಮಾಡಿದರು.

ಸರದಾರ ವೀರಧವಳನು ಅಜಿಂಕ್ಯ ದುರ್ಗದ ಕೀರ್ತಿವರ್ಮ ಮಹಾರಾಜರ ಕುಮಾರನೆಂಬುದನ್ನು ತಿಳಿದು ಬಾಲರಾಜನಾದ ಅಮರಕೇತುವು ಸಂತೋಷದಿಂದ ಆಲಿಂಗನ ಮಾಡಿದನು. ಎಲ್ಲರೂ ಕಂಡಂತೆ ಸತ್ಯಾಶ್ರಯನ ಮನೆಯಲ್ಲಿ ಬೆಳೆದ ಅನಾಥ ಬಾಲಕನನ್ನು—ಅಜಿಂಕ್ಯ ದುರ್ಗದ ಕೀರ್ತಿವರ್ಮನ ಪುತ್ರನಾಗಿ ರಾಜಪ್ರತಿನಿಧಿಯಾಗಿ ಒಡ್ಡೋಲಗದಲ್ಲಿ ವಿರಾಜಿಸುತ್ತಿರುವ ಏಕೈಕವೀರನನ್ನು—ವೀರಧವಳನನ್ನು—ಸರದಾರರೆಲ್ಲರೂ ಶ್ಲಾಘಿಸಿ ಧನ್ಯವಾದಗಳನ್ನು ಅರ್ಪಿಸಿದರು. ಆಗ ಸರದಾರ ಸತ್ಯಾಶ್ರಯನು ಪೀಠದಿಂದೆದ್ದು ಬಾಲರಾಜ ಅಮರಕೇತುವಿಗೆ ನಮಸ್ಕರಿಸಿ—"ಸರದಾರರೇ, ಇಂದು ನಾವು ಸ್ವರ್ಗೀಯ ವಾತಾವರಣದಲ್ಲಿದ್ದೇವೆ. ಒಂದೆರಡು ಮಾತುಗಳನ್ನು ತಮ್ಮ ಅಪ್ಪಣೆ ಪಡೆದು ತಿಳಿಸಲು ಅಪೇಕ್ಷಿಸುತ್ತೇನೆ. "ಎಂದು ವಿನಯದಿಂದ ಪ್ರಾರ್ಥಿಸಿ, ರಾಜಮಹೇಂದ್ರದ ಪೂರ್ವ ಚಾಳುಕ್ಯ ಸಿಂಹಾಸನದ ಇತಿಹಾಸವನ್ನು ಸೂಕ್ಷ್ಮವಾಗಿ ವಿವರಿಸಿದನು. ಅಮರಕೇತು ಮಹಾರಾಜರ ತಂದೆ ಚಂದ್ರಕೇತು ಮಹಾರಾಜರು ದೈವಾಧೀನರಾದ ಮೇಲೆ ಪೂರ್ವ ಚಾಳುಕ್ಯ ಸಿಂಹಾಸನಕ್ಕೆ ಪಶ್ಚಿಮ ಚಾಳುಕ್ಯರಿಂದ ಒದಗಿದ ಕಷ್ಟಪರಂಪರೆಗಳನ್ನು ತಿಳಿಸಿ, ಈ ಕಠಿಣ ಪ್ರಸಂಗದಲ್ಲಿ ಸ್ವಾಮಿನಿಷ್ಠರಾದ ಕೆಲವರು ಸರದಾರರು ಮಹಾರಾಣಿಯ ಪಕ್ಷವನ್ನು ವಹಿಸಿ ಪಶ್ಚಿಮ ಚಾಳುಕ್ಯರ ಒಳಸಂಚನ್ನು ಮುರಿಯಲು ಅಂದು ಮಾಡಿಕೊಂಡ ಪ್ರತಿಜ್ಞೆ ಇಂದು ಫಲಿಸಿತೆಂದು ತಿಳಿಸಿದನು. ಈ ಪ್ರತಿಜ್ಞಾಪಾಲನೆಯಲ್ಲಿ ಎಲ್ಲರೂ ಕರ್ತವ್ಯಕ್ಕೆ ಲೋಪ ಬಾರದಂತೆ ದುಡಿದಿದ್ದಾರೆಂದೂ ರಾಜಕುಮಾರನನ್ನು ಹಲವು ಕೋಟಲೆಗಳಿಂದ ಪಾರುಗಾಣಿಸಿದ್ದಾರೆಂದೂ ವಿವರಿಸಿದನು. " ಮಹನೀಯರೇ, ಇಂದು ರಾಜಪ್ರತಿನಿಧಿಯಾಗಿ ಪ್ರಖ್ಯಾತವೀರನಾಗಿ ನಮ್ಮೆದುರಿಗೆ ವಿರಾಜಿಸುವ ಸರದಾರ ವೀರಧವಳ ಮಹಾರಾಜರ ಹೊಸ ಪರಿಚಯ ನನಗೆ ಈಗ ಉಂಟಾಗಿದೆ." ಎಂದು ನುಡಿದು ಸತ್ಯಾಶ್ರಯನು ಒಮ್ಮೆ ವೀರಧವಳನನ್ನೂ ಒಮ್ಮೆ ಸಭಾಸದರನ್ನೂ ನೋಡಿದನು. ಆನಂದವೂ, ಆಶ್ಚರ್ಯವೂ ಏಕಕಾಲದಲ್ಲಿ ಸಭೆಯ ವಾತಾವರಣದಲ್ಲಿ ಪ್ರತಿಬಿಂಬಿಸಿರುವುದನ್ನು ತಿಳಿದು—"ನಿಜ, ನನ್ನ ಜೀವನದಲ್ಲಿ ಅಜಿಂಕ್ಯ ದುರ್ಗದ ಕೀರ್ತಿಚಂದ್ರೋದಯವಾಗುವುದೆಂದು ನಾನು ಗಮನಿಸಿರಲಿಲ್ಲ. ಎರಡು ಸಿಂಹಾಸನಗಳ ಜೀವ

ಜ್ಯೋತಿಗಳ ನಡುವೆ ನಾನು ನಿಂತಿದ್ದೆನೆಂಬುದು ನನಗೆ ಇಂದು ಅರಿವಾಗಿದೆ. **ಕರ್ತವ್ಯಕರ್ಮವೇ ಧರ್ಮ.** ಇಂದು ಧರ್ಮಸಂಸ್ಥಾಪನೆಯಾಗಿದೆ. ಆದರೆ ಈ ಸಮಯದಲ್ಲಿ ಒಂದಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇದು ಇಬ್ಬರು ಸ್ತ್ರೀರತ್ನಗಳಿಗೆ ಸಂಬಂಧಪಟ್ಟ ವಿಚಾರ—ಒಬ್ಬರು ಮಹಾರಾಣಿಯವರು, ಇನ್ನೊಬ್ಬರು ವೃದ್ಧ ವನಚರಿಯೆಂದು ನಮಗೆ ಪರಿಚಯವಾಗಿರುವ ಶೀಲವತಿದೇವಿ. ಇವರಿಬ್ಬರ ಕರ್ತವ್ಯನಿಷ್ಠೆಯಿಂದ ನಮ್ಮೆಲ್ಲರ ಕರ್ತವ್ಯನಿಷ್ಠೆಗೆ ಕಾಂತಿಯುಂಟಾಗಿದೆ. ಅವರಿಬ್ಬರೂ ಕರ್ತವ್ಯ ಬಾಹಿರರಾಗಿದ್ದ ಪಕ್ಷಕ್ಕೆ ಬೇರು ಸತ್ತ ಗಿಡಕ್ಕೆ ನೀರೆರೆದಂತಾಗಿತ್ತು. ಮಹಾರಾಣಿ ಪೂರ್ವ ಚಾಳುಕ್ಯ ವಂಶಕ್ಕೆ ಬೆಳಕನ್ನು ತಂದಿದ್ದಾರೆ. ಶೀಲವತಿದೇವಿ ಅಜಿಂಕ್ಯ ದುರ್ಗದ ಯಾದವ ವಂಶಕ್ಕೆ ಬೆಳಕನ್ನು ತಂದಿದ್ದಾರೆ."

"ಈಗ ಶೀಲವತಿದೇವಿಯವರು ಎಲ್ಲಿ ?" ಎಂದು ಸಭಿಕರೆಲ್ಲರೂ ಒಂದೇ ಉಸಿರಿನಲ್ಲಿ ಕೇಳಿದರು.

"ಶೀಲವತಿದೇವಿಯವರು ಇಂದು ಅಭೇದ ದುರ್ಗದ ವೀರರಾಜರ ರಕ್ಷಣೆಯಲ್ಲಿದ್ದಾರೆ. ಅಜಿಂಕ್ಯ ದುರ್ಗದಲ್ಲಿ ಸರದಾರ ವೀರಧವಳ ಮಹಾರಾಜರ ಪಟ್ಟಾಭಿಷೇಕವಾಗುವ ದಿನ ಅವರನ್ನು ಉಚಿತ ರೀತಿಯಲ್ಲಿ ರಾಜಮರ್ಯಾದೆಯಿಂದ ಬರಮಾಡಿಕೊಳ್ಳಬೇಕಾಗಿದೆ."

ಈ ಮಾತು ಮುಗಿದ ಕೂಡಲೇ ಎಲ್ಲರೂ ಜಯಘೋಷ ಮಾಡಿದರು ದರ್ಬಾರು ಅಂದಿಗೆ ಮುಗಿಯಿತು.

ಮಾರನೆಯ ದಿನ ದರ್ಬಾರಿನಲ್ಲಿ ಚಂಡವರ್ಮನ ವಿಚಾರಣೆ ನಡೆಯಬೇಕಾಗಿತ್ತು. ಕಾರಾಗೃಹದಿಂದ ಆತನನ್ನು ಸಭೆಗೆ ಕರೆದುಕೊಂಡು ಬರಲು ಒಬ್ಬ ಸುಬೇದಾರನನ್ನು ಕಳುಹಿಸಿದರು. ಸುಬೇದಾರನು ಕಾರಾಗೃಹದ ಬಾಗಿಲನ್ನು ತೆರೆದಾಗ ಚಂಡವರ್ಮನು ಒಂದು ಕಡೆ ಮಲಗಿದ್ದನು. ಸುಬೇದಾರನು ಹತ್ತಿರ ಬಂದು ಎಚ್ಚರಿಸಿದಾಗ್ಗೆ ಚಂಡವರ್ಮನ ಜೀವಪಕ್ಷಿ ಹಾರಿ ಹೋಗಿತ್ತು. ಪಂಜರದ ಗಿಣಿ ಪಂಜರವನ್ನು ಬಿಟ್ಟಿತ್ತು. ಕೂಡಲೇ ಸಂಗತಿ

ಯನ್ನು ಸುಬೇದಾರನು ಸಭೆಗೆ ಬಂದು ಅರಿಕೆ ಮಾಡಿದನು. ಸಭೆ ಚಂಡ ವರ್ಮನ ಅಂತಿಮ ಕ್ರಿಯೆಗಾಗಿ ಅಂದು ನಡೆಯಲಿಲ್ಲ. ವೀರಧವಳನು ಕಾರಾ ಗೃಹಕ್ಕೆ ಬಂದು ತನ್ನ ಚಿಕ್ಕಪ್ಪನಿಗೆ ಗೌರವ ಸಲ್ಲಿಸಿ ಅಂತಿಮ ಕ್ರಿಯೆಗಳನ್ನು ನೆರವೇರಿಸಿದನು. ಒಂದಾನೊಂದು ಕಾಲದಲ್ಲಿ ಅಜಿಂಕ್ಯ ದುರ್ಗದ ಸರ್ವಾಧಿ ಕಾರಿಯಾಗಿ ಸತ್ಯ, ಸಂಪ್ರದಾಯ, ಶಾಂತಿ, ಜನ, ಮನ—ಇವು ಯಾವು ವನ್ನೂ ಗಮನಿಸದೆ ಮೆರೆದ ಚಂಡವರ್ಮನು ಇಂದು ರಾಜಮಹೇಂದ್ರದ ಕಾರಾಗೃಹದಲ್ಲಿ ಬಿಕಾರಿಯಾಗಿ ಆತ್ಮಹತ್ಯದಿಂದ ಬಾಳನ್ನು ಮುಗಿಸುತ್ತಾ ನೆಂದು ಯಾರಿಗೆ ಗೊತ್ತು! ಇದನ್ನೇ ವಿಧಿಸಂಕಲ್ಪವೆಂದು ಕೆಲವರೂ, ಕರ್ಮಫಲವೆಂದು ಕೆಲವರೂ ಹೇಳುವರು. ಅನಾದಿಸಿದ್ಧವಾದ ವಿಧಿಸಂಕ ಲ್ಪವಾಗಲಿ ಅಥವಾ ಪ್ರಕೃತ ಸಿದ್ಧವಾದ ಕರ್ಮಫಲವಾಗಲಿ "ಸತ್ಯಮೇವ ಜಯತೇ ನಾನೃತಂ" ಎಂಬುದನ್ನು ಎಲ್ಲರೂ ಒಪ್ಪಲೇಬೇಕಲ್ಲವೇ?

ಮೂರನೆಯ ದಿನ ಕಥಾನಾಯಕನಾದ ಸರದಾರ ವೀರಧವಳನು— ವೃದ್ಧ ಸತ್ಯಾಶ್ರಯ ಮತ್ತು ಇತರ ಸರದಾರರ ಸಮೇತವಾಗಿ ಅಜಿಂಕ್ಯ ದುರ್ಗಕ್ಕೆ ಬಂದನು. ಅಭೇದ ದುರ್ಗದಿಂದ ವೃದ್ಧ ಶೀಲವತಿದೇವಿಯನ್ನೂ, ರಾಜ ಮಹೇಂದ್ರದಿಂದ ಸಲ್ಹಾಣನನ್ನೂ, ಆತನ ಪುತ್ರಿ ವಿಲಾಸವತಿಯನ್ನೂ ಬರ ಮಾಡಿಕೊಂಡನು. ಧರ್ಮಗುರುವಿಗೆ ಭಕ್ತಿಪುರಸ್ಸರವಾಗಿ ಆಹ್ವಾನವನ್ನು ಕಳುಹಿಸಲಾಗಿತ್ತು. ದುರ್ಗದ ಭವ್ಯಮಂಟಪದಲ್ಲಿ ಸಭೆ ಸೇರಿತು. ಬಾಲ ರಾಜ ಅಮರಕೇತು ರಾಜಾಶೀರ್ವಾದವನ್ನು ಕಳುಹಿಸಿದ್ದನು. ಧರ್ಮ ಗುರುವು ವೃದ್ಧ ಚಾರಣನನ್ನೂ, ವಿಜ್ಜಲನನ್ನೂ ಕರೆದು ಶಸ್ತ್ರಾಗಾರದಲ್ಲಿದ್ದ ಪುರಾತನ ಪ್ರಸಿದ್ಧವಾದ ಸರ್ವಾಂಗ ಕವಚವನ್ನೂ, ಸೀಸಕವನ್ನೂ ತರುವಂತೆ ಹೇಳಿದನು. ಅವರು ತಂದ ಸರ್ವಾಂಗ ಕವಚವನ್ನೂ, ಸೀಸಕವನ್ನೂ ಸರ ದಾರ ವೀರಧವಳನಿಗೆ ತೊಡಿಸಿದನು ಧರ್ಮಗುರು. ತರುವಾಯ ಸಭಾಸದ ರನ್ನು ನೋಡಿ—"ಮಹನೀಯರೇ, ಸರದಾರ ವೀರಧವಳನು ಯಾದವಕುಲ ಸಂಪನ್ನನು. ವಿಶ್ವಕರ್ತನಾದ ಪರಮಾತ್ಮನು ಆತನಿಗೆ ಸಮಸ್ತ ಸನ್ಮಂಗಳ ವನ್ನೂ ದಯಪಾಲಿಸಲಿ." ಎಂದು ಆಶೀರ್ವದಿಸಿದನು. ಅನಾಥ ಬಾಲಕನು ಅನಾಥಬಾಂಧವನಾಗಿ ಅಜಿಂಕ್ಯದುರ್ಗದ ಸಿಂಹಾಸನವನ್ನು ಬೆಳಗಿದನು.

ವೃದ್ಧ ರಣರಾಗನು ಅಂದು ಸಭೆಗೆ ಬಂದಿರಲಿಲ್ಲ. ಆತನು ಬರುವಂತೆಯೂ ಇರಲಿಲ್ಲ. ಚಂಡವರ್ಮನ ಮರಣವಾರ್ತೆಯನ್ನೂ, ವೀರಧವಳನ ವಿಜಯ ವಾರ್ತೆಯನ್ನೂ ಕೇಳಿ ಆತನು ಮನೋರೋಗದಿಂದ ನರಳುತ್ತಿದ್ದನು. ತಾನು ಹಿಂದೆ ಚಂಡವರ್ಮನ ಆಪ್ತಮಿತ್ರನಾಗಿ, ದುರ್ಗರಕ್ಷಕನಾಗಿ, ನಡೆಸಿದ ಘೋರ ಕೃತ್ಯಗಳು ಅವನ ಮನವನ್ನು ಇರಿಯುತ್ತಿದ್ದುವು. ಪಟ್ಟಾಭಿಷೇಕದ ರಾತ್ರಿ ಆತನು ನಿದ್ರಾಭ್ರಮಣೆಯಿಂದ ಎದ್ದು ಕೀರ್ತಿವರ್ಮ ವಸುಮತಿದೇವಿಯರ ಸ್ಮಾರಕ ಶಿಲೆಯ ಕಡೆ ಹೋದವನು ಹಿಂದಕ್ಕೆ ಬರಲೇ ಇಲ್ಲ.

ಸರದಾರ ವೀರಧವಳನ ವಿವಾಹಕ್ಕೆ ಸಕಲವೂ ಸಿದ್ಧವಾಯಿತು. ಲಲಿತ ದುರ್ಗವೂ, ಅಜಿಂಕ್ಯ ದುರ್ಗವೂ ಶೃಂಗಾರ ಮಂದಿರಗಳಾಗಿ ಬೆಳಗಿದುವು. ಸರದಾರ ಸತ್ಯಾಶ್ರಯನು ತನ್ನ ಮುದ್ದು ಮಗಳಾದ ಲಲಿತಪ್ರಭೆಯನ್ನು ಸರ ದಾರ ವೀರಧವಳನಿಗೆ ಕೊಟ್ಟು ವಿಶೇಷ ಸಂಭ್ರಮದಿಂದ ವಿವಾಹಮಹೋತ್ಸವ ವನ್ನು ನೆರವೇರಿಸಿದನು ಲಲಿತದುರ್ಗದಲ್ಲಿ. ರಾಜಮಹೇಂದ್ರದ ಅರಮನೆ ಯಿಂದಲೂ ಸರದಾರರಿಂದಲೂ ಉಡುಗೊರೆಗಳ ಸುರಿಮಳೆಯಾಯಿತು.

ಅಜಿಂಕ್ಯ ದುರ್ಗದಲ್ಲಿ ವಧೂವರರ ಮೆರವಣಿಗೆಯಾಯಿತು. ನಗರದ ಪ್ರಜೆಗಳೆಲ್ಲರೂ ಪುಷ್ಪವೃಷ್ಟಿಯಿಂದ ವಧೂವರರಿಗೆ ಮಂಗಳವನ್ನು ಕೋರಿದರು. ಈ ಸಂತೋಷದಲ್ಲಿ ವೃದ್ಧ ಶೀಲವತಿಯ ಕಣ್ಮನಗಳು ತಣಿದುವು. ಎಲ್ಲರೂ ಸ್ಫಟಿಕ ಶಿಲಾಸ್ತಂಭದ ಬಳಿಗೆ ಬಂದು ಪೂಜೆ ಪ್ರದಕ್ಷಿಣೆಗಳನ್ನು ಮಾಡಿ ಅಜಿಂಕ್ಯ ದುರ್ಗಕ್ಕೆ ತೆರಳಿದರು.

ಸರದಾರ ವೀರಧವಳನು ವಿಜ್ಜಲನಿಗೆ ವಿಲಾಸವತಿಯನ್ನು ತಂದುಕೊಂಡು ಲಗ್ನಕಾರ್ಯವನ್ನು ನೆರವೇರಿಸಿದನು. ವಿಜ್ಜಲನನ್ನು ಅಜಿಂಕ್ಯ ದುರ್ಗದ ರಕ್ಷಕನಾಗಿ ನೇಮಿಸಿದನು.

ಸರದಾರ ವೀರಧವಳನ ಉಪಮಾತೆ ವೃದ್ಧ ಶೀಲವತಿ ಅಜಿಂಕ್ಯ ದುರ್ಗ ದಲ್ಲಿ ವೀರಧವಳನ ಪೋಷಣೆಯಲ್ಲಿ ನಿಂತು ತನ್ನ ತ್ಯಾಗಜೀವನವನ್ನು ದೇವರ ಧ್ಯಾನದಲ್ಲಿ ಪವಿತ್ರಗೊಳಿಸಿದಳು.

ವೃದ್ಧ ಸತ್ಯಾಶ್ರಯನು ಲಲಿತ ದುರ್ಗದಲ್ಲಿ ತನ್ನ ಸತ್ಯಜೀವನದ ಕೊನೆಯ ದಿನಗಳನ್ನು ಕಳೆದನು. ಚಂದ್ರಸೇನನು ತಂದೆಯ ಕೀರ್ತಿಯನ್ನು ಅಮರಕೇತುವಿನ ಸೇವೆಯಲ್ಲಿ ಬೆಳಗಿದನು.

ಹದಿನೆಂಟು ವರ್ಷಗಳು ಕಳೆದುವು. ರಾಜಮಹೇಂದ್ರದ ಬಾಲರಾಜನು ಪ್ರಾಪ್ತವಯಸ್ಕನಾದನು. ಸರದಾರ ವೀರಧವಳನು ಪ್ರಾಪ್ತವಯಸ್ಕನಾದ ಅಮರಕೇತುವಿಗೆ ಪಟ್ಟಾಭಿಷೇಕ ಮಾಡಿಸಿದನು. ರಾಜಪ್ರತಿನಿಧಿಯಾಗಿ ತನ್ನ ಕರ್ತವ್ಯವನ್ನು ನೆರವೇರಿಸಿ, ಅಜಿಂಕ್ಯ ದುರ್ಗದ ಅಮರಜ್ಯೋತಿಯಾದನು.

ಜೀವಯಾತ್ರೆಯೆ ಸುಖವೊ, ಸಾವಲೋಕವೆ ಸುಖವೊ,
ಅಂಬಲಿಯ ಗುಡಿ ಸುಖವೊ, ಹಣದ ಗಣಿ ಸುಖವೊ,
ಕರ್ತವ್ಯ ಗಿರಿ ಸುಖವೊ, ಕೀರ್ತಿಮೇಘವೆ ಸುಖವೊ,
ಸಂಸಾರ ಸರ ಸುಖವೊ, ಏಕಾಂತ ನದಿಯೊ ?—

ಸುಖದುಃಖವೆಂಬುದನು ಕಂಡು ಕೇಳಿದರಿಲ್ಲ ;
ಇಹಪರದ ಗೂಢಾರ್ಥ ತತ್ವದಲ್ಲಿಲ್ಲ—
ಸತ್ತುಹುಟ್ಟುವ ದೇಹದಲ್ಲಿಲ್ಲವೈ ಸುಖವು ;
ಆತ್ಮಸಾಕ್ಷಿಯ ನಂಬು ಅಲ್ಲಿ ಸುಖವಿಹುದು.

—ಎಂಬ ಕವಿವಚನವನ್ನು ಪರಿಪಾಲಿಸಿ ಮುಕ್ತನಾದನು.

|| ಭದ್ರಂ ಶುಭಂ ಮಂಗಳಂ ||